ಪ್ರೊ. ಬಿ. ಕುಪ್ಪುಸ್ವಾಮಿ

...ನ ಮತ್ತು ಸಮಾಜ

ಪ್ರೊ॥ ಬಿ. ಕುಪ್ಪುಸ್ವಾಮಿ

490, 19ನೇ ಮುಖ್ಯ ರಸ್ತೆ, 4ನೇ ಬ್ಲಾಕ್ (ಟಿ)
ಜಯನಗರ-ಬೆಂಗಳೂರು-560011

ಧರ್ಮ ಮತ್ತು ಸಮಾಜ

ಅಧ್ಯಾಯ 1

ಧರ್ಮ ಜಿಜ್ಞಾಸದ ಆವಶ್ಯಕತೆ :—

ಲೇ: ಪ್ರೊ. ಬಿ. ಕುಪ್ಪುಸ್ವಾಮಿ.

ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಬಂದು ಮೂವತ್ತು ವರುಷಗಳಾದವು. ಜನಾಭಿಪ್ರಾಯದ ಆಧಾರದ ಮೇಲೆ ಸರ್ಕಾರವು ನಿರ್ಮಿತವಾದರೆ ಜನಜೀವನ ಮತ್ತು ಜನರ ವರ್ತನೆಯ ಮಟ್ಟಗಳು ತಾವಾಗಿಯೇ ಮೇಲಕ್ಕೇರುವುವೆಂಬ ಆಶಯವು ಎಲ್ಲರಲ್ಲಿಯೂ ಇತ್ತು. ಆದರೆ ಸುಮಾರು ಮೂವತ್ತು ವರುಷಗಳ ಅನುಭವವು ಇಂತಹ ಕಲ್ಪನೆ ನಿರಾಧಾರವೆಂದು ತೋರಿಸಿಕೊಟ್ಟಿದೆ. ರಾಜಕೀಯ ಸ್ವಾತಂತ್ರ್ಯ ಬಂದರೆ ಸಾಮಾಜಿಕ ಸಮಾನತ್ವವೂ ಆರ್ಥಿಕ ಸಮಾನತ್ವವೂ ಬೆಳೆದು, ಸಾಮಾನ್ಯ ಜನ ಜೀವನದ ಮಟ್ಟವು ಏಳಿಗೆಯನ್ನು ಹೊಂದುವ ಅವಕಾಶಗಳು ತಾವಾಗಿಯೇ ಮೂಡುತ್ತವೆ ಎಂಬ ನಂಬಿಕೆಯು ಸತ್ಯಾಂಶದಿಂದಕೂಡಿದುದೇನೂ ಅಲ್ಲ-ಎಂಬದು ಈಗ ಸರ್ವರಿಗೂ ಮನವರಿಕೆಯಾಗಿದೆ.

ನಮ್ಮ ದೇಶದ ಸಂಸ್ಕೃತಿಯು ಸಾವಿರಾರು ವರ್ಷಗಳಿಂದ ಉನ್ನತ ಮಟ್ಟದಲ್ಲಿತ್ತೆಂಬುದನ್ನು ಪ್ರಪಂಚದ ಎಲ್ಲ ಜನಾಂಗದವರೂ ಒಪ್ಪಿರುವರು. ಸುಮಾರು ಹದಿನೆಂಟನೇ ಶತಮಾನದವರೆಗೂ ನಮ್ಮ ದೇಶದ ಆರ್ಥಿಕ ಸ್ಥಿತಿಯು ಇತರ ದೇಶಗಳಿಗಿಂತ ಉನ್ನತದಲ್ಲಿತ್ತೆಂಬುದು ನಿರ್ವಿವಾದ ನಮ್ಮ ದೇಶದ ಸಂಪತ್ತು ಮತ್ತು ಕೈಗಾರಿಕೆಯ ಉತ್ಪನ್ನಗಳ ಮಟ್ಟವು ಇತರ ದೇಶಗಳ ಜನರ ಕಣ್ಣು ಕುಕ್ಕಿ ಅವರು ನಮ್ಮ ದೇಶದ ಮೇಲೆ ಧಾಳಿ ನಡೆಸಲು ಕಾರಣವಾಯಿತು. ಸುಮಾರು ನೂರು ವರ್ಷಗಳ ಹಿಂದೆಯೇ ದೇಶದ ನಾಯಕರಾದ ದಾದಾಭಾಯೀ ನವರೋಜಿಯವರು, ಆ ಕಾಲದಲ್ಲಿ ನಮ್ಮ ಜನರಲ್ಲಿ ಇದ್ದ ಬಡತನಕ್ಕೆ, ಬ್ರಿಟಿಷರ ಆಡಳಿತ ಮತ್ತು ನಮ್ಮದೇಶ ಬ್ರಿಟಿಷರ ವಸಾಹತಾಗಿದ್ದುದು ಕಾರಣಗಳೆಂದು ತಮ್ಮ ಪರಿಶೋಧನೆಗಳ ಮೂಲಕ ಸಿದ್ಧಾಂತ ಮಾಡಿ ತೋರಿಸಿದರು. ಬ್ರಿಟಿಷರೇನೋ ಇಲ್ಲಿಂದ ಹೊರಟುಹೋದರು ಆದರೆ, ಈಗಲೂ ಸಹ ಬಡತನ ಮತ್ತು ಅನಕ್ಷರಸ್ಥಿತಿಯು ನಮ್ಮ ದೇಶದಲ್ಲಿ ಬಹಳ ಹೆಚ್ಚಾಗಿರುವುದರಿಂದ ಇವುಗಳಿಗೆ ಕಾರಣಗಳನ್ನು ಬೇರೆ ಕಡೆ ಹುಡುಕಬೇಕಾಗುವುದೆಂಬುದು ಸ್ಪಷ್ಟವಾಗುತ್ತದೆ.

ನಮ್ಮ ದೇಶದ ಹೆಗ್ಗುರಿ ಸರ್ವ ಸಮಾನತೆ ಮತ್ತು ಸರ್ವ ಸಮಾನಾವಕಾಶಗಳೆಂದು ಭಾರತೀಯ ಸಂವಿಧಾನವು ೧೯೫೦ ರಲ್ಲಿ ಘೋಷಿಸಿತು. ಆದರೂ ದೇಶದಲ್ಲಿರುವ ಬಡತನದಿಂದ ಆರ್ಥಿಕ ಸಮಾನತ್ವಕ್ಕೆ ಅವಕಾಶವೇ ಇಲ್ಲದಹಾಗೆ ಆಗಿದೆ. ಇದೇ ವಿಧವಾಗಿ 1971 ರ ಜನಗಣತಿಯ ಪ್ರಕಾರ ನಮ್ಮ ದೇಶದ ಅನಕ್ಷರಸ್ಥರ ಸಂಖ್ಯೆ ಶೇ 70 ರಷ್ಟು ಇರುವುದೆಂದು ತಿಳಿದು ಬಂದಿದೆ. ಈ ಅನಕ್ಷರಸ್ಥಿತಿಯ ಮತ್ತು ಬಡತನದ ನಿರ್ಮೂಲನ ಮತ್ತು ಸಾಮಾಜಿಕ ಸಮಾನತೆ ಇವುಗಳ ಸ್ಥಾಪನೆಯು ಸಂವಿಧಾನದಲ್ಲಿದ್ದರೂ ಕಾರ್ಯತಃ ಅವುಗಳನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಕಾರಣಗಳಿಂದ ದೇಶದ ಹಿಂದುಳಿದ ಜನಾಂಗದವರು ಮತ್ತು ವಿದ್ಯಾಭ್ಯಾಸವನ್ನು ಪಡೆದಿದ್ದರೂ ನಿರುದ್ಯೋಗಕ್ಕೆ ತುತ್ತಾಗಿರುವ ಯುವಕರು ಆಗಿಂದಾಗ್ಗೆ ಹಿಂಸಾಕೃತ್ಯಗಳನ್ನು ಕೈಗೊಳ್ಳುತ್ತಿರುವುದು ದೇಶದ ಒಂದು ಸ್ಥಿರಲಕ್ಷಣವಾಗಿ ಉಳಿದುಬಿಟ್ಟದೆ. ಯಾವ ದೇಶವು ಗಾಂಧೀಜಿಯವರ ನೇತೃತ್ವದಲ್ಲಿ ಅಹಿಂಸೆಯ ಮೂಲಕ ಹೋರಾಟ ನಡೆಸಿ ಸ್ವಾತಂತ್ರ್ಯವನ್ನು ಪಡೆಯಿತೋ ಅದೇ ದೇಶ ಈಗ ಸ್ವತಂತ್ರವಾಗಿದ್ದರೂ ಹಿಂಸಾಕೃತ್ಯಗಳನ್ನು ಆಚರಿಸುವ ದೇಶವಾಗಿದೆ

ಆದುದರಿಂದ ಈ ಸ್ಥಿತಿಗೆ ಕಾರಣಗಳು ಯಾವುವು ಎಂಬುದನ್ನು ಪರಿಶೀಲಿಸುವುದು ಅಗತ್ಯ. ದೇಶದ ಪಂಚವಾರ್ಷಿಕ ಯೋಜನೆಗಳ ಮುಖ್ಯೋದ್ದೇಶವು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಾಗಿದೆ. ಆದರೆ ಈವರೆಗೆ ಕೈಗೊಂಡಿದ್ದ ನಾಲ್ಕು ಪಂಚವಾರ್ಷಿಕ ಯೋಜನೆಗಳು ಜನ ಸಾಮಾನ್ಯರಲ್ಲಿ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಲ್ಲವೆಂದು ದೇಶದಲ್ಲಿ ತುಂಬಿರುವ ಬಡತನವು ಸೂಚಿಸುತ್ತದೆ .ಶೇ. 70ಮಂದಿಯ ವೈಯುಕ್ತಿಕ ಆದಾಯವು ವರ್ಷಕ್ಕೆ ರೂ. 600 ಗಳಿಗಿಂತ ಕಡಿಮೆ ಇದೆ ಎಂದೂ, ಶೇ. 50 ಮಂದಿಯಲ್ಲಿ ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ತನ್ನ ಜೀವನದ ಆವಶ್ಯಕತೆಗಳಿಗೆ ಕೇವಲ ಒಂದು ರೂಪಾಯಿಯನ್ನು ಖರ್ಚು ಮಾಡುವ ಶಕ್ತಿಯೂ ಇಲ್ಲವೆಂದೂ ಸಂಶೋಧನೆಗಳು ಸ್ಥಿರಪಡಿಸಿವೆ. ಇಂತಹ ಬಡತನದಿಂದ ನರಳುವ ಅನಕ್ಷರಸ್ಥ ಜನಾಂಗದಿಂದ ದೇಶದ ಆರ್ಥಿಕ ಸ್ಥಿತಿಯು ಮುಂದುವರಿಯುವುದು ಹೇಗೆ? ಕೇವಲ ಬಂಡವಾಳದಿಂದಾಗಲೀ ಬೃಹತ್ ಕಾರ್ಖಾನೆಗಳ ನಿರ್ಮಾಣದಿಂದಾಗಲೀ ದೇಶದ ಆರ್ಥಿಕ ಮಟ್ಟವು ಉನ್ನತಗೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ನಮ್ಮ ದೇಶದ ಕಾಲು ಶತಮಾನದ ಅನುಭವವು ಸಿದ್ಧಪಡಿಸಿದೆ. ಅಂದರೆ, ಆರ್ಥಿಕಸ್ಥಿತಿಯು ಉನ್ನತ ಮಟ್ಟಕ್ಕೆ ಬರಬೇಕಾದರೆ ಸಾಮಾಜಿಕ ಕಾರಣಗಳೂ ಸಹ ಬಹಳ ಮುಖ್ಯವೆಂದು ನಮ್ಮ ದೇಶದ ಅನುಭವವು ತೋರಿಸಿದೆ. ವಿದ್ಯಾವಿಹೀನನೂ, ಕುಶಲತೆಯಿಲ್ಲದವನೂ ದೇಶದ ಆರ್ಥಿಕಸ್ಥಿತಿಗೆ ಯಾವ ವಿಧವಾಗಿಯೂ ಸಹಾಯಕವಾಗಲಾರನು. ಹತ್ತೊ

ಬತ್ತನೆಯ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳೂ ಈ ಶತಮಾನದಲ್ಲಿ ರಷ್ಯಾ, ಜಪಾನ್ ಮುಂತಾದ ದೇಶಗಳೂ ಆರ್ಥಿಕಸ್ಥಿತಿಯ ಮುನ್ನಡೆಗೆ ಸಾಮಾಜಿಕ ಸ್ಥಿತಿಯು ಬಹುಮುಖ್ಯವೆಂದು ತೋರಿಸಿಕೊಟ್ಟಿವೆ. ಈ ದೇಶಗಳಲ್ಲಿ ಆರ್ಥಿಕ ಸ್ಥಿತಿಯ ಮುನ್ನಡೆಗೂ ಸಾಕ್ಷರತೆ ಮತ್ತು ವಿದ್ಯಾಭ್ಯಾಸದ ಮುನ್ನಡೆಗೂ ನಿಕಟ ಸಂಬಂಧವಿರುವುದನ್ನು ಸಂಶೋಧನೆಗಳು ಸೂಚಿಸಿವೆ. ಕೈಗಾರಿಕಾ ಯುಗದಲ್ಲಿ ಮುಂದುವರಿಯಬೇಕಾದರೆ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ, ಗಂಡಸೇ ಆಗಲಿ ಹೆಂಗಸೇ ಆಗಲಿ,—ಚೆನ್ನಾಗಿ ಓದು ಬರಹವನ್ನು ಕಲಿತಿರಬೇಕು. ಆದುದರಿಂದ ನಮ್ಮ ದೇಶದ ತೀವ್ರ ಅನಕ್ಷರ ಸ್ಥಿತಿಯು ದೇಶದ ಆರ್ಥಿಕ ಸ್ಥಿತಿಯು ಹಿಂದುಳಿದಿರುವುದಕ್ಕೆ ಒಂದು ಮುಖ್ಯ ಕಾರಣವೆಂದು ಹೇಳಬಹುದು ಸಂವಿಧಾನವು ಹತ್ತು ವರ್ಷಗಳಲ್ಲಿ, ಅಂದರೆ 1960 ನೇ ಇಸವಿಗೆ ಸರಿಯಾಗಿ ಅನರಕ್ಷತೆಯನ್ನು ನಿರ್ಮೂಲ ಮಾಡಬೇಕೆಂಬ ಗುರಿಯನ್ನು ಘೋಷಿಸಿತ್ತು. 1951 ರ ಜನಗಣತಿಯ ಪ್ರಕಾರ ದೇಶದಲ್ಲಿ ಶೇ. 16 ಮಂದಿ ಅಕ್ಷರಸ್ಥರಿದ್ದರು 1961 ರ ಜನಗಣತಿಯ ಪ್ರಕಾರ ಈ ಸಂಖ್ಯೆ ಶೇ. 24 ಕ್ಕೆ ಏರಿತು. 1971 ರ ಜನಗಣತಿಯ ಪ್ರಕಾರ ಅಕ್ಷರಸ್ಥರ ಸಂಖ್ಯೆ ಶೇ 30 ನ್ನು ಮುಟ್ಟಿತು. ಆದರೆ ಜನಸಂಖ್ಯಾ ಸ್ಫೋಟನೆಯಿಂದ 1951 ರಲ್ಲಿ ಇದ್ದ 30 ಕೋಟಿ ಅನಕ್ಷರಸ್ಥರ ಸಂಖ್ಯೆಯು 1971 ರಲ್ಲಿ, ಅಕ್ಷರಸ್ಥರ ಸಂಖ್ಯೆ ಹೆಚ್ಚಾದರೂ, 38 ಕೋಟಿಗೆ ಏರಿತು. ಈ ಪರಿಸ್ಥಿತಿಯು ದೇಶದ ವಿಷಮಸ್ಥಿತಿಗೆ ಒಂದು ಮುಖ್ಯ ಕಾರಣವೆಂದು ವಿಶದವಾಗುತ್ತದೆ.

ಸಂವಿಧಾನದ ಧ್ಯೇಯವು ಸರಿಯಾಗಿದ್ದರೂ, ಪಂಚವಾರ್ಷಿಕ ಯೋಜನೆಗಳಲ್ಲಿ ವಿದ್ಯಾಭ್ಯಾಸಕ್ಕೆ ಮಾಡಿದ ಖರ್ಚು ಸಮರ್ಪಕವಾಗಿದ್ದರೂ ದೇಶದಲ್ಲಿ ಯಾವ ಕಾರಣಗಳಿಂದ ಅನಕ್ಷರತೆಯು ನಿರ್ಮೂಲವಾಗಲಿಲ್ಲವೆಂಬುದನ್ನು ಪರಿಶೀಲಿಸುವುದು ಅಗತ್ಯ ಈ ವಿಷಮ ಸ್ಥಿತಿಗೆ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿರುವ ಶೇ. 80 ಮಂದಿ ಹಿಂದುಳಿದ ಗುಂಪುಗಳಿಗೆ ಸೇರಿದ ಜನರ ಮನೋಭಾವವೆ ಮುಖ್ಯ ಕಾರಣವೆಂದು ವಿಶದವಾಗುತ್ತದೆ. ಅವಕಾಶಗಳನ್ನು ಕಲ್ಪಿಸಿಕೊಟ್ಟರೂ ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬಲ್ಲ ಮನೋಭಾವ ಜನರಲ್ಲಿ ಇಲ್ಲದಿದ್ದರೆ ಈ ಅವಕಾಶಗಳು ನಿರರ್ಥಕವೆಂದು ಹೇಳಬೇಕಾಗಿಲ್ಲ ಇದು ಬಹಳ ಮುಖ್ಯ ಕಾರಣ.

ದೇಶದ ಇಂದಿನ ಆರ್ಥಿಕ ವಿಷಮಸ್ಥಿತಿಗೆ ಕಾರಣಗಳೇನೆಂಬುದನ್ನು ವಿಚಾರಿಸಬೇಕಾದುದು ಅಗತ್ಯ. ಮಿತಿಮೀರಿ ಹೋಗಿರುವ ಹಣದ ಉಬ್ಬರವು ಈ ಆರ್ಥಿಕ ದುಃಸ್ಥಿತಿಗೆ ಒಂದು ಮುಖ್ಯ ಕಾರಣ. ಮತ್ತೊಂದು, ಸರ್ಕಾರದ ಅತಿ ಹೆಚ್ಚಾದ ವ್ಯಯ. ಇನ್ನೊಂದು ಕಾರಣವೆಂದರೆ ಜನಸಂಖ್ಯಾ ಸ್ಫೋಟನೆ. ಕಳೆದ ದಶಕದಲ್ಲಿ (1961-71) ಜನ ಸಂಖ್ಯೆಯು ಶೇ 25 ರಷ್ಟು ಹೆಚ್ಚಾಗಿದೆ. ಇದರಿಂದ ಪಟ್ಟಣಗಳಲ್ಲೂ, ಹಳ್ಳಿಗಳಲ್ಲೂ ನಿರುದ್ಯೋಗವು ವಿಪರೀತವಾಗಿ ಹರ

ಡಿದೆ. ಈ ಕಾರಣಗಳೆಲ್ಲವೂ ಬಹುಮುಖ್ಯ. ಆದರೆ ಈ ಕಾರಣಗಳೆಲ್ಲೆಲ್ಲಾ ಅತಿ ಮುಖ್ಯ ಕಾರಣವೆಂದರೆ ನೈತಿಕ ಕಾರಣ. ದೇಶದಲ್ಲಿ ನೈತಿಕ ಮಟ್ಟವು ತೀರ ಇಳಿದು ಹೋಗಿರುವುದಕ್ಕೆ ಎರಡು ನಿದರ್ಶನಗಳನ್ನು ಸೂಚಿಸಬಹುದು. ಮೊದ ಲನೆಯದಾಗಿ ಲಂಚ ಮತ್ತು ಭ್ರಷ್ಟಾಚಾರ ಎರಡನೆಯದಾಗಿ ಸಾಮೂಹಿಕ ಮತ್ತು ವೈಯಕ್ತಿಕ ಹಿಂಸಾ ಪ್ರವರ್ತನೆ, ನಮ್ಮ ಸಂಸ್ಕೃತಿಯಲ್ಲಿ ಸತ್ಯ, ಧರ್ಮ, ಅಹಿಂಸಾ ಎಂಬ ಮೂಲ ಭಾವನೆಗಳಿಗೆ ಮಹತ್ತಾದ ಸ್ಥಾನವಿದೆ. ಸ್ವರಾಜ್ಯ ಕ್ಕಾಗಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆಸಿದ ಹೋರಾಟವು ಸತ್ಯ ಮತ್ತು ಅಹಿಂಸೆ ಎಂಬ ತತ್ವಗಳ ಆಧಾರದ ಮೇಲೆ ಅವಲಂಬಿಸಿತ್ತು. ಆದರೆ ಸ್ವರಾಜ್ಯ ಬಂದನಂತರ ಸುಲಭವಾಗಿ ಸಂಪತ್ತನ್ನು ಪಡೆಯುವ ಇಚ್ಛೆ, ಲಂಚಕೋರತನ ಮತ್ತು ಭ್ರಷ್ಟಾಚಾರ ಹೆಚ್ಚಾಯಿತು. ವಿದ್ಯಾರ್ಥಿಗಳ, ಕಾರ್ಮಿಕರ, ಸಂಘಗಳಲ್ಲಿ ದೊಡ್ಡ ದೊಡ್ಡ ಗುಂಪುಗಳಲ್ಲಿ ಅಸಮಾಧಾನ ಉಂಟಾದರೆ ಮತ್ತು ಸರಿಯಾದ ಪರಿಹಾರ ದೊರೆಯದಿದ್ದರೆ ಹಿಂಸಾಕೃತ್ಯದ ಮೂಲಕ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದು ವಾಡಿಕೆಯಾಯಿತು. ಯಾವ ಜನಾಂಗದಲ್ಲಿಯೇ ಆಗಲಿ ಭ್ರಷ್ಟಾ ಚಾರ ಮತ್ತು ಹಿಂಸಾಕೃತ್ಯಗಳು ಇದ್ದವುಗಳೇ. ಆದರೆ ಸತ್ಯ ಅಹಿಂಸೆಗಳ ಆಧಾರದ ಮೇಲೆ ಸ್ವರಾಜ್ಯವನ್ನು ಪಡೆದ ನಮ್ಮ ದೇಶದಲ್ಲಿ ಈಗಿರುವ ಪರಿಸ್ಥಿತಿಯನ್ನು ಕಂಡು ನಮ್ಮ ನಾಗರಿಕರು ವಿಸ್ಮಯಗೊಳ್ಳುವುದು ಆಶ್ಚರ್ಯವೇನಲ್ಲ. ಈಗ ನಮ್ಮ ದೇಶ ದಲ್ಲಿ ಅಧರ್ಮ ಮತ್ತು ಹಿಂಸೆಯು ಮಿತಿಯನ್ನು ಮೀರಿ ಕಾಣಿಸಿಕೊಳ್ಳುತ್ತಿದೆ. ನಮ್ಮ ದೇಶದಲ್ಲಿ ಈ ಭ್ರಷ್ಟಾಚಾರ ಮತ್ತು ಹಿಂಸಾಕೃತ್ಯಗಳು ಯಾವ ಕಾರಣ ಗಳಿಂದ ಪ್ರಬಲ ಸ್ಥಿತಿಯನ್ನು ಈ ಹತ್ತು ಇಪ್ಪತ್ತು ವರುಷಗಳಲ್ಲಿ ಹೊಂದಿವೆ ಎಂಬುದನ್ನು ವಿಚಾರಿಸುವುದು ಅಗತ್ಯ.

ಸ್ವಾತಂತ್ರ್ಯ ಬಂದ ಮೇಲೆ 1950 ರಲ್ಲಿ ಸಂವಿಧಾನದ ಮೂಲಕ ವ್ಯಕ್ತಿಯ ಸ್ವಾತಂತ್ರ್ಯವನ್ನೂ ಮತ್ತು ಸಮಾನತ್ವವನ್ನೂ ಮೂಲಭೂತ ಹಕ್ಕುಗಳೆಂದು ಒಪ್ಪಿ ಕೊಳ್ಳಲಾಯಿತು. ದೇಶದ ಹಾಗೂ ಜನಾಂಗದ ಅಭ್ಯುದಯವು ಬಹಳ ಮುಖ್ಯವೂ ಆವಶ್ಯಕವೂ ಎಂದು ಸಂವಿಧಾನವು ಘೋಷಿಸಿತು; ಈ ವಿಧವಾಗಿ ಹೊಸ ತತ್ವ ಗಳನ್ನೂ, ಆದರ್ಶಗಳನ್ನೂ ಸಮಾಜವು ಒಪ್ಪಿಕೊಂಡಿತು ಆದರೆ ಸಮಾಜದ ನಿಜ ಸ್ಥಿತಿಯು ಈ ಆದರ್ಶಗಳಿಗೆ ಬಹಳ ದೂರವಾಗಿದೆ. ಮೇಲೆ ನೋಡಿರುವ ಹಾಗೆ ಶೇ 80-85 ಮಂದಿ ಬಡತನದಲ್ಲಿಯೂ ಅನಕ್ಷರತೆಯಲ್ಲಿಯೂ ನರಳುತ್ತಿದ್ದರೆ ದೇಶದ ಅಭ್ಯುದಯ ಮತ್ತು ವ್ಯಕ್ತಿಯ ಸ್ವಾತಂತ್ರ್ಯ ಸಮಾನತೆಗಳು ರೂಪ ಗೊಳ್ಳಲು ಹೇಗೆ ಸಾಧ್ಯ? ಒಂದು ದೃಷ್ಟಿಯಲ್ಲಿ ನೋಡಿದರೆ ದೇಶದ ವಿಷಮ ಪರಿಸ್ಥಿತಿಗೆ ಅದರ ಆದರ್ಶ ಮತ್ತು ಆಚಾರಗಳಿಗೆ ಇರುವ ದೊಡ್ಡ ಅಂತರವು ಕಾರಣವೆಂದರೆ ಅದು ಅತಿಶಯೋಕ್ತಿಯಾಗಲಾರದು ಈ ನನ್ನ ಲೇಖನದ ಗುರಿಯು ಈ ಸ್ಥಿತಿಯ ಪರಿಶೀಲನೆಯೇ ಆಗಿದೆ.

★

ಅಧ್ಯಾಯ ೨

ಧರ್ಮದ ಲಕ್ಷಣ

'ಧರ್ಮ' ಎನ್ನುವ ಪದವು ಸಮಾಜದ ಎಲ್ಲ ಅಂತಸ್ತಿನ, ಮತ್ತು ಎಲ್ಲ ವಯಸ್ಸಿನ ಜನಗಳು ಉಪಯೋಗಿಸುವ ಸಾಮಾನ್ಯ ಪದ. ನಮ್ಮ 'ಧರ್ಮ' ಎಂಬ ಪದದಲ್ಲಿನ ಭಾವವು ಹಿಂದೂಗಳಲ್ಲಿ ಮಾತ್ರವೇ ಅಲ್ಲದೆ ಕ್ರೈಸ್ತ, ಮುಸಲ್ಮಾನರಲ್ಲಿಯೂ ಸಹ ಒಂದು ಸ್ಥಾನವನ್ನು ಹೊಂದಿದೆ. ಈ ಪದವು ನಮ್ಮ ದೇಶದಲ್ಲಿ ಸುಮಾರು 4000 ವರ್ಷಗಳಿಂದಲೂ ಉಪಯೋಗದಲ್ಲಿದೆ. ಈ ಪದವನ್ನು ಋಗ್ವೇದದಲ್ಲಿ 'ಯಜ್ಞ' ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಆದರೆ ಈಗ ಸಾಧಾರಣವಾಗಿ 'ಧರ್ಮ' ಎನ್ನುವ ಪದವನ್ನು 'ಮತ' ಎಂಬ ಅರ್ಥದಲ್ಲಿ ಉಪಯೋಗಿಸಲಾಗುತ್ತಿದೆ. ಧರ್ಮಸೂತ್ರ, ಧರ್ಮಶಾಸ್ತ್ರ ಮುಂತಾದ ಗ್ರಂಥಗಳಲ್ಲಿ 'ಧರ್ಮ' ಎನ್ನುವ ಪದಕ್ಕೆ ಮುಖ್ಯವಾಗಿ ನಿಯಮ, ನ್ಯಾಯ ಎಂಬ ಅರ್ಥಗಳು ಇರುವುವು. ವರ್ಣಧರ್ಮ, ಆಶ್ರಮಧರ್ಮ ಎಂಬ ಪದಗಳಲ್ಲಿ ಈ ಪದವು ಆಯಾ ವರ್ಣಕ್ಕೂ, ಆಶ್ರಮಕ್ಕೂ ಆವಶ್ಯಕವಾದ ನಿಯಮಗಳನ್ನು ಸೂಚಿಸುತ್ತದೆ. ರಾಜಧರ್ಮ, ಪ್ರಜಾಧರ್ಮ ಎಂಬ ಪದಗಳು ಕರ್ತವ್ಯವನ್ನು ಸೂಚಿಸುತ್ತವೆ. ಕಾಲಧರ್ಮ, ದೇಶಧರ್ಮ ಎಂಬ ಪದಗಳು ಆಯಾ ಕಾಲ ದೇಶಗಳಿಗೆ ಉಚಿತವಾದ ನಡೆ ನುಡಿಗಳನ್ನು ಸೂಚಿಸುತ್ತವೆ. ಒಟ್ಟಿನಲ್ಲಿ ಹೇಳಬೇಕಾದರೆ 'ಧರ್ಮ' ಎನ್ನುವ ಪದವು ಋಜುಮಾರ್ಗ, ನ್ಯಾಯಬದ್ಧಮಾರ್ಗ, ಸಂಪ್ರದಾಯ ಅಥವಾ ಪದ್ಧತಿ, ಸಾಮಾಜಿಕ ನಿಯಮಗಳಿಗೆ ವಿಧೇಯತೆಯನ್ನು ತೋರಿಸುವುದು, ಕರ್ತವ್ಯ, ಶ್ರದ್ಧೆ ಮುಂತಾದ ಅರ್ಥಗಳನ್ನು ಸೂಚಿಸುವುದು. ಬಹಳ ಕಾಲದಿಂದ ಬಳಕೆಯಲ್ಲಿರುವುದರಿಂದಲೂ, ನಾನಾ ಸನ್ನಿವೇಶಗಳಲ್ಲಿ ಉಪಯೋಗಿಸುವುದರಿಂದಲೂ ಕಾಲಕ್ರಮೇಣ ಈ ಪದದ ಅರ್ಥವೂ, ವ್ಯಾಪ್ತಿಯೂ ಬದಲಾವಣೆಯನ್ನು ಹೊಂದಿವೆ. ಆದುದರಿಂದಲೇ ಈ ಪದಕ್ಕೆ ಬೇರೆ ಭಾಷೆಗಳಲ್ಲಿ ಸರಿಯಾದ ಪದವನ್ನು ಉಪಯೋಗಿಸಲು ಸಾಧ್ಯವಿಲ್ಲ. ಪೌರಾತ್ಯ ಮತ್ತು ಪಾಶ್ಚಿಮಾತ್ಯ ಭಾಷೆಗಳಲ್ಲಿ ಧರ್ಮ ಎನ್ನುವ ಪದವನ್ನೇ ಉಪಯೋಗಿಸುವರೇ ಹೊರತು ಇದಕ್ಕೆ ಭಾಷಾಂತರವನ್ನು ಕೊಡಲು ಯತ್ನಿಸುವುದಿಲ್ಲ.

ಭಾರತೀಯ ಸಂಸ್ಕೃತಿಯಲ್ಲಿ 'ಧರ್ಮ' ಎಂಬ ಭಾವನೆಯು ವ್ಯಕ್ತಿಯ ಮತ್ತು ಸಮಾಜದ ಅನೇಕ ಅಂಶಗಳನ್ನು ಒಳಗೊಂಡಿದೆ. ಈ ಪದವು 'ಧೃ' ಧಾತುವಿನಿಂದ ಬಂದಿದೆ. ಧರ್ಮವು ಒಂದು ಪದಾರ್ಥದ ಅಥವಾ ವ್ಯಕ್ತಿಯ

ಅಥವಾ ಸಮೂಹದ ಭಾಗಗಳನ್ನು ಸೇರಿಸಿ ಹಿಡಿದಿರುವ 'ವ್ಯವಸ್ಥೆ' ಎಂದು ಸೂಚಿಸುವುದು. ಈ ಪದವು ಒಬ್ಬ ವ್ಯಕ್ತಿಯು ತನ್ನ ಕುಟುಂಬಕ್ಕೂ, ಸಮಾಜಕ್ಕೂ ಮತ್ತು ಸಂಸ್ಕೃತಿಗೂ ಮಾಡಬೇಕಾದ ಕರ್ತವ್ಯಗಳನ್ನು ಸೂಚಿಸುತ್ತದೆ. ಮುಖ್ಯವಾಗಿ ಒಂದು ಸಮಾಜದ ವ್ಯವಸ್ಥೆಯನ್ನು ಸೂಚಿಸುವುದೊಂದೇ ಅಲ್ಲದೆ ಆ ಸಮಾಜವು ಪರಂಪರೆಯಾಗಿ ಉಳಿದುಕೊಂಡು ಬರುವುದಕ್ಕೆ ಧರ್ಮವೇ ಕಾರಣವೆಂದು ನಿರೂಪಿಸುವುದು. ಋಗ್ವೇದ ಸಂಹಿತೆಗಳಲ್ಲಿ 'ಋತ' ಎಂಬ ಪದವು ಯಾವ ಭಾವನೆಯನ್ನು ಸೂಚಿಸುತ್ತದೆಯೋ ಅದೇ ಭಾವನೆಯನ್ನು 'ಧರ್ಮ' ಎಂಬ ಪದವು ಸೂಚಿಸುತ್ತದೆ. ಮಹಾಭಾರತದ ಶಾಂತಿಪರ್ವದಲ್ಲಿ

ಧಾರಣಾತ್ ಧರ್ಮ ಇತ್ಯಾಹುರ್ ಧರ್ಮೋ ಧಾರಯತೇ ಪ್ರಜಾಃ ।
ಯಶ್ಚ ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥

ಧರ್ಮವು ಎಲ್ಲವನ್ನೂ ರಕ್ಷಿಸುವುದು, ಧರ್ಮದಿಂದಲೇ ಸಮಸ್ತ ಲೋಕವೂ ಅಳಿಯದೆ ಉಳಿದಿರುವುದು ಎಂದು ತಿಳಿಸಲಾಗಿದೆ.

ಮನುಧರ್ಮಶಾಸ್ತ್ರದಲ್ಲಿ—

ವಿದ್ವದ್ಭಿಃ ಸೇವಿತಃ ಸದ್ಭಿರ್ನಿತ್ಯಮದ್ವೇಷರಾಗಿಭಿಃ ।
ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತಂ ನಿಬೋಧತ ॥

ಮನು II—೧

ವಿದ್ವಾಂಸರು, ಸಂತರು, ರಾಗದ್ವೇಷರಹಿತರು ಆದ ಮಹಾಪುರುಷರು ಏಕ ಪ್ರಕಾರವಾಗಿ ಆಚರಿಸುವುದು 'ಧರ್ಮ' ಮತ್ತು ಅಂತಃಕರಣಕ್ಕೆ ಸಮರ್ಪಕವಾಗಿ ತೋರಿ ಅದನ್ನು ಮಾಡಬೇಕೆಂಬ ಅಂತಃಪ್ರೇರಣೆಯೇ ಧರ್ಮ.

ಇನ್ನೊಂದು ಕಡೆ—

ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಂ ॥

ಮನು II—೧೨

ಅಂದರೆ ಧರ್ಮದ ಲಕ್ಷಣವು ನಾಲ್ಕು ಆಧಾರದ ಮೇಲೆ ನಿಂತಿರುವುದು (೧) ಶ್ರುತಿ ಮತ್ತು (೨) ಸ್ಮೃತಿಗಳ ಆಧಾರದ ಮೇಲಿರುವುದು, ಅಂದರೆ ಪದ್ಧತಿ ಅಥವಾ ಸಂಪ್ರದಾಯವನ್ನು ಅವಲಂಬಿಸಿದೆ. (೩) ಸದಾಚಾರ ಅಂದರೆ ಪ್ರಾಜ್ಞರೂ ರಾಗದ್ವೇಷರಹಿತರೂ ಆಚರಣೆಯಲ್ಲಿಟ್ಟುಕೊಂಡಿರುವುದು ಧರ್ಮಸಮ್ಮತವಾದದು. ನಾಲ್ಕನೆಯದಾಗಿ ಧರ್ಮವು 'ಸ್ವಸ್ಯ ಚ ಪ್ರಿಯಮಾತ್ಮನಃ' ಅಂದರೆ ನಮ್ಮ ಮನಸ್ಸಿಗೆ ಸರಿಯಾದುದು ಸಮರ್ಪಕವಾದುದು; ಮನಸ್ಸಾಕ್ಷಿಗೆ

ಅನುಗುಣವಾಗಿ ತೋರುವುದೇ ಧರ್ಮ. ಸಂಕ್ಷೇಪವಾಗಿ ಹೇಳಬೇಕಾದರೆ ಮನು ಮತ್ತು ಯಾಜ್ಞವಲ್ಕ್ಯರು ಧರ್ಮಕ್ಕೆ ಮೂರು ಲಕ್ಷಣಗಳನ್ನು ಸೂಚಿಸಿರುವರೆಂದು ಹೇಳಬಹುದು. ಮೊದಲನೆಯದು, ಸಂಪ್ರದಾಯ. ಅನಾದಿಕಾಲದಿಂದಲೂ ವೇದಗಳು ಮತ್ತು ಧರ್ಮಶಾಸ್ತ್ರಗಳು ಹೇಳಿರುವ ನಿಯಮಗಳು ಮತ್ತು ಕರ್ತವ್ಯಗಳು ನಾವು ಯಾವುದನ್ನು ಮಾಡಬೇಕು ಯಾವುದನ್ನು ಬಿಡಬೇಕು ಎಂಬುದನ್ನು ಅವು ಸೂಚಿಸುವುವು. ಧರ್ಮದ ಎರಡನೆಯ ಆಧಾರವೆಂದರೆ, ಸಮಾಜದಲ್ಲಿ ಸಜ್ಜನರು ಆಚರಿಸುವ ನಡತೆ. ಮೂರನೆಯದಾಗಿ, ಒಬ್ಬ ವ್ಯಕ್ತಿಯು ತನ್ನ ಬುದ್ಧಿಯನ್ನು ಉಪಯೋಗಿಸಿ, ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ತಾನೇ ನಿರ್ಣಯಿಸಿ ಆಚರಣೆಗೆ ತರುವ ನಿಯಮಗಳು. ತಂದೆತಾಯಿಗಳು ಗುರು ಹಿರಿಯರು ಪ್ರತಿಯೊಂದು ಮಗುವಿಗೂ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು; ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ಚಿಕ್ಕ ವಯಸ್ಸಿನಿಂದಲೇ, ಅಂದರೆ 2–3 ವರುಷ ವಯಸ್ಸಿನಿಂದಲೇ ಹೇಳಿಕೊಡುವರು. ಇದರಿಂದ ಬೆಳೆದ ಮೇಲೆ ಒಳ್ಳೆಯದನ್ನು ಮಾಡಿದರೆ ಮನಸ್ಸಿಗೆ ಸಂತೋಷ ಉಂಟಾಗುವುದು. ಕೆಟ್ಟದ್ದನ್ನು ಮಾಡುವಾಗ ಅಪರಾಧ ಮನೋಭಾವವು ಉಂಟಾಗುವುದು, ಎಂತಹ ಕೆಟ್ಟವನೂ ಸಹ ಕೆಟ್ಟದ್ದನ್ನು ಮನಃಪೂರ್ತಿಯಾಗಿ ಮಾಡುವುದಿಲ್ಲ. ಸಾಧಾರಣವಾಗಿ ದುಷ್ಕೃತಿಗಳನ್ನು ಮಾಡುವವನು ದುರ್ಜನರ ಜೊತೆಗೂಡಿ ಕೆಟ್ಟ ಕೆಲಸವನ್ನು ಮಾಡುವನು; ಇಲ್ಲವೇ ಮದ್ಯಪಾನ ಮಾಡಿ ಕೆಟ್ಟ ಕೆಲಸಗಳನ್ನು ಮಾಡುವರು. ತಾನು ಮಾಡುವ ಕೆಲಸವು ಒಳ್ಳೆಯದೆಂದು ತನ್ನ ಜೊತೆಗಾರರು ಹೇಳಿದರೆ ಆಗ ಕೆಟ್ಟ ಕೆಲಸವೂ ಸಹ ಒಳ್ಳೆಯದೆಂಬ ಮನೋಭಾವವು ಅವನಲ್ಲಿ ಉಂಟಾಗಿ ಆ ಕೆಲಸವನ್ನು ಮಾಡಲು ಉಪಕ್ರಮಿಸುವನು ಹೀಗೆ ಆ ಸಣ್ಣ ಗುಂಪಿನ ಸಾಮಾಜಿಕ ಸಮ್ಮತಿಯನ್ನು ಪಡೆಯುವುದರ ಮೂಲಕ ಆ ಕೆಲಸವು ಆ ಸಮಯಕ್ಕೆ ಒಳ್ಳೆಯದೆಂಬ ಭಾವನೆಯು ಅವನಲ್ಲಿ ಮೂಡುವುದು. ಮದ್ಯವನ್ನು ಸೇವಿಸಿದಾಗ ಅದು ತಲೆಗೇರಿ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂಬ ವಿವೇಚನಾಶಕ್ತಿಯನ್ನು ಕಳೆದುಕೊಂಡು ಅವನು ಆ ಕ್ಷಣದಲ್ಲಿ ತನಗುಂಟಾದ ಅವಶ್ಯಕತೆಗಳನ್ನು ವಿವೇಚನೆಯಿಲ್ಲದೆ ಪೂರೈಸಿಕೊಳ್ಳುವನು. ಅಂದರೆ ಸಾಧಾರಣವಾಗಿ ಯಾವುದು ಕೆಟ್ಟ ಕೆಲಸವೆಂದು ತಾನು ಒಪ್ಪಿಕೊಳ್ಳುವನೋ, ಆ ಕೆಲಸವನ್ನು ಪ್ರತ್ಯೇಕ ಸನ್ನಿವೇಶಗಳಲ್ಲಿ ಒಳ್ಳೆಯದೆಂಬ ಭಾವನೆಯನ್ನು ಪಡೆದು, ಆ ಕೆಟ್ಟ ಕೆಲಸವನ್ನು ಮಾಡುವನು. ಪ್ರತ್ಯೇಕ ಸನ್ನಿವೇಶಗಳಲ್ಲಿ ಮಾಡುವ ಈ ಕೆಲಸಗಳನ್ನು ಸಾಧಾರಣವಾಗಿ ಮಗುವೇ ಆಗಲಿ, ಯುವಕನೇ ಆಗಲಿ ಅಥವಾ ವಯಸ್ಕನೇ ಆಗಲಿ ತಾನು ಮಾಡಿದುದು ಒಳ್ಳೆಯದೆಂದು ಸಾಧಿಸುವನು.

ಒಂದು ಸಮಾಜವು ಉಳಿಯಬೇಕಾದರೆ ಆ ಸಮಾಜದ ವ್ಯಕ್ತಿಗಳು ಸಂಪ್ರದಾಯವನ್ನು, ಅಥವಾ ಸಜ್ಜನರ ನಡವಳಿಕೆಯನ್ನು ಅಥವಾ ಮನಸ್ಸಾಕ್ಷಿಗೆ ಅನುಗುಣವಾಗಿರುವ ವರ್ತನೆಯನ್ನು ಆಚರಿಸಬೇಕು. ಇಲ್ಲದಿದ್ದರೆ ಆ ಸಮಾಜವು ಉಳಿಯಲು ಅಸಾಧ್ಯ. ಇದೇ ಧರ್ಮದ ಲಕ್ಷಣ.

ಆದರೆ ಸಾಂಪ್ರದಾಯಕ್ಕೂ, ಸಜ್ಜನರ ನಡತೆಗೂ, ಆತ್ಮ ಸಾಕ್ಷಿಯ ಸಮ್ಮತಕ್ಕೂ ವ್ಯತ್ಯಾಸವುಂಟಾದರೆ ಆಗ ವ್ಯಕ್ತಿಗೂ ಸಮಾಜಕ್ಕೂ ವಿಷಮಸ್ಥಿತಿ ಯುಂಟಾಗುವುದು. ಇಂತಹ ಪರಿಸ್ಥಿತಿಯಲ್ಲಿ ಯಾವುದು ಧರ್ಮ ಯಾವುದು ಅಧರ್ಮ ಎಂದು ನಿಶ್ಚಯಿಸುವುದು ಕಷ್ಟವಾಗುವುದು. ಇಂದು ಭಾರತದೇಶ ದಲ್ಲಿ ಈ ಪರಿಸ್ಥಿತಿಯು ಒದಗಿದೆ. . ಆದರೆ ಇದೇನೂ ಹೊಸದಲ್ಲ. ವೇದಗಳ ಬ್ರಾಹ್ಮಣಗಳ ಕಾಲದಲ್ಲಿ ಯಜ್ಞಗಳನ್ನು ಮಾಡುವುದು ಧರ್ಮ ಲಕ್ಷಣವೆಂದು ಆ ಸಮಾಜದ ಬಹುಮಂದಿ ಒಪ್ಪಿದ ಕಾಲದಲ್ಲೂ ಕೆಲವರು ಇವುಗಳನ್ನು ಕೇವಲ ಬಾಹ್ಯ ಕ್ರಿಯೆಗಳೆಂದೂ ಮತ್ತು ಈ ಕರ್ಮಗಳ ಗುರಿಯು ಸತ್ತಮೇಲೆ ಸ್ವರ್ಗ ವನ್ನು ಪಡೆಯುವ ಆಸೆಯಿಂದ ಉದ್ಭವಿಸಿರುವುದೆಂದೂ ಸೂಚಿಸಿ, ಅಂತರ್ಮುಖಿ ಯಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದೇ ಮಾನವನ ಮುಖ್ಯ ಗುರಿ ಯೆಂದು ವಾದಿಸಿದರು ಆಗ ಸಂಪ್ರದಾಯಕ್ಕೂ ಈ ಹೊಸ ದೃಷ್ಟಿಗೂ ತಿಕ್ಕಾಟ ಬಂದಿತು. ನಾನಾ ಕಾರಣಗಳಿಂದ ಆ ಕಾಲದಲ್ಲಿ ಆತ್ಮಸಾಕ್ಷಾತ್ಕಾರ ಮತ್ತು ಪುರುಷಾರ್ಥಗಳೇ ಧರ್ಮದ ಲಕ್ಷಣಗಳೆಂಬ ಮತ್ತು ಕೇವಲ ಪುಣ್ಯಕ್ಕಾಗಿ ಮಾಡುವ ಕರ್ಮಗಳನ್ನು ಬಿಡಬೇಕೆಂಬ ಮನೋಭಾವವು ಪ್ರಬಲವಾಗಿ ಉಪನಿಷತ್ತುಗಳಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು.

ಈ ವಿಧವಾಗಿ ಸಂಪ್ರದಾಯಕ್ಕೂ ಸಜ್ಜನರ ವರ್ತನೆಗೂ ಭೇದಗಳುಂಟಾ ದರೆ ಯಾವುದು ಒಳ್ಳೆಯದು ಯಾವುದು ಅಸಮರ್ಪಕ ಎಂಬ ವಿಷಯಗಳನ್ನು ಕುರಿತು ಜಿಜ್ಞಾಸೆಯನ್ನು ಮಾಡಬೇಕಾಗುವುದು.

ಈಗ ಸಂಪ್ರದಾಯದ ಪ್ರಕಾರ ಜಾತಿ ಭೇದಗಳು ಅಸ್ಪೃಶ್ಯತೆ, ದೇವರ ಅನುಗ್ರಹ ಪಡೆಯುವುದಕ್ಕೋಸ್ಕರ ಪ್ರಾಣಿಬಲಿ ಮುಂತಾದ ವರ್ತನೆಗಳು ಭಾರ ತೀಯ ಸಂವಿಧಾನ ಮತ್ತು ಅದರಿಂದ ಉಂಟಾದ ಕಾನೂನುಗಳಿಗೆ ವಿರುದ್ಧವಾಗಿವೆ. ಈಗ ಸಂಪ್ರದಾಯವನ್ನು ಆಚರಿಸಬೇಕೇ ಅಥವಾ ಕಾನೂನಿನ ಪ್ರಕಾರ ನಡೆದು ಕೊಳ್ಳಬೇಕೇ ಎಂಬ ಸಮಸ್ಯೆಯು ಕೆಲವರಲ್ಲಿ ಕೆಲವು ಸಲ ಉಂಟಾಗಬಹುದು. ಈಗಲೂ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸವು ಕೆಟ್ಟದ್ದೆಂದು ಹಳ್ಳಿಯ ಜನರು ತಿಳಿದಿರುವರು. ಆದರೆ ಕಾನೂನಿನ ಪ್ರಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಇರುವ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದರೆ ಅಪರಾಧ

ವಾಗುವುದು. ಇಂತಹ ಪರಿಸ್ಥಿತಿಗಳಲ್ಲಿ ಕಾನೂನು ಮುಖ್ಯವಾಗುವುದು. ಏಕೆಂದರೆ ಈಗ ಆಧುನಿಕ ದೃಷ್ಟಿಯಿಂದ ವ್ಯಕ್ತಿಯ ಮತ್ತು ಸಮಾಜದ ಅಭಿವೃದ್ಧಿಗೆ ಇಂತಹ ಕಾನೂನುಗಳು ಸಹಕಾರಿ. ಆದುದರಿಂದ ಕಾನೂನಿಗೆ ವಿರುದ್ಧವಾದ ಸಂಪ್ರದಾಯವನ್ನು ತ್ಯಜಿಸಬೇಕು ಈಗ ಜಾರಿಯಲ್ಲಿರುವ ಕಾನೂನು ಅನೇಕರಿಗೆ ಒಳ್ಳೆಯದಲ್ಲವೆಂದು ಕಂಡು ಬಂದರೆ ಆಗ ಕಾನೂನನ್ನು ತಿದ್ದುಪಡಿಸಲು ಚಳುವಳಿಯನ್ನು ಪ್ರಾರಂಭಿಸುವರು ಇಂತಹ ಪರಿಸ್ಥಿತಿಗಳಲ್ಲಿ ಧರ್ಮದ ಕೆಲವು ಅಂಗಗಳು–ಮುಖ್ಯವಾಗಿ ಸತ್ಯ, ಅಹಿಂಸೆ, ಆಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಮುಂತಾದವು–ಎಲ್ಲ ಕಾಲದಲ್ಲಿಯೂ ಎಲ್ಲಾ ಜನಾಂಗದಲ್ಲಿಯೂ ಆಚರಣೆಯಲ್ಲಿ ಇಟ್ಟಿರಬೇಕಾದ ಧ್ಯೇಯಗಳು ಇತರ ಸಂಪ್ರದಾಯಗಳು ಈ ಗುಂಪಿಗೆ ಸೇರುವುದಿಲ್ಲ· ಅವು ಕಾಲಾನುಸಾರವಾಗಿ ಬದಲಾವಣೆಯನ್ನು ಹೊಂದುವುವು.

ಆದುದರಿಂದ ಸಂಪ್ರದಾಯವು ಪ್ರತಿಯೊಂದು ಸಮಾಜಕ್ಕೂ ಅತ್ಯಾವಶ್ಯಕ. ಸಾಂಪ್ರದಾಯದ ಮೂಲಕವೇ ತಾಯಿ ತಂದೆಗಳು ಮತ್ತು ಗುರು ಹಿರಿಯರು ಮಕ್ಕಳಿಗೆ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂಬುದನ್ನು ಕಲಿಸಿ, ಮಗುವಿನಲ್ಲಿ ಒಂದು ಕ್ರಮಬದ್ಧವಾದ ವ್ಯವಸ್ಥೆಯನ್ನು ಉಂಟುಮಾಡುವರು.

ಆದರೆ, ಕಾರಣಾಂತರದಿಂದ ಕೆಲವು ಸಂಪ್ರದಾಯಗಳು ಒಂದು ಸಮಾಜದ ಸಜ್ಜನರಲ್ಲಿ ಒಳ್ಳೆಯದಲ್ಲವೆಂದು ಕಂಡುಬಂದರೆ ಆಗ ಅ ಸಂಪ್ರದಾಯಗಳನ್ನು ತ್ಯಜಿಸಬೇಕಾಗುವುದು ಅಥವಾ ಮಾರ್ಪಾಡು ಮಾಡಬೇಕಾಗುವುದು. ಈ ದೃಷ್ಟಿಯು ಸಮಾಜದಲ್ಲಿಲ್ಲದ ಪಕ್ಷದಲ್ಲಿ ಅದು ಸಾಮಾಜಿಕ ಘರ್ಷಣೆಗೆ ತುತ್ತಾಗಿ ಹಿಂಸಾಕೃತಿಯ ಕ್ರಾಂತಿಗೆ ಎಡೆ ಕೊಡುವುದು.

ಕಳೆದ ಮೂವತ್ತು ವರ್ಷಗಳ ಚರಿತ್ರೆಯನ್ನು ತೆಗೆದುಕೊಂಡರೆ ನಮ್ಮ ದೇಶದಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳು ಯಾವುದೇ ರೀತಿಯ ಹಿಂಸೆಯನ್ನೊಳಗೊಳ್ಳದೆ ಸಂಭವಿಸಿವೆ. ಉದಾ : ನಮ್ಮ ದೇಶದಲ್ಲಿ ರಾಜ ಮಹಾರಾಜರು ಚಕ್ರವರ್ತಿಗಳು ಸಾವಿರಾರು ವರ್ಷಗಳಿಂದ ರಾಜ್ಯ ಪಾಲನೆಯನ್ನು ಮಾಡುತ್ತಿದ್ದರು. ಆದರೆ ಈ ಕಾಲಕ್ಕೆ ಅನುವಂಶಿಕ ರಾಜಪ್ರಭುತ್ವವು ಸಮರ್ಪಕವಾದುದಲ್ಲ; ಇದು ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧವಾದುದು. ಆದ ಕಾರಣ ಬ್ರಿಟಿಷ್ ಚಕ್ರವರ್ತಿಯ ಸಾಮ್ರಾಜ್ಯವನ್ನು ಮತ್ತು ರಾಜ ಮಹಾರಾಜರ ಸಾಮ್ರಾಜ್ಯವನ್ನು ರದ್ದುಗೊಳಿಸಿ, ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕಾಯಿತು

ಪ್ರತ್ಯೇಕ ಆಚಾರ ಅಥವಾ ಪ್ರತ್ಯೇಕ ಕಾನೂನುಗಳನ್ನು ಎಲ್ಲ ಕಾಲಗಳಲ್ಲೂ, ಎಲ್ಲ ದೇಶಗಳಲ್ಲೂ, ಎಲ್ಲ ಸಮಾಜಗಳಲ್ಲೂ, ಎಲ್ಲರೂ ಮಾಡಬೇಕಾದ

ಧರ್ಮ ಎಂದರೆ ಈ ಭಾವನೆಯು ಅಸಮರ್ಪಕವೆಂದು ಹೇಳಬೇಕಾಗುತ್ತದೆ. ಪ್ರಾಚೀನ ಧರ್ಮಶಾಸ್ತ್ರಜ್ಞರು ಸೂಚಿಸಿರುವ ಹಾಗೆ ಯುಗಧರ್ಮವು ಕಾಲ ಕಾಲಕ್ಕೂ ಬದಲಾವಣೆಯನ್ನು ಹೊಂದುವುದು. ಧರ್ಮಗ್ರಂಥಗಳಲ್ಲಿ ಸೂಚಿಸಿರುವ ಧರ್ಮಗಳಲ್ಲಿ ಕೆಲವು ಎಲ್ಲ ಕಾಲಕ್ಕೂ ಅನ್ವಯಿಸುವುವು. ಕೆಲವು ತಾತ್ಕಾಲಿಕ. ವಿವೇಚನಾಪರರು ಈ ಧರ್ಮಗ್ರಂಥಗಳಲ್ಲಿ ಯಾವುದು ಸನಾತನ, ಅಂದರೆ ಯಾವ ಧ್ಯೇಯಗಳು ಅಥವಾ ಮೌಲ್ಯಗಳು ಈ ಕಾಲಕ್ಕೆ ಅನುಗುಣವಾಗಿವೆಯೋ ಅವನ್ನು ಆಚರಣೆಯಲ್ಲಿಟ್ಟುಕೊಂಡು ಯಾವುದು ತಾತ್ಕಾಲಿಕವೊ ಅಂದರೆ ಯಾವುದು ಹಿಂದೆ ಸರಿಯಾಗಿದ್ದು ಈಗ ಸರಿಯಾಗಿರುವುದಿಲ್ಲವೋ ಅವುಗಳನ್ನು ಕಾಲಕ್ಕೆ ತಕ್ಕ ಹಾಗೆ ಬದಲಾಯಿಸಲು ಪ್ರಯತ್ನಿಸಬೇಕು.

ಆದುದರಿಂದ ಯಾವ ಆಚಾರವೇ ಆಗಲಿ ಕಾನೂನೇ ಆಗಲಿ, ಪ್ರತ್ಯೇಕ ಗುಂಪುಗಳಿಗೆ ನಿರ್ದಿಷ್ಟವಾದದ್ದೇ ಆದರೆ ಅವು ಸಾರ್ವತ್ರಿಕವೂ ಅಲ್ಲ, ವಿಶ್ವವ್ಯಾಪಕವೂ ಇಲ್ಲ. ಸಾರ್ವತ್ರಿಕವಾದುದೇ ಧರ್ಮ. ಅಂದರೆ ಧ್ಯೇಯಗಳು ಮತ್ತು ಮೌಲ್ಯಗಳು ಸಾರ್ವತ್ರಿಕವಾಗಬಲ್ಲವು ಅಂತಹ ಸಾರ್ವತ್ರಿಕವಾದ, ಅಂದರೆ ಎಲ್ಲ ಮನುಷ್ಯರು, ಎಲ್ಲ ಕಾಲಗಳಲ್ಲಿ ಯಾವುದನ್ನು ಧ್ಯೇಯಗಳನ್ನಾಗಿ ಇಟ್ಟುಕೊಳ್ಳಬಹುದೋ, ಅವುಗಳನ್ನು ಮಾತ್ರ ಧರ್ಮವೆಂದು ಹೇಳಬೇಕಾಗುತ್ತದೆ. ಇದೇ ಧರ್ಮದ ಲಕ್ಷಣ.

ವರ್ಣ ಧರ್ಮ

ಅಧ್ಯಾಯ ೩

'ವರ್ಣ' ಎಂಬ ಪದವನ್ನು ಋಗ್ವೇದದಲ್ಲಿ ಹಲವು ಕಡೆ ಉಪಯೋಗಿಸಲಾಗಿದೆ. ಆ ಪದವನ್ನು 'ಬಣ್ಣ' ಎಂಬ ಅರ್ಥದಲ್ಲೂ ಒಂದು ಕಡೆ (II-12-4) ಮತ್ತೆ ಕೆಲವು ಮಂತ್ರಗಳಲ್ಲಿ ಬಿಳಿಯ ಜನರು ಮತ್ತು ಕಪ್ಪು ಜನರು ಎಂಬರ್ಥದಲ್ಲಿ ಮಗುದೊಂದು ಕಡೆ, 'ಇಂದ್ರನು ದಸ್ಯುಗಳನ್ನು ಸಂಹರಿಸಿ ಆರ್ಯ ವರ್ಣದ ಜನಗಳನ್ನು ರಕ್ಷಣೆ ಮಾಡಿದನು' ಎಂದು (III-9) ಹೇಳಲಾಗಿದೆ. ಆ ಕಾಲದಲ್ಲಿ ಹೊರಗಡೆಯಿಂದ ಬಂದ ಬಿಳಿಯ ಆರ್ಯರ ಗುಂಪುಗಳಿಗೂ ಮತ್ತು ಇಲ್ಲಿಯೇ ವಾಸವಾಗಿದ್ದ ಕಪ್ಪನೆಯ ದಾಸ ಅಥವ ದಸ್ಯುಗಳ ಗುಂಪುಗಳಿಗೂ ಹೋರಾಟವಿತ್ತು. ಕೆಲವು ಕಡೆ ಬ್ರಾಹ್ಮಣ, ಕ್ಷತ್ರಿಯ ಎಂಬ ಪದಗಳನ್ನು ಉಪಯೋಗಿಸಿದರೂ ಆ ಪದಗಳನ್ನು 'ವರ್ಣ' ಎಂಬ ಪದದ ಜೊತೆಯಲ್ಲಿ ಉಪಯೋಗಿಸಿಲ್ಲ. ಋಗ್ವೇದದಲ್ಲಿ ಒಂದು ಕಡೆ ಮಾತ್ರ (ಪುರುಷ ಸೂಕ್ತ) ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬ ನಾಲ್ಕು ಪದಗಳನ್ನು ಉಪಯೋಗಿಸಲಾಗಿದೆ. ಆದರೆ ಪುರುಷ ಸೂಕ್ತದಲ್ಲಿ ವರ್ಣ ಎಂಬ ಪದವನ್ನು ಉಪಯೋಗಿಸಿಲ್ಲ.

ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥
(ಋ 10, 90-12)

'ಆ ವಿರಾಟ್ ಪುರುಷನ ಮುಖವಾಗಿ ಬ್ರಾಹ್ಮಣನು ಆದನು. ಬಾಹುಗಳು ಕ್ಷತ್ರಿಯರಾಗಿ ಮಾಡಲ್ಪಟ್ಟವು. ಆಗ ಅವನ ತೊಡೆಗಳು ವೈಶ್ಯರಾದವು. ಪಾದಗಳಿಂದ ಶೂದ್ರನು ಹುಟ್ಟಿದನು.

ಈ ಪುರುಷ ಸೂಕ್ತದ ಎರಡನೆಯ ಮಂತ್ರವು, 'ಈ ಜಗತ್ತೆಲ್ಲವೂ ಹಿಂದೆ ಯಾವುದು ಇತ್ತೋ, ಅದು ಮತ್ತು ಮುಂದೆ ಯಾವುದು ಆಗುವುದೋ ಅದೂ ಪುರುಷನು ಆಗಿದ್ದಾನೆ' ಎಂದು ಹೇಳಿದೆ.

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥
(ಋ. 10, 90-2)

ಪುರುಷ ಸೂಕ್ತವು ಋಗ್ವೇದ ಕಾಲದ ಅಂತ್ಯದಲ್ಲಿ ರಚಿಸಲಾಯಿತೆ
ಅನೇಕ ವಿಮರ್ಶಕರು ಸೂಚಿಸಿರುವರು ; ಮತ್ತು ಈ ಮಂತ್ರದ ಪ್ರಾಗ
ಷನ ಮುಖವು ಬ್ರಾಹ್ಮಣ, ಬಾಹುಗಳು ಕ್ಷತ್ರಿಯ ಮತ್ತು ತೊಡೆಗಳು
ರಾದವು ಎಂದು ಹೇಳಿದಿಯೇ ಹೊರತು ಅವರು ಆ ಅಂಗಗಳಿಂದ ಹುಟ್ಟಿ
ಎಂಬ ಭಾವನೆಯು ಬರುವುದಿಲ್ಲ. ಈ ಕಲ್ಪನೆಯು ಮಂತ್ರದ ಕೊನೆಯ
ಗಳಿಂದ, ಅಂದರೆ 'ಪದ್ಭ್ಯಾಂ ಶೂದ್ರೋ ಅಜಾಯತ,' ಉದ್ಭವಿಸಿ
ಹೇಳಬಹುದು.

ಧರ್ಮ ಶಾಸ್ತ್ರಗಳನ್ನು ಕುರಿತು ಬಹುಕಾಲ ಶ್ರಮಿಸಿ ಅನೇಕ ಸ
ಗಳಿಂದ ಕೂಡಿದ ದೊಡ್ಡ ಗ್ರಂಥವನ್ನು ಬರೆದಿರುವ ಶ್ರೀ ಕಾಣೆಯವರು ಈ
ಯವನ್ನು ಕುರಿತು ಹೀಗೆ ಹೇಳಿರುವರು. 'ಋಗ್ವೇದವು ಪರಸ್ಪರ ಸಂಬಂ
ದಂತಹ ಎರಡು ಗುಂಪುಗಳನ್ನು ಮಾತ್ರ ಖಚಿತವಾಗಿ ಹೇಳಿರುವುದು. ಆ
ಗಳು 'ಆರ್ಯ ಮತ್ತು ದಾಸ.' ಮತ್ತು ಇಡೀ ಋಗ್ವೇದದಲ್ಲಿ ವೈಶ್ಯ
ಶೂದ್ರ, ಎಂಬ ಪದಗಳು 10, 90 ಮಂತ್ರದಲ್ಲಿ ಬಿಟ್ಟರೆ ಇನ್ನೆಲ್ಲೂ ಸಂಭ
ಈ ಪದಗಳು ಅಥರ್ವ ವೇದದಲ್ಲಿ ಕೆಲವು ಸಲ ಮತ್ತು ತೈತ್ತರೀಯ ಬ್ರಾ
ದಲ್ಲಿ ಅನೇಕ ಸಲ ಪ್ರಯೋಗವಾಗಿವೆ' (ಕಾಣೆ II-I, 25-27)

ಪುರುಷ ಸೂಕ್ತದಲ್ಲಿ ಹೇಳಿರುವ ಮಾನವ ವರ್ಗೀಕರಣದ ವಿರುದ್ಧ
ಋಗ್ವೇದದ ಒಂಬತ್ತನೆಯ ಮಂಡಲದಲ್ಲಿ ಹೀಗೆ ಹೇಳಿರುವುದು. "ನಾನು
ಗಳನ್ನು ಹೇಳುವೆನು. ನನ್ನ ತಂದೆಯು ವೈದ್ಯನು, ನನ್ನ ತಾಯಿಯು
ಳಿಂದ ಧಾನ್ಯವನ್ನು ಬೀಸುವಳು. ಹೀಗೆ ನಾನು ಬೇರೆ ಬೇರೆ ಕೆಲಸ
ಮಾಡಿ ಧನವನ್ನು ಪಡೆಯಲಿಚ್ಛಿಸುವೆನು." (9. 112-3)

ಯಜುರ್ವೇದದಲ್ಲಿ ಈ ಮಂತ್ರವಿದೆ :—

ಯಥೇಮಾಂ ವಾಚಂ ಕಲ್ಯಾಣೀಮಾ ವದಾನಿ ಜನೇಭ್ಯಃ ।
ಬ್ರಹ್ಮರಾಜನ್ಯಾಭ್ಯಾಂ ಶೂದ್ರಾಯ ಚಾರ್ಯಾಯ ಚಸ್ವಾಯ
ಚಾರಣಾಯ । ಪ್ರಿಯೋ ದೇವಾನಾಂ ದಕ್ಷಿಣಾಯೈ ದಾತುರಿ
ಸಮಯಂ ಮೇ ಕಾಮಃ ಸಮ ಧ್ಯತಾಮುಪಮಾದೋ ಸಮ
(ಯಜು-2

'ಈ ಲೋಕದಲ್ಲಿ ನಾನು ವಿದ್ವಜ್ಜನರಿಗೂ, ಉದಾರಾತ್ಮರಿ
ಶಕ್ತಿಯ ಧಾತುವಾಗುವಂತೆ ಈ ಕಲ್ಯಾಣಕಾರಿಣಿಯಾದ ವಾಣಿಯನ್ನು
ಸಲುವಾಗಿ, ಬ್ರಾಹ್ಮಣ ಕ್ಷತ್ರಿಯರಿಗಾಗಿ, ಶೂದ್ರನಿಗಾಗಿ ಹಾಗೂ ವೈ

ವನಿಗಾಗಿ, ಅದೇ ರೀತಿ ಬೇರೆಯವನ ಸಲುವಾಗಿ ಉಪದೇಶಿಸುತ್ತೇನೆ. ಈ ಕಾಮನೆ ಸಮೃದ್ಧವಾಗಲಿ, ಈ ಜಗತ್ತು ನನ್ನ ಬಳಿ ನಮ್ರವಾಗಿ ಬರಲಿ.

ಈ ಮಂತ್ರದಿಂದ ವೇದಗಳ ಉತ್ತರ ಕಾಲದಲ್ಲಿ ಈ ನಾಲ್ಕು ವರ್ಣ ಖಚಿತವಾಗಿ ಇದ್ದವೆಂದೂ ಆದರೆ ವೇದವು ಈಗ ನಾವು ಹೇಳುತ್ತಿರುವ ಲ್ಕು ವರ್ಣದ ಜನಗಳಿಗೆ ಮಾತ್ರವಲ್ಲದೆ ಮಾನವ ಕೋಟಿಯ ಎಲ್ಲ ರಿಗೂ ಅನ್ವಯಿಸುವುದೆಂದೂ ಸಿದ್ಧವಾಗುತ್ತದೆ. ಎಲ್ಲರೂ ಸಮೃದ್ಧಿಯಿಂದ ಳಲೆಂಬುದು ವೇದಗಳ ಇಚ್ಛೆ.

ಗ್ವೇದದ ಅನೇಕ ಮಂತ್ರಗಳು ಈ ವಿಶಾಲ ದೃಷ್ಟಿಯನ್ನು ತೋರಿಸುವುವು-
ಉದಾ : **ಯತ್ಪೂರ್ವ್ಯಂ ಮರುತೋ ಯಚ್ಚ ನೂತನಂ**
ಯದುದ್ಯತೇ ವಸವೋ ಯಚ್ಚ ಶಸ್ಯತೇ ।
ವಿಶ್ವಸ್ಯ ತಸ್ಯ ಭವಥಾ ಸ ವೇದಸಃ।
ಶುಭಂ ಯಾತಾಮನುರಥಾ ಅವೃತ್ಸತ ॥

(ಋ 5, 55-8)

'ಸತ್ಯಕ್ಕಾಗಿ ಪ್ರಾಣವನ್ನಾದರೂ ಬಲಿ ನೀಡಬಲ್ಲ ಧೀರರೇ, ದೇಹ ಸಿಗಳಾದ ದೈವೀ ಸಂಪತ್ಸಮೃದ್ಧರಾದ ಮಾನವರೇ ನೀವು ವಿದ್ಯಾರಹಿತರಾ ೀರಿ. ಅಲ್ಪಜ್ಞರಾಗಿದ್ದೀರಿ. ಯಾವುದು ಪ್ರಾಚೀನವೋ ಮತ್ತು ಯಾವುದು ನವೋ, ಯಾವುದು ನಿಮ್ಮ ಅಂತಃಕರಣದಿಂದ ಉದ್ಭವಿಸುತ್ತದೆಯೋ ಮತ್ತು ವುದು ಶಾಸ್ತ್ರರೂಪದಲ್ಲಿ ಉಪದೇಶಿಸಲ್ಪಡುತ್ತದೆಯೋ ಆ ಎಲ್ಲಕ್ಕೂ ಕಿವಿ ವವರಾಗಿರಿ. ಕಲ್ಯಾಣ ಮಾರ್ಗದಲ್ಲಿ ನಡೆಯುವವರ ಹಿಂದೆ ನಿಮ್ಮ ಜೀವನ ಳು ತೆರಳಲಿ.'

ಋಗ್ವೇದದ ಮತ್ತೊಂದು ಮಂತ್ರವು ಹೀಗಿದೆ.

ಯೂಯಂ ತತ್ಸತ್ಯಶವಸ ಆವಿಷ್ಕರ್ತ ಮಹಿತ್ವನಾ ।
ಧ್ಯತಾ ವಿದ್ಯುತಾರಕ್ಷಃ ॥

(ಋ. 1, 86-9)

'ಸತ್ಯವನ್ನೇ ಶಕ್ತಿಯಾಗಿ ಹೊಂದಿರುವ ಧೀರರೇ, ನೀವು ನಿಮ್ಮ ಸ್ವಂತ ಮೆಯಿಂದಲೇ ಆ ಸತ್ಯವನ್ನು ಆವಿಷ್ಕರಿಸಿರಿ. ದುಷ್ಕಾಮನೆಯನ್ನು ಜ್ಞಾನ ಸೀಳಿಹಾಕಿರಿ.'

ಈ ವಿಧವಾಗಿ ಋಗ್ವೇದವು ಸತ್ಯಕ್ಕೂ ಜ್ಞಾನಕ್ಕೂ ವಿಶಾಲದೃಷ್ಟಿಗೂ ಟ್ಟೊಬ್ಬ ಮಾನವನ ವಿಕಾಸಕ್ಕೂ ದುಡಿಯುವಂತೆ ಕರೆ ಕೊಟ್ಟಿದೆ. ಆದುದರಿಂದ ದೇಶದಲ್ಲಿ ಸುಮಾರು ಇಪ್ಪತ್ತೊಂದು ಶತಮಾನಗಳಿಂದ ಇರುವ ವರ್ಣ

ವ್ಯವಸ್ಥೆಯ ಕಟ್ಟುಪಾಡು ಋಗ್ವೇದ ಕಾಲದಲ್ಲಿ ಇರಲಿಲ್ಲವೆಂಬುದು ಸ್ಪಷ್ಟವಾಗು ವುದು.

ಶ್ವೇತಾಶ್ವತರ ಉಪನಿಷತ್ತಿನಲ್ಲಿ ಈ ಮಂತ್ರವು ಇರುವುದು.

ಯ ಏಕೋಽವರ್ಣೋ ಬಹುಧಾ ಶಕ್ತಿಯೋಗಾ-
ದ್ವರ್ಣಾನನೇಕಾನ್ನಿಹಿತಾರ್ಥೋ ದಧಾತಿ ।
ವಿಚೈತಿ ಚಾಂತೇ ವಿಶ್ವಮಾದೌ ಸ ದೇವಃ
ಸನೋ ಬುದ್ಧ್ಯಾ ಶುಭಯಾ ಸಂಯುನಕ್ತು ॥

(4–1)

' ಯಾವನು ಅದ್ವಿತೀಯನೂ, ಅವರ್ಣನೂ (ಜಾತ್ಯಾದಿರಹಿತನೂ) ಆಗಿದ್ದರೂ ತನ್ನ ಶಕ್ತಿಯ ಮಹಿಮೆಯಿಂದ ಸ್ವಾರ್ಥಾಪೇಕ್ಷೆಯಿಲ್ಲದೆ ಅನೇಕ ವರ್ಣ ಗಳನ್ನು ಸೃಷ್ಟಿಕಾಲದಲ್ಲಿ ನಾನಾ ಪ್ರಕಾರವಾಗಿ ಸೃಷ್ಟಿಸುವನೋ, (ಯಾವನಲ್ಲಿ) ವಿಶ್ವವು ಪ್ರಳಯಕಾಲದಲ್ಲಿ ಲಯ ಹೊಂದುವುದೋ (ಮತ್ತು ಯಾವನಲ್ಲಿ ಸ್ಥಿತಿ ಕಾಲದಲ್ಲಿ ನಿಂತಿರುವುದೋ) ಅಂಥ ದೇವನು ನಮಗೆ ಶುಭ ಬುದ್ಧಿಯನು ಕೊಡಲಿ !

ಇದರ ತಾತ್ಪರ್ಯ ; ಆದಿಯಲ್ಲಿ ಪರಬ್ರಹ್ಮನು ಗುಣರಹಿತನು, ಸೃಷ್ಟಿಯ ರೂಪವನ್ನು ತಾಳಿದಾಗ ಗುಣದಿಂದ ಕೂಡಿರುವನು. ಅತ್ಯಂತದಲ್ಲಿ ಮತ್ತೆ ಅವರ್ಣ ನಾಗಿ ಉಳಿಯುವನು. ಉದಾಹರಣೆಗೆ ಸೂರ್ಯ ರಶ್ಮಿಯು ಬಣ್ಣವಿಲ್ಲದ್ದು. ಆದರ ಮಳೆ ಬೀಳುತ್ತಿರುವ ಸಮಯದಲ್ಲಿ ಅಥವಾ ಜಲಪಾತದಲ್ಲಿ ಕಾಣುವ ಕಾಮನ ಬಿಲ್ಲು ಅನೇಕ ವರ್ಣದಿಂದ ಕೂಡಿರುವುದು. ಹಾಗೆಯೇ ವರ್ಣರಹಿತಬ್ರಹ್ಮನು ಸೃಷ್ಟಿಯಲ್ಲಿ ವರ್ಣದಿಂದ ಕೂಡಿರುವ ಹಾಗೆ ಕಾಣಿಸುವನು. ದಾರ್ಶನಿಕರು ಇದಕ್ಕೆ ಕೊಡುವ ಮತ್ತೊಂದು ಉದಾಹರಣೆಯೆಂದರೆ, ಕುಂಬಾರನು ಜೇಡಿಮಣ್ಣನ್ನು ತೆಗೆದುಕೊಂಡು ವಿವಿಧ ರೂಪಗಳ ಮಡಿಕೆಗಳನ್ನು ಮಾಡುವನು. ಆದರೆ ಈ ಮಡಿಕೆಗಳು ರೂಪದಲ್ಲಿ ಮಾತ್ರ ಭೇದವನ್ನು ತಾಳುವುವೇ ಹೊರತು ವಸ್ತುವಾದ ಜೇಡಿಮಣ್ಣಿನಿಂದ ಅಲ್ಲ.

ಮನುಧರ್ಮ ಶಾಸ್ತ್ರದಲ್ಲಿ ' ಶೂದ್ರನು ಸೇವೆಗಾಗಿ ಜನಿಸಿದನು. ಆದು ದರಿಂದ ಬ್ರಾಹ್ಮಣನು ಅವನಿಂದ ಸೇವೆ ಮಾಡಿಸಕೊಳ್ಳಬಹುದು ' ಎಂದು ಹೇ ಲಾಗಿದೆ.

ಶೂದ್ರಂ ತು ಕಾರಯೇದ್ದಾಸಂ ಕ್ರೀತಮಕ್ರೀತಮೇವ ವಾ ।
ದಾಸ್ಯಾಯೈವ ಹಿ ಸೃಷ್ಟೋಽಸೌ ಬ್ರಾಹ್ಮಣಸ್ಯ ಸ್ವಯಂಭುವಾ ॥

(ಮನು. 8–413)

ಭಾರತ ಚರಿತ್ರೆಯ ಸಂಶೋಧಕರು ಋಗ್ವೇದದ ಕಾಲವು ಸುಮಾರು 500 ವರುಷಗಳಿಂದೂ (ಕ್ರಿ. ಪೂ. 350( ) ಮತ್ತು ಮನುಸ್ಮೃತಿಯ ಕಾಲವು ಸುಮಾರು 1800 ವರುಷಗಳ ಹಿಂದೆ (ಕ್ರಿ. ಶ. 200) ಎಂದೂ ನಿರ್ಣಯಿಸಿ ..ವರು. ಎಲ್ಲರೂ ಇವುಗಳ ಕಾಲ ನಿರ್ಣಯವನ್ನು ಒಪ್ಪದಿದ್ದರೂ ಋಗ್ವೇದದ ಕಾಲಕ್ಕೂ ಮನುಸ್ಮೃತಿಯ ಕಾಲಕ್ಕೂ ಸುಮಾರು ಎರಡು ಸಾವಿರ ವರ್ಷಗಳ ಅಂತರವಿರುವುದೆಂದು ಒಪ್ಪಲೇಬೇಕಾಗುವುದು.

ಅನಾದಿ ಕಾಲದಿಂದಲೂ ಭೂಲೋಕದ ಎಲ್ಲ ಸಮಾಜಗಳಲ್ಲಿಯೂ 'ಸಾಮಾಜಿಕಸ್ತರ ವಿನ್ಯಾಸ' (Social Stratification) ಇರುವುದೆಂದು ಚರಿತ್ರೆಯಿಂದಲೂ, ಮಾನವಶಾಸ್ತ್ರ (Anthropology) ಪರಿಶೋಧನೆಗ ..ದಲೂ ತಿಳಿದುಬರುತ್ತದೆ. ಇದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದು .. ಸಾಮಾಜಿಕ ಕೆಲಸವು ಅನೇಕ ಅಂಶಗಳನ್ನು ಒಳಗೊಂಡಿರುವುದು, ..ನ್ನೊಂದು ಕಡೆ ವ್ಯಕ್ತಿಗಳಲ್ಲಿ ವ್ಯತ್ಯಾಸವಿರುವುದು. ಆದುದರಿಂದ ಎಷ್ಟೇ ಚಿಕ್ಕ ..ವಾಗಲೀ, ಎಷ್ಟೇ ದೊಡ್ಡ ರಾಷ್ಟ್ರವಾಗಲೀ ಸಮಾಜಕ್ಕೆ ಬೇಕಾದ ಕೆಲಸ ..ನ್ನು ನಿರ್ವಹಿಸಲು ತಕ್ಕ ವ್ಯಕ್ತಿಯನ್ನು ಆರಿಸಲು ಪ್ರಯತ್ನಿಸುವುದು. ಆ ವ್ಯಕ್ತಿಯ ..ಸವನ್ನು ಮಾಡಲು ಅಶಕ್ತನಾದರೆ ಆ ವ್ಯಕ್ತಿಯನ್ನು ಆ ಸ್ಥಾನದಿಂದ ತೆಗೆದು ..ವರು. ವ್ಯಕ್ತಿಯೂ ಸಹ ತನ್ನ ಸಾಮರ್ಥ್ಯಕ್ಕೆ, ತನ್ನ ಸ್ವಭಾವಕ್ಕೆ ಅನು..ವಾದ ಕಾರ್ಯವನ್ನು ಮಾಡಿ ಸಮಾಜದಲ್ಲಿ ತನಗೆ ಸರಿಯಾದ ಸ್ಥಾನವನ್ನು ..ಯಲು ಯತ್ನಿಸುವನು. ಸಮಾಜದ ಅವಶ್ಯಕತೆ ಮತ್ತು ವ್ಯಕ್ತಿಯ ಸ್ವಭಾವ ..ಮರ್ಥ್ಯಗಳ ಜೋಡಣೆಯು ಸಮಾಜದ ಅಭ್ಯುದಯಕ್ಕೂ ಮತ್ತು ವ್ಯಕ್ತಿಯ ..ಸಕ್ಕೂ ಅವಶ್ಯಕ. ಇದರಿಂದ ಸಮಾಜದಲ್ಲಿ ಸ್ಥಾನಮಾನದ ವ್ಯತ್ಯಾಸಗಳು ಇರುವುವು ಮತ್ತು ಆರ್ಥಿಕ ಸ್ಥಿತಿಯಲ್ಲೂ ಸಹ ವ್ಯತ್ಯಾಸಗಳಿರುವುವು. ..ರ್ಜನೆಯಲ್ಲೂ ಸಹ ವ್ಯತ್ಯಾಸಗಳಿರುವುವು. ಉನ್ನತ ವಿದ್ಯಾಭ್ಯಾಸವನ್ನು .. ಹೆಚ್ಚು ಹಣವನ್ನು ಸಂಪಾದಿಸಿ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಪಡೆದಿರುವ ವ್ಯಕ್ತಿಯು ತನ್ನ ಮಕ್ಕಳಿಗೆ ಸಹಜವಾಗಿ ಒಳ್ಳೆಯ ಪೋಷ.. ಕೊಡುವನು. ಆದುದರಿಂದ ಇಂತಹ ಮನೆತನದಲ್ಲಿ ಹುಟ್ಟಿದ ಮಕ್ಕ.. ..ಳ್ಳೆಯ ಅವಕಾಶ ದೊರೆಯುವುದು. ವ್ಯಕ್ತಿಯ ಸ್ವಭಾವ ಸಾಮರ್ಥ್ಯಗಳ.. ಸರಿಯಾದ ಪೋಷಣೆಯೂ ದೊರೆತರೆ ಈ ವ್ಯಕ್ತಿಗೂ ಪೋಷಣೆಯ.. ..ರುವ ವ್ಯಕ್ತಿಗೂ ಬಹಳ ಅಂತರವಿರುವುದರಲ್ಲಿ ವಿಸ್ಮಯವೇನೂ ..ಲ್ಲ. ..ಕವಿದ್ದರೂ ಪೋಷಣೆ ಇಲ್ಲದಿದ್ದರೆ ಮಗು ಮುಂದಕ್ಕೆ ಬರುವುದು ಅಸಾಧ್ಯ ..ಳಬಹುದು. ಇದೇ ಸಾಮಾಜಿಕ ಅನ್ಯಾಯಕ್ಕೆ ಮೂಲ ಕಾರಣ. .. ಕಾರಣಾಂತರಗಳಿಂದ ನಮ್ಮ ದೇಶದಲ್ಲಿ ವರ್ಣವಿಭಜನೆ ಮತ್ತು ಜಾತಿ ..ಗಳು ಉತ್ಪನ್ನವಾದವು. ಹಿಂದಿನ ಕಾಲದಲ್ಲಿ ಪಾಶ್ಚಾತ್ಯ ದೇಶಗಳಲ್ಲೂ

ಮಾನದಿಂದ ಪಾಶ್ಚಾತ್ಯ ದೇಶಗಳಲ್ಲಿ ವರ್ಗಕ್ಕೂ ಹುಟ್ಟುವಿಕೆಗೂ ಇದ್ದ ಸಂ
ಸಡಿಲಗೊಂಡು ಒಬ್ಬ ವ್ಯಕ್ತಿಯ ಸಾಮಾಜಿಕ ಮಟ್ಟವು ಅವನ ಹುಟ್ಟನ
ಲಂಬಿಸದೇ ಆತನ ನಿರ್ವಹಣ ಮತ್ತು ಕಾರ್ಯಸಿದ್ಧಿಗಳನ್ನು ಅವಲಂಬಿಸ
ಯಿತು. ಆದುದರಿಂದ ಆ ದೇಶಗಳಲ್ಲಿ ಈಗ ವಿವೃತಸಮಾಜವಾಗಿರ
ಆದರೆ ಭಾರತೀಯ ಸಮಾಜದಲ್ಲಿ ವಿವೃತವಾಗಿದ್ದ ಸಮಾಜವು ಉಪ
ಲದ ನಂತರ, ಅಂದರೆ ಸುಮಾರು 25-26 ಶತಮಾನಗಳಿಂದ, ಕ್ರಮೇ
ಸಂವೃತವಾಗಿ, ಒಬ್ಬ ಮನುಷ್ಯನು ತಾನು ಹುಟ್ಟಿದ ಗುಂಪಿಗೆ ಮಾತ್ರ
ಬೇಕಾದ ಕಟ್ಟುನಿಟ್ಟು ಉಂಟಾಯಿತು.

ವರ್ಣ ವ್ಯವಸ್ಥೆ ಮತ್ತು ಜಾತಿವ್ಯವಸ್ಥೆಯನ್ನು ಬೌದ್ಧರ ಕಾಲದಿ
ಅಂದರೆ ಸುಮಾರು ಇಪ್ಪತ್ತೈದು ಶತಮಾನಗಳಿಂದಲೂ ತೆಗೆದುಹಾಕು
ಅನೇಕ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳಲ್ಲಿ ಒಂದು ಮುಖ್ಯವಾದ ಪ್ರ
ವೆಂದರೆ ಗೀತೆಯ ಪ್ರಯತ್ನ. ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ ಹೀಗೆ ದ

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥

'ವರ್ಣವು ಗುಣಕರ್ಮಗಳನ್ನು ಅನುಸರಿಸುವುದೇ ಹೊರತು ಕೇ
ಹುಟ್ಟುವಿಕೆಯಿಂದಲ್ಲ' ಎಂದು ಈ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ
ವಿಧವಾಗಿ ಹದಿನೆಂಟನೆಯ ಅಧ್ಯಾಯದಲ್ಲಿ ವರ್ಣ ವ್ಯವಸ್ಥೆಯು ವ್ಯಕ್ತಿಯ
ವದ ಮೇಲೆ ಆಧಾರಗೊಂಡಿರುವುದೆಂದು 'ಸ್ವಭಾವಜೇನ' ಎಂಬ ಪದವು
ಪಡಿಸುವುದು. ಒಬ್ಬ ವ್ಯಕ್ತಿಯು ಯಾವುದನ್ನು ಸಾಧಿಸಬಲ್ಲನು ಎಂಬುದು
ಗುಣಕರ್ಮದ ಆಧಾರದ ಮೇಲೆ ಇರುವುದೆಂಬುದನ್ನು ಮಹಾಭಾರತದ
ಪರ್ವದಲ್ಲಿನ ಶ್ಲೋಕವೊಂದು ಈ ರೀತಿ ತಿಳಿಸುತ್ತದೆ.

ನ ಯೋನಿರ್ನಾಪಿ ಸಂಸ್ಕಾರೋ ನ ಶ್ರುತಂ ನ ಚ ಸಂತತಿಃ ।
ಕಾರಣಾನಿ ದ್ವಿಜತ್ವಸ್ಯ ವೃತ್ತಮೇವ ತು ಕಾರಣಂ ॥

ಅಂದರೆ, ಬ್ರಾಹ್ಮಣತ್ವದ ಕಾರಣವು ಜನ್ಮವಲ್ಲ, ಸಂಸ್ಕಾರವಲ್ಲ, ಪ
ಧ್ಯಯನವೂ ಅಲ್ಲ; ಕುಲವೂ ಅಲ್ಲ. ಅದರ ಕಾರಣವು ಸದಾಚಾರ ಮ
ಆಗಿರುತ್ತದೆ.

ವಾಲ್ಮೀಕಿ ಕವಿಯು ರಾಮಾಯಣದಲ್ಲಿ ಚತುರ್ವರ್ಣದ ಮಾತು
ದರೂ ಬಾಲಕಾಂಡದ 'ರಾಜವರ್ಣನದ ಸರ್ಗ' ದಲ್ಲಿ ಹೀಗೆ ಹೇಳಿರುವನ

ಕಾಮೀ ವಾ ನ ಕದರ್ಯೋ ವಾ ನೃಶಂಸಃ ಪುರುಷಃ ಕ್ವಚಿತ್ ॥
ದ್ರಷ್ಟುಂ ಶಕ್ಯಮಯೋಧ್ಯಾಯಾಂ ನಾವಿದ್ವಾನ್ನ ಚ ನಾಸ್ತಿಕಃ

' ಅಯೋಧ್ಯಾ ಪಟ್ಟಣದಲ್ಲಿ ಕಾಮುಕನಾಗಲಿ, ಜಿಪುಣನಾಗಲಿ, ಕ್ರೂರಿ
, ವಿದ್ಯಾ ವಿಹೀನನಾಗಲಿ, ಅಥವಾ ನಾಸ್ತಿಕನಾಗಲಿ ಹುಡುಕಿದರೂ
ಾ ಸಿಗುತ್ತಿರಲಿಲ್ಲ.

ಕವಿಯ ಪ್ರಕಾರ ಅಯೋಧ್ಯಾನಗರದ ಪ್ರಜೆಗಳೆಲ್ಲರೂ ವಿದ್ಯಾವಂತ
ು. ಆದರೆ, ನಮ್ಮ ಅನುಭವದ ಪ್ರಕಾರ ಈಗ ಶೇ. 90 ಕ್ಕಿಂತಲೂ
ಶೂದ್ರರೇ ಇರುವರು. ಶೂದ್ರರು ಅವಿದ್ಯಾವಂತರಾದರೆ ಕವಿಯು ಹೇಳಿ
್ಕ ಅರ್ಥವೇನು ? ಬಹುಶಃ ಆ ಕಾಲದಲ್ಲಿ ಶೂದ್ರರ ಸಂಖ್ಯೆಯು ಬಹಳ
ಇದ್ದಿತೆಂದು ಊಹಿಸಬಹುದು. ಏಕೆಂದರೆ ವೈಶ್ಯ ವರ್ಣಕ್ಕೆ ಸೇರಿದವರು
ಗಳು ಮಾತ್ರವಲ್ಲದೆ ವ್ಯವಸಾಯ ವೃತ್ತಿಯಲ್ಲಿ ತೊಡಗಿದವರೂ ಮತ್ತು
ೆಯವರೂ ಸಹ ಆಗಿದ್ದರು. ಆದುದರಿಂದ ಕೇವಲ ಪರಿಚಾರಕರಾಗಿ ಇದ್ದ
ಖ್ಯೆಯು ಅಂದರೆ ಶೂದ್ರರು ಅತ್ಯಂತ ಕಡಿಮೆ ಇದ್ದಿರಬೇಕೆಂದು ಊಹಿಸ
ಆದುದರಿಂದಲೇ ಆ ಪಟ್ಟಣದಲ್ಲಿ ಅವಿದ್ಯಾವಂತರನ್ನು ಕಾಣುವುದು
ನು ಕವಿಯು ವಿವರಿಸಿರುವನು.

ವೇದಗಳ ಕಾಲಕ್ಕೂ, ವೈದಿಕ ಯುಗದ ತರುವಾಯಕ್ಕೂ ವಿದ್ಯೆಯ
ಲ್ಲಿಯೂ ಸಂಸ್ಕೃತಿಯ ಮಟ್ಟದಲ್ಲಿಯೂ ಬಹಳ ಅಂತರವಿದೆಯೆಂದು ಚರಿತ್ರೆಯ
ಕರು ನಿರ್ಣಯಿಸಿದ್ದಾರೆ. ಈ ಎರಡು ಕಾಲಗಳ ವ್ಯತ್ಯಾಸಕ್ಕೆ ಮುಖ್ಯ
ೆಂದರೆ ವಿದ್ಯಾಭ್ಯಾಸದ ಅವಕಾಶವೆಂದು ಹೇಳಬಹುದು. ಋಗ್ವೇದ
ಿ ಮೇಲೆ ಹೇಳಿದ ಹಾಗೆ ವರ್ಣಭೇದವಿದ್ದರೂ ಈ ಭೇದವು ವಿದ್ಯಾ
ಅಡಚಣೆಯಾಗಿರಲಿಲ್ಲ. ಹಾಗೆಯೇ ಋಗ್ವೇದ ಕಾಲದಲ್ಲೂ ಮತ್ತು
ತ್ಕಾಲದಲ್ಲೂ ಗಂಡಸರಿಗೂ ಮತ್ತು ಹೆಂಗಸರಿಗೂ ವಿದ್ಯೆಯ ಮಟ್ಟದಲ್ಲಿ
ವಿಧವಾದ ವ್ಯತ್ಯಾಸವೂ ಇರಲಿಲ್ಲ. ಯಜ್ಞವನ್ನು ಮಾಡುವ ಯಜಮಾನನ
ಲ್ಲಿ ಆತನ ಹೆಂಡತಿಯು ಯಜ್ಞಕಾರ್ಯಗಳಲ್ಲಿ ಭಾಗವಹಿಸಿ ಮಂತ್ರ
ಹೇಳುತ್ತಿದ್ದಳೆಂದು ಋಗ್ವೇದದ ಎಂಟನೆಯ ಮತ್ತು ಹತ್ತನೆಯ ಮಂಡಲ
ವಿವರಿಸಲಾಗಿದೆ. ಋಗ್ವೇದದ ಮಂತ್ರಗಳನ್ನು ಹೇಳುತ್ತಿದ್ದವರಲ್ಲಿ ಕೆಲವರು
ೂ ಇದ್ದರೆಂಬುದೂ ಮತ್ತು ಉಪನಿಷತ್ಕಾಲದಲ್ಲಿ ಗಾರ್ಗಿ ಮೈತ್ರೇಯೀ
ದ ಹೆಂಗಸರು ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದರೆಂಬುದೂ ತಿಳಿದ
ೇ ಆಗಿದೆ. ಪತಂಜಲಿಯು ಮಹಾಭಾಷ್ಯದಲ್ಲಿ ' ಉಪಾಧ್ಯಾಯ '
ಪದಕ್ಕೂ ಮತ್ತು ' ಉಪಾಧ್ಯಾಯಿನೀ ' ಎಂಬ ಪದಕ್ಕೂ ವ್ಯತ್ಯಾಸ
ಂದು ತೋರಿಸಿರುವನು. ' ಉಪಾಧ್ಯಾಯ ' ಎಂದರೆ ಶಿಕ್ಷಕ, ಉಪಾ
ೀ ಎಂದರೆ ಶಿಕ್ಷಕನ ಹೆಂಡತಿ. ಅಮರಕೋಶದಲ್ಲಿಯೂ ಸಹ ' ಉಪಾ

ಧ್ಯಾಯಾ' ಎಂಬ ಪದವು 'ವಿದ್ವತ್ಪೂರಿತ ಉಪನ್ಯಾಸಗಳನ್ನು ಕೊಡ
ಎಂದು ಹೇಳಿದೆ. (ಉಪಾಧ್ಯಾಯಾ ಸ್ವಯಂ ವಿದ್ಯೋಪದೇಶಿನೀ.)

ಕಾಲಕ್ರಮೇಣ ಅನುಲೋಮ ಪದ್ಧತಿಯ ಪ್ರಕಾರ ಬ್ರಾಹ್ಮ
ತರು ಸ್ವಜಾತಿಯ ಬ್ರಾಹ್ಮಣ ಹೆಂಗಸರನ್ನು ಮದುವೆಯಾಗುವುದಲ್ಲದೆ ಪ
ಶಾಸ್ತ್ರದಲ್ಲಿ ಹೇಳಿರುವ ಹಾಗೆ ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಣ
ಸರನ್ನು ಮದುವೆಮಾಡಿಕೊಳ್ಳಬಹುದಾಗಿತ್ತು.

ಶೂದ್ರೈವಭಾರ್ಯಾ ಶೂದ್ರಸ್ಯ ಸಾ ಚ ಸ್ವಾಚವಿಶಃಸ್ಮೃತೇ
ತೇ ಚ ಸ್ವಾಚೈವ ರಾಜ್ಞಶ್ಚ ತಾಶ್ಚಸ್ವಾಚಾಗ್ರಜನ್ಮನಃ ॥

(ಮನು. 3–

'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರರಲ್ಲಿ ಮೊದಲನೆಯರಿಗೆ
ಜಾತಿಯ ಎಲ್ಲ ಸ್ತ್ರೀಯರೂ ವಿವಾಹಯೋಗ್ಯರು.'

ಯಾಜ್ಞವಲ್ಕ್ಯಸ್ಮೃತಿಯ (1–57) ಪ್ರಕಾರ ಬ್ರಾಹ್ಮಣನು
ಸ್ತ್ರೀಯರನ್ನು ಮದುವೆ ಮಾಡಿಕೊಳ್ಳಬಹುದು. ಅಂದರೆ ಅವನು ಪ್ರತಿ
ವರ್ಣದಿಂದಲೂ ಒಬ್ಬಳನ್ನು ಮದುವೆಯಾಗಬಹುದು. ಕ್ಷತ್ರಿಯನು
ವರ್ಣದ ಹೆಂಗಸರನ್ನೂ, ವೈಶ್ಯನು ಎರಡು ವರ್ಣದ ಹೆಂಗಸರನ್ನೂ,
ಶೂದ್ರನು ತನ್ನ ವರ್ಣದ ಹೆಂಗಸರನ್ನು ಮಾತ್ರ ಮದುವೆಯಾಗಬಹುದ
ಹೇಳಲಾಗಿದೆ.

ಆ ಕಾಲದಲ್ಲಿ ಸ್ಮೃತಿಗಳ ಪ್ರಕಾರ ಈ ನಿಯಮವು ಕಾದ
ಗಳಿಂದ ಅಂಗೀಕೃತವಾಗಿತ್ತು. ಆದರೆ ಈ ನಿಯಮವು ಸಮಾಜದ
ಅಂತಸ್ತಿಗೆ ಒಂದು ದೊಡ್ಡ ಚ್ಯುತಿಯನ್ನು ತಂದೊಡ್ಡಿತು. ಆ ಕಾಲದಲ್ಲಿ
ಸಹ ಯಜ್ಞದಲ್ಲಿ ಭಾಗವಹಿಸಬೇಕಾಗಿತ್ತು. ಆದರೆ ಇತರ ವರ್ಣಗಳಿಂದ
ವಾಗಿ ಶೂದ್ರವರ್ಣದಿಂದ ಮದುವೆಯಾದ ಹೆಂಗಸು ಈ ಕರ್ತವ್ಯವನ್ನು
ಸಲು ಅಸಾಧ್ಯವಾಗಿತ್ತು. ಇದರಿಂದ ಹೆಂಗಸರಿಗೆ ಮುಖ್ಯವಾಗಿ ಬ್ರಾಹ್ಮಣ
ಈ ಕರ್ತವ್ಯವನ್ನು ನಿರ್ವಹಿಸಲು ಅಸಾಧ್ಯವಾದ್ದರಿಂದ, ಕಾಲಕ್ರಮೇಣ
ಹೆಂಗಸರಿಗೂ ಉಪನಯನ, ವೇದಾಧ್ಯಯನವು ನಿಷೇಧವಾಯಿತು.
ರಿಂದಲೇ ಮನುಸ್ಮೃತಿಯ ಪ್ರಕಾರ

ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ
ಪತಿಸೇವಾ ಗುರೌ ವಾಸೋ ಗೃಹಾರ್ಥೋಽಗ್ನಿಪರಿಕ್ರಿಯಾ ॥

(ಮನು. 2–6

ಯರ ವಿವಾಹವು ಮಂತ್ರಸಹಿತವಾದುದು. ಅದು ವೈದಿಕ
ಚಿಸುಷನಿಗೆ ಉಪನಯನದ ಬಳಿಕ ಗುರುಕುಲವಾಸದಂತೆ ಸ್ತ್ರೀಗೆ
ರಾಜವು ಗೃಹಕೃತ್ಯವೇ. ಅಗ್ನಿ ಕಾರ್ಯ ಬೇರೆಯಿಲ್ಲ.

ನ ಸಂಸ್ಕಾರವಿಲ್ಲದೇ ಇರುವುದರಿಂದ ದ್ವಿಜಸ್ತ್ರೀಯರಿಗೂ ಸಹ
ನವಾಯಿತು. ಕ್ರಮೇಣ ಹೆಂಗಸರು ಅನಕ್ಷರಸ್ಥರಾದರು.

ಯಬೇಕ ಸ್ತ್ರೀಯೆಂಬ ಈ ಭೇದಭಾವನೆಗಳು ವೇದಗಳ ಕಾಲದಲ್ಲಿ
ನ್ನು ಆಧಾರವನ್ನು ಶ್ವೇತಾಶ್ವತರ ಉಪನಿಷತ್ತಿನ ಮಂತ್ರದಲ್ಲಿ ಕಾಣ
ತ್ಯ.

ಸ್ತ್ವಂ ಪುಮಾನಸಿ ತ್ವಂ ಕುಮಾರ ಉತ ವಾ ಕುಮಾರೀ ।
ರ್ಣೋ ದಂಡೇನ ವಂಚಸಿ ತ್ವಂ ಜಾತೋ ಭವಸಿ ವಿಶ್ವತೋ
ಮುಖಃ ॥ ಶ್ವೇ. ಉ. 4. 3.

ದರೆ,

ಉತ್ತ ಸ್ತ್ರೀ, ಪುರುಷ, ಕುಮಾರ ಮತ್ತು ಕುಮಾರಿ. ಮುಪ್ಪನ್ನು
ಬುದು. ದ ತತ್ತರಿಸುತ್ತಿರುವ ಮುದುಕನೂ ನೀನೆ. (ಪ್ರಪಂಚ
ನರು ಯಾನ್ನನಾಗಿ ವಿಶ್ವತೋಮುಖನಾಗಿರುವವನು ನೀನೆ.'

ತತನವು ದ ತಾತ್ಪರ್ಯವೂ ಸಹ ಸ್ತ್ರೀಪುರುಷರ ವ್ಯತ್ಯಾಸಗಳು ಕೇವಲ
ನಸ್ತುತಃ ಈ ವ್ಯತ್ಯಾಸಗಳು ಸತ್ಯಾಂಶವನ್ನು ಸೂಚಿಸುವುದಿಲ್ಲ.
ಲದಲ್ಲಿ ಹ

ನುವುಪ್ರ ಪ್ರಕಾರ, 'ಕೃಷಿಗೋರಕ್ಷ್ಯವಾಣಿಜ್ಯಂ ವೈಶ್ಯ ಕರ್ಮ ಸ್ವಭಾವ
ತ್ಯಾಸವೆ ಸ್ವಭಾವದಿಂದ ಉಂಟಾದ ವೈಶ್ಯನ ಕರ್ಮವು ಕೃಷಿ ಗೋರಕ್ಷಣೆ
ರುವವು. ಎಂಬುದಾಗಿದ್ದರೂ, ಕ್ರಮೇಣ ವೈಶ್ಯವರ್ಣದ ಕರ್ಮವು
ದೂ ತ್ರ ಮಿತಿಗೊಂಡಿದ್ದರಿಂದ ಸಂಪತ್ತನ್ನು ಉತ್ಪಾದನೆಮಾಡುವ ಕರ್ಮ
ಶವು ಗೋರಕ್ಷಣೆ ಮತ್ತು ಕೈಗಾರಿಕೋದ್ಯಮಗಳು ಶೂದ್ರವರ್ಣದ
ವ ಪರಿಗಣಿಸಲ್ಪಟ್ಟವು. ಇದರಿಂದಾಗಿ ದ್ವಿಜವರ್ಣಗಳು ಕೇವಲ
ಶಕ್ಕೊ ಉಳಿದು ಸಂಪತ್ತಿನ ಉತ್ಪಾದಕರು ಕಡೆಯದರ್ಜೆಯ ಜನಾಂಗಕ್ಕೆ
ಆದುದರಿಂದ ಇವರಿಗೆ ಉಪನಯನ ಸಂಸ್ಕಾರವಿಲ್ಲದೇಹೋಯಿತು.
ಭಿವೃದ್ಧಿ ತ್ತಿನ ಉತ್ಪಾದಕರಿಗೆ ವಿದ್ಯಾಭ್ಯಾಸವಿಲ್ಲದೇಹೋಯಿತು. ಸಂಪತ್ತಿನ
ಟ್ಟ ಹುತ್ತು ಮಕ್ಕಳನ್ನು ಪೋಷಿಸುವ ತಾಯಂದಿರೂ ಅಸಂಸ್ಕೃತರೂ,
ಮರ್ಥ್ಯ ದರೆ ದೇಶದ ಅಭ್ಯುದಯಕ್ಕೆ ಅವಕಾಶವೆಲ್ಲಿ? ಇದೇ ದೇಶದ
ಕಾಸಕ ಪರಿಸ್ಥಿತಿಗೆ ಮುಖ್ಯ ಕಾರಣಗಳು.

ಒಂದು ಜನಾಂಗದಲ್ಲಿ ವಿದ್ಯಾವಿಹೀನತೆಯು ಹೆಚ
ಅಭಿವೃದ್ಧಿಹೊಂದಲಾರದು ಎಂಬ ಅಭಿಪ್ರಾಯವನ್ನು ಮನ
ಲಾಗಿದೆ.

ಯದ್ರಾಷ್ಟ್ರಂ ಶೂದ್ರಭೂಯಿಷ್ಠಂ ನಾಸ್ತಿಕಾಕ್ರಾಂ
ವಿನಶ್ಯತ್ಯಾಶು ತತ್ಕೃತ್ಸ್ನಂ ದುರ್ಭಿಕ್ಷವ್ಯಾಧಿಪೀಡಿತ

'ಯಾವ ರಾಜ್ಯದಲ್ಲಿ ಶೂದ್ರರು ಬಹುಸಂಖ್ಯೆಯ
ಎಲ್ಲಿ ನಾಸ್ತಿಕರು ತುಂಬಿರುವರೋ, ಎಲ್ಲಿ ದ್ವಿಜರು ಬಹಳ
ಇರುವರೋ ಅಲ್ಲಿ ಸಂಪತ್ಸಮೃದ್ಧಿ ಇರುವುದಿಲ್ಲ. ದುಭಿ
ಹೆಚ್ಚಾಗಿ ವಿನಾಶವು ನಿಶ್ಚಯ.'

ಹೆಂಗಸರಿಗೆ ವಿದ್ಯಾಭ್ಯಾಸದ ಅಭಾವವಿರುವುದರಿಂದ
ರಾದ ಶೂದ್ರರ ಸಂಖ್ಯೆಯು ಹೆಚ್ಚಾಗಿರುವುದರಿಂದಲೂ ಸ
ಶತಮಾನಗಳಿಂದಲೂ ಭಾರತದೇಶವು ಹೀನಸ್ಥಿತಿಯಿಂದಲ
ನರಳುತ್ತಿದೆ.

ಮನುಸ್ಮೃತಿಯಲ್ಲಿಯೇ ನಿರೂಪಿಸಿರುವಂತೆ ಶೂದ್ರ
ಮರ್ಹತಿ' ಅಂದರೆ ಸಂಸ್ಕಾರಗಳಿಲ್ಲ. (ಮನು 10. 12
ಶೂದ್ರರ ಸಂಖ್ಯೆಯು ಹೆಚ್ಚಾಗಿರುವುದರಿಂದ ಭಾರತೀಯ ಸಂಪ
ಗಳಿಗೆ ಧಕ್ಕೆಯುಂಟಾಗಿದೆ.

ಹನ್ನೆರಡನೆಯ ಶತಮಾನದಿಂದ ದೇಶದ ನಾನಾ
ಭಕ್ತಿಪಂಥಗಳು ಜಾತಿಪದ್ಧತಿಯು ಸರಿಯಾದುದಲ್ಲವೆಂದೂ,
ಹಾಗೆ ಗುಣ, ಕರ್ಮ ಸ್ವಭಾವ ಇವುಗಳ ಆಧಾರದ
ವ್ಯವಸ್ಥೆಯು ಇರಬೇಕೆಂದೂ ಪ್ರತಿಪಾದಿಸಿದವು. ಕರ್ನಾಟಕ
ಮುಖ್ಯವಾಗಿ ಎರಡು ತತ್ವಗಳನ್ನು ಅನುಮೋದಿಸಿದರು. ಒ
ಮತ್ತೊಂದು ಜಾತಿಭೇದಗಳ ನಿರಾಕರಣೆ. ಈ ತತ್ವಗಳ
ರಾಮಾನುಜಾಚಾರ್ಯರು ಮತ್ತು ಉತ್ತರದ ರಾಮಾನಂದ,
ನಾನಕ್, ವಂಗದೇಶದ ಶ್ರೀಚೈತನ್ಯ ಮುಂತಾದವರು ಪ್ರ
ಆದರೆ ಇವು ಸಣ್ಣ ಪಂಗಡಗಳಾಗಿ ಉಳಿದಿವೆಯೇ ಹೊರತು
ದಲ್ಲಿ ಯಾವ ಕ್ರಾಂತಿಯನ್ನೂ ತರಲಿಲ್ಲ.

ಒಟ್ಟನಲ್ಲಿ ವರ್ಣವ್ಯವಸ್ಥೆಯನ್ನು ಜನ್ಮಕ್ಕೆ ಕಟ್ಟಿರು
ವಿಹೀನತೆ ಮತ್ತು ಬಡತನವು ನಮ್ಮ ದೇಶದಲ್ಲಿ ಹೆಚ್ಚಾಯಿತ
ತ್ತಲಿದೆ ಎಂದು ಹೇಳಬಹುದು.

ರೆ ಹೇಳಿರುವ ಹಾಗೆ ವರ್ಣವ್ಯವಸ್ಥೆಯು ಒಂದು ಮೂಲಸತ್ಯವನ್ನು
ಸಮಾಜವು ಉಳಿಯಬೇಕಾದರೆ ಒಂದು ವ್ಯವಸ್ಥೆ ಅಗತ್ಯ.
ಷ್ಟು ಸಂಕೀರ್ಣವಾಗುವುದೋ ಕಾರ್ಯವಿಭಾಗವು ಅಷ್ಟೇ ಹೆಚ್ಚಾಗ
ಒಂದು ಸಾಮಾಜಿಕ ನಿಯಮ. (A Social law)
, ಸಂಕೀರ್ಣ ಸಮಾಜವು ಉಳಿಯಬೇಕಾದರೆ ನಡೆಯಬೇಕಾದ
ಶಿಷ್ಟ್ಯವುಳ್ಳವಾಗಿ, ವಿಶೇಷ ಜ್ಞಾನದಿಂದ ಕೂಡಿ ಪ್ರಾವೀಣ್ಯತೆಯನ್ನು
ರುವುದು ಅಗತ್ಯ. ಒಂದು ವಿಶೇಷ ಕಾರ್ಯವನ್ನು ಮಾಡಬೇಕಾದರೆ
ಡುವ ವ್ಯಕ್ತಿಗೂ ವಿಶೇಷ ಸಾಮರ್ಥ ಮತ್ತು ವಿಶೇಷ ತರಬೇತಿ
ಧರ್ಮವು ಸಮಾಜದ ಈ ಸತ್ಯಾಂಶವನ್ನು ಸೂಚಿಸುವುದು. ಯಾವುದೇ
ಆ ಕೆಲಸಕ್ಕೆ ಅರ್ಹನಾದ ವ್ಯಕ್ತಿಯು ಆ ಕೆಲಸವನ್ನು ಮಾಡ
ಆ ಸಮಾಜವು ಅಭಿವೃದ್ಧಿ ಹೊಂದವುದಕ್ಕೆ ಸಾಧ್ಯ. ಆದರೆ
ಚನಾಕಾರರು ಮತ್ತೊಂದು ಸತ್ಯವನ್ನು ಮರೆತಿರುವರು. ಯಾವು
ಮತ್ತು ಉತ್ಪಾದಕರ ಸಾಮರ್ಥ್ಯ. ವಿದ್ಯಾಭ್ಯಾಸ ಮತ್ತು ತರಬೇತಿ
ವಾಗಿಲ್ಲದಿದ್ದರೆ ಸಮಾಜದ ವೃದ್ಧಿ ಮತ್ತು ಅಭ್ಯುದಯವು ಅಸಾಧ್ಯ
ನಮ್ಮ ದೇಶದಲ್ಲಿ ಎಲ್ಲಾ ಉತ್ಪಾದಕರನ್ನೂ ಶೂದ್ರವರ್ಣಕ್ಕೆ ಸೇರಿಸಿ
ನ ಸಂಸ್ಕೃತಿಗೂ ಅರ್ಹರಲ್ಲವೆಂದು ಪರಿಗಣಿಸಿದುದರ ಫಲವಾಗಿ ದೇಶದ
ಚ್ಚಾಯಿತು.

ರಲ್ಲಿ ಇರುವ ಮತ್ತೊಂದು ಅಂಶವೇನೆಂದರೆ, ಒಬ್ಬ ವ್ಯಕ್ತಿಯು ಯಾವ
ಟ್ಟಿದರೂ ಆತನಿಗೆ ಸ್ವಭಾವಸಿದ್ಧವಾಗಿ ಕೆಲವು ಸಾಮರ್ಥ್ಯಗಳು
ಕುಲಕ್ಕೂ ಸಾಮರ್ಥ್ಯಕ್ಕೂ ಸಂಬಂಧವಿಲ್ಲ. ದೈಹಿಕ ಅಂಶಗಳಲ್ಲಿ
ಹಾಗೆ ಮಾನಸಿಕ ಅಂಶಗಳಲ್ಲೂ ಬುದ್ಧಿಶಕ್ತಿಯಲ್ಲಿಯೂ ತಾರತಮ್ಯ
ಒಂದು ಸಮಾಜದ ಶೇ. 90 ಮಂದಿ ಶೂದ್ರವರ್ಣಕ್ಕೆ ಸೇರಿರುವ
ು ಯಾವ ಸಂಸ್ಕಾರಕ್ಕೂ ಅರ್ಹರಲ್ಲವೆಂದೂ ಪರಿಗಣಿಸಿದರೆ ಆಗ
ಶೇ. 90 ಮಂದಿಯ ಸಹಜ ಶಕ್ತಿಸಾಮರ್ಥ್ಯಗಳನ್ನು ಉಪಯೋಗಿ
ಶವನ್ನು ಕಳೆದುಕೊಳ್ಳುವುದು. ಇದರಿಂದ ವ್ಯಕ್ತಿಗೂ ಹಾಗೂ
ಪಾರವಾದ ನಷ್ಟವುಂಟಾಗುವುದು.

ಕಾರಣಗಳಿಂದ ವರ್ಣಧರ್ಮದ ಸತ್ಯಾಂಶವು ಕಾರ್ಯತಃ ವ್ಯಕ್ತಿಯ
ಸಮಾಜದ ಅಭ್ಯುದಯಕ್ಕೂ ದೊಡ್ಡ ಅಡಚಣೆಯನ್ನು ತಂದು
ಆಯಿತು. ಇದರಿಂದಾಗಿ ವ್ಯಕ್ತಿಯು ತನ್ನ ಸ್ವಾಭಾವಿಕ ಶಕ್ತಿ
ನ್ನು ವಿದ್ಯಾಭ್ಯಾಸ ಮತ್ತು ತರಬೇತಿಗಳ ಸಹಾಯದಿಂದ ತನ್ನ
ತ್ತು ಸಮಾಜದ ಮುನ್ನಡೆಗೂ ಉಪಯೋಗಿಸಲು ಅಶಕ್ತನಾದನು.

ವೇದಗಳ ಕಾಲದಲ್ಲಿ ವ್ಯಕ್ತಿಗೆ ತನ್ನ ಸಾಮಾಜಿಕ ಮಟ್ಟವನ್ನು ತನ್ನ ಕೆಲಸದ ಮ
ಉತ್ತಮ ಗೊಳಿಸಿಕೊಳ್ಳುವ ಅವಕಾಶ ಈಗಲೂ ಇರುವುದಾದರೆ, ಆಗ
ಯೊಬ್ಬ ವ್ಯಕ್ತಿಯೂ ತನ್ನ ಸಹಜಸಾಮರ್ಥ್ಯಗಳನ್ನು ಉಪಯೋಗಿಸಿ,ತನ್ನ ಮೇಲ
ಮತ್ತು ಸಮಾಜದ ಮೇಲ್ಮೆಗೂ ದುಡಿಯುವನು. ಮನುಸ್ಮೃತಿಯು
ಹೇಳಿರುವುದು.

ತಪೋಬೀಜಪ್ರಭಾವೈಸ್ತು ತೇ ಗಚ್ಛಂತಿ ಯುಗೇ ಯುಗೇ ।
ಉತ್ಕರ್ಷಂ ಚಾಪಕರ್ಷಂ ಚ ಮನುಷ್ಯೇಷ್ವಿಹ ಜನ್ಮತಃ ॥

ಮನು. 0, 42.

ಯಾವ ಕುಲದಲ್ಲಿ ಜನ್ಮತಾಳಿದರೂ ತನ್ನ ತಪೋಬಲದಿಂದ ಮ
ಸಹಜ ಸಾಮರ್ಥ್ಯದಿಂದ ತನ್ನ ಸ್ಥಾನಮಾನಗಳನ್ನು ಉನ್ನತಮಟ್ಟಕ್ಕೆ ಏರಿಸ ಹ
ಅಥವ ಅವುಗಳ ಸದುಪಯೋಗವನ್ನು ಮಾಡದೆ ಹೋದರೆ ಕೆಳದರ್ಜೆಗೂ ಇಳಿ
ವಂತೆ ಮಾಡಬಹುದು.

ಮನುಸ್ಮೃತಿಯ ಈ ಶ್ಲೋಕಗಳು ಗೀತೆಯಲ್ಲಿ ಹೇಳಿರುವ ಅಂಶವ
ಪ್ರತಿಪಾದಿಸುವುವು.

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥
ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥

ಗೀತೆ. 6–5, 6.

ತಾನೇ ತನ್ನನ್ನು ಸಂಸಾರ ಸಮುದ್ರದಿಂದ ಉದ್ಧಾರ ಮಾಡಿಕೊ
ಬೇಕು. ತನ್ನನ್ನು ಕುಗ್ಗಿಸಿಕೊಳ್ಳಬಾರದು; ಏಕೆಂದರೆ ಮನಸ್ಸೇ ತನ್ನ ಬಂ
ಮನಸ್ಸೇ ತನ್ನ ಶತ್ರು. ಯಾವ ಆತ್ಮನಿಂದ ಮನಸ್ಸೇ ಜಯಿಸಲ್ಪಟ್ಟದೆಯೆ
ಅಂತಹ ಆತ್ಮನಿಗೆ ಮನಸ್ಸು ಬಂಧುವಾಗಿರುತ್ತದೆ. ಆದರೆ ಅಜಿತೇಂದ್ರಿಯ
ತನ್ನ ಮನಸ್ಸೇ ಶತ್ರುವಿನಂತೆ ದ್ವೇಷಭಾವದಲ್ಲಿಯೇ ಇರುತ್ತದೆ.

ಆದುದರಿಂದ ಸಾಮಾಜಿಕ ವ್ಯವಸ್ಥೆಯು ವ್ಯಕ್ತಿಯ ವಿಕಾಸಕ್ಕೆ ಅನುಕೂ
ಗಳನ್ನು ಕಲ್ಪಿಸಬೇಕೇ ಹೊರತು ಪ್ರತಿಕೂಲಗಳನ್ನು ನಿರ್ಮಿಸಿ ವ್ಯಕ್ತಿಯ ಸ
ಸಾಮರ್ಥ್ಯಗಳ ಬೆಳವಣಿಗೆಗೆ ಅಡ್ಡಿಯನ್ನು ತರಬಾರದು. ಹಾಗೆ ಪ್ರತಿಕೂಲಗಳ
ನಿರ್ಮಿಸಿದರೆ ವ್ಯಕ್ತಿಗೆ ಮಾತ್ರವಲ್ಲದೆ ಇಡೀ ಸಮಾಜದ ಅಭ್ಯುದಯಕ್ಕೂ ಅ
ಯಾಗುವುದು

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷ್ ರಾಜ್ಯವು ದೇಶದ ನಾಭಾಗಗಳಲ್ಲಿ ಸ್ಥಾಪಿತವಾಯಿತು. ಅಷ್ಟರೊಳಗೆ ಕ್ರೈಸ್ತಮತದವರು ದೇಶದ ನಾಕಡೆಗಳಲ್ಲಿ ಚರ್ಚುಗಳನ್ನು ನಿರ್ಮಿಸಿ ಶಾಲೆಗಳನ್ನು ನಿರ್ಮಿಸಿ ಶಾಲೆಗಳನ್ನು ಪ್ರರಂಭಿಸಿದ್ದರು ಕ್ರೈಸ್ತಮತೀಯರು ಹಿಂದೂಮತದ ಅನೇಕ ಅಂಶಗಳನ್ನು ಕಿಸಿದರು. ಮುಖ್ಯವಾಗಿ ಹಿಂದೂಸಮಾಜದ ವರ್ಣ ಮತ್ತು ಜಾತಿ ದಗಳು, ಅಸ್ಪೃಶ್ಯತೆ, ಸ್ತ್ರೀವಿದ್ಯಾಭ್ಯಾಸದ ಅಭಾವತೆ, ಬಾಲ್ಯವಿವಾಹ ಪದ್ಧತಿ ಹಗಮನ ಪದ್ಧತಿ ಮುಂತಾದವುಗಳನ್ನು ತೀವ್ರವಾಗಿ ಖಂಡಿಸಿದರು. ಹುತ್ತೊಂದು ತೆ ಬ್ರಿಟಿಷ್ ಸರ್ಕಾರದ ತತ್ವಗಳು ವರ್ಣ ಮತ್ತು ಜಾತಿ ಧರ್ಮಗಳ ಏಣಿ ಣಿಯ ವಿರುದ್ಧವಾಗಿ ನ್ಯಾಯ ನೀತಿಯ ಪ್ರಕಾರ ಎಲ್ಲ ಪ್ರಜೆಗಳಿಗೂ ಕಾನೂನು ವಾದ ಶಿಕ್ಷೆಯನ್ನು ಸಮಾನವಾಗಿ ನೀಡಿದವು. ಮತ್ತು ವ್ಯಕ್ತಿಸ್ವಾತಂತ್ರ್ಯಕ್ಕೆ ಕಾಶವನ್ನು ಕೊಟ್ಟವು. ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಸಹಗಮನ ತಿಯನ್ನು ರದ್ದುಮಾಡಿ ಅದನ್ನು ಆಚರಿಸುವವರಿಗೆ ಕಾನೂನಿನ ಪ್ರಕಾರ ಯನ್ನು ನೀಡಿತು. ಬ್ರಿಟಿಷ್ ಸರ್ಕಾರದ ಹೊಸಕ್ರಮಗಳು ಸಂಪ್ರದಾಯ ಲಕರಾದ ಪಂಡಿತರಿಗೆ ಸರಿಯೆಂದು ತೋರಲಿಲ್ಲ. ಕ್ರೈಸ್ತ ಮತವನ್ನು ದೇಶದಲ್ಲಿ ಪಡಿಸುವುದಕ್ಕೋಸ್ಕರ ಸರ್ಕಾರವು ಈ ಹೊಸಕ್ರಮಗಳನ್ನು ಉಪಯೋಗಿಸು ವೆಯೆಂದು ಅವರುಗಳು ಅಭಿಪ್ರಾಯಪಟ್ಟರು. ಆಧುನಿಕ ವಿದ್ಯಾಭ್ಯಾಸವನ್ನು ಗ್ಲಿಷ್ ಮಾಧ್ಯಮದ ಮೂಲಕ ಬ್ರಿಟಿಷ್‌ಸರ್ಕಾರವು 1835ರಲ್ಲಿ ಪ್ರಾರಂಭಿಸಿತು. ದರ ಪರಿಣಾಮವಾಗಿ ಅನೇಕ ಯುವಕರು ಆಂಗ್ಲಭಾಷೆಯನ್ನು, ಆಂಗ್ಲಸಾಹಿತ್ಯ ನ್ನು, ರಾಜ್ಯಶಾಸ್ತ್ರ ಗ್ರಂಥಗಳನ್ನು ಅಧ್ಯಯನ ಮಾಡಿದುದರಿಂದ ಅವರಲ್ಲಿ ವ್ಯಕ್ತಿ ತಂತ್ರ್ಯಕ್ಕೂ, ಸಾಮಾಜಿಕ ಸಮಾನತ್ವಕ್ಕೂ ಹೊಸ ಆದರ್ಶಗಳು ರೂಪಗೊಂಡವು ಧವಾಗಿ ಕ್ರೈಸ್ತ ಮತದ ಪ್ರಚಾರ ಬ್ರಿಟಿಷ್ ಸರ್ಕಾರದ ಆಡಳಿತ ಕ್ರಮಗಳು ಇಂಗ್ಲಿಷ್ ಮಾಧ್ಯಮದ ಮೂಲಕ ವಿದ್ಯಾಭ್ಯಾಸ — ಈ ಮೂರು ಳು ಹಿಂದೂಸಮಾಜದಲ್ಲಿ ಕ್ರಾಂತಿಯ ಪರಿಸ್ಥಿತಿಯನ್ನು ಉಂಟುಮಾಡಿದವು.

ಈ ಕಾರಣಗಳಿಂದ ದೇಶದಲ್ಲಿ ಸುಧಾರಣಾ ಚಳುವಳಿಗಳು ಪ್ರಾರಂಭ ವು ರಾಂಮೋಹನರಾಯರು (1772—1833) ಬ್ರಹ್ಮಸಮಾಜವನ್ನು 3 ರಲ್ಲಿ ಸ್ಥಾಪಿಸಿ ವಿಗ್ರಹಾರಾಧನೆ, ಜನ್ಮಾಂತರ ವಾದಗಳು ಮತ್ತು ವರ್ಣ ಭೇದಗಳನ್ನು ಖಂಡಿಸಿದರು. ಉಪನಿಷತ್ತುಗಳ ಆಧಾರದ ಮೇಲೆ ನಿರ್ಗುಣ, ಕಾರ ಬ್ರಹ್ಮನ ಉಪಾಸನೆಯನ್ನು ಪ್ರತಿಪಾದಿಸಿ ವಿಗ್ರಹಾರಾಧನೆ ಜಾತಿ ಗಳು ಇವುಗಳನ್ನು ತಮ್ಮ ಸಮಾಜದಿಂದ ತೆಗೆದುಹಾಕಿದರು. ಸಂಸ್ಕೃತದಲ್ಲಿ ಪಂಡಿತರಾದ ಈಶ್ವರಚಂದ್ರವಿದ್ಯಾಸಾಗರರು (1820—1891) 1853ರಲ್ಲಿ ಸ್ವಂತ ಖರ್ಚಿನಿಂದ ತಮ್ಮ ಹಳ್ಳಿಯಲ್ಲಿ ಒಂದು ಉಚಿತ ಶಾಲೆಯನ್ನು

ಆರಂಭಿಸಿ ಅಲ್ಲಿ ಎಲ್ಲ ಜಾತಿಯ ಬಾಲಕ ಬಾಲಕರಿಗೂ ಹೆಂಗಸರಿಗೂ ಭ್ಯಾಸಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. ಇದಲ್ಲದೆ 1854 ರಲ್ಲಿ ಪುನರ್ವಿವಾಹ ಆಂದೋಳನವನ್ನು ಆರಂಭಿಸಿ 1856 ರಲ್ಲಿ ಸರ್ಕಾರವು ಈ ದಲ್ಲಿ ಒಂದು ಕಾನೂನನ್ನು ರಚಿಸುವ ಹಾಗೆ ಮಾಡಿ ಅದೇ ವರ್ಷದಲ್ಲಿ ಮಗನಿಗೆ ಒಬ್ಬಳು ವಿಧವೆಯೊಡನೆ ವಿವಾಹ ಮಾಡಿದರು. ಬ್ರಹ್ಮಸ ಚಳುವಳಿಯು ಉಪನಿಷತ್ತುಗಳ ಮೌಲ್ಯವನ್ನು ಅರಿಯಲು ಅವಕಾಶಕಲ್ಪಿಸಿಕೆ ವೇದ ಶಾಸ್ತ್ರ ಗ್ರಂಥಗಳಲ್ಲಿ ನಂಬಿಕೆ ಅವತಾರವಾದ, ಕರ್ಮವಾದ, ಪು ಸಿದ್ಧಾಂತ ಈ ವಿಷಯಗಳ ಬಗ್ಗೆ ಜನರಲ್ಲಿ ಅಶ್ರದ್ಧೆಯನ್ನು ಉಂಟುಮಾ

ಈ ಪರಿಸ್ಥಿತಿಯಲ್ಲಿ ಹಿಂದೂ ಮತವನ್ನು ಉದ್ಧರಿಸಲು ಸ್ವಾಮಿ ನಂದ ಸರಸ್ವತಿಯವರು (182[illegible] -1883) ಆರ್ಯಸಮಾಜವನ್ನು 18 ಸ್ಥಾಪಿಸಿದರು. ಇವರು ವೈದಿಕ ಸಂಸ್ಕೃತಿ[illegible] ಪುನರುಜ್ಜೀವನಮಾಡಿ ವ ಮತ್ತು ವೇದಾಂತಗಳು ಮಾತ್ರವೇ ಹಿಂದೂಧರ್ಮ[illegible] ಆಧಾರವೆಂದು ಪಾದಿಸಿದರು. ವೇದೋಕ್ತ ಅಗ್ನಿಹೋತ್ರಾದಿ ಹೋಮ, [illegible]ಗಳು, ಗಳನ್ನು ಚೇತನಗೊಳಿಸಿದರು. ಸಂಸ್ಕೃತ ಭಾಷೆಯ ಶ್ರೇಷ್ಠತೆಯ[illegible] ಜ ತೋರಿಸಿಕೊಟ್ಟರು.

ಇದೇ ಸಮಯದಲ್ಲಿ 1882ನೇ ಇಸವಿಯಲ್ಲಿ ಥಿಯಸಾಫಿಕಲ್ ಯನ್ನು ಅಡಿಯಾರ್, ಮದ್ರಾಸಿನಲ್ಲಿ ಸ್ಥಾಪಿಸಲಾಯಿತು. ಈ ಸೊಸ್ ಆನಿಬೆಸೆಂಟ್ (1874—1933) ರವರ ನೇತೃತ್ವದಲ್ಲಿ ಬ್ರಹ್ಮವಿದ್ಯೆ, ಧ್ಯಾನ, ಜಪವಿಚಾರಗಳಲ್ಲಿ ಮಾತ್ರವಲ್ಲದೆ ಪುನರ್ಜನ್ಮ, ಅವತಾರವಾದ ಮು ಗಳಲ್ಲಿಯೂ ಶ್ರದ್ಧೆಯನ್ನುಂಟುಮಾಡಿತು. ಆದರೆ ಈ ಸೊಸೈಟಿಯು ವರ್ಣ ಜಾತಿ ಭೇದಗಳನ್ನು ಖಂಡಿಸಿತು. ಪ್ರತಿಮಾನವನಿಗೂ, ಭಾರತದೇಶದಲ್ಲಿ ವಲ್ಲದೆ ಇಡೀ ಭೂಲೋಕದಲ್ಲಿ ಹಿಂದೂಮತಗ್ರಂಥಗಳನ್ನು ಅಧ್ಯಯನ ಪ ಅವಕಾಶವನ್ನು ಕಲ್ಪಿಸಿಕೊಟ್ಟರು. ಥಿಯಸಾಫಿಕಲ್ ಸೊಸೈಟಿಯು ಅನೇಕ ಶಾಲೆಗಳನ್ನು ಪ್ರಾರಂಭಿಸಿ ಗಂಡಸರಿಗೂ ಮತ್ತು ಹೆಂಗಸರಿಗೂ ಸಮಾನವಾ ಜಾತಿಯ ವ್ಯಕ್ತಿಗಳಿಗೂ ವಿದ್ಯಾಭ್ಯಾಸಕ್ಕೆ ಅವಕಾಶಗಳನ್ನು ಕಲ್ಪಿಸಿಕೊಟ್ಟ

ಮತ್ತೊಂದು ಮುಖ್ಯ ಸಂಸ್ಥೆಯೆಂದರೆ ಶ್ರೀರಾಮಕೃಷ್ಣ ವಿ ಸ್ವಾಮಿ ವಿವೇಕಾನಂದರು (1863—1811) ಈ ಸಂಸ್ಥೆಯನ್ನು 189 ಸ್ಥಾಪಿಸಿದರು. ಇವರು ಮಹಾಪುರುಷರಾದ ಶ್ರೀ ರಾಮಕೃಷ್ಣ ಪರಮ (1836—1886) ಶ್ರೇಷ್ಠ ಅನುಯಾಯಿಗಳು. ಇವರು 'ಬಹುಜನ ಸುಖ ಎಂಬ ತತ್ವದ ಪ್ರಕಾರ ಗಂಡಸರೂ, ಹೆಂಗಸರೂ, ಎಲ್ಲಜಾತಿಯ, ಎಲ್ಲಪ

ಭ್ಯುದಯಕ್ಕಾಗಿ ದೇಶದ ನಾನಾಕಡೆ ಸಂಸ್ಥೆಗಳನ್ನು ಸ್ಥಾಪಿಸಿದರು.
ಮತ್ತು ದೀನನನ್ನು ದೇವರೆಂದು ಕಾಣು ಎಂಬ ಹೊಸಮಂತ್ರಗಳನ್ನು
ಅಸ್ಪೃಶ್ಯತಾ ನಿವಾರಣೆಗೂ, ಬಡತನದ ನಿವಾರಣೆಗೂ ಬಹುವಾಗಿ
ದರು.

ಾಶ್ಚಾತ್ಯ ವಿದ್ಯಾಭ್ಯಾಸ ಕ್ರಮದಿಂದ ಉಂಟಾದ ಆಂದೋಳನವು ಭಾರತ
ರಡು ಚಳುವಳಿಗೆ ಕಾರಣವಾಯಿತು. 1) ಸಮಾಜ ಸುಧಾರಣಾ
ಇದು 1884 ರಲ್ಲಿ ಪ್ರಾರಂಭವಾಯಿತು. 2) ... ಸ್ವರಾಜ್ಯದ ಚಳು
1885 ರಲ್ಲಿ ಪ್ರಾರಂಭವಾಯಿತು. ಸ... ಸ್ಯ ...
ಖ್ಯ ಉದ್ದೇಶಗಳೆಂದರೆ 1) ಸ್ವಾ... ...ಮಾಜ ಸುಧಾರಣಾ ಚಳು
ಗಳ ಆಧಾರದ ಮೇ... ...ಮಾಜಿಕ ಜೀವನವನ್ನು ಪ್ರಾಚೀನ
2) ಸ್ತ್ರೀ... ...ಸ ಹುಟ್ಟಿದ ಮೂಢನಂಬಿಕೆಗಳಿಂದ ವಿಮುಕ್ತ
ದಲ್ಲಿ ... ...ಯರಿಗೆ ವಿದ್ಯಾಭ್ಯಾಸ ಕೊಡುವ ಹೊಣೆ ಸರ್ಕಾರದ್ದು
...ಸ್ತ್ರೀಗೆ ಪುರುಷನಂತೆ ಸರಿಸಮಾನ ಹಕ್ಕುಗಳು. 4) ಅಸ್ಪೃಶ್ಯತೆ
...ರ್ಮೂಲನಮಾಡಿ ಈ ಪಂಗಡಗಳಿಗೆ ಸೇರಿದ ಎಲ್ಲಾ ಜನರಿಗೂ ವಿದ್ಯಾ
ಅನುಕೂಲಗಳನ್ನು ಕಲ್ಪಿಸಿಕೊಟ್ಟು ಅವರು ಸಮಾಜದಲ್ಲಿ ಸರಿಸಮಾನ
ನ್ನು ಪಡೆಯುವುದು 5) ಜಾತಿ ಪದ್ಧತಿ ಬದಲಾಯಿಸಿ ಅಂತರ್ವಿವಾಹ,
ನಕೂಟಗಳನ್ನು ಏರ್ಪಡಿಸುವುದು–ಇತ್ಯಾದಿ.

ಮಹಾತ್ಮ ಗಾಂಧಿಯವರು (1869–1948) ಕಾಂಗ್ರೆಸ್ ಸಂಸ್ಥೆಗೆ
ನಾಯಕರಾದ ಮೇಲೆ ಹಿಂದೂ ಸಮಾಜದ ಪುನರುಜ್ಜೀವನಕ್ಕೆ ಒಂದು
ಾದ ಕೆಲಸವನ್ನು ಕೈಗೊಂಡು ಮೂಢನಂಬಿಕೆ, ಜಾತಿ ದ್ವೇಷ, ಅಸ್ಪೃಶ್ಯತಾ
ಸ್ತ್ರೀ ಪುರುಷತಾರತಮ್ಯ ಮುಂತಾದ ಸಂಕುಚಿತ ಭಾವನೆಗಳನ್ನು ನಿರ್ಮೂಲ
ತುಂಬಾ ಶ್ರಮಿಸಿದರು. ಭಾರತೀಯ ಸಂಸ್ಕೃತಿಯ ಮುಖ್ಯಧರ್ಮಗಳಾದ
ತ್ತು ಅಹಿಂಸೆ, ತ್ಯಾಗ ಮತ್ತು ಶ್ರದ್ಧೆ, ಧೈರ್ಯ ಮತ್ತು ಆತ್ಮ ವಿಶ್ವಾಸ
ಮೂಲತತ್ವಗಳನ್ನಾಗಿ ಮಾಡಿ ದೇಶದ ಸ್ವಾತಂತ್ರ್ಯಕ್ಕೂ, ಸಮಾಜದ
ಗೂ ಉತ್ಕೃಷ್ಟ ಸೇವೆಯನ್ನು ಸಲ್ಲಿಸಿದರು.

ದೇಶದಲ್ಲಿ ಈ ಹೊಸದೃಷ್ಟಿಯು 1931 ರಲ್ಲಿ ಕರಾಚಿಯಲ್ಲಿ ನಡೆದ
ಸಮಾವೇಶನದಲ್ಲಿ ಮೂಲಭೂತ ಹಕ್ಕುಗಳ ಮತ್ತು ಕರ್ತವ್ಯಗಳ
ಅಂಗೀಕಾರದಿಂದ ರೂಪಗೊಂಡಿತು. ಸಾಮಾಜಿಕ ಸಂಸ್ಥೆಗಳಿಗೆ ಅನ್ವಯಿ
ನಿರ್ಣಯದ ಕೆಲವು ಅಂಶಗಳನ್ನು ಇಲ್ಲಿ ಸೂಚಿಸಬಹುದು. 1) ಜಾತಿ,
ಲಿಂಗ ಎಂಬ ಭೇದ ಭಾವಗಳಿಲ್ಲದೆ ಕಾನೂನು ದೃಷ್ಟಿಯಿಂದ ಎಲ್ಲರೂ
ರು. 2) ಎಲ್ಲಾ ಪ್ರಜೆಗಳಿಗೂ ಬಾವಿ, ಕೆರೆ. ರಸ್ತೆ, ಶಾಲೆ ಮುಂತಾದ
ಕ ಸಂಸ್ಥೆಗಳ ಉಪಯೋಗಕ್ಕೆ ಸಮಾನ ಹಕ್ಕುಗಳು. 3) ಎಲಾ

ವಯಸ್ಕರಿಗೂ ಚುನಾವಣೆಯ ಹಕ್ಕು. 3) ಸರ್ಕಾರವು ಎಲ್ಲಾ ಮಕ್ಕ
ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿ ಕೊಡುವುದು.

ದೇಶಕ್ಕೆ 1947 ರಲ್ಲಿ ಸ್ವಾತಂತ್ರ್ಯ ಬಂದಮೇಲೆ, 1950 ರಲ್ಲಿ ಅ
ಕೃತವಾದ ಸಂವಿಧಾನದಲ್ಲಿ, ಮೇಲೆ ನಿರೂಪಿಸಿರುವ ಮೂಲ ಹಕ್ಕುಗಳು ಸರ
ನಿಯಂತ್ರಿತ ಸೂತ್ರಗಳಲ್ಲಿ ಒಳಗೊಂಡಿವೆ. ಇದರ ಆಧಾರದ ಮೇಲೆ ಸ
ಅನೇಕ ಕಾನೂನುಗಳನ್ನು ರಚಿಸಿ ಹೆಂಗಸರಿಗೆ, ಶೂದ್ರವರ್ಣದವರಿಗೆ,
ಜನಾಂಗದವರಿಗೆ ಇದ್ದ ನಿರ್ಬಂಧಗಳನ್ನು ತೆಗೆದುಹಾಕಿ ಸಮಾನತ್ವವನ್ನು
ಇದಲ್ಲದೆ ವಿವಾಹ ಕಾನೂನುಗಳನ್ನು ಸುಧಾರಿಸಿ ಅಂತರ್ಜಾತೀಯ ವಿವಾಹ
ಅಡಚಣೆಗಳನ್ನು ತೆಗೆದುಹಾಕಿತು.

ನೋಡಿದರೆ ವೇದಗಳ ಕಾಲ
ಈ ವಿಧವಾಗಿ ಒಂದು ದೃಷ್ಟಿಯಿಂದ ... ಕಲ್ಪನೆಗಳು 1950 ರ
ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸಮತಾಭಾವ ... ಗಳು
ಕೃತವಾದ ಸಂವಿಧಾನದ ಆಧಾರದಮೇಲೂ, ಹೊಸ ಕಾನೂನುಗಳ
ಮೇಲೂ 20 ನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲ
ಹೇಳಬಹುದು. ಕಾನೂನು ಬಹಳ ಉದಾರವಾಗಿದ್ದರೂ ಜನಜೀವನ
ಇನ್ನೂ ಮೇಲ್ಮೆಯನ್ನು ಹೊಂದಿಲ್ಲ. ಮೇಲೆ ನೋಡಿರುವ ಹಾಗೆ ಈ ದುಃಸ್ಥಿ
ಮುಖ್ಯ ಕಾರಣಗಳು ಯಾವುವೆಂದರೆ ಶೇ 80 ಮಂದಿ ಭಾರತೀಯ
ಇರುವ ಬಡತನ ಮತ್ತು ಅನಕ್ಷರತೆ. ಈಗಲೂ ಸಹ ಶೇ 80 ಮಂದಿ ಗ್ರಾ
ಗಳಲ್ಲಿ ವಾಸಿಸುತ್ತಿರುವರು. ನಾಲ್ಕು ಪಂಚವಾರ್ಷಿಕಯೋಜನೆಗಳು ಬಡತನವ
ಮತ್ತು ಅನಕ್ಷರಸ್ಥತೆಯನ್ನು ನಿವಾರಿಸಲು ಸಫಲವಾಗಲಿಲ್ಲ. ದೊಡ್ಡ ದೊ
ಕೈಗಾರಿಕಾ ಸಂಸ್ಥೆಗಳು ಕೋಟ್ಯಾಂತರ ರೂಪಾಯಿಗಳ ಖರ್ಚಿನಿಂದ ಸ್ಥಾಪಿಸಲ್ಪ
ದ್ದರೂ ಇನ್ನೂ ಸಹ ಹಿಂದಿನ ಕಾಲದಂತೆಯೇ ದೇಶದ ಆದಾಯವು ಅರ್ಧಭಾ
ವ್ಯವಸಾಯದ ಮೇಲೆಯೇ ಇದೆ. ಆದುದರಿಂದ ಹಳ್ಳಿಗಳಲ್ಲಿ ಹಿಂದುಳಿದ ಪಂಗಡಗ
ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯಲ್ಲಿ ಗಮನಾರ್ಹವಾದ ಬದಲಾವಣೆಯನ
ಪಡೆದಿಲ್ಲ. ಈ ಹಳ್ಳಿಯ ಹೆಂಗಸರ ಜೀವನದಲ್ಲಿ ಹೆಚ್ಚಿನ ಬದಲಾವಣೆಯೇನ
ಕಾಣಿಸುವುದಿಲ್ಲ. ಮುಖ್ಯವಾಗಿ ಹಳ್ಳಿಗಳಲ್ಲಿ ಜಾತಿ ಭೇದಗಳು, ಜಾತಿ ವೈಷಮ
ಗಳು ಅಸ್ಪೃಶ್ಯತಾ ಭಾವನೆ ಸ್ತ್ರೀಸಮಾನತೆ ಮುಂತಾದವುಗಳಲ್ಲಿ ಹಳೆಯ ಸಂಪ್ರ
ದಾಯವನ್ನೇ ಅನುಸರಿಸಲಾಗುತ್ತಿದೆ. ಆದುದರಿಂದ ಸಂವಿಧಾನದಲ್ಲಿ ಅಂಗೀಕೃತವಾ
ಸಾಮಾಜಿಕ ನಿಯಮಗಳು ಜನಜೀವನದಲ್ಲಿ, ಮುಖ್ಯವಾಗಿ ಹಳ್ಳಿಗಳಲ್ಲಿ ಆಚರಣೆ
ಬರದಿದ್ದರೆ, ರಾಜಕೀಯ ಬದಲಾವಣೆಗಳು ಮತ್ತು ಆರ್ಥಿಕ ಬದಲಾವಣೆಗ
ಎಷ್ಟಾದರೂ, ಸಾಮಾಜಿಕ ಸುಧಾರಣೆಗೆ ಕಾರಣಭೂತವಾಗುವುದಿಲ್ಲ. ಎಂ
ಸಿದ್ಧವಾಗುವುದು.

ರ್ವಿಧ ಪುರುಷಾರ್ಥಗಳು :—

ಯ 1

ಭಾರತೀಯ ಸಂಸ್ಕೃತಿಗೆ ಸಾವಿರಾರು ವರ್ಷಗಳ ಹಿಂದೆ ರೂಪವನ್ನು ವಿಚಾರಪರರು 'ಜೀವನದ ಉದ್ದಿಶ್ಯವೇನು ? ವ್ಯಕ್ತಿಗೂ ಸಮಾಜಕ್ಕೂ ವಿಧವಾದ ಸಂಬಂಧವಿರಬೇಕು ? ವ್ಯಕ್ತಿಯ ಅಂತಿಮಗುರಿ ಏನಿರಬೇಕು ' ನ್ನು ದೀರ್ಘವಾಗಿ ಪರ್ಯಾಲೋಚಿಸಿ ಮನುಷ್ಯನು ಜೀವನದಲ್ಲಿ ಸಾಧಿಸ ರ್ಚತುರ್ವಿಧ ಪುರುಷಾರ್ಥಗಳನ್ನು ನಿರೂಪಿಸಿದರು. ಧರ್ಮ, ಅರ್ಥ, ಮತ್ತು ಮೋಕ್ಷ ಇವೇ ಚತುರ್ವಿಧ ಪುರುಷಾರ್ಥಗಳು.

ಸಂಹಿತೆ, ಬ್ರಾಹ್ಮಣಗಳ ಕಾಲದಲ್ಲಿ ಸಾಧಾರಣವಾಗಿ ಮೂರು ಪುರುಷಾರ್ಥ ಮಾತ್ರ ಸೂಚಿಸುತ್ತಿದ್ದ ಹಾಗೆ ಆ ಕಾಲದ ಗ್ರಂಥಗಳು ತೋರಿಸುತ್ತವೆ. ದಲ್ಲಿ ಧರ್ಮ, ಅರ್ಥ ಮತ್ತು ಕಾಮ ಇವೇ ತ್ರಿವಿಧ ಪುರುಷಾರ್ಥಗಳಾ ಆ ಕಾಲದಲ್ಲಿ ಧರ್ಮ ಎಂಬ ಭಾವನೆಯು ಮತಕ್ಕೂ ಮತ್ತು ನೀತಿಗೂ ಸುವ ಪದವಾಗಿತ್ತು. ಬ್ರಾಹ್ಮಣಗಳ ಕಾಲದಲ್ಲಿ ಪುಣ್ಯವನ್ನು ಸಂಪಾದಿಸು ಮಾನವನ ಮುಖ್ಯ ಗುರಿಯಾಗಿತ್ತು. ಯಜ್ಞಗಳನ್ನು ಮಾಡಿ ಪುಣ್ಯ ಪಡೆದು ಮರಣದ ನಂತರ ಸ್ವರ್ಗದಲ್ಲಿ ಉನ್ನತ ಸ್ಥಾನವನ್ನು ಪಡೆಯುವುದೇ ನ ಮುಖ್ಯ ಗುರಿಯಾಗಿತ್ತು.

ಉಪನಿಷತ್ಕಾಲದಲ್ಲಿ ಒಂದು ಮಹಾ ಕ್ರಾಂತಿಯುಂಟಾಯಿತು. ಸಂಹಿತೆ ಮತ್ತು ಬ್ರಾಹ್ಮಣ ಭಾಗಗಳು ಪ್ರಥಮತಃ ಬಹಿರ್ಮುಖವಾಗಿದ್ದವು. ಗಳು ಸಾಧಾರಣವಾಗಿ ಪ್ರಕೃತಿಯಲ್ಲಿರುವ ಅಂಶಗಳನ್ನು ಒಳಗೊಂಡಿದ್ದವು. ತ್ರಗಳು ಸೂರ್ಯ, ಚಂದ್ರ, ಉಷಃಕಾಲ, ವಾಯು, ಆಕಾಶ, ನೀರು ಮುಂತಾದ ಗೆ ಸಂಬಂಧಪಟ್ಟ ಅಂಶಗಳನ್ನು ಕುರಿತು ಆವಾಹನೆ ಮಾಡುತ್ತಿದ್ದವು. ಕ್ತಿಗಳ ಮೂಲಕ ತಮ್ಮ ಜೀವನವು ಸುಗಮವಾಗುವ ಹಾಗೆ ಪ್ರಯತ್ನಿ ದ್ದರು. ಬ್ರಾಹ್ಮಣಗಳ ಕಾಲದಲ್ಲಿ ಈ ಶಕ್ತಿಗಳನ್ನು ಕುರಿತು ಯಜ್ಞ ಮಾಡಿ ಳನ್ನು ತೃಪ್ತಿಪಡಿಸಿ, ತನ್ಮೂಲಕ ಪುಣ್ಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ರಿಂದಲೇ ವೇದಗಳ ಬ್ರಾಹ್ಮಣ ಭಾಗಗಳು ಯಜ್ಞಗಳನ್ನು ಯಾವ ಪ್ರದೇಶ

ದಲ್ಲಿ, ಯಾವ ಕಾಲದಲ್ಲಿ, ಯಾವ ದೇವತೆಗಳಿಗೆ, ಯಾವ ವಿಧವನ್ನು
ಯಾವ ಋತ್ವಿಜರಿಂದ ನಡೆಸಬೇಕು, ಅವರ ಸಂಭಾವನೆಯೇನು ಮುಂತ
ಗಳನ್ನು ಕುರಿತು ಸೂಕ್ಷ್ಮಾಂಶಗಳನ್ನು ವಿವರಿಸುತ್ತವೆ.

ಆರ್ಯರು ಕ್ರಮೇಣ ಭಾರತ ದೇಶದಲ್ಲಿ ನೆಲೆಸಿದ್ದ ದಾಸ, ದಸ್ಯು
ಜನಗಳ ಜೊತೆ ಸಂಪರ್ಕವನ್ನು ಬೆಳೆಸಿದರು. ದಾಸ ಮತ್ತು ದಸ್ಯು
ಯನ್ನು ಆರಾಧಿಸುವವರಾಗಿದ್ದರು. ಅವರು ಯೋಗಮಾರ್ಗವನ್ನು
ಧ್ಯಾನವನ್ನು ಮಾಡುವವರಾಗಿದ್ದರು. ಆದುದರಿಂದ ಇವರು ಅಂತಮು
ದ್ದರು. ಪ್ರಾಯಶಃ ಅವರ ಜೊತೆಯಲ್ಲಿ ಕೂಡಿ ಆರ್ಯರಲ್ಲಿ ಕೆಲವರು
ಮಾರ್ಗವನ್ನು ಸ್ವೀಕರಿಸಿ, ತಮ್ಮ ಜೀವನದೃಷ್ಟಿಯನ್ನು ಬದಲಾಯಿ
ಇದರಿಂದ ಯಜ್ಞ ಯಾಗಾದಿಗಳು ನಿಷ್ಫಲವೆಂದೂ ಧ್ಯಾನಮಾರ್ಗವೆ
ಮಾರ್ಗವೆಂದೂ ತಮ್ಮ ಅನುಭವದಿಂದ ತಿಳಿದುಕೊಂಡು ವೇದಗಳ
ಭಾಗವಾದ ಆರಣ್ಯಕಗಳನ್ನು ರಚಿಸಿರಬಹುದು. ಕ್ರಮೇಣ ಉಪನಿಷತ್
ವಿಸಿರಬಹುದು. ಇದರ ಪರಿಣಾಮವಾಗಿ ಯಜ್ಞ ಯಾಗಗಳಿಂದ
ಪಡೆಯುವ ಬದಲು ಧ್ಯಾನದ ಮೂಲಕ ಆತ್ಮ ಸಾಕ್ಷಾತ್ಕಾರವನ್ನು ಪ
ಉತ್ತಮವೆಂದು ಪರಿಗಣಿಸಲಾಯಿತು.

ಆದುದರಿಂದಲೇ ಉಪನಿಷತ್ಕಾಲದಲ್ಲಿ ಧರ್ಮಕ್ಕೆ ಎರಡು ರೂಪ
ಟ್ಟವು. ಹಿಂದಿನ ಕ್ರಮಗಳನ್ನು ಆಚರಿಸಿ ಪ್ರವೃತ್ತಿಮಾರ್ಗವನ್ನು
ಲಾಯಿತು. ಅದರ ಜೊತೆಯಲ್ಲಿ ಆಗಿನ ಹೊಸಮಾರ್ಗವನ್ನು ಅನುಸ
ಮಾರ್ಗವನ್ನೂ ಅನುಸರಿಸಲಾಯಿತು. ಯಜ್ಞಯಾಗಗಳನ್ನು ಮಾಡು
ಪ್ರವೃತ್ತಿಮಾರ್ಗವನ್ನು ಅನುಸರಿಸುವವರೆಂದೂ, ಅವುಗಳನ್ನು ತ್ಯಜಿ
ಮಾರ್ಗವನ್ನು ಅನುಸರಿಸಿ ಜೀವನಕ್ಕೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳ
ಮಾಡಿದವರು ನಿವೃತ್ತಿಮಾರ್ಗವನ್ನು ಅನುಸರಿಸುವವರೆಂದೂ ಪರಿಗಣಿಸ
ಕ್ರಮೇಣ ನಿವೃತ್ತಿಮಾರ್ಗವೇ ಒಂದು ಸ್ಪಷ್ಟವಾದ ಪುರುಷಾರ್ಥವಾ
ಮೋಕ್ಷ ಎಂಬ ರೂಪವನ್ನು ಕೊಡಲಾಯಿತು. ಅದುದರಿಂದ ಉ
ದಿಂದಲೂ ಭಾರತೀಯ ಸಂಸ್ಕೃತಿಯು ನಾಲ್ಕು ಪುರುಷಾರ್ಥಗಳನ್ನು
ಡಿತು. ಈ ನಿವೃತ್ತಿಮಾರ್ಗವು ಪ್ರವೃತ್ತಿಮಾರ್ಗದ ಮೇಲೂ ತನ್ನ ಪ್ರ
ಬೀರಿತು. ಇದನ್ನು ಗೀತೆಯಲ್ಲಿ ವಿವರಿಸಲಾಗಿದೆ.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕ
ಗೀತ

ತ್ರ ರ್ಮದಲ್ಲಿಯೇ ನಿನಗೆ ಅಧಿಕಾರವು; ಕರ್ಮಫಲದಲ್ಲಿ ಎಂದೂ ಆಸಕ್ತಿ ಕ ಕರ್ಮಫಲಕ್ಕೆ ಕಾರಣನಾಗದೇ ಇರು; ಕರ್ಮವನ್ನು ಬಿಡುವುದರಲ್ಲಿ ಕ್ತನಾಗದಿರಲಿ.

ಷ್ಟವರೆ ಪ್ರತಿಯೊಬ್ಬ ಮನುಷ್ಯನೂ ತನ್ನ ಕರ್ಮವನ್ನು ತಾನು ಮಾಡ ಎದ ಅಗತ್ಯ. ಆದರೆ ಆ ಕರ್ಮದ ಫಲದ ಹಕ್ಕನ್ನು ಬಿಡಬೇಕು. ಇದೇ ಈ ವಿಧವಾಗಿ ತ್ಯಾಗ ಬುದ್ಧಿಯು ಸನ್ಯಾಸಿಗಳಲ್ಲಿ ಮಾತ್ರ ಸ್ಥರಲ್ಲಿಯೂ ಸಹ ಇರಬೇಕೆಂಬುದೇ ಗೀತೆಯ ಸಂದೇಶ.

ತ್ಮಸಾಕ್ಷಾತ್ಕಾರವು ಪ್ರತಿ ಮಾನವನ ಉತ್ಕೃಷ್ಟ ಪುರುಷಾರ್ಥವೆಂದು ಮೇಲೆ, ಧರ್ಮ ಎಂಬ ಪದದ ಅರ್ಥ ಮತ್ತು ವ್ಯಾಪ್ತಿಯು ಸ್ವಲ್ಪ ಯನ್ನು ಹೊಂದಿತು. ಬ್ರಾಹ್ಮಣಗಳ ಕಾಲದಲ್ಲಿ ಯಾಗಗಳನ್ನು ವಿಧಿ ಮಾಡುವುದೇ ಧರ್ಮವೆನಿಸಿತ್ತು. ಉಪನಿಷತ್ ಕಾಲದಲ್ಲಿ ಧರ್ಮವು ಬಂಧಪಟ್ಟ ಭಾವನೆಯಾಗಿ ಮತ್ತು ಪ್ರತಿಯೊಬ್ಬ ಮಾನವನೂ ತನ್ನ ನ್ನು ಶ್ರದ್ಧೆಯಿಂದ ಮಾಡುವುದು ಧರ್ಮದ ಗುರಿ ಎಂಬುದಾಗಿ ಬದ ನ್ನು ಹೊಂದಿತು. ಈ ವಿಧವಾಗಿ ಪುರುಷಾರ್ಥಗಳು ಕ್ರಮೇಣ ರೂಪು ಆದುದರಿಂದ ಧರ್ಮ ಎಂಬ ಪದದ ಭಾವನೆಯೂ ಸಹ ಮಾರ್ಪಾ ಹೊಂದಿತು.

ಈಗ ಈ ನಾಲ್ಕು ಪುರುಷಾರ್ಥಗಳ ಪರಿಚಯವನ್ನೂ ಮತ್ತು ಅವುಗಳ ಹಾಗೂ ಅಂತರ ಸಂಬಂಧಗಳನ್ನೂ ಸಂಕ್ಷಿಪ್ತವಾಗಿ ವಿವರಿಸಬಹುದು.

) **ಧರ್ಮ :—** ಧರ್ಮದ ಸ್ವರೂಪವನ್ನು ಸಾಮಾನ್ಯದೃಷ್ಟಿಯಿಂದ ಧ್ಯಾಯಗಳಲ್ಲಿ ವಿವರಿಸಲಾಗಿದೆ. ಈಗ ಧರ್ಮದ ಸ್ವರೂಪವು ಪುರು ದೃಷ್ಟಿಯಿಂದ ಯಾವ ವಿಧವಾಗಿ ಇರುವುದೆಂಬುದನ್ನು ಪರಿಶೀಲಿಸ

ಮಹಾಭಾರತದ ಶಾಂತಿಪರ್ವದಲ್ಲಿ ಹೀಗೆ ಹೇಳಿದೆ.

ರಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ ।
ಶ್ಚ ಧಾರಣ್ಯಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥

' ಧರ್ಮ ಎಂದರೆ ಎಲ್ಲರನ್ನೂ ಕಾಪಾಡುವುದು. ಆದುದರಿಂದ ಯಾವುದು ಕಾಪಾಡುವುದೋ ಅದನ್ನು ಧರ್ಮವೆಂದು ನಿಶ್ಚಯಿಸುವರು.

ಮತ್ತೊಂದು ಕಡೆ ಹೀಗೆ ಹೇಳಿದೆ,

ಧರ್ಮೇಣೈವರ್ಷಯಸ್ತೀರ್ಣಾ ಧರ್ಮೇ ಲೋಕಾಃ
ಧರ್ಮೇಣ ದೇವಾ ವವೃಧುಃ ಧರ್ಮೇಚಾರ್ಥಃ
ಧರ್ಮೋ ರಾಜನ್ ಗುಣಃ ಶ್ರೇಷ್ಠೋ ಮಧ್ಯಮೋಹ್ಯ

ಕಾಮೋ ಯವೀಯಾನ್ ಇತಿ ಚ ಪ್ರವದಂತಿ ಮ
ತಸ್ಮಾದ್ಧರ್ಮ ಪ್ರಧಾನೇನ ಭವಿತವ್ಯಂ ಯತಾತ್ಮನ

(ಮ. ಭಾ. ಶಾಂತಿ

'ಧರ್ಮದ ಆಶ್ರಯದಿಂದ ಪ್ರತಿಷ್ಠಿತರು ಪ್ರಾಪಂಚಿಕ ಶ್ರೇ
ದಾಟುವರು. ಲೋಕದ ಭದ್ರತೆಯು ಧರ್ಮ, ಅರ್ಥ ಮತ್ತು ಕಾ
ರದ ಮೇಲಿದೆ. ಇವುಗಳಲ್ಲಿ ಧರ್ಮವು ಶ್ರೇಷ್ಠವು. ಅರ್ಥವು ಮಧ್ಯ
ಕಾಮವು ಕೆಳಮಟ್ಟದ್ದು; ಆದುದರಿಂದ ನಾವು ಧರ್ಮವನ್ನೇ ಪ್ರಧಾನವ
ದಿಂದ ಜೀವಿಸಬೇಕು.

ಈ ವಿಧವಾಗಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕೆಲಸ
ಮಾಡುವಾಗ ಧರ್ಮವನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ಜೀವಿಸಬೇ
ರಿಂದ ಧನಾರ್ಜನೆ, ಅಧಿಕಾರದ ಆರ್ಜನೆ ಮತ್ತು ಕಾಮಾಭಿಲಾಷೆಗಳ
ಮೂಲಕ ನಿಯಂತ್ರಿಸಬೇಕು. ಅರ್ಥ ಮತ್ತು ಕಾಮಗಳ ಸಂಪಾದನೆ
ಗಳಿಗೆ ಅನುಸಾರವಾಗಿರಬೇಕು. ಯಾವ ಮನುಷ್ಯನು ಸಾಮಾಜಿಕ
ಗಳನ್ನು ಮತ್ತು ಶ್ರೇಷ್ಠ ಆದರ್ಶಗಳನ್ನು ದೃಷ್ಟಿಯಲ್ಲಿಡದೇ ಐಶ್ವರ್ಯವನ್
ಭೋಗವನ್ನೊ ಪಡೆಯಲೆತ್ನಿಸುತ್ತಾನೋ ಆತನು ಖಂಡಿತವಾಗಿ ಸಮಾಜ
ಳಿಗೆತುತ್ತಾಗುವುದೊಂದೇ ಅಲ್ಲದೆ ಮನಸ್ಸಿನ ತಿಕ್ಕಾಟಕ್ಕೆ ಒಳಪಡುವನು.
ಕೊಂಡಿರುವ ಧ್ಯೇಯಗಳಿಗೆ ವಿರುದ್ಧವಾಗಿ ಐಶ್ವರ್ಯ ಮತ್ತು ಸ್ಥಾನವ
ಪಡೆಯಲೆತ್ನಿಸಿದರೆ ಆತನು ಮನೋವ್ಯಾಕುಲಗಳನ್ನು ಹೊಂದಿ ಯಾವ
ಯಿಂದ ಒಳಮನಶ್ಶಾಂತಿಯನ್ನು ಕಳೆದುಕೊಳ್ಳುವನು. ಒಂದು ತಪ್ಪ
ದರೆ ಅದನ್ನು ಮುಚ್ಚಲು ಇನ್ನೂ ಅನೇಕ ತಪ್ಪುಗಳನ್ನು ಮಾಡಿ
ಪ್ರಾಯಕ್ಕೂ ಸಾಮಾಜಿಕ ಕಾನೂನುಗಳಿಗೂ ವಿರುದ್ಧವಾಗಿ ವರ್ತಿಸ
ಸಮಾಜದಲ್ಲಿ ಗೌರವವನ್ನೂ ಮತ್ತು ಆತ್ಮಗೌರವವನ್ನೂ ಕಳೆದುಕೊಳ್ಳು

ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ:

ಧರ್ಮಾರ್ಥಾವುಚ್ಯತೇ ಶ್ರೇಯಃ ಕಾಮಾರ್ಥೌ ಧರ್ಮ ಏ
ಅರ್ಥ ಏವೇಹ ವ ಶ್ರೇಯಸ್ತ್ರಿವರ್ಗ ಇತಿ ತು ಸ್ಥಿತಿಃ ||

ಮನು

ಧರ್ಮ ಮತ್ತು ಅರ್ಥ ಶ್ರೇಯಸ್ಕರವೆಂದು ಹೇಳುತ್ತಾರೆ. ಕೆಲವರು
ತ್ತು ಅರ್ಥ ಶ್ರೇಯಸ್ಕರವೆಂದು ಹೇಳುವರು. ಮತ್ತೆ ಕೆಲವರು ಧರ್ಮ
ಯಸ್ಕರವೆಂದೂ, ಇನ್ನೂ ಕೆಲವರು ಕಾಮ ಒಂದೇ ಶ್ರೇಯಸ್ಕರವೆಂದೂ
ಆದರೆ ನಿಜಸ್ಥಿತಿಯು ಈ ಮೂರೂ ಧರ್ಮ—ಅರ್ಥ ಮತ್ತು ಕಾಮ—
ಂದು ಅನುಸರಿಸುತ್ತವೆ.

ಧರ್ಮವಿರುದ್ಧವಾಗಿ ಅಂದರೆ, ನೀತಿ ನಿಯಮಗಳ ವಿರುದ್ಧವಾಗಿ ಒಬ್ಬ
ತನ್ನ ಆಸೆಗಳನ್ನು ಪೂರೈಸುವುದಕ್ಕೋಸ್ಕರ ಪ್ರಯತ್ನಿಸಿ ಫಲವನ್ನು
ಕ್ರಮೇಣ ಜನಾನುರಾಗಗಳನ್ನು ಕಳೆದುಕೊಳ್ಳುವನು. ಅಲ್ಲದೆ ಯಾವು
ಂದು ದಿವಸ ಸಾಮಾಜಿಕ ಕಾನೂನುಗಳಿಗೆ ಗುರಿಯಾಗಿ ಶಿಕ್ಷೆಯನ್ನು
ಸುವನು. ಚತುರತೆಯಿಂದ ಇವೆಲ್ಲವನ್ನು ದಾಟಿಹೋದರೂ ಕೊನೆಗೆ ಆತ್ಮ
ನ್ನೂ, ಆತ್ಮಶಾಂತಿಯನ್ನೂ ಕಳೆದುಕೊಳ್ಳುವನು. ಕಾನೂನಿಗೆ ಗುರಿ
ಕಾರಾಗೃಹ; ಮನಸ್ಸಿನ ಒಳ ತಿಕ್ಕಾಟಕ್ಕೆ ಗುರಿಯಾದರೆ ಮಾನಸಿಕ
ತುತ್ತಾಗುವನು. ಆದುದರಿಂದ ಧರ್ಮ ವಿರುದ್ಧವಾಗಿ ವರ್ತಿಸುವವನು
ನರಕಕ್ಕೆ ಹೋಗುವನೋ ಇಲ್ಲವೋ, ಪುನರ್ಜನ್ಮ ಎತ್ತುವನೋ
ಇದು ಮಾತ್ರ ಖಂಡಿತ—ಈ ಲೋಕದಲ್ಲಿ ದುಷ್ಪರಿಣಾಮವನ್ನು ಯಾವು
ಂದು ದಿವಸ ಅನುಭವಿಸುವನು.

ಈ ವಿಷಯವನ್ನು ಕುರಿತು ಮನುಸ್ಮೃತಿಯಲ್ಲಿ ಮತ್ತೊಂದು ಪ್ರಸಿದ್ಧ
ವು ಹೀಗೆ ಹೇಳಿರುವುದು.

ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।
ತಸ್ಮಾದ್ಧರ್ಮೋ ನ ಹಂತವ್ಯೋ ಮಾನೋ ಧರ್ಮೋ
ಹತೋಽವಧೀತ್ ॥

ಮನು. ೮. ೧೫.

'ಧರ್ಮವನ್ನು ಉಲ್ಲಂಘಿಸಿದವನು ಹತನಾಗುತ್ತಾನೆ. ಧರ್ಮವನ್ನು ರಕ್ಷಿಸಿ
ಧರ್ಮದಿಂದ ರಕ್ಷಿಸಲ್ಪಡುವನು. ಆದುದರಿಂದ ಧರ್ಮವನ್ನು ಉಲ್ಲಂಘಿಸ
. ಧರ್ಮವನ್ನು ಉಲ್ಲಂಘಿಸಿ ಧರ್ಮದಿಂದ ಹತನಾಗಬಾರದು.

ಆದುದರಿಂದಲೇ ವೈಶೇಷಿಕ ಸೂತ್ರದಲ್ಲಿ ಧರ್ಮದ ಗುರಿಯನ್ನು ಧರ್ಮದ
ಕ ಸಾಧಿಸಬಹುದು ಎಂಬುದನ್ನು ಒಂದು ಪ್ರಸಿದ್ಧ ಸೂತ್ರದಲ್ಲಿ ಹೀಗೆ
.

'ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ' ।

ಯಾವುದು ಅಭ್ಯುದಯದ ಮತ್ತು ನಿಶ್ರೇಯಸ್ಸಿನ ಸಿದ್ಧಿಗೆ ಕಾ
ವುದೋ ಅದೇ ಧರ್ಮ.

ಈ ವಿಧವಾಗಿ ಜೀವನದ ಮುಖ್ಯ ಮೌಲ್ಯಗಳನ್ನು ಪರಿಶೀಲಿಸಿ ಸ್ವರೂಪವನ್ನು, ಚತುರ್ವಿಧ ಪುರುಷಾರ್ಥಗಳನ್ನು ಎರಡು ಸಾವಿರ ಹಿಂದೆಯೇ ಭಾರತೀಯ ತತ್ವಶಾಸ್ತ್ರಜ್ಞರು ನಿರ್ಣಯಿಸಿರುವರು. ಇವು ಮತ್ತು ಸನಾತನ ಮೌಲ್ಯಗಳು. ಯಾವ ಕಾಲದಲ್ಲಿ ಯಾವ ವಿಧವಾಗಿ ಬದಲಾವಣೆಗಳು ಬಂದರೂ ಆಹಾರ ನಿದ್ರೆ ಮುಂತಾದ ದೈಹಿಕ ಅವಶ್ಯ ಬದಲಾವಣೆಯನ್ನು ಹೊಂದುವುದಿಲ್ಲವೋ ಅದೇ ವಿಧವಾಗಿ ಮಾನವನ ಅಂತಿಮ ಗುರಿಗಳು ಬದಲಾಯಿಸುವುದಿಲ್ಲ.

ii) ಅರ್ಥ :— 'ಅರ್ಥ' ಎಂದರೆ ಐಶ್ವರ್ಯ ಅಥವಾ ನಿಂದ ಕೂಡಿರುವುದು, ಇತ್ಯಾದಿ. ಒಬ್ಬ ವ್ಯಕ್ತಿಯ ಆರ್ಥಿಕ ಸ್ಥಿತಿಯು ವರಮಾನದ ಮೇಲೂ ಉಳಿತಾಯದ ಮೇಲೂ ಆಧಾರಗೊಂಡಿರುತ್ತದೆ. ಸಂಪತ್ತು ಮನೆ, ಉನ್ನತಮಟ್ಟದಲ್ಲಿ ಜೀವಿಸಲು ಬೇಕಾಗುವ ಅವಶ್ಯಕ ಗಳ ಸಂಗ್ರಹ, ಆಸ್ತಿ ಮುಂತಾದವುಗಳನ್ನು ಒಳಗೊಂಡಿರುವುದು.

ಋಗ್ವೇದದ ಸಂಹಿತೆಗಳಲ್ಲಿ ಗೋಸಂಪತ್ತು, ಹೇರಳವಾದ ಧಾನ್ಯ, ಮನೆ ಮುಂತಾದವುಗಳು ಬೇಕೆಂದು ಪ್ರಾರ್ಥಿಸುವ ಮಂತ್ರಗಳು ಇರುವುವು ನಿಷತ್ತುಗಳಲ್ಲಿಯೂ ಸಹ ಬ್ರಹ್ಮವಿದ್ಯೆಯ ಗುರುದಕ್ಷಿಣೆಯು ಸಹಸ್ರಾರು ಗಳ ಸ್ವೀಕಾರದ ರೂಪವನ್ನು ತಾಳಿರುವುದು.

ಒಬ್ಬ ಗೃಹಸ್ಥನು ತನ್ನ ಕರ್ತವ್ಯಗಳನ್ನು ನಿರ್ವಹಿಸಬೇಕಾದರೆ ಸ ಆವಶ್ಯಕ, ಹೀಗೆಯೇ ಒಂದು ರಾಷ್ಟ್ರವು ಅದರಲ್ಲಿರುವ ಕುಟುಂಬಗಳ ಕಲ್ಯಾ ಕ್ಕೋಸ್ಕರ ತಕ್ಕ ಆದಾಯವನ್ನು ಹೊಂದಿರಬೇಕು, ರಾಷ್ಟ್ರೀಯ ಆದಾಯವ ಹೊಂದಿರಬೇಕು. ರಾಷ್ಟ್ರೀಯ ಆದಾಯವು ಕಡಮೆಯಾಗಿದ್ದು ರಾಷ್ಟ್ರದ ಸಂಖ್ಯೆಯು ಹೆಚ್ಚಾಗಿದ್ದರೆ ಬಡತನ ಹೇರಳವಾಗಿ ಇರುವುದರಲ್ಲಿ ಆಶ್ಚರ್ಯವೇ ಇಲ್ಲ. ಭಾರತ ದೇಶವು ಪ್ರಕೃತಿ ಸಂಪತ್ತಿನಿಂದ ಕೂಡಿದ್ದರೂ ಭಾರತೀಯ ಶ್ರಮದಿಂದ ಕೆಲಸ ಮಾಡಿದರೂ ರಾಷ್ಟ್ರದ ದಾರಿದ್ರ್ಯವು ನಿವಾರಣೆ ಹೊಂದು ಸಾಧ್ಯವಾಗುತ್ತಿಲ್ಲ.

ಒಂದು ದೇಶದ ಸಂಪತ್ತು ವ್ಯವಸಾಯ ಮತ್ತು ಕೈಗಾರಿಕೋತ್ಪನ್ನ ಸರಕುಗಳ ಆಧಾರದ ಮೇಲೂ, ಅಲ್ಲಿನ ಜನರ ಶ್ರಮದ ಮೇಲೂ ಆಧಾರವಾ

ಹಿಂದಿನ ಅಧ್ಯಾಯದಲ್ಲಿ ನೋಡಿರುವ ಹಾಗೆ ಅನೇಕ ಕಾರಣಗಳಿಂದ
ಉತ್ಪಾದಕನರ್ನೂ ಮತ್ತು ಸೇವಾವೃತ್ತಿಯಲ್ಲಿರುವವರನ್ನೂ ಕೀಳುಜಾತಿ
ದೂ, ದರಿದ್ರರೆಂದೂ, ಅಸ್ಪೃಶ್ಯರೆಂದೂ ಪರಿಗಣಿಸಲಾಗಿದೆ. ಅವರು
ರು. ಈ ಕಾರಣದಿಂದಲೇ ಸಾವಿರಾರು ವರುಷಗಳಿಂದ ಶೇ. 80-90
ಜನರು ಬಡತನದಿಂದ ನರಳುತ್ತಿರುವರು.

ಕಾಯಕದಿಂದ ಸಂಪತ್ತು. ಆದರೆ ಸಾಮಾಜಿಕ ವ್ಯವಸ್ಥೆಯು ಸಮಾ
ನ್ನತ ಮಟ್ಟದಲ್ಲಿ ಇರುವ ಅಲ್ಪ ಸಂಖ್ಯಾತರು ಕೆಲಸಮಾಡದೆ ಐಶ್ವರ್ಯ
ಅನುಭವಿಸಲು ಸಹಾಯವಾಗುವಂತೆ ಅನುಕೂಲಗಳನ್ನು ಮಾಡಿಕೊಟ್ಟದೆ.
ದು ಲೀಕರಿಗೂ, ಸಂಪತ್ತಿನ ಉತ್ಪಾದಕರ ಗುಂಪುಗಳಿಗೂ ಬಹು ದೊಡ್ಡದು
ಸ್ಯ ಸಾಮಾಜಿಕ ವ್ಯವಸ್ಥೆಯಿಂದ ಉಂಟಾಗಿದೆ. ಆದುದರಿಂದಲೇ 1950
ಸಂವಿಧಾನವು ಈ ತಾರತಮ್ಯಗಳನ್ನು ರದ್ದುಪಡಿಸಿ ಜನಸಾಮಾ
ಯನ್ನು ಉತ್ತಮಪಡಿಸುವುದಕ್ಕೋಸ್ಕರ ಕಾರ್ಯಕ್ರಮಗಳನ್ನು ಸೂಚಿ
ಆದರೆ ಈಗಲೂ ಸಂಪತ್ತಿಗೂ ಕಾಯಕಕ್ಕೂ ಯಾವ ಸಂಬಂಧವೂ
ಾಗೆ ಇರುವುದು.

ಭಾರತೀಯ ಸಂಸ್ಕೃತಿಯಲ್ಲಿ ಅರ್ಥವನ್ನು ಕುರಿತು ಉಭಯ ಭಾವಗಳು
ಒಂದು ಕಡೆ ದುಡಿಯಬೇಕು. ಐಶ್ವರ್ಯವನ್ನು ಗಳಿಸಬೇಕು, ಎಂಬ
ದು. ಮತ್ತೊಂದು ಕಡೆ ಐಶ್ವರ್ಯವನ್ನು ತ್ಯಜಿಸಿ ತನ್ಮೂಲಕ ಸಂನ್ಯಾಸಾ
ಸ್ವೀಕರಿಸಬೇಕು. ನಮ್ಮ ದೇಶದಲ್ಲಿ ರಾಮಾಯಣ ಮಹಾಭಾರತಗಳ
ದಲೂ ರಾಜರ ಮತ್ತು ರಾಜಪುರೋಹಿತರ ಐಶ್ವರ್ಯಕ್ಕೆ ಮಿತಿಯೇ
ಗಿತ್ತು. ಮತ್ತೊಂದು ಕಡೆ ಐಶ್ವರ್ಯವನ್ನು ತ್ಯಜಿಸಿ ವಾನಪ್ರಸ್ಥಾಶ್ರಮ
ಸಂನ್ಯಾಸಾಶ್ರಮವನ್ನು ಸ್ವೀಕರಿಸುವುದು ಜೀವನದ ಒಂದು ಉತ್ಕೃಷ್ಟ
ವಾಗಿತ್ತು.

ಮೇಲೆ ಹೇಳಿರುವ ಈ ಎರಡು ಕಾರಣಗಳಿಂದಲೂ, ಅಂದರೆ ಸಂಪದು
ರನ್ನು ಮತ್ತು ಸೇವಾವೃತ್ತಿಯನ್ನು ಅನುಸರಿಸುತ್ತಿರುವವರನ್ನು ಸಮಾಜ
ಕೀಳು ದರ್ಜೆಯ ವ್ಯಕ್ತಿಗಳೆಂದು ಭಾವಿಸಿರುವುದರಿಂದಲೂ ದೇಶದ ಆರ್ಥಿಕ
ು, ಜನಸಾಮಾನ್ಯರ ಆರ್ಥಿಕ ಸ್ಥಿತಿಯು ಸಮುಚಿತವಾಗಿಲ್ಲ.

ಆದರೆ ಒಬ್ಬ ವ್ಯಕ್ತಿಯೇ ಆಗಲಿ, ಒಂದು ಕುಟುಂಬವೇ ಆಗಲಿ, ಸಾಕಾ
ಆರ್ಥಿಕ ಭದ್ರತೆಯನ್ನು ಹೊಂದದಿದ್ದರೆ ಜೀವನವನ್ನು ಸುಗಮವಾಗಿ ನಡೆ

ಸಲು ಕಷ್ಟ. ಸಾಧಾರಣವಾಗಿ ಸ್ನೇಹಿತರನ್ನೋ ಸಂಬಂಧಿಗಳನ್ನೋ ಕಂಡಾಗ ಯೋಗಕ್ಷೇಮವನ್ನು ವಿಚಾರಿಸುವ ಸಂಪ್ರದಾಯವಿದೆ. ‘ ಯೋಗ ’ ಎ ‘ ನಿಮ್ಮ ಹತ್ತಿರ ಇರದಿರುವುದು ನಿಮಗೆ ಸಿಕ್ಕಿದೆಯೇ ? ’ ಕ್ಷೇಮ ಎಂದರೆ ‘ ಹತ್ತಿರ ಇರುವ ಐಶ್ವರ್ಯ ಸಂಪತ್ತುಗಳು ಸುಭದ್ರವಾಗಿದೆಯೇ ? ’ ಎಂಬರ್ಥ. ಸಂಪ್ರದಾಯ ಒಬ್ಬ ವ್ಯಕ್ತಿಯ ಅಥವಾ ಕುಟುಂಬದ ಆರ್ಥಿಕ ಸ್ಥಿತಿಯ ಮುಖ್ಯವಾದುದೆಂಬುದನ್ನು ಸೂಚಿಸುವುದು. ಈ ಕಾರಣದಿಂದಲೇ ಅರ್ಥವನ್ನು ಪುರುಷಾರ್ಥವೆಂದು ಭಾವಿಸಲಾಗಿದೆ. ತ್ಯಜಿಸಬೇಕಾದರೂ ಅರ್ಥವಿರಬೇಕು. ಹತ್ತಿರ ಇಲ್ಲದಿರುವುದನ್ನು ತ್ಯಜಿಸುವುದು ಹೇಗೆ ? ಆದುದರಿಂದ ಮೊದಲು ದು ಬೇಕು ; ಸಂಪಾದನೆಯ ಮೋಹವನ್ನು ತ್ಯಜಿಸಬೇಕು.

ಮತ್ತೊಂದು ಮುಖ್ಯ ಅಂಶವೆಂದರೆ ಒಂದು ರಾಷ್ಟ್ರದಲ್ಲಿ ಆರ್ಥಿ ವೃದ್ಧಿಯು ಉಂಟಾಗಬೇಕಾದರೆ ಪ್ರಕೃತಿಸಂಪತ್ತು, ಜನಶಕ್ತಿ, ಧನ ತ್ತು ಮ ನಾಲ್ಕನೆಯದಾಗಿ ಈ ಮೂರು ಅಂಶಗಳನ್ನು ವ್ಯವಸ್ಥೆಗೊಳಿಸುವ ವ್ಯ ಸಂಸ್ಥೆಯು ಇರಬೇಕು. ಈ ನಾಲ್ಕು ಅಂಶಗಳು ದೇಶದ ಅಭಿವೃದ್ಧಿಗೆ ಅವ ಒಂದು ದೃಷ್ಟಿಯಿಂದ ನೋಡಿದರೆ ಜನಶಕ್ತಿಯ ವಿದ್ಯಾಕೌಶಲ್ಯಗಳ ರೆ ನ ಮುಖ್ಯವೆಂದೂ, ಶ್ರೇಷ್ಠ ಫಲಕಾರಿಯೆಂದೂ ಹೇಳಬಹುದು. ಜನಶಕ್ತಿ ರಿಯ ಕುಶಲತೆಗಳ ಅಭಾವವೇ ಭಾರತರಾಷ್ಟ್ರದ ಇಂದಿನ ವಿಷಮ ಆರ್ಥಿ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು.

ಭಾರತದೇಶದ ಸಂಸ್ಕೃತಿಯ ಚತುರ್ವಿಧ ಪುರುಷಾರ್ಥಗ ವು ರುವ ‘ ಅರ್ಥ ’ವು ಸರಿಯಾದ ರೂಪವನ್ನು ತಾಳಬೇಕಾದರೆ ಸಾಮಾ ವ ಸ್ಥೆಯು ಒಂದು ದೊಡ್ಡ ಬದಲಾವಣೆಯನ್ನು ಹೊಂದಬೇಕಾಗಿರುವುದು ಅ ಒಬ್ಬ ವ್ಯಕ್ತಿಯೇ ಆಗಲಿ, ಒಂದು ಕುಟುಂಬವೇ ಆಗಲಿ, ಒಂದು ಪ್ರಾಂತ್ಯ ಆಗಲಿ, ಇಡೀ ರಾಷ್ಟ್ರವೇ ಆಗಲಿ ತಮ್ಮ ತಮ್ಮ ಆರ್ಥಿಕ ಸ್ಥಿತಿಯನ್ನು ಅ ಗೊಳಿಸಲು ಮಾಡುವ ಪ್ರಯತ್ನವು ಒಂದು ಮುಖ್ಯ ಪುರುಷಾರ್ಥವನ್ನು ಮಾಡುವ, ಒಂದು ಮುಖ್ಯ ಸಾಮಾಜಿಕ ಮೌಲ್ಯವನ್ನು ವಾಸ್ತವಿಕ ಪ್ರಯತ್ನ.

ಮನುಷ್ಯನು ದುಡಿದು ಐಶ್ವರ್ಯವನ್ನು ಸಂಪಾದಿಸಬೇಕು. ಬೃಹದ ಉಪನಿಷತ್ತಿನಲ್ಲಿ ಮಾನವನಲ್ಲಿ ಈಷಣತ್ರಯವಿರುವುದೆಂದು ಹೇಳಲಾಗಿದೆ. ಪುತ್ರೈಷಣ, ವಿತ್ತೈಷಣ ಮತ್ತು ಲೋಕೈಷಣ. “ ಯಾವುದು ಪುತ್ರಕಾಮ ಅದು ವಿತ್ತಕಾಮನೆ. ಯಾವುದು ವಿತ್ತಕಾಮನೆಯೋ ಅದು ಲೋಕ

...ಡೂ ಕಾಮನೆಗಳೇ ಆಗಿರುತ್ತವೆ" ಕುಟುಂಬವಿದ್ದರೆ ...ಅವಶ್ಯಕ, ಹಣ ಬೇಕಾದರೆ ಕಾಯಕ ಆವಶ್ಯಕ. ಧನಾರ್ಜನೆಯು ...ನೆಯ ಪುರುಷಾರ್ಥವಾದ ಧರ್ಮಕ್ಕೆ ಅನುಸಾರವಾಗಿರಬೇಕು. ಸ್ವತಃ ...ವನ್ನು ಮಾಡಿ ಹಣ ಸಂಪಾದಿಸಬೇಕು. ಈ ವಿಧವಾಗಿ ಅರ್ಥವು ಧರ್ಮ ... ನಿಯಂತ್ರಿತವಾಗಬೇಕು. ಧರ್ಮವಿರುದ್ಧವಾದ, ಅಂದರೆ ನೀತಿನಿಯಮ ...ರುದ್ಧವಾದ ಹಣಸಂಪಾದನೆಯು ಆ ವ್ಯಕ್ತಿಯನ್ನು ಕಾನೂನಿಗೋ, ಮಾನ ...ತೋಟಿಗೋ ಗುರಿಮಾಡುವುದು.

...ಷ್ಟಪಟ್ಟು ಸಂಪಾದಿಸಿದ ಹಣ ಮತ್ತು ಅದರಿಂದ ಕೊಂಡುಕೊಂಡ ... ಮೇಲೆ ವ್ಯಾಮೋಹವಿದ್ದರೂ ಅದೂ ಮನುಷ್ಯನನ್ನು ಕಷ್ಟಕ್ಕೆ ...ಶಾಂತಿಗೆ ಗುರಿಮಾಡುವುದು. ಆದುದರಿಂದ ಎರಡನೆಯ ಪುರುಷಾರ್ಥ ...ರ್ಥಕ್ಕೂ ನಾಲ್ಕನೆಯ ಪುರುಷಾರ್ಥವಾದ ಮೋಕ್ಷಕ್ಕೂ ಒಂದು ರೀತಿಯ ...ರಬೇಕು. ತಾನು ಸಂಪಾದಿಸಿರುವ ಹಣ ಮತ್ತು ವಸ್ತುಗಳ ಮೇಲೆ ...ನು ನಿಸ್ಸಂಗತ್ವವನ್ನು ಬೆಳೆಸಬೇಕು. ಈಶಾವಾಸ್ಯೋಪನಿಷತ್ತಿನ ಮೊದ ... ಮಂತ್ರವು ತನ್ನ ಮತ್ತು ಪರರ ಐಶ್ವರ್ಯವನ್ನು ಕುರಿತು ಮಾನವನ ...ಯು ಯಾವ ವಿಧವಾಗಿ ಇರಬೇಕೆಂದು ಹೇಳುವುದು.

ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚ ಜಗತ್ಯಾಂ ಜಗತ್ ।
...ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ ॥

"ಈ ಜಗತ್ತಿನ ಸರ್ವವೂ ಈಶ್ವರನ ವಾಸಸ್ಥಾನವಾಗಿದೆ. ಆದುದರಿಂದ ...ಐಶ್ವರ್ಯದ ಮೋಹವನ್ನು ತ್ಯಜಿಸಿ, ಅದನ್ನು ಭೋಗಿಸು. ಮತ್ತೊಬ್ಬರ ...ದ ಮೇಲೆ ಆಸೆಯನ್ನು ಹೊಂದಬೇಡ."

ನಮ್ಮ ಐಶ್ವರ್ಯದ ಮೇಲೆ ನಮ್ಮ ದೃಷ್ಟಿಯು ನಿರ್ಲಿಪ್ತತೆಯಿಂದ ಕೂಡಿರ ... ಅತಿ ಹೆಚ್ಚಾದ ಆಸಕ್ತಿಯನ್ನು ಇಟ್ಟುಕೊಂಡರೆ ಲೋಭವುಂಟಾಗಿ ...ವತ್ತನಕ್ಕೆ ಕುಂದುಬರುವುದು.

ಕಠೋಪನಿಷತ್ತಿನಲ್ಲಿ ಐಶ್ವರ್ಯವು ಮಾನವನ ಅಧೋಗತಿಗೆ ಕಾರಣವಾಗು ...ದು ಸೂಚಿಸಲಾಗಿದೆ.

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ
ಸಂಪರೀತ್ಯ ವಿವಿನಕ್ತಿ ಧೀರಃ ।
ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ
ಪ್ರೇಯೋ ಮಂದೋ ಯೋಗಕ್ಷೇಮಾದ್ವೃಣೀತೇ ॥

ಸತ್ತ್ವಂ ಪ್ರಿಯಾನ್ ಪ್ರಿಯರೂಪಾಂಶ್ಚ ಕಾಮಾನ್
ಅಭಿಧ್ಯಾಯನ್ ನಚಿಕೇತೋಽತ್ಯಸ್ರಾಕ್ಷೀ
ನೈತಾಂ ಸೃಂಕಾಂ ವಿತ್ತಮಯೀಮವಾಪ್ತೋ
ಯಸ್ಯಾಂ ಮಜ್ಜಂತಿ ಬಹವೋ ಮಾನುಷ

ಕ. ಉ. ೨-೧

ಶ್ರೇಯಸ್ಸು ಮತ್ತು ಪ್ರೇಯಸ್ಸು ಮನುಷ್ಯನ ಸಮೀಪಕ್ಕೆ ಬ ಧೀಮಂತನು ಅವುಗಳನ್ನು ಚೆನ್ನಾಗಿ ಪರಿಶೀಲಿಸಿ ವಿವೇಚಿಸುತ್ತಾನೆ. ಧ ಪ್ರೇಯಸ್ಸಿಗಿಂತ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವಿವೇಕಿಯ ಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಹೇ ನಚಿಕೇತ, ನಿ ವಾದ ಮತ್ತು ಪ್ರಿಯರೂಪವಾದ ಕಾಮಗಳನ್ನು ವಿವೇಚಿಸಿ ತ್ಯಾಗಮ ಯಾವುದರಲ್ಲಿ ಬಹಳ ಜನ ಮನುಷ್ಯರು ಮುಳುಗುತ್ತಾರೆಯೋ ಅಂತಹ ವಾದ ಮಾರ್ಗವನ್ನು ನೀನು ಹೊಂದಲಿಲ್ಲ.

ಮನುಷ್ಯನು ತನ್ನ ಸಂಪಾದನೆಯ ಮೇಲೆಯೊ ಅಥವಾ ಆರ್ಜಿಸಲ್ಪಟ್ಟ ಆಸ್ತಿಯ ಮೇಲೆಯೊ ತನ್ನ ದೃಷ್ಟಿಯನ್ನು ಇಟ್ಟುಕೊಂಡ ದೇಹವಾಗಿ ನಾಶಕ್ಕೆ ಗುರಿಯಾಗುವನು. ಹಣವು ಮಾನವನ ಅಂತ್ಯಗು ಅದು ಒಂದು ಸಾಧನೆ, ಮಾರ್ಗ; ಆದುದರಿಂದಲೇ ಹಣವನ್ನು ಕೂಡಿ ಅಥವಾ ಆಸ್ತಿಯನ್ನು ಹೆಚ್ಚಿಸುವುದು ಮುಖ್ಯ ಉದ್ದೇಶವಾದರೆ ಅದಕ್ಕೆ ಮಿ ಇಲ್ಲ. ಎಷ್ಟು ಸಂಪಾದಿಸಿದರೂ ಇನ್ನೂ ಸಂಪಾದಿಸುವ ಆಸೆ ಆಕಾಂ ಇದ್ದೇ ಇರುವುದು. ಎಷ್ಟು ಸಂಪಾದಿಸಿದರೂ ಅತೃಪ್ತಿಯು ಇದರಿಂದ ಇದ್ದೇ ಇರು ಈ ಕೋರಿಕೆಗೆ ಕೊನೆಯೇ ಇಲ್ಲ. ಆದುದರಿಂದ ಮನುಷ್ಯನು ಸಂಪತ್ತಿನ ತನಗಿರುವ ದೃಷ್ಟಿಯನ್ನು ಬದಲಾಯಿಸಬೇಕಾಗುವುದು ಅಗತ್ಯ.

ಹೀಗೆ ಐಶ್ವರ್ಯವನ್ನು ಸಂಪಾದಿಸುವ ಕ್ರಮಗಳು ಧರ್ಮಕ್ಕೆ, ನೀತಿ ನಿ ಗಳಿಗೆ ಅನುಸಾರವಾಗಿರಬೇಕು. ಮತ್ತು ಐಶ್ವರ್ಯದ ಮೇಲಿನ ದೃಷ್ಟಿಯು ಸಕ್ತಿಯಿಂದ ಕೂಡಿರಬೇಕು.

iii) **ಕಾಮ :—** ಪುರುಷಾರ್ಥಗಳಲ್ಲಿ ಕಾಮಕ್ಕೆ ಒಂದು ವಿದೆ. ಕಾಮ ಎನ್ನುವ ಪದವು ಮಾನವ ವರ್ತನೆಯ ಅನೇಕ ಅಂಶಗ ಒಳಗೊಂಡಿರುವುದು. ಮುಖ್ಯವಾಗಿ ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ಆ ಪಾಸೆಯ, ನಿದ್ರಾ, ಚಟುವಟಿಕೆ, ಲೈಂಗಿಕ ಮನೋವೃತ್ತಿ ಮುಂತಾದ ಸ್ವ ಸಿದ್ಧವಾದ ಪ್ರೇರಣೆಗಳು ಕಂಡುಬರುವುವು. ಈ ಪ್ರೇರಣೆಗಳು ಪ್ರಾಣಿಗ ಮಕ್ಕಳಲ್ಲೂ, ಅಸಂಸ್ಕೃತ ವಯಸ್ಕರಲ್ಲೂ ತೀವ್ರವಾದ ರೂಪವನ್ನು ತಾಳಿ ಮಗು ಬೆಳೆಯುತ್ತಾ ತಂದೆ ತಾಯಿಗಳ ಪೋಷಣೆಯ ಮೂಲಕ ಈ ಪ್ರೇ

ೇಲೆ ಹತೋಟಿಯನ್ನು ಹೊಂದುವುದು; ದೇಶ, ಕಾಲ, ಪರಿಸ್ಥಿತಿ ಇವುಗಳನ್ನೊಳ
ಂಡು ಈ ಪ್ರೇರಣೆಗಳನ್ನು ಸಫಲಮಾಡುವುದು.

ಕಾಮ ಎನ್ನುವ ಪದವು ಇಂದ್ರಿಯ ವಿಷಯಗಳನ್ನು ಸೂಚಿಸುವುದು. ಮ್ಮ ಪರಿಸರದ ಅರಿವು ನಮ್ಮ ಜ್ಞಾನೇಂದ್ರಿಯಗಳ ಮೂಲಕ ಉಂಟಾಗು ದು. ನಮ್ಮ ಆಕಾಂಕ್ಷೆಗಳನ್ನು ಕರ್ಮೇಂದ್ರಿಯಗಳ ಮೂಲಕ ಸಾಧಿಸಿಕೊಳ್ಳ ಹುದು. ವೇದಗಳ ಕಾಲದಿಂದಲೂ ಕಣ್ಣು, ಕಿವಿ, ಮೂಗು, ನಾಲಗೆ, ಮತ್ತು ರ್ಮ ಇವುಗಳನ್ನು ಪಂಚ ಜ್ಞಾನೇಂದ್ರಿಯಗಳು ಎನ್ನುವರು, ಕೈ, ಕಾಲು, ಕ್, ಜನನೇಂದ್ರಿಯ ಮತ್ತು ವಿಸರ್ಜಕ ಅಂಗಗಳನ್ನು ಕರ್ಮೇಂದ್ರಿಯಗಳೆನ್ನು ು. ಆದರೆ ಈ ಇಂದ್ರಿಯಗಳು ಜೀವನ ಕರ್ತವ್ಯಗಳನ್ನು ಸಫಲಗೊಳಿಸುವ ಧನೆಗಳು ಮಾತ್ರವಲ್ಲದೆ ನಮಗೆ ಸವಿಯನ್ನುಂಟುಮಾಡಿ ಸಂತೋಷಕ್ಕೆ ಕಾರಣ ಗುವುವು. ಆದುದರಿಂದ ದೃಶ್ಯಗಳನ್ನು ನೋಡುವುದರಲ್ಲಿಯೂ ಶಬ್ದಗಳನ್ನು ಳುವುದರಲ್ಲಿಯೂ ಮನುಷ್ಯನಿಗೆ ಇಂದ್ರಿಯಗಳ ಮೂಲಕ ಆಕಾಂಕ್ಷೆಗಳು ಉಂಟಾ ವುವು. ಇದೇ ಇಂದ್ರಿಯ ಲೋಲತ್ವ; ಹೀಗೆಯೇ ಇತರ ಇಂದ್ರಿಯಗಳೂ ಕಾಂಕ್ಷೆಗಳಿಗೆ ಕಾರಣವಾಗುವುವು.

ಮೂರನೆಯದಾಗಿ ಕಾಮ ಎನ್ನುವ ಪದವು ಪ್ರೇಮ ಪ್ರೀತಿಗಳನ್ನು ಚಿಸುವುದು. ಇತರರಲ್ಲಿ ಪ್ರೀತಿ ವಿಶ್ವಾಸಗಳಿರುವುದು ಒಳ್ಳೆಯ ವಿಷಯ. ದರೆ ಈ ಪ್ರೀತಿ ವಿಶ್ವಾಸವು ಅತಿ ಹೆಚ್ಚಾಗಿದ್ದರೆ ಆಗಲೂ ವ್ಯಕ್ತಿಯ ಅಭಿ ದ್ಧಿಗೆ ಕುಂದುಂಟಾಗುವುದು. ಸಹಜವಾಗಿ ನಾವು ಹುಟ್ಟಿದ ಕುಟುಂಬ, ಕುಲ, ಳ ಮುಂತಾದವುಗಳ ಮೇಲೆ ಸಹಜವಾಗಿಯೇ ಪ್ರೀತಿ ವಿಶ್ವಾಸಗಳು ಇರುವವು. ದರೆ ಈ ವಿಶ್ವಾಸವು ಅತಿ ಹೆಚ್ಚಾದರೆ ಹುಡುಗರು ಶಾಲೆಗೆ ಹೋಗುವುದಿಲ್ಲ; ಊರು ಟ್ಟು ಬೇರೆಕಡೆಗೆ ಹೋಗುವುದಿಲ್ಲ. ಬೇರೆ ಊರಿನಲ್ಲಿ ಕೆಲಸ ಸಿಕ್ಕಿದರೂ ಸ್ವಂತ ರನ್ನು, ಪ್ರಾಂತ್ಯವನ್ನು ಬಿಟ್ಟು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ನೆಂಟರಿಂದ ರವಾಗಿರುವಾಗ ಎಲ್ಲರನ್ನೂ ಕಳೆದುಕೊಂಡ ಮನೋಭಾವವು ಉಂಟಾಗುವುದು. ಟರಮೇಲೆ, ತನ್ನ ಊರಿನಮೇಲೆ, ತನ್ನ ಭಾಷೆಯಮೇಲೆ, ತನ್ನ ಆಸ್ತಿಯ ೇಲೆ ಅತಿ ಹೆಚ್ಚಾಗಿರುವ ಮಮಕಾರವೇ ಕಾಮಸ್ವರೂಪ.

ಸಾಧಾರಣವಾಗಿ ಕಾಮ ಎನ್ನುವ ಪದವು ಲೈಂಗಿಕ ಪ್ರವೃತ್ತಿಯನ್ನು ಚಿಸುವುದು. ಲೈಂಗಿಕ ಪ್ರವೃತ್ತಿಯು ಬಹಳ ಪ್ರಬಲವಾದ ಪ್ರವೃತ್ತಿ. ುದರಿಂದಲೇ ಈ ಪ್ರವೃತ್ತಿಯನ್ನು ಹತೋಟಿಗೆ ತರುವುದಕ್ಕೋಸ್ಕರ ಸಮಾಜಗಳಲ್ಲೂ ಮದುವೆಯ ವ್ಯವಸ್ಥೆಯನ್ನು ಮಾಡಲಾಗಿದೆ. ಮಧರ್ಮದ ಪ್ರಕಾರ ಹುಡುಗನಿಗೆ 8—10 ವರ್ಷ ವಯಸ್ಸು ಆಗುವು ೊಳಗೆ ಉಪನಯನವನ್ನು ಮಾಡಿ ಗುರುಕುಲಕ್ಕೆ ಕಳುಹಿಸುವ ಸಂಪ್ರದಾಯ

ವಿತ್ತು. ಆತನು ಕಡೆಯುಪಕ್ಷ ಹನ್ನೆರಡುವರ್ಷ ಗುರುಕುಲದಲ್ಲಿದ್ದು, ಗ
ನಿಂದ ಶಿಕ್ಷಣವನ್ನು ಪಡೆದು ತನ್ನ ಅಧ್ಯಯನವನ್ನು ಮುಗಿಸಿ ನಂತರ
ಮನೆಗೆ ಹಿಂತಿರುಗಿ, ಮದುವೆಯನ್ನು ಮಾಡಿಕೊಳ್ಳಬೇಕಾಗಿತ್ತು. ಮದು
ಮುನ್ನ ಬ್ರಹ್ಮಚರ್ಯವನ್ನು ಆಶ್ರಯಿಸಬೇಕಾಗಿತ್ತು. ಮದುವೆಯಾದ ನಂತರ
ನಿಯಮಗಳ ಪ್ರಕಾರ ತನ್ನ ಪತ್ನಿಯ ಜೊತೆಯಲ್ಲಿ ವಾಸಿಸಬೇಕಾಗಿತ್ತು. ಕ್ರಮ
ತನ್ನ ಮಕ್ಕಳು ದೊಡ್ಡವರಾದಮೇಲೆ ಮತ್ತೆ ಲೈಂಗಿಕ ಪ್ರವೃತ್ತಿಯ
ಪೂರ್ಣ ಹತೋಟಿಯನ್ನು ಹೊಂದಬೇಕಾಗಿತ್ತು. ಹೀಗೆ ಕಾಮಪ್ರವೃತ್ತಿ
ವ್ಯವಸ್ಥೆಗೂ ಆಶ್ರಮಧರ್ಮದ ವ್ಯವಸ್ಥೆಗೂ ನಿಕಟ ಸಂಬಂಧವಿತ್ತು.

ಒಬ್ಬ ವ್ಯಕ್ತಿಯು ತನ್ನ ಲೈಂಗಿಕ ಜೀವನವನ್ನು ಹತೋಟಿಯಲ್ಲಿ
ಹೋದರೆ ಆತನು ಸಮಾಜದಲ್ಲಿ ಧಿಕ್ಕಾರಕ್ಕೆ ಒಳಗಾಗುವುದೊಂದೇ ಅ
ಕ್ರಮೇಣ ಮಾನಸಿಕ ಒಳತೋಟಿಗಳಿಗೆ ಗುರಿಯಾಗುವನು. ಲೈಂಗಿಕ ಜೀ
ವನ್ನು ಹತೋಟಿಯಲ್ಲಿ ಇಡಬೇಕೆಂದು ನಿರ್ಬಂಧನೆಮಾಡಿದರೂ ಸಹ ಒಳತೋ
ಗುರಿಯಾಗಿ ಮಾನಸಿಕ ರೋಗಗಳಿಗೆ ತುತ್ತಾಗುವನು. ಆದುದರಿಂದಲೇ
ವ್ಯಕ್ತಿಯ ಲೈಂಗಿಕ ಜೀವನವು ಧರ್ಮಕ್ಕೆ, ಅಂದರೆ ನೀತಿನಿಯಮಗಳಿಗೆ ಅನು
ವಾಗಿ ಇರುವುದಕ್ಕೋಸ್ಕರ ಆಶ್ರಮ ವ್ಯವಸ್ಥೆಯನ್ನು ರಚಿಸಲಾಯಿತು. ಆ
ಜೀವನ ಪರ್ಯಂತ ಬ್ರಹ್ಮಚರ್ಯವನ್ನು ಆಶ್ರಯಿಸುವುದು ಸಾಧ್ಯವೇ ? ಎಂಬ
ಬರುವುದು. ಇದು ವ್ಯಕ್ತಿಯ ಪೋಷಣೆಯನ್ನು ಆದರ್ಶಗಳನ್ನು ಒಳಗೊಂ
ವುದು. ಪೋಷಣೆ ಮತ್ತು ಆದರ್ಶಗಳು ಸರಿಯಾಗಿದ್ದರೆ ವ್ಯಕ್ತಿಯು ಗಂಡ
ಆಗಲಿ, ಹೆಂಗಸೇ ಆಗಲಿ ನಿಯಮಬದ್ಧ ಬ್ರಹ್ಮಚರ್ಯವನ್ನು ಅವಲಂಬಿಸಬಹು
ಉತ್ಕೃಷ್ಟ ಆದರ್ಶಗಳಿಗೆ ತನ್ನ ಜೀವನವನ್ನು ಅರ್ಪಿಸಿದರೆ ಆಗ ಲೈಂಗಿಕ ಪ್ರವೃತ್ತಿ
ಶಕ್ತಿಯು ವ್ಯಕ್ತಿಯ ಬೆಳವಣಿಗೆಗೂ, ಸಾಮಾಜಿಕ ಸಾಮರಸ್ಯಕ್ಕೂ ಮತ್ತು
ವೃದ್ಧಿಗೂ ಕಾರಣವಾಗುವುದು. ಕಳೆದ ನೂರೈವತ್ತು ವರ್ಷಗಳಿಂದ ಈಚೆಗೆ ನ
ದೇಶದಲ್ಲಿ ಆಜನ್ಮ ಬ್ರಹ್ಮಚಾರಿಗಳಾದ ಸ್ವಾಮಿ ದಯಾನಂದಸರಸ್ವತಿ, ಸ್ವಾ
ರಾಮಕೃಷ್ಣಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀರಮಣಮಹರ್ಷಿ ಮುಂತ
ವ್ಯಕ್ತಿಗಳು ಜೀವನ್ಮುಕ್ತಿಯನ್ನು ಹೊಂದುವುದಲ್ಲದೆ ಭಾರತದೇಶದ ಅಭಿವೃದ್ಧಿ
ಮತ್ತು ಭಾರತದ ಸಂಸ್ಕೃತಿಯ ಪುನರುಜ್ಜೀವನಕ್ಕೂ ಹೆಚ್ಚು ಸೇವೆಯನ್ನು ಸಲ್ಲಿಸಿ
ವರು; ಇದೇ ವಿಧವಾಗಿ ಮಹಾತ್ಮ ಗಾಂಧಿಯವರು ಮದುವೆ ಮಾಡಿಕೊಂ
ಮಕ್ಕಳನ್ನು ಪಡೆದಮೇಲೆ ನಿಯಮನಿಷ್ಠೆಯ ಬ್ರಹ್ಮಚರ್ಯವನ್ನು ಅನುಸರಿಸಿ ಭ
ತೀಯರ ಏಳಿಗೆಗೂ ರಾಷ್ಟ್ರದ ಸ್ವಾತಂತ್ರ್ಯಕ್ಕೂ ಹೋರಾಡಿದರು. ಆದುದರಿ
ಬ್ರಹ್ಮಚರ್ಯವನ್ನು ಅವಿವಾಹಿತರೂ ಮತ್ತು ವಿವಾಹಿತರೂ ಪಾಲಿಸಬಹುದು.
ಮತ್ತೊಂದು ಶಂಕೆ ಉಂಟಾಗಬಹುದು. ಆದರ್ಶ ಜೀವನಕ್ಕೂ, ಕಟ್ಟುನಿಟ್ಟಾ

ಹ್ಮಚರ್ಯಕ್ಕೂ ಸಂಬಂಧವಿದೆಯೇ ? ಎಂದು ಕೇಳಬಹುದು. ಇವೆರಡಕ್ಕೂ ಯಾವ ಬಂಧವೂ ಇಲ್ಲವೆಂದು ದೃಢವಾಗಿ ಹೇಳಬಹುದು. ಮದುವೆಮಾಡಿಕೊಂಡು ಸಾಧಾರಣ ಲೈಂಗಿಕ ಜೀವನವನ್ನು ಅನುಸರಿಸುವವರೂ ಸಹ ತಮ್ಮ ವ್ಯಕ್ತಿತ್ವದ ವೃದ್ಧಿಯನ್ನೂ ಸಾಮಾಜಿಕ ಅಭಿವೃದ್ಧಿಯನ್ನೂ ಸಾಧಿಸಬಹುದು. ಇದರ ಮುಖ್ಯಾಂಶವೆಂದರೆ ವ್ಯಕ್ತಿಯ ಜೀವನವು ನಿಯಮಬದ್ಧವಾಗಿರಬೇಕು.

iv) ಕಾಮಾರ್ಥಗಳ ಸಾಧನೆಯ ಪರಿಮಿತಿ :—

ಕಾಮಾರ್ಥಗಳನ್ನು ಹೊಂದಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಒಂದು ತನ್ನ ಕಾರ್ಯಕ್ರಮವು ಧರ್ಮಸಮ್ಮತವಾಗಿರುವ ಹಾಗೂ ಮತ್ತೊಂದು ಕಡೆ ಆತ್ಮಸಾಕ್ಷಾತ್ಕಾರಕ್ಕೆ ಸಾಧಕವಾಗಿರುವ ಹಾಗೂ ನೋಡಿಕೊಳ್ಳಬೇಕು. ಅಂದರೆ ಕಾರ್ಯಸಿದ್ಧಿಗೆ ಪ್ರಯತ್ನಿಸುವಾಗ ಒಬ್ಬ ವ್ಯಕ್ತಿಯು ನೀತಿನಿಯಮಗಳನ್ನು ಅನುಸರಿಸಬೇಕು. ಕ್ರಮೇಣ ಈ ಕಾರ್ಯಕಲಾಪಗಳು ತನ್ನ ಆತ್ಮಸಾಕ್ಷಾತ್ಕಾರಕ್ಕೆ ಚ್ಯುತಿಯನ್ನು ಉಂಟುಮಾಡದ ಹಾಗೆ ನೋಡಿಕೊಳ್ಳುವುದು ಅತ್ಯಗತ್ಯ. ಈ ಕಾರಣದಿಂದಲೇ ಉಪನಿಷತ್ತುಗಳಲ್ಲೂ, ಭಗವದ್ಗೀತೆಯಲ್ಲೂ ಧರ್ಮ ಮೋಕ್ಷಗಳ ಪ್ರಮುಖ್ಯತೆಯನ್ನು ಸೂಚಿಸಲಾಗಿದೆ. ಪುರುಷಾರ್ಥಗಳಲ್ಲಿ ಕೇವಲ ದೈಹಿಕವಾದ ಕಾಮವನ್ನು ಮಾನವನ ಜೀವನದ ಒಂದು ಮುಖ್ಯ ಗುರಿಯಾಗಿ ಮಾಡಿರುವುದಲ್ಲದೆ ಅಹಂಕಾರ ಮಮಕಾರಗಳಿಗೆ ಒಳಪಟ್ಟಿರುವ ಧನಾರ್ಜನೆಯನ್ನೂ ಸಹ ಮಾನವಜೀವನದ ಒಂದು ಮುಖ್ಯ ಗುರಿಯಾಗಿ ಪರಿಗಣಿಸಲಾಗಿದೆ. ದೈಹಿಕ ಅವಶ್ಯಕತೆಗಳನ್ನು ಪೂರೈಸುವುದು ಬಹಳ ಮುಖ್ಯವಾದ ಕರ್ತವ್ಯ; ದೈಹಿಕ ಆಸೆ ಆಕಾಂಕ್ಷೆಗಳನ್ನು ತೃಪ್ತಿಪಡಿಸದೆ ಹೋದರೆ ಮಾನವನ ಅಭಿವೃದ್ಧಿಯೂ ಅಸಾಧ್ಯ. ಇದರಿಂದಲೇ ವ್ಯಕ್ತಿಯ ಬೆಳವಣಿಗೆಯು ಸುಗಮವಾಗಿ ಮುಂದುವರಿಯಬೇಕಾ... ಈ ದೈಹಿಕ ಅವಶ್ಯಕತೆಗಳ ತೃಪ್ತಿಗೋಸ್ಕರ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು ಅತ್ಯವಶ್ಯ. ಮಾನವನು ಉಳಿದ ಪ್ರಾಣಿಗಳಂತೆ ಸಂಪೂರ್ಣವಾಗಿ ನಿಸರ್ಗದಮೇಲೆ ಅವಲಂಬಿಸಿ ತನಗೆ ಸಿಕ್ಕಿದ ಹಣ್ಣು ಹಂಪಲು ಗೆಡ್ಡೆಗೆಣಸುಗಳನ್ನು ತಿಂದು ತನ್ನ ಜೀವನವನ್ನು ನಡೆಸುತ್ತಿದ್ದ ಕಾಲದಲ್ಲೂ, ಆಯುಧಗಳನ್ನು ತಯಾರಿಸಿ ಬೇಟೆಯಾಡಿ ಆಹಾರವನ್ನು ಪಡೆಯುತ್ತಿದ್ದ ಕಾಲದಲ್ಲೂ, ಅಂದರೆ ಮಾನವನು ವ್ಯವಸಾಯ ಕ್ರಮಗಳನ್ನೂ ಕೈಗಾರಿಕೋತ್ಪನ್ನಗಳನ್ನೂ ಮಾಡುವ ಮೊದಲು ತನ್ನ ಸಂಸ್ಕೃತಿಯನ್ನು ಉದ್ಧರಿಸಲು ಅಸಾಧ್ಯವಾಗಿತ್ತು. ಆಹಾರ ಆಯುವವರ ಮತ್ತು ಬೇಟೆಯಾಡುವವರ ಗುಂಪಿನ ಸಾಮಾಜಿಕ ರಚನೆ ಮತ್ತು ಸಂಸ್ಕೃತಿಯ ಮಟ್ಟವು ಬಹಳ ಕೆಳಮಟ್ಟದಲ್ಲಿತ್ತು. ತನ್ನ ಬುದ್ಧಿಯನ್ನು ಉಪಯೋಗಿಸಿ ದೈಹಿಕ ಅವಶ್ಯಕತೆಗಳನ್ನು ಪೂರೈಸುವ ವ್ಯವಸ್ಥೆಗಳನ್ನು ಮಾಡಿದ ಮೇಲೆ ಸಂಸ್ಕೃತಿಯು

ಮಟ್ಟವು ಮುಂದುವರಿಯುಲು ಸಾಧ್ಯವಾಯಿತು. ಭಾರತೀಯ ಚರಿತ್ರೆಕಾರರನೇಕರ ಪ್ರಾಚೀನ ಕಾಲದಲ್ಲಿ, ಅಂದರೆ ಸುಮಾರು ಐದು ಸಾವಿರ ವರ್ಷಗಳ ಹಿಂದಿನ ಹರಪ್ಪ ಮಹೆಂಜದಾರೊ ಕಾಲದಲ್ಲಿ, ಭಾರತೀಯ ಸಂಸ್ಕೃತಿಯು ಬಹಳ ಉನ್ನ ಮಟ್ಟವನ್ನು ಪಡೆಯಲು ಮತ್ತು ವೇದಗಳ ಕಾಲದಲ್ಲಿ ಅಂದರೆ ನಾಲ್ಕು ಸಾವಿ ವರುಷಗಳ ಹಿಂದೆ ಅತ್ಯುತ್ತಮವಾದ ಸಾಂಸ್ಕೃತಿಕ ಮಟ್ಟವನ್ನು ಪಡೆಯಲು ಸಿಂಧು ನದಿಯು ಮತ್ತು ಗಂಗಾ ಯಮುನಾ ನದಿಗಳ ತೀರ ಪ್ರದೇಶಗಳಲ್ಲಿ ಫಲವತ್ತಾ ಭೂಮಿ, ಸಮೃದ್ಧಿಯಾಗಿ ಹಣ್ಣು ಹಂಪಲು ಒದಗಿಸುವ ಗಿಡಮರಗಳು ಯಥೇಚ್ಛ ವಾಗಿ ಪ್ರಾಣಿಗಳಿಂದ ಕೂಡಿದ ಕಾಡು ಪ್ರದೇಶಗಳು ಇದ್ದುದೇ ಮುಖ್ಯ ಕಾರಣ ವೆಂದು ಊಹಿಸಿರುವರು. ಆ ಕಾಲದಲ್ಲಿ ಈ ಪ್ರಾಂತ್ಯಗಳಲ್ಲಿ ಶ್ರಮವಿಲ್ಲದೆ ಹೇರ ವಾದ ಆಹಾರ ಸಾಮಗ್ರಿಗಳು ದೊರೆಯುತ್ತಿದ್ದುದರಿಂದ ನಾಗರಿಕತೆಯನ್ ಸಂಸ್ಕೃತಿಯನ್ನೂ ಮುಂದುವರಿಸಲು ಸಾಧ್ಯವಾಯಿತೆಂದು ಹೇಳಬಹುದು. ಆದ ಈಚೆಗೆ ನೂರಾರು ವರ್ಷಗಳಿಂದಲೂ ಭಾರತೀಯ ಜನಜೀವನದ ಮಟ್ಟ ಅತಿ ಕೀಳು ದರ್ಜೆಯಲ್ಲಿ ಇರುವುದಕ್ಕೆ ದೈಹಿಕ ಅಗತ್ಯಗಳ ಅಭಾವವ ಕಾರಣವೆಂದು ಹೇಳಬಹುದು. ಭಾರತದೇಶದ ಸುಮಾರು ಆರವತ್ತು ಕೋ ಜನರಲ್ಲಿ ನಲವತ್ತೈದು ಕೋಟಿಗಿಂತ ಹೆಚ್ಚಾಗಿ ಆಹಾರ, ಉಡುಪು, ವಸ ಇವುಗಳ ಅಭಾವದಿಂದ ನರಳುತ್ತಿರುವರು. ಇಂತಹ ಪರಿಸ್ಥಿತಿಯಲ್ಲಿ ದೇಶ ಸಂಸ್ಕೃತಿಯ ಮಟ್ಟವು ಹೇಗೆತಾನೆ ಉನ್ನತಸ್ಥಿತಿಯಲ್ಲಿರುವುದು ಸಾಧ್ಯ ?

ಗೀತೆಯು ಅನೇಕ ಶ್ಲೋಕಗಳು ನೀತಿ ನಿಯಮಗಳಿಗೆ ವಿರುದ್ಧವಾ ಕಾಮ ಪ್ರವೃತ್ತಿ, ಇಂದ್ರಿಯ ಸುಖಾಭಿಲಾಷೆ, ರಾಗ, ಭಯ, ಕ್ರೋಧ ಮುಂತಾ ಭಾವೋದ್ರೇಕಗಳಿಂದ ವಿಮುಕ್ತವಾಗುವುದು ಮನಶ್ಶಾಂತಿಗೂ ಆತ್ಮವಿಕಾಸಕ್ಕ ಆವಶ್ಯಕವೆಂದೂ ತೋರಿಸಿಕೊಟ್ಟವೆ.

ಕಾಮಪ್ರವೃತ್ತಿಯಿಂದ ಕಾಮತೃಷ್ಣೆ ಮತ್ತು ವಿಷಯಾಭಿಲಾಷೆಗ ಉತ್ಪನ್ನವಾಗಿ ಮಾನವನು ನೀತಿ ನಿಯಮಗಳಿಗೆ ವಿರುದ್ಧವಾಗಿಯೂ, ಆತ್ಮಸಾಕ ತ್ಕಾರಕ್ಕೆ ವಿಮುಖನಾಗಿಯೂ ಇರುವಂತೆಯೇ ಅರ್ಥಾಭಿಲಾಷೆಯಿಂದ ಅಹಂಕಾ ಮಮಕಾರಗಳನ್ನು ಪಡೆದು ಧರ್ಮಕ್ಕೆ ವಿರುದ್ಧವಾಗಿಯೂ, ಆತ್ಮಸಾಕ್ಷಾತ್ಕಾರದ ಆಸಕ್ತಿಯಿಲ್ಲದವನೂ ಆಗುತ್ತಾನೆ.

ಎಷ್ಟು ಹಣ ಸಂಪಾದಿಸಿದರೂ, ಎಷ್ಟು ಆಸ್ತಿ ಮಾಡಿದರೂ, ಎಷ ಒಡವೆವಸ್ತುಗಳನ್ನು ಸಂಗ್ರಹಿಸಿದರೂ ತೃಪ್ತಿಯುಂಟಾಗುವುದಿಲ್ಲ, ಮತ್ತು ಸಮಾ ದಲ್ಲಿ ಎಷ್ಟು ಉನ್ನತಸ್ಥಾನವನ್ನು ಪಡೆದರೂ ಮತ್ತೊಬ್ಬರು ನಮಗಿಂತ ಉನ್ನ ಸ್ಥಾನದಲ್ಲಿ ಇರುವರೆಂಬ ಅಸೂಯೆಯು ಇದ್ದೇ ಇರುವುದು. ಈ ಕಾರಣಗಳಿಂದ

ಸ್ವಾಚಾರವು ಹೇರಳವಾಗಿರುವುದು. ಯಾವ ಮಾರ್ಗವನ್ನಾದರೂ ಅನುಸರಿಸಿ ನ್ನಾ ಹೆಚ್ಚು ಸಂಪತ್ತನ್ನು ಪಡೆಯಬೇಕು; ಇನ್ನೂ ಹೆಚ್ಚಿನ ಸ್ಥಾನಮಾನ ನ್ನು ಪಡೆಯಬೇಕು. ಅಥವಾ ತನಗಿರುವ ಸ್ಥಾನಮಾನಗಳು ಶಾಶ್ವತವಾಗಿರ ಕು ಎಂಬ ಆಕಾಂಕ್ಷೆಯು ಮನುಷ್ಯನನ್ನು ದುರ್ಮಾರ್ಗಕ್ಕೆ ಸೆಳೆಯುವುದು. ನರೆ ನೀತಿ ನಿಯಮಗಳಿಗಿಂತ ಅರ್ಥಕಾಮಗಳ ಸೆಳೆತ ಹೆಚ್ಚು ಶಕ್ತಿಯುತ. ನುಷ್ಯನು ತಾನು ಮಾಡುವ ಕೆಲಸ ಅನೀತಿಯುತವಾಗಿರುವುದೆಂದು ಚೆನ್ನಾಗಿ ತಿಳಿ ರೂ, ಅದರಿಂದ ಕಾನೂನುಪ್ರಕಾರ ಶಿಕ್ಷೆಗೆ ಗುರಿಯಾಗುವುದು ಖಂಡಿತ ದು ತಿಳಿದಿದ್ದರೂ ಆಕಾಂಕ್ಷೆಯ ಪ್ರೇರಣೆ ಬಹಳ ತೀವ್ರವಾಗಿರುವುದರಿಂದ ನ್ಯಾಯ ಮತ್ತು ಅಧರ್ಮದ ನಡೆತೆಗೆ ಬಲಿಯಾಗುವನು.

ಕಾಮ ಮತ್ತು ಅರ್ಥ ಸಾಧನೆಯನ್ನೇ ಮುಖ್ಯ ಗುರಿಯಾಗಿ ಇಟ್ಟಿರುವ ವ್ಯಕ್ತಿ ನ್ನು ಗೀತೆಯು ಆಸುರೀ ಸಂಪತ್ತಿನಿಂದ ಕೂಡಿರುವವರೆಂದು ಹೇಳಿದೆ.

ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥

ಗೀತೆ 16–4

ದಂಭ, ದರ್ಪ, ಅಹಂಕಾರ, ಕ್ರೋಧ, ಕಠಿಣವಾದ ಮಾತು ಮತ್ತು ಜ್ಞಾನ ಈ ಗುಣಗಳು) ಆಸುರೀ ಸಂಪತ್ತಿನಲ್ಲಿ ಹುಟ್ಟಿರುವವನಿಗೆ ಉಂಟಾಗುತ್ತವೆ.

ಕಾಮ ಮತ್ತು ಅರ್ಥಸಾಧನೆಯೇ ಜೀವನದ ಮುಖ್ಯ ಗುರಿಯೆಂದು ತಿಳಿದಿರುವ ಕ್ತಿಗಳ ವರ್ತನೆಯನ್ನು ಕುರಿತು ಗೀತೆಯು ಇದೇ ಅಧ್ಯಾಯದ ಮತ್ತೆರಡು ್ಲೋಕಗಳು ಹೀಗೆ ವಿವರಿಸುತ್ತವೆ.

ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥
ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥

ಗೀತೆ 16–15, 16.

'ನಾನು ಹಣವಂತನು ಮತ್ತು ಕುಲೀನ; ನನಗೆ ಸಮನಾದವನು ರೆ ಯಾವನಿದ್ದಾನೆ? ನಾನು ಯಾಗಮಾಡುವೆನು, ದಾನಮಾಡುವೆನು, ಮೋದ ಪಡುವೆನು ಎಂದು ಅಜ್ಞಾನದಿಂದ ಮೋಹಿತರಾಗಿ ಅನೇಕ ಚಿಂತೆಗಳಿಂದ ಭ್ರಾಂತ ಗಿ, ಮೋಹಜಾಲದಿಂದ ಆವರಿಸಲ್ಪಟ್ಟವರಾಗಿ, ಕಾಮ ಭೋಗಗಳಲ್ಲಿ ಆಸಕ್ತ ಗಿ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ.

ಪುರುಷಾರ್ಥಗಳ ವಿವರಣೆಯ ಉದ್ದೇಶವು ಕಾಮಾರ್ಥಗಳನ್ನು ತ್ಯಜಿಸ ಕೆಂಬುದಲ್ಲ. ಇವೆರಡೂ ಜೀವನಕ್ಕೆ ಬಹಳ ಮುಖ್ಯ ಮತ್ತು ಆವಶ್ಯಕ.

ಸಾಧನೆಗಳು, ಆದರೆ ಇವುಗಳನ್ನೇ ಅಂತಿಮ ಗುರಿಯನ್ನಾಗಿ ಪರಿಗಣಿಸಬಾರದ
ಕಾಮದ ತೃಪ್ತಿ ಮತ್ತು ಅರ್ಥದ ಆರ್ಜನೆಯು ಧರ್ಮ ವಿರುದ್ಧವಾಗಿರಬಾರದ
ಮತ್ತು ಆತ್ಮಸಾಕ್ಷಾತ್ಕಾರದಿಂದ ವಿಮುಕ್ತನನ್ನಾಗಿ ಮಾಡಬಾರದು. ಇಂದ್ರಿ
ಲೋಲತೆ ಮತ್ತು ಕಾಮ ಕ್ರೋಧಾದಿ ಅರಿಷಡ್ವರ್ಗಗಳ ಅಧೀನದಲ್ಲಿ ಮನುಷ್ಯ
ಇರಬಾರದು. ಈ ಅರಿಷಡ್ವರ್ಗಗಳು ಅವನ ಸ್ವಾಧೀನದಲ್ಲಿ ಇರಬೇಕು. ಹೀಗೆಂ
ಧನಾರ್ಜನೆಯು ಬಹಳ ಆವಶ್ಯಕ; ತಾನೂ ಮತ್ತು ತನ್ನ ಕುಟುಂಬದ ಜನ
ಸೌಖ್ಯವಾದ ಜೀವನವನ್ನು ನಡೆಸುವುದಕ್ಕೆ ಸಮರ್ಪಕವಾದ ಕೆಲಸವನ್ನು ಮಾ
ಧನ ಸಂಪಾದಿಸಬೇಕು. ತನ್ನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಮತ
ತರಪೇತನ್ನು ಕೊಟ್ಟು ಅವರು ಮುಂದಕ್ಕೆ ಬಂದು ಸತ್ಪ್ರಜೆಗಳಾಗಿ ಬಾಳ
ಹಾಗೆ ಅವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಮತ್ತು ಮನೆಗೆ ಬರ
ಅತಿಥಿಗಳಿಗೆ ಸತ್ಕಾರಮಾಡುವ ಶಕ್ತಿಯನ್ನು ಹೊಂದಿರಬೇಕು. ಈ ವಿಧವಾ
ಗೃಹಸ್ಥಧರ್ಮದ ಕರ್ತವ್ಯಗಳನ್ನು ಈಡೇರಿಸುವುದಕ್ಕೆ ಧನ ಆವಶ್ಯಕ. ಧನಾರ್ಜನೆ
ಧರ್ಮವಿರುದ್ಧವಾಗಿರಬಾರದು. ಮತ್ತು ತಮ್ಮ ಆತ್ಮಸಾಕ್ಷಾತ್ಕಾರಕ್ಕೆ ಸಹಾಯ
ವಾಗಿರಬೇಕು. ಇದೇ ಚತುರ್ವಿಧ ಪುರುಷಾರ್ಥಗಳ ನಿರೂಪಣೆಯ ಹೆಗ್ಗುರಿ.

v) ಮೋಕ್ಷ :— ಭಾರತೀಯ ಸಂಸ್ಕೃತಿಯ ಪ್ರಕಾರ ಜೀವನ
ಅಂತಿಮ ಗುರಿ ಮೋಕ್ಷ. ಆತ್ಮಸಾಕ್ಷಾತ್ಕಾರವೇ ಮಾನವಜೀವನದ ಆದರ್ಶ.
ಗುರಿಯು ಉಪನಿಷತ್‌ಕಾಲದಲ್ಲಿ ರೂಪಗೊಂಡಿತು. ಉಪನಿಷತ್ಕಾಲದ ಋಷಿಗ
ವಿಶ್ವದ ದೃಷ್ಟಿಯನ್ನು ಸ್ಥಿರವಾಗಿಟ್ಟುಕೊಂಡು ಮಾನವನಿಗೂ ಈ ವಿಶ್ವಕ
ಇರುವ ಸಂಬಂಧವೇನೆಂಬುದನ್ನು ತೀವ್ರವಾಗಿ ಆಲೋಚಿಸಿದರು. ಆತ್ಮಸಾಕ್ಷಾತ್ಕಾ
ಮೂಲಕ ಇದನ್ನು ಅನುಭವಕ್ಕೆ ತಂದುಕೊಂಡರು. ಉಪನಿಷತ್ತುಗಳಲ್ಲಿ ಮಾ
ವನ ಅನುಭವವು ಎರಡು ಅಂತಸ್ತುಗಳಲ್ಲಿ ಇರುವುದೆಂಬುದನ್ನು ಸ್ಥಿರಪಡಿಸಿ
ಒಂದು, ಕೀಳುಮಟ್ಟದ ಅನುಭವಗಳ ಗುಂಪು; ವ್ಯವಹಾರಿಕ. ಮುಖ್ಯವ
ಇದು ಯೋಗಕ್ಷೇಮವನ್ನು ಒಳಗೊಂಡಿರುವುದು. ಮೇಲೆ ಹೇಳಿರುವ ಹ
ಯೋಗವೆಂದರೆ ನಮ್ಮ ಹತ್ತಿರ ಇಲ್ಲದಿರುವುದನ್ನು ಪಡೆಯುವುದಕ್ಕೋಸ್ಕರ ಪ್ರಯ
ವುದು ಕ್ಷೇಮವೆಂದರೆ ನಮ್ಮ ಹತ್ತಿರ ಇರುವುದನ್ನು ಭದ್ರಪಡಿಸಿಕೊಳ್ಳುವ
ಮಕ್ಕಳು, ಯುವಕರು, ಗೃಹಸ್ಥರೂ, ಸಮಸ್ತರೂ ಈ ಎರಡು ಕೆಲಸಗ
ನಿರತರಾಗಿರುವರು.

ಪ್ರಥಮತಃ ಆಹಾರ, ಉಡುಪು, ವಸತಿ ಮುಂತಾದವುಗ
ಪಡೆಯುವುದೇ ನಮ್ಮ ಚಟುವಟಿಕೆಗಳ ಗುರಿಯಾಗಿರುವುದು. ಈ ದೈಹಿಕ ವ
ಇತರ ಪ್ರಧಾನ ಆವಶ್ಯಕತೆಗಳು ಈಡೇರಿದರೆ ಮನುಷ್ಯನು ಕ್ಷೇಮಕ್ಕೆ ಸಂಬಂಧ

ಶ್ಯಕತೆಗಳನ್ನು ಈಡೇರಿಸಲು ಪ್ರಯತ್ನಿಸುವನು. ಈ ಪ್ರಯತ್ನವನ್ನು ಡು ಮೂರು ವರ್ಷದ ಮಕ್ಕಳಲ್ಲಿಯೂ ಸಹ ಕಾಣಬಹುದು. ತಾನಿರುವ ದಲ್ಲಿ ಪದಾರ್ಥಗಳು, ಮನುಷ್ಯರು ಮತ್ತು ಘಟನೆಗಳು ಒಂದು ಸುವ್ಯವ ತ ಸ್ಥಿತಿಯಲ್ಲಿದ್ದರೆ ಆಗ ಭದ್ರತಾಮನೋಭಾವವು ಉಂಟಾಗುವುದು. ಪರಿಸರದಲ್ಲಿರುವ ವಸ್ತುಗಳು ಅವುಗಳ ಕ್ರಮಬದ್ಧವಾದ ಸ್ಥಳಗಳಲ್ಲಿ ಇಲ್ಲ ದ್ದರೆ, ಘಟನೆಗಳು ನಿರ್ದಿಷ್ಟಕಾಲದಲ್ಲಿ ನಡೆಯದಿದ್ದರೆ, ಮನುಷ್ಯರು ಎಣಿಸಿದ ಗೆ ನಡೆದುಕೊಳ್ಳದಿದ್ದರೆ, ಅಭದ್ರತಾ ಮನೋಭಾವವು ಮಗುವಿನಲ್ಲೂ, ಯುವಕ ಲ್ಲೂ ಮತ್ತು ವಯಸ್ಕನಲ್ಲೂ ಉಂಟಾಗುವುದು. ಮಗುವಿನಲ್ಲಿ ಈ ಭದ್ರತಾ ನೋಭಾವವು ಉಂಟಾದರೆ ಆಗ ಲೋಕದಲ್ಲಿ ಮತ್ತು ಮನುಷ್ಯರಲ್ಲಿ ನಂಬಿಕೆ ಉಂಟಾಗಿ ತನ್ನ ಕುಟುಂಬಕ್ಕೆ ಸೇರಿದವರಲ್ಲೂ, ಸೇರದವರಲ್ಲೂ ವಿಶ್ವಾಸಪೂರ್ವಕವಾದ ಬಂಧವು ಉಂಟಾಗುವುದು. ಸಂಕ್ಷೇಪವಾಗಿ ಹೇಳಬೇಕಾದರೆ ಯಾವ ಮನುಷ್ಯ ಲ್ಲಿ ದೈಹಿಕ ಆವಶ್ಯಕತೆಗಳಿಗೆ ಕುಂದುಂಟಾಗುವುದೋ, ಯಾರಲ್ಲಿ ಭದ್ರತಾ ನೋಭಾವವು ಉಂಟಾಗುವುದಿಲ್ಲವೋ ಅಂತಹ ವ್ಯಕ್ತಿಗೆ ಇತರರಲಿ ಪ್ರೇಮ ರಕವಾದ ಸಂಬಂಧವನ್ನು ಬೆಳೆಸಿಕೊಳ್ಳಲು ಕಷ್ಟವಾಗುವುದು. ಪರಿಚಯವಿಲ್ಲ ದರನ್ನು ಕಂಡರೆ ಹೆದರಿಕೆಯುಂಟಾಗುವುದು. ಈ ಮೂರು ರೀತಿಯ ಅವಶ್ಯ ತೆಗಳು ಈಡೇರಿದರೆ ಆಗ ಮನುಷ್ಯನಲ್ಲಿ ಆತ್ಮಗೌರವದ ಅವಶ್ಯಕತೆ ಉಂಟಾಗು ದೆ. ಇದರಿಂದ ಸಮಾಜದಲ್ಲಿ ತಾನು ಒಳ್ಳೆಯ ಸ್ಥಾನವನ್ನು ಪಡೆಯುವುದಕ್ಕೆ ಯತ್ನಿಸುತ್ತಾನೆ. ತಾನು ಕೈಗೊಂಡ ಕಾರ್ಯಗಳ ಸಿದ್ಧಿಗಾಗಿ ಯತ್ನಿಸುವನು. ನ್ನ ಕೆಲಸಕಾರ್ಯಗಳನ್ನು ದಕ್ಷತೆಯಿಂದ ಮಾಡುವ ಗುರಿಯನ್ನು ಇಟ್ಟುಕೊಳ್ಳು ನು ಮತ್ತು ಸ್ವಾವಲಂಬಿಯಾಗಿ ತನ್ನ ಜೀವನವನ್ನು ಸಾಗಿಸುವನು. ಈ ರೀತಿ ಯಾಗಿ ಈ ನಾಲ್ಕನೇ ಅಂತಸ್ತಿನ ನಿರ್ವಹಣಾ ಆಸಕ್ತಿಯು ಪೂರೈಸಿದರೆ ಆಗ ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕೆಂಬ ಆವಶ್ಯಕತೆಯು ಆ ವ್ಯಕ್ತಿಯಲ್ಲಿ ಉಂಟಾಗುತ್ತದೆ.

ಈ ವಿಸ್ತರಿಸಿರುವ ಐದು ಅಂತಸ್ತುಗಳನ್ನು ಒಳಗೊಂಡಿರುವ ಸಕ್ತಿ ಮತ್ತು ಆವಶ್ಯಕತೆಗಳು ಆಧುನಿಕ ಮನಶ್ಶಾಸ್ತ್ರದಲ್ಲಿ ಪ್ರಾಯೋಗಿಕ ಮಾರ್ಗ ವನ್ನು ಅನುಸರಿಸಿ ಪಡೆದಿರುವ ಜ್ಞಾನದ ಆಧಾರದ ಮೇಲೆ ಇರುವುದು. ಉಪ ಷತ್ತುಗಳ ದೃಷ್ಟಿಯಿಂದ ಈ ಐದು ಅಂತಸ್ತುಗಳಲ್ಲಿ ಇರುವ ಆವಶ್ಯಕತೆಗಳು ರಡು ಮಟ್ಟಗಳಲ್ಲಿ ಇರುವುದೆಂದು ವಿದಿತವಾಗುವುದು. ಮೊದಲು ನಾಲ್ಕು ಅಂತಸ್ತುಗಳಿಗೆ ಸೇರಿದ ಆವಶ್ಯಕತೆಗಳು ಉಪನಿಷತ್ ದೃಷ್ಟಿಯಿಂದ ಕೆಳಗಿನ ಮಟ್ಟದ ವಶ್ಯಕತೆಗಳು. ಐದನೆಯದು ಉನ್ನತ ಆವಶ್ಯಕತೆ.

ಕೆಳಮಟ್ಟದ ನಾಲ್ಕು ಅಂತಸ್ತುಗಳ ಆವಶ್ಯಕತೆಗಳನ್ನು ಪೂರೈಸುವುದ ಗೋಸ್ಕರ ಪ್ರಯತ್ನಿಸುವ ಮನುಷ್ಯನು ಲಾಭನಷ್ಟ, ಸುಖದುಃಖಗಳ ದ್ವಂದ್ವ

ಗಳಲ್ಲಿ ಸಿಕ್ಕಿ ತನ್ನ ಜೀವನವನ್ನು ನಡೆಸಬೇಕಾಗುವುದು. ಇದೇ ಲೌಕಿಕ ಜೀವನ, ಸಂಸಾರಕ್ಕೆ ಸಂಬಂಧಪಟ್ಟ ಜೀವನ. ಈ ಆವಶ್ಯಕತೆಗಳನ್ನು ಈಡೇರಿಸುವುದು ಅತ್ಯಗತ್ಯ. ಆದರೆ ಇದು ಮಾನವನ ಅಂತಿಮ ಗುರಿಯಾದರೆ ಆತನು ತೃಪ್ತಿ-ಅತೃಪ್ತಿ, ಸುಖದುಃಖ ಮುಂತಾದ ದ್ವಂದ್ವಗಳಿಂದ ಬಂಧಿತನಾಗುವನು. ಆಗ ಅವನ ದೃಷ್ಟಿಯು ಈ ಬಂಧನದಿಂದ ವಿಮುಕ್ತನಾಗುವ ಅಂತಿಮ ಗುರಿಯನ್ನು ಹೊಂದಬೇಕಾಗುವುದು. ಹೀಗೆ ಮಾಡದೆಹೋದರೆ ಆ ವ್ಯಕ್ತಿಯು ಎಷ್ಟು ಆಹಾರವನ್ನು ತಿಂದರೂ ಅವನಿಗೆ ತೃಪ್ತಿ ಇರುವುದಿಲ್ಲ; ಎಷ್ಟು ವ್ಯವಸ್ಥಿತ ವಾತಾವರಣದಲ್ಲಿ ಬಾಳಿದರೂ ಸುರಕ್ಷಿತ ಮನೋಭಾವವಿರುವುದಿಲ್ಲ. ಪರಿಚಿತ ವ್ಯಕ್ತಿಗಳನ್ನೋ ಅಪರಿಚಿತ ವ್ಯಕ್ತಿಗಳನ್ನೋ ಕಂಡರೆ ಸಲಿಗೆ ಇರುವುದಿಲ್ಲ. ಯಾವಾಗಲೂ ಪ್ರತಿಯೊಬ್ಬರ ವಿಷಯದಲ್ಲಿಯೂ ಅಪನಂಬಿಕೆಯಿಂದ ಕೂಡಿದ ಮನೋಭಾವವನ್ನು ವ್ಯಕ್ತಪಡಿಸುವನು. ತಾನೆಷ್ಟು ಕೆಲಸಗಳನ್ನು ಸಾಧಿಸಿದರೂ, ತನಗೆಷ್ಟು ಉನ್ನತ ಸ್ಥಿತಿ ಸಮಾಜದಲ್ಲಿ ದೊರೆತರೂ ಅತೃಪ್ತಿ ಮಾತ್ರ ದೂರವಾಗುವುದಿಲ್ಲ. ಆದುದರಿಂದಲೇ ಮನುಷ್ಯನ ಅಂತಿಮ ಗುರಿಯು ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕೆಂಬ ಗುರಿಯಾಗಿರಬೇಕು. ತಾನು ಯಾರು, ತನಗೂ ಈ ದೈಹಿಕ ಮತ್ತು ಮಾನಸಿಕ ಆವಶ್ಯಕತೆಗಳಿಗೂ ಯಾವ ಸಂಬಂಧವಿರುವುದು, ಎಂಬುದನ್ನು ಕುರಿತು ವಿವೇಕ ಹೊಂದಿದರೆ ಆ ಮನುಷ್ಯನ ದೃಷ್ಟಿಕೋನವೇ ಬೇರೆಯಾಗುವುದು. ಗೀತೆಯಲ್ಲಿ ವಿವರಿಸಿರುವಹಾಗೆ ಅಂತಸ್ಥ ಮನುಷ್ಯನ ದೃಷ್ಟಿಯು–

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥
ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।

ಗೀತೆ 12–13, 14

ಈ ಅಂತಿಮ ಗುರಿಯನ್ನಿಟ್ಟಿರುವ ಮನುಷ್ಯನು, ಯಾವ ಮನುಷ್ಯರನ್ನೂ ಪ್ರಾಣಿಗಳನ್ನೂ ದ್ವೇಷಿಸುವುದಿಲ್ಲ. ಸರ್ವರನ್ನೂ ಮಿತ್ರಭಾವದಿಂದ ನೋಡುತ್ತಾನೆ, ಸರ್ವರಲ್ಲಿಯೂ ಕರುಣೆಯನ್ನಿಟ್ಟಿರುವನು. ಆತನು ಅಹಂಕಾರ, ಮಮಕಾರವಿಲ್ಲದವನು; ಸುಖದುಃಖಗಳಲ್ಲಿ ಸಮಾನವಾಗಿರುವವನು; ಕ್ಷಮಾಶೀಲನು; ಯಾವಾಗಲೂ ಸಂತುಷ್ಟನು, ದೃಢನಿಶ್ಚಯದಿಂದ ಇರುವವನೂ ಆಗಿರುತ್ತಾನೆ.

ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ ॥
ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।

ಗೀತೆ, 12– 18, 19

ಇಂತಹ ವ್ಯಕ್ತಿಯು ಶತ್ರು ಮಿತ್ರರಲ್ಲಿ ನಮ್ಮ ಸಮಬುದ್ಧಿಯುಳ್ಳವನು. ಮಾನಾಪಮಾನಗಳಲ್ಲಿಯೂ, ಶೀತೋಷ್ಣ ಸುಖದುಃಖಗಳಲ್ಲಿಯೂ ಸಮನಾಗಿರುವನು. ಹಾಗೆಯೇ ಸ್ತುತಿ ನಿಂದೆಗಳಲ್ಲಿ ಸಮಭಾವದಿಂದ ಇರುವನು. ಕಿಂಚಿತ್ ಲಾಭ ಬಂದರೂ, ಸಂತುಷ್ಟನಾಗಿರುವನು.

ಈ 'ಮೋಕ್ಷ' ಎನ್ನುವ ಪದಕ್ಕೆ ಸಾಧಾರಣವಾಗಿ ಜನನಮರಣದಿಂದ ಮುಕ್ತಿ ಎಂಬರ್ಥವು ವಾಡಿಕೆಯಲ್ಲಿದೆ. ಆದರೆ ಈ ಅರ್ಥವು ಬಹಳ ಪ್ರಾಚೀನ ಕಾಲದಿಂದ ಭಾರತೀಯಸಂಸ್ಕೃತಿಯಲ್ಲಿದ್ದರೂ ಆಧುನಿಕಕಾಲದ ದೃಷ್ಟಿಯಿಂದ ಈ ಅರ್ಥವು ಸಮರ್ಪಕವಾದುದಲ್ಲ 'ಜಾತಸ್ಯ ಮರಣಂ ಧ್ರುವಂ' ಎಂಬ ನುಡಿಯು ಸತ್ಯ. ಆದರೆ 'ಮರಣಸ್ಯ ಜನನಂ ಧ್ರುವಂ' ಎಂಬ ನುಡಿಯ ಭಾಗವು ಯಥಾರ್ಥವೆಂದು ಸಾಧಿಸಲು ಕಷ್ಟ. ಏಕೆಂದರೆ ಪುನರ್ಜನ್ಮವು ಒಂದು ಊಹೆ. ಆಧುನಿಕ ವಿಜ್ಞಾನ ದೃಷ್ಟಿಯಿಂದ ಈ ಊಹೆಯು ಪ್ರಾಮಾಣವನ್ನು ಸ್ಥಿರಪಡಿಸಲು ಅಸಾಧ್ಯ. ಈ ವಿಷಯುವನ್ನು ಕುರಿತು ಗೀತೆಯಲ್ಲಿ ಈ ಶ್ಲೋಕಗಳು ಇವೆ:

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ |

ಗೀತೆ 2–27

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ |
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ ||

ಗೀತೆ 2-22.

'ಹುಟ್ಟಿದವನಿಗೆ ಮರಣವು ನಿಶ್ಚಯ ಮತ್ತು ಸತ್ತವನಿಗೆ ಜನ್ಮ ನಿಶ್ಚಯ. ಮನುಷ್ಯನು ಹಳೆಯ ಬಟ್ಟೆಗಳನ್ನು ಬಿಟ್ಟು ಹೇಗೆ ಹೊಸಬಟ್ಟೆಗಳನ್ನು ತೆಗೆದುಕೊಳ್ಳುವನೋ ಹಾಗೆಯೇ ದೇಹವನ್ನು ಹೊಂದಿರುವ ಆತ್ಮನು ಜೀರ್ಣವಾದ ಈ ಶರೀರವನ್ನು ಬಿಟ್ಟು ಬೇರೆ ಹೊಸ ಶರೀರವನ್ನು ಹೊಂದುತ್ತಾನೆ.'

ಆದರೆ ಗೀತೆಯಲ್ಲಿ ಆತ್ಮಸತ್ಯವನ್ನು ಕುರಿತು ಮತ್ತೊಂದು ಶ್ಲೋಕವು ಹೀಗೆ ಹೇಳಿದೆ:

ನ ಜಾಯತೇ ಮ್ರಿಯತೇ ವಾ ಕದಾತ್
ಚಿನಾಯಂ ಭೂತ್ವಾ ಭವಿತಾ ವಾ ನ ಭೂಯಃ |
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ||

ಗೀತೆ 2–20.

ಆತ್ಮನು ಹುಟ್ಟುವುದೂ ಇಲ್ಲ. ಸಾಯುವುದೂ ಇಲ್ಲ. ಹಿಂದೆ ಉತ್ಪನ್ನನಾಗಿ ಪುನಃ ಇಲ್ಲದಿರುವುದೂ ಇಲ್ಲ. ಆತ್ಮನು ಜನ್ಮ ರಹಿತನು, ನಿತ್ಯನು, ಶಾಶ್ವತನು. ಆದರೆ ಶರೀರವು ನಾಶವಾಗುವುದು. ಶರೀರ ನಾಶವಾದರೂ ಆತ್ಮವು ನಾಶವಾಗುವುದಿಲ್ಲ.

'ಮೋಕ್ಷ' ಎಂಬ ಪದಕ್ಕೆ ಮುಕ್ತಿ, ಬಿಡುಗಡೆ, ವಿಮೋಚನೆ ಎಂಬ ವಾಚ್ಯಾರ್ಥವಿದೆ. ಮಾನವನ ಬಿಡುಗಡೆ ಹೇಗೆ ಎಂಬುದೇ ಒಂದು ಸಮಸ್ಯೆ. ಗೀತೆಯ ಕೆಲವು ಶ್ಲೋಕಗಳನ್ನು ಅರ್ಥಮಾಡಿಕೊಳ್ಳುವುದಾದರೆ, ಈ ಬಿಡುಗಡೆಯೆಂಬುದು ಜನನ-ಮರಣ, ಪುನರ್ಜನ್ಮ ಚಕ್ರದಿಂದ ಬಿಡುಗಡೆ ಹೊಂದುವುದು ಎಂದು ಅರ್ಥವಾಗುತ್ತದೆ. ಆದರೆ ಈ ಅರ್ಥವು ಮೇಲೆ ಸೂಚಿಸಿರುವ ಹಾಗೆ ಒಂದು ಊಹೆಯ ಆಧಾರವನ್ನು ಒಳಗೊಂಡಿರುವುದು. ಗೀತೆಯಲ್ಲಿ ಮತ್ತೆ ಕೆಲವು ಶ್ಲೋಕಗಳು ಇನ್ನೊಂದು ಅರ್ಥವನ್ನು ಸೂಚಿಸುತ್ತವೆ. ಅದಾವುದೆಂದರೆ ಮನುಷ್ಯನು ಕೀಳು ದರ್ಜೆಯ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬಂಧನಗಳಿಂದ ವಿಮುಕ್ತನಾಗಿ ತನ್ನ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದಕ್ಕೋಸ್ಕರ ದ್ವಂದ್ವಾತೀತನಾಗಬೇಕು. ಒಬ್ಬ ವ್ಯಕ್ತಿಯು ಹೀಗೆ ದ್ವಂದ್ವಾತೀತನಾದರೆ ಅವನು ಜೀವನ್ಮುಕ್ತಿಯ ಸ್ಥಿತಿಯನ್ನು ಪಡೆದು ಸ್ಥಿತಪ್ರಜ್ಞನಾಗುವನು. ಆಧುನಿಕ ವಿಜ್ಞಾನದ ದೃಷ್ಟಿಯಿಂದಲೂ, ಆಧುನಿಕ ಮನಶ್ಶಾಸ್ತ್ರದ ಆಧಾರದಿಂದಲೂ ಈ ಎರಡನೆಯ ಅರ್ಥವು ಸಮರ್ಥಕವಾಗಿದೆ. ವಿಮುಕ್ತಿಯ ಹಾದಿಯು ವ್ಯಕ್ತಿತ್ವದ ಬೆಳವಣಿಗೆಯನ್ನು ಅನುಸರಿಸುವುದು. ಒಬ್ಬ ವ್ಯಕ್ತಿಯು ತನ್ನ ಜೀವನದ ದೈಹಿಕ ಆವಶ್ಯಕತೆಗಳನ್ನು ತೃಪ್ತಿಗೊಳಿಸುವುದರಲ್ಲೂ ಕೇವಲ ಮಾನಸಿಕಸುಖವನ್ನು ಪಡೆಯುವುದರಲ್ಲೂ ತನ್ನ ಬಾಹ್ಯಪ್ರಭಾವಗಳಿಗೆ ಸುಲಭವಾಗಿ ಪ್ರತಿಕ್ರಿಯೆಯನ್ನು ತೋರುವುದರಲ್ಲೂ, ಅಥವಾ ತನ್ನ ಸಾಮಾಜಿಕ ಪದವಿಯ ಸ್ಥಿರತ್ವವನ್ನು ಹೊಂದುವ ಆಕಾಂಕ್ಷೆಯಲ್ಲಿಯೂ ನಿಮಗ್ನನಾದರೆ ಆತನ ವ್ಯಕ್ತಿತ್ವ ಬೆಳೆಯುವುದು ಅಸಾಧ್ಯ. ಈ ದೈಹಿಕ ಮಾನಸಿಕ ಮತ್ತು ಸಾಮಾಜಿಕ ಪ್ರಭಾವಗಳಿಂದ ವ್ಯಕ್ತಿತ್ವದ ಬೆಳವಣಿಗೆಯ ಮೂಲಕ ವಿಮೋಚನೆಯನ್ನು ಪಡೆಯುವುದು ಸಾಧ್ಯ. ಹಾಗೆ ವಿಮೋಚನೆಯನ್ನು ಪಡೆದರೆ ಮನಶ್ಶಾಂತಿ ಉಂಟಾಗುವುದು. ಈ ಶಾಂತಿಯನ್ನೇ ಉಪನಿಷತ್ತುಗಳು 'ಆನಂದ' ಎಂದು ಕರೆಯುವುವು.

ಮೇಲೆ ಸೂಚಿಸಿರುವ ಹಾಗೆ ಮಾನವನ ದೃಷ್ಟಿಯು ಕೇವಲ ಕಾಮತೃಪ್ತಿಯಿಂದಲೂ ಅಹಂಕಾರ ಮಮಕಾರಗಳಿಂದಲೂ ದೂರವಾಗಬೇಕು. ಆಗ ಮನಶ್ಶಾಂತಿ ಉಂಟಾಗುವುದು. ಈ ಕಾರಣದಿಂದಲೇ ಪುರುಷಾರ್ಥಗಳ ನಿರೂಪಣೆಯು ಕಾಮ ಮತ್ತು ಅರ್ಥಸಿದ್ಧಿಯ ಪ್ರಯತ್ನವು ನೀತಿ ನಿಯಮಗಳಿಗೆ ಒಳಪಡಬೇಕು. ಮತ್ತು ಅವುಗಳ ಬಂಧನದಿಂದ ವಿಮೋಚನೆಯನ್ನು ಹೊಂದುವ ಗುರಿಯನ್ನು ಇಟ್ಟಿರಬೇಕು, ಎಂಬುದಾಗಿದೆ.

ಈ ವಿಷಯವನ್ನು ಕುರಿತು ಕಠೋಪನಿಷತ್ತಿನ ಮಂತ್ರಗಳು ಹೀಗೆ ಹೇಳಿವೆ:

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥
ಯಸ್ತ್ವವಿಜ್ಞಾನವಾನ್ ಭವತ್ಯಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ।
ಯಸ್ತು ವಿಜ್ಞಾನವಾನ್ ಭವತಿ ಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥

ಕ. ಉ. 1-3-3, 4.

ಆತ್ಮನು ರಥಿಯೆಂದೂ, ಶರೀರವನ್ನು ರಥವೆಂದೂ, ಬುದ್ಧಿಯನ್ನು ಸಾರಥಿಯೆಂದೂ, ಮನಸ್ಸನ್ನು ಕಡಿವಾಣವೆಂದೂ ತಿಳಿ. ಇಂದ್ರಿಯಗಳನ್ನು ಕುದುರೆಗಳೆಂದು ಹೇಳುತ್ತಾರೆ. ವಿಷಯಗಳನ್ನು ಅವುಗಳ ಮಾರ್ಗಗಳೆಂದು ಹೇಳುತ್ತಾರೆ. ಶರೀರ, ಇಂದ್ರಿಯ, ಮನಸ್ಸು ಇವುಗಳಿಂದ ಕೂಡಿದ ಆತ್ಮನನ್ನು ಸಂಸಾರಿ ಎಂದು ವಿವೇಕಿಗಳು ಹೇಳುತ್ತಾರೆ. ಯಾವನು ಯಾವಾಗಲೂ ಅಯುಕ್ತವಾದ ಮನಸ್ಸಿನಿಂದ ಕೂಡಿದವನಾಗಿ, ಅನಿಪುಣನಾಗಿರುವನೋ ಅವನ ಇಂದ್ರಿಯಗಳು ಸಾರಥಿಯ ತುಂಟುಕುದುರೆಗಳಂತೆ ವಶವಾಗದೆ ಇರುವುವು. ಯಾವನು ಯಾವಾಗಲೂ ಯುಕ್ತವಾದ ಮನಸ್ಸಿನಿಂದ ಕೂಡಿದವನಾಗಿ ನಿಪುಣನಾಗಿರುವನೋ ಅವನ ಇಂದ್ರಿಯಗಳು ಸಾರಥಿಯ ಒಳ್ಳೆಯ ಕುದುರೆಗಳಂತೆ ವಶವಾಗಿರುವುವು.

ಮಾನವನು ಎರಡು ಮಟ್ಟದಲ್ಲಿ ವರ್ತಿಸುವನು. ಮೊದಲನೆಯ ಮಟ್ಟದ ವರ್ತನೆಯು ಪ್ರಾಣಿವರ್ಗಕ್ಕೆ ಸಂಬಂಧಿಸಿದುದು. ಇದು ದೈಹಿಕ ಆವಶ್ಯಕತೆಗಳಿಂದಲೂ ಮಾನಸಿಕ ರಾಗದ್ವೇಷಗಳಿಂದಲೂ ಕೂಡಿರುವುದು. ಎರಡನೆಯ ಮಟ್ಟವು ಬುದ್ಧಿಪೂರ್ವಕವಾದ ಮತ್ತು ವಿವೇಚನಾ ಪೂರ್ವಕವಾದ ವರ್ತನೆಯು. ಕ್ರಮೇಣ ಈ ಅಂತಸ್ತಿನ ವರ್ತನೆಯು ಆತ್ಮಸಾಕ್ಷಾತ್ಕಾರಕ್ಕೆ ಒಯ್ಯುತ್ತದೆ. ಮಾನವನ ಈ ದ್ವಿವಿಧ ಅಂಶವನ್ನು ಕುರಿತು ಪ್ರಶ್ನೋಪನಿಷತ್ತು ಈ ಸೂಚನೆಯನ್ನು ಕೊಟ್ಟಿದೆ.

'ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಮ್ ॥

ಪ್ರ. ಉ. 3. 7

ಈಗ ಒಂದರಿಂದ ಉದಾನ ವಾಯುವು ಊರ್ಧ್ವಗಾಮಿಯಾಗಿ ಪುಣ್ಯಲೋಕಕ್ಕೆ ಒಯ್ಯುವುದು. ಅಥವಾ ದುಷ್ಕಾರ್ಯಗಳಿಂದ ಪಾಪಲೋಕಗಳಿಗೂ, ಪಾಪಪುಣ್ಯಗಳಿಂದ ಮನುಷ್ಯಲೋಕಕ್ಕೂ ಒಯ್ಯುವುದು. ಮಾನವನಲ್ಲಿ ಈ ಎರಡು ಮಾರ್ಗಗಳೂ ಸಾಧ್ಯ.

ಮಾನವನು ಯಾವ ಮಾರ್ಗವನ್ನು ಅನುಸರಿಸಬೇಕೋ ಅದು ಅವನ ಕೈಯಲ್ಲಿದೆ. ಪ್ರಯತ್ನಪಟ್ಟು ಮೇಲ್ಮಟ್ಟದಲ್ಲಿ ಜೀವಿಸಬಹುದು. ಅಥವಾ ಸ್ವಾಭಾವಿಕ ಕೆಳಮಟ್ಟದಲ್ಲಿಯೇ ನರಳಬಹುದು.

ವೇದಗಳಲ್ಲಿಯೇ ಮಾನವನು ತನ್ನ ಜೀವವನ್ನು ಸಾರ್ಥಕಮಾಡಿಕೊಳ್ಳುವುದಕ್ಕೆ ನಾಲ್ಕು ಯೋಗಗಳನ್ನು ವಿವರಿಸಲಾಗಿದೆ. ಇವು ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗ.

ನಮ್ಮ ಜೀವನವು ಉನ್ನತ ಮಟ್ಟದಲ್ಲಿ ಇರಬೇಕಾದರೆ ಚಿತ್ತಶುದ್ಧಿಯು ಅತ್ಯಾವಶ್ಯಕ, ಗೀತೆಯಲ್ಲಿ ನಿರೂಪಿಸಿರುವ ಹಾಗೆ:

ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥

ಗೀತೆ 2-58

'ಆಮೆಯು ತನ್ನ ಅಂಗಗಳನ್ನು ಒಳಕ್ಕೆ ಎಳೆದುಕೊಳ್ಳುವಂತೆ ಈ ಜ್ಞಾನನಿಷ್ಠನಾದ ಯೋಗಿಯು ಯಾವಾಗ ಎಲ್ಲಾ ಕಡೆಗಳಿಂದಲೂ ಇಂದ್ರಿಯಗಳನ್ನು ಅವುಗಳ ವಿಷಯಗಳಿಂದ ಎಳೆದುಕೊಳ್ಳುವನೋ ಆಗ ಆತನ ಪ್ರಜ್ಞೆಯು ಸ್ಥಿರವಾಗಿರುವುದು.

ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಒಳಪಟ್ಟಿರುವ ಮನುಷ್ಯನು ಚಿತ್ತಶುದ್ಧಿಯನ್ನು ಪಡೆಯಲು ಅಸಾಧ್ಯ. ತನ್ನ ಇಂದ್ರಿಯಗಳ ಮೇಲಿನ ಹತೋಟಿಯನ್ನು ಪಡೆಯುವ ಹಾಗೆ ಎರಡು-ಮೂರು ವರ್ಷದ ಮಗುವಿಗೂ ಸಹ ತಾಯಿತಂದೆಗಳು ತರಬೇತನ್ನು ಕೊಡುವರು. ಆದರೆ ಇಂದ್ರಿಯಗಳ ಮೇಲಿನ ಹತೋಟಿಯನ್ನು ಪಡೆಯುವುದು ಬಹಳ ಕಷ್ಟ. ಆದುದರಿಂದ ಈ ಪ್ರಯತ್ನವನ್ನು ಕ್ರಮೇಣ ಬುದ್ಧಿಪೂರ್ವಕವಾಗಿ ಮನುಷ್ಯನು ಮಾಡಬೇಕು. ಇಲ್ಲದಿದ್ದರೆ ಅವನ ಜೀವನವು ಪ್ರಾಣಿಜೀವನದ ಮಟ್ಟದಲ್ಲಿಯೇ ಉಳಿಯುವುದು.

ಎರಡನೆಯದಾಗಿ ಮನುಷ್ಯನು ತನ್ನ ರಾಗ ದ್ವೇಷ ಮುಂತಾದ ಭಾವೋದ್ರೇಕಗಳ ಮೇಲೆ ಹತೋಟಿಯನ್ನು ಪಡೆಯಬೇಕು. ಇದನ್ನು ಕುರಿತು ಗೀತೆಯಲ್ಲಿ ಹೀಗೆ ವಿವರಿಸಲಾಗಿದೆ:

ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥

ಗೀತೆ 2-56.

ದುಃಖದಲ್ಲಿ ಉದ್ವೇಗವಿಲ್ಲದ ಮನಸ್ಸುಳ್ಳವನೂ, ಸುಖದಲ್ಲಿ ಆಸೆ ಇಲ್ಲದವನೂ, ಆಸಕ್ತಿ–ಭಯ–ಕ್ರೋಧಗಳಿಲ್ಲದವನೂ ಆದ ಮುನಿಯು ಸ್ಥಿತಪ್ರಜ್ಞನೆಂದು ಹೇಳಲ್ಪಡುವನು.

ಇಂದ್ರಿಯಗಳ ಮೇಲಿನ ನಿಗ್ರಹವು ಸಮರ್ಪಕವಾಗಿಲ್ಲದಿದ್ದರೆ, ಭಾವೋದ್ರೇಕಗಳ ಅಧೀನದಲ್ಲಿ ಒಬ್ಬ ವ್ಯಕ್ತಿಯು ಇದ್ದರೆ. ಅವನ ಜೀವನವು ಯಾವ ವಿಧವಾಗಿರುವುದೆಂಬುದನ್ನು ಗೀತೆಯು ಈ ಮೂರು ಶ್ಲೋಕಗಳಲ್ಲಿ ನಿರೂಪಿಸಿರುವುದು:

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥

ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿ ವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥

ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥

ಗೀತೆ 2–62, 63, 64

'ವಿಷಯಗಳನ್ನು ಚಿಂತಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಆಸಕ್ತಿಯು ಹುಟ್ಟುತ್ತದೆ; ಆಸಕ್ತಿಯಿಂದ ಕಾಮವು ಹುಟ್ಟುತ್ತದೆ; ಕಾಮದಿಂದ ಕ್ರೋಧವು ಹುಟ್ಟುತ್ತದೆ; ಕ್ರೋಧದಿಂದ ಸಂಮೋಹವು ಉಂಟಾಗುತ್ತದೆ; ಸಂಮೋಹದಿಂದ ಸ್ಮೃತಿಯು ಭ್ರಮೆಯುಂಟಾಗುತ್ತದೆ; ಸ್ಮೃತಿ ಭ್ರಮೆಯಿಂದ ಬುದ್ಧಿ ನಾಶವಾಗುತ್ತದೆ; ಬುದ್ಧಿನಾಶದಿಂದ (ಪುರುಷನು) ನಾಶವಾಗುತ್ತಾನೆ. ಆದರೆ ರಾಗದ್ವೇಷಗಳಿಂದ ಬಿಡುಗಡೆಯನ್ನು ಹೊಂದಿ ತನ್ನ ವಶದಲ್ಲಿರುವ ಇಂದ್ರಿಯಗಳಿಂದ ವಿಷಯಗಳನ್ನು ಅನುಭವಿಸುತ್ತಿರುವ ಸಂಯತಚಿತ್ತವುಳ್ಳ ಮನುಷ್ಯನು ಪ್ರಸನ್ನತೆಯನ್ನು ಹೊಂದುವನು.

ಮತ್ತೊಂದು ಅಂಶವೇನೆಂದರೆ ಗೀತೆಯಲ್ಲಿ ಹೇಳಿರುವ ಹಾಗೆ ಪ್ರತಿಯೊಬ್ಬ ಮನುಷ್ಯನೂ ಪ್ರಕೃತಿಯಿಂದ ಹುಟ್ಟಿದ ಗುಣಗಳನ್ನು ಅನುಸರಿಸಿ ಪ್ರತಿ ಕ್ಷಣವೂ ಯಾವುದಾದರೊಂದು ಕರ್ಮ (ಕಾರ್ಯಕಲಾಪ) ವನ್ನು ಮಾಡಬೇಕಾಗಿರುವುದು. ಯಾವ ಕೆಲಸವನ್ನು ಮಾಡಿದರೂ ಫಲಾಪೇಕ್ಷೆಯು ಇರುವುದು. ಆದರೆ ಚಿತ್ತಶುದ್ಧಿಯನ್ನು ಪಡೆಯಬೇಕಾದರೆ ಈ ಫಲದಲ್ಲಿರುವ ಆಸಕ್ತಿಯನ್ನು ಬಿಡಬೇಕು. ಇದನ್ನು ಗೀತೆಯು ತನ್ನದೇ ಆದ ಶೈಲಿಯಲ್ಲಿ ಹೀಗೆ ನಿರೂಪಿಸಿರುವುದು.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥

ಗೀತೆ 2–47.

"ಭಕ್ತರಲ್ಲಿ ಜಾತಿ, ವಿದ್ಯಾ, ಕುಲ, ರೂಪ, ಧನ ಕ್ರಿಯಾದಿ ಭೇದಗಳಿಲ್ಲ."

ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗಗಳ ಗುರಿಯು ಒಂದೇ- ಆತ್ಮ ಸಾಕ್ಷಾತ್ಕಾರ ಅಥವಾ ಮೋಕ್ಷ. ಈ ಗುರಿಯನ್ನು ಮುಟ್ಟಲು ಇವು ನಾಲ್ಕು ಸಾಧನೆಗಳು. ಈ ಸಾಧನೆಗಳು ವ್ಯಕ್ತಿಯ ಸ್ವಾಭಾವಿಕ ಗುಣಗಳನ್ನು ಅವಲಂಬಿಸುವುವು. ಜ್ಞಾನಮಾರ್ಗವು ವಿಚಾರಮಾರ್ಗ. ಇದರಲ್ಲಿ ಕೆಲವರಿಗೆ ಮಾತ್ರ ಆಸಕ್ತಿಯಿರುವುದು. ರಾಜಯೋಗವು ಚಿತ್ತವೃತ್ತಿಯ ನಿರೋಧದ ಮೇಲೆ ಆಧಾರಗೊಂಡಿರುವುದು. ಪ್ರತಿಕ್ಷಣವೂ ಅನೇಕ ಯೋಚನೆಗಳು ಭಾವನೆಗಳು ನಮ್ಮ ಮನಸ್ಸಿನಲ್ಲಿ ಸಮುದ್ರದ ಅಲೆಗಳ ಹಾಗೆ ಬಿಡುವಿಲ್ಲದೆ ಉತ್ಪನ್ನವಾಗುವುವು. ಆ ಆಲೋಚನೆಗಳನ್ನು ಭಾವನೆಗಳನ್ನು ನಿಗ್ರಹಿಸಿ ಧ್ಯಾನ ಮಾಡಬೇಕಾಗುವುದು. ಇದು ಕೆಲವರಿಗೆ ಮಾತ್ರ ಸಾಧ್ಯ. ಭಕ್ತಿಯೋಗವು ಹೆಚ್ಚಾದ ಪ್ರೇಮವಿರುವವರಿಗೆ ಮಾತ್ರ ಸಾಧ್ಯ. ನಾರದ ಭಕ್ತಿ ಸೂತ್ರದಲ್ಲಿ ಹೇಳಿರುವ ಹಾಗೆ—

ಸಾತ್ವಸ್ಮಿನ್ ಪರ(ಮ) ಪ್ರೇಮರೂಪಾ ।
ತಸ್ಮಿನ್ನನನ್ಯತಾ ತದ್ವಿರೋಧಿಷು ಉದಾಸೀನತಾ ।
ಅನ್ಯಾಶ್ರಯಾಣಾಂ ತ್ಯಾಗೋಽನನ್ಯತಾ ॥

ನಾ.ಭಾ.ಸೂ. –2, 9, 10

'ಅದು (ಭಕ್ತಿಯು) ಪರಮ ಪ್ರೇಮರೂಪವಾದುದು. ಅವನನ್ನು (ಭಗವಂತನನ್ನು) ಅನನ್ಯ ಭಾವದಿಂದ ನೆನೆಯುವುದು. ಯಾವುದು ಅದಕ್ಕೆ ಆತಂಕ ತರುವುದೋ ಅದನ್ನೆಲ್ಲಾ ಉದಾಸೀನ ಭಾವದಿಂದ ನೋಡುವುದು. ಅನನ್ಯ ಭಕ್ತಿ ಎಂದರೆ (ಭಗವಂತನಲ್ಲದೆ) ಇತರ ಆಶ್ರಯಗಳನ್ನೆಲ್ಲಾ ತ್ಯಜಿಸುವುದು.

ಜ್ಞಾನಯೋಗವು ವಿವೇಚನಾಶಕ್ತಿಯನ್ನು ಒಳಗೊಂಡಿದ್ದರೆ ರಾಜಯೋಗ ಅಂತರ ಗಮನವನ್ನು ಒಳಗೊಂಡಿರುವುದು. ಭಕ್ತಿಯೋಗವು ಪ್ರೇಮವನ್ನು ಒಳಗೊಂಡಿರುವುದು. ಕರ್ಮಯೋಗವು ಯಾರು ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರವಾಗಿರುವರೋ ಅವರಲ್ಲಿ ರೂಪುಗೊಳ್ಳುವುದು. ಈ ರೀತಿಯಾಗಿಯೇ ಈ ನಾಲ್ಕು ಯೋಗಮಾರ್ಗಗಳು ವೈಯಕ್ತಿಕ ವ್ಯತ್ಯಾಸಗಳ ಆಧಾರದ ಮೇಲೆ ಇರುವುವು. ಜ್ಞಾನನಿಷ್ಠನು ಜ್ಞಾನಮಾರ್ಗವನ್ನು ಅವಲಂಬಿಸುವನು; ಧ್ಯಾನನಿಷ್ಠನು ರಾಜಯೋಗವನ್ನು ಅವಲಂಬಿಸುವನು; ಪ್ರೇಮನಿಷ್ಠನು ಭಕ್ತಿಯೋಗವನ್ನು ಅವಲಂಬಿಸುವನು; ಕರ್ಮನಿಷ್ಠನು ಕರ್ಮಯೋಗವನ್ನು ಅವಲಂಬಿಸುವನು. ಆದರೆ ಇವುಗಳ ಅಂತಿಮ ಗುರಿ ಮಾತ್ರ ಒಂದೇ—ಆತ್ಮಸಾಕ್ಷಾತ್ಕಾರ ಅಥವಾ ಮೋಕ್ಷ.

ಈ ನಾಲ್ಕು ಯೋಗಗಳಲ್ಲಿಯೂ ಮೊದಲಿನ ಹಂತವು ಚಿತ್ತಶುದ್ಧಿ. ಇಂದ್ರಿಯ ವ್ಯಾಪಾರಗಳ ಮೇಲಿನ ಹತೋಟಿಯು ಪ್ರತಿಯೊಂದು ಮಾರ್ಗಕ್ಕೂ

ವಶ್ಯಕ. ಹಾಗೆಯೇ ರಾಗದ್ವೇಷಾದಿ ಭಾವೋದ್ರೇಕಗಳ ಮೇಲಿನ ಹತೋಟಿಯೂ ತ್ಯವಶ್ಯಕ, ಮೂಡನೆಯದಾಗಿ ತನ್ನ ಕೆಲಸ ಕಾರ್ಯಗಳಲ್ಲೂ, ಇತರ ವ್ಯಕ್ತಿಗಳಲ್ಲೂ ನಾಸಕ್ತಿ ತೋರಿಸುವುದು, ಅಂದರೆ ಮುಖ್ಯವಾಗಿ ಪ್ರಾಣಿವರ್ಗಕ್ಕೂ ಮಾನವ ರ್ಗಕ್ಕೂ ಸಾಮಾನ್ಯವಾಗಿರುವ ಕಾಮತೃಷ್ಣೆ ವಿಷಯಾಭಿಲಾಷೆ, ಕಾಮಾಸಕ್ತಿ ಬಂದ ದೂರವಾಗಬೇಕು ಮತ್ತು ಅರ್ಥಕ್ಕೆ ಸಂಬಂಧಪಟ್ಟ ಅಹಂಭಾವ, ಸ್ವಾರ್ಥತೆ ಬಂತಾದವುಗಳನ್ನು ಗೆಲ್ಲಬೇಕು. ಈ ಅಂಶಗಳು ಚಿತ್ತ ಶುದ್ಧಿಗೆ ಸಂಬಂಧಪಟ ವುವು.

ಚಿತ್ತ ಶುದ್ಧಿಯನ್ನು ಹೊಂದಿದ ಮೇಲೆ ಮುಂದಿನ ಹೆಜ್ಜೆ ಚಿಂತನ ನವಾ ಮನನ ಅಥವಾ ಧ್ಯಾನವನ್ನು ಒಳಗೊಂಡಿರುವುದು. ಯಾವ ವ್ಯಕ್ತಿಯು ಂತರವಾಗಿ ಒಂದು ಭಾವನೆಯನ್ನು ಮನಸ್ಸಿನಲ್ಲಿ ಸ್ಥಿರವಾಗಿ ಇಡುವುದಕ್ಕೆ ಶಕ್ತಿ ಬವನೋ ಆಗ ಅವನಿಗೆ ಧ್ಯಾನಿಸಲು ಸಾಧ್ಯ.

ಗೀತೆಯಲ್ಲಿ ಹೇಳಿರುವ ಹಾಗೆ—

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥
ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಂ ॥
ಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ
ಪ್ರವಿಶಂತಿ ಯದ್ವತ್ ।
ತ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ
ನ ಕಾಮ ಕಾಮೀ ॥

ಗೀತೆ, 2–65, 66, 70

'ಚಿತ್ತದ ಪ್ರಸನ್ನತೆಯುಂಟಾದರೆ ಇವನ ಸಮಸ್ತ ದುಃಖಗಳ ನಾಶವು ಟಾಗುತ್ತದೆ. ಏಕೆಂದರೆ ಶುದ್ಧ ಚಿತ್ತವುಳ್ಳ ಮನುಷ್ಯನ ಬುದ್ಧಿಯು ಶೀಘ್ರ ಸ್ಥಿರವಾಗುವುದು.'

'ಅಯುಕ್ತನಾದವನಿಗೆ ಬುದ್ಧಿಯು ಇರುವುದಿಲ್ಲ. ಅಯುಕ್ತನಾದವನಿಗೆ ವನೆಯು ಇಲ್ಲ; ಭಾವನೆಯನ್ನು ಮಾಡದವನಿಗೆ ಶಾಂತಿಯು ಇಲ್ಲ. ಶಾಂತಿ ದವನಿಗೆ ಸುಖವೆಲ್ಲಿ?'

'ಪೂರ್ಣವಾಗಿಯೂ ಅಚಲವಾಗಿಯೂ ಇರುವ ಸಮುದ್ರವನ್ನು (ನದಿ) ನೀರುಗಳು ಹೇಗೆ ಪ್ರವೇಶಿಸುವುವೋ ಹಾಗೆಯೇ ಎಲ್ಲಾ ಕಾಮಗಳು ವನನ್ನು ಪ್ರವೇಶಿಸುವುವೋ ಹಾಗೆಯೇ ಅವನು ಶಾಂತಿಯನ್ನು ಹೊಂದು ನೆ; ಕಾಮಗಳನ್ನು ಬಯಸುವವನು ಹೊಂದಲಾರನು.'

ಆದುದರಿಂದ ಚಿತ್ತಶುದ್ಧಿಯನ್ನು ಪಡೆದು ಮನನ ಧ್ಯಾನಗಳನ್ನು ಅಭ್ಯಾಸ ದಲ್ಲಿ ಇಟ್ಟುಕೊಂಡಿರುವ ವ್ಯಕ್ತಿಯು ಮನಶ್ಶಾಂತಿಯನ್ನು ಪಡೆಯುವನು. ಆದರೂ ತನ್ನ ಕೆಲಸ ಕಾರ್ಯಗಳನ್ನು ಅನಾಸಕ್ತಿಯಿಂದ ಮುಂದುವರಿಸುವನು. ಮುಂಡಕೋ ಪನಿಷತ್ತಿನಲ್ಲಿ ಸೂಚಿಸಿರುವ ಹಾಗೆ ಪ್ರತಿಯೊಬ್ಬ ಮಾನವನಲ್ಲಿಯೂ ಎರಡು ಅಂಶಗಳಿರುವುವು—

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವ -ಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕ ಶೀತಿ ॥

ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ । ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ ॥

ಮುಂ.ಉ. 3-1, 2

'ಸರ್ವದಾ ಜೊತೆಯಲ್ಲಿರುವ ಸಖರಾದ ಎರಡು ಪಕ್ಷಿಗಳು ಒಂದೇ ವೃಕ್ಷವನ್ನು ಆಲಿಂಗಿಸಿಕೊಂಡಿವೆ. ಅವೆರಡರಲ್ಲಿ ಒಂದು ಸವಿಯಾದ ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೆ ನೋಡುತ್ತಿದೆ. ಪುರುಷನೂ ಆ ಒಂದೇ ವೃಕ್ಷ ... ದಲ್ಲಿ ಮಗ್ನನಾಗಿ ಮೋಹಗೊಂಡು ದೈನ್ಯದಿಂದ ಶೋಕಿಸುತ್ತಿರುವನು. ಸೇವಿಸ ... ಲ್ಪಟ್ಟವನೂ, ತನಗಿಂತ ವಿಲಕ್ಷಣನೂ ಆದ ಈತನನ್ನು ಮತ್ತು ಇವನ ಮಹಿಮೆ ಯನ್ನು ಹೀಗೆಂದು ಯಾವಾಗ ನೋಡುತ್ತಾನೆಯೋ ಆಗ ಶೋಕವಿಲ್ಲದವನಾಗು ವನು.'

ಈ ಎರಡು ಪಕ್ಷಿಗಳ ಸಾದೃಶ್ಯವು ಶ್ವೇತಾಶ್ವತರ ಉಪನಿಷತ್ತಿನಲ್ಲೂ ಸ... ಹೇಳಲಾಗಿದೆ. ಇದು ಪ್ರತಿಯೊಬ್ಬ ವ್ಯಕ್ತಿಯ ಅನುಭವದ ವಿಷಯ. ಯಾವುದೋ ಒಂದು ಕೆಲಸವನ್ನು ಮಾಡಬೇಕೆಂಬ ಇಚ್ಛೆಯು ಬಂದಾಗ ನಮ್ಮ ಬುದ್ಧಿ ಅಥವಾ ಅಂತಃಸಾಕ್ಷಿಯು ಆ ಕೆಲಸವು ಅಸಮರ್ಪಕವೆಂಬುದನ್ನು ಸೂಚಿಸುವುದು, ವ್ಯ... ತ್ವವು ಸರಿಯಾಗಿ ಬೆಳೆದರೆ ಗೀತೆಯಲ್ಲಿ ನಿರೂಪಿಸಿರುವ ಹಾಗೆ ಆತನ ಕೆಲ... ಕಾರ್ಯಗಳು ಪ್ರಕೃತಿ ನಿಯಮಗಳನ್ನು ಅನುಸರಿಸಿ ಮುಂದುವರೆಯುವುವು. ... ಈ ಉಪನಿಷತ್ತುಗಳಲ್ಲಿ ಹೇಳಿರುವ ಎರಡು ಪಕ್ಷಿಗಳ ಸಾದೃಶ್ಯವು ನಮಗೆ ವಿ... ವಾಗುವುದು.

ಯೋಗವೆಂದರೆ ಇಂದ್ರಿಯ, ಮನಸ್ಸು, ಬುದ್ಧಿಗಳನ್ನು ಮೀರಿ ಒಂ... ಉನ್ನತ ಮಟ್ಟದಲ್ಲಿ ಪ್ರಜ್ಞೆಯನ್ನು ಇರಿಸುವುದು. ಆಗ ಆ ವ್ಯಕ್ತಿಯು ... ಕಾರ್ಯಗಳೆಲ್ಲವೂ ಜ್ಞಾನಪೂರ್ವಕವಾಗಿಯೂ ಮತ್ತು ರಾಗ ದ್ವೇಷರಹಿತವಾಗಿಯ...

ವಸ್ತು ಸ್ಥಿತಿಯ ಆಧಾರಗಳ ಮೇಲೂ ಇರುವುವು. ಇದನ್ನು ಕುರಿತು ಗೀತೆಯಲ್ಲಿ ಹೀಗೆ ಹೇಳಿದೆ.

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥
ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥

ಗೀತೆ, 3–42,4

ಇಂದ್ರಿಯಗಳು ಹೆಚ್ಚಿನವು ಎಂದು ಹೇಳುವರು. ಇಂದ್ರಿಯಗಳಿಗಿಂತ ಮನಸ್ಸು ಹೆಚ್ಚಿನದು, ಮನಸ್ಸಿಗಿಂತಲೂ ಬುದ್ಧಿಯು ಹೆಚ್ಚಿನದು. ಆದರೆ ಯಾವನು ಬುದ್ಧಿಗಿಂತ ಹೆಚ್ಚಿನವನೋ ಅವನೇ ಆತ್ಮ, ಎಲೈ ಅರ್ಜುನ ಈ ಪ್ರಕಾರವಾಗಿ ಬುದ್ಧಿಗಿಂತ ಹೆಚ್ಚಿನದನ್ನು ತಿಳಿದುಕೊಂಡು ಮನಸ್ಸಿನಿಂದ ಮನಸ್ಸನ್ನು ನಿಲ್ಲಿಸಿ ಕಾಮರೂಪವೂ ದುರ್ಜೇಯವೂ ಆದ ಶತ್ರುವನ್ನು ನಾಶಮಾಡು.

ಯೋಗವು ಈ ಅಂತಿಮ ಗುರಿಯನ್ನು ಸೂಚಿಸುವುದೊಂದೇ ಅಲ್ಲದೆ ಇದನ್ನು ಮುಟ್ಟಿ ಅನುಸರಿಸಬೇಕಾದ ಕ್ರಮವನ್ನೂ ಸಹ, ಅನುಭವದ ಆಧಾರದ ಮೇಲೆ ವಿವರಿಸಿರುವುದು. ಅಂದರೆ, ಪ್ರತಿಯೊಬ್ಬ ಮನುಷ್ಯನೂ ಒಂದು ಶಿಸ್ತಿನಿಂದ ತನ್ನ ಜೀವನವನ್ನು ನಡೆಸಿಕೊಂಡು ಶ್ರದ್ಧೆಯಿಂದ ಪ್ರಯತ್ನಪಟ್ಟರೆ ಯೋಗದ ಅಂತಿಮಗುರಿಯಾದ ಸತತವಾಗಿರುವ ಮನಶ್ಶಾಂತಿಯನ್ನು ಪಡೆಯಬಹುದು. ಇದು ಕಷ್ಟ. ಆದರೆ ಗೀತೆಯಲ್ಲಿ ಮತ್ತು ಪಾತಂಜಲಯೋಗಸೂತ್ರದಲ್ಲಿ ಸೂಚಿಸಿರುವ ಹಾಗೆ ಇದು ಸರ್ವರಿಗೂ ಸಾಧ್ಯ. ಮೇಲೆ ಹೇಳಿರುವ ಹಾಗೆ ಈ ನಾಲ್ಕು ವಿಧವಾದ ಯೋಗಮಾರ್ಗಗಳಿಗೆ ಬಣ್ಣ, ಭಾಷೆ, ಕುಲ, ದೇಶ, ಲಿಂಗ ಮುಂತಾದವುಗಳ ಅಡ್ಡಿಯಿಲ್ಲ. ಈ ನಾಲ್ಕು ಯೋಗಗಳು ಸಮಸ್ತರಿಗೂ ಸರ್ವಕಾಲಕ್ಕೂ ಅನ್ವಯಿಸುವ ಮಾರ್ಗಗಳು. ಆದುದರಿಂದಲೇ ಇಂದು ಈ ಮಾರ್ಗಗಳನ್ನು ಪಾಶ್ಚಾತ್ಯ ದೇಶಗಳಲ್ಲಿ ಉಪಯೋಗಿಸಲು ದೊಡ್ಡ ಪ್ರಯತ್ನಗಳು ನಡೆಯುತ್ತಿರುವುವು

ಗೀತೆಯಲ್ಲಿ ಹೇಳಿರುವ ಹಾಗೆ—

ಅಸಂಶಯಂ ಮಹಾಬಾಹೋ ಮನೋದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥
ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।
ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ ॥

ಗೀತೆ, 6–35, 36.

ಎಲೈ ಮಹಾಬಾಹುವೇ ಮನಸ್ಸು ದುರ್ನಿಗ್ರಹವಾದದ್ದು ಮತ್ತು ಚಂಚಲವಾದದ್ದು ಎಂಬುದು ನಿಸ್ಸಂಶಯವು; ಎಲೈ ಅರ್ಜುನ, ಅಭ್ಯಾಸದಿಂದಲೂ ಮತ್ತು

ವೈರಾಗ್ಯದಿಂದಲೂ ಇದನ್ನು ನಿಗ್ರಹಿಸಬಹುದು. ಮನಸ್ಸನ್ನು ನಿಗ್ರಹಿಸದವನಿಗೆ ಯೋಗವು ದುಷ್ಪ್ರಾಪ್ಯವೆಂದು ನನ್ನ ಅಭಿಪ್ರಾಯವು; ಆದರೆ ಯತ್ನಶೀಲನಾದ ಜಿತೇಂದ್ರಿಯನಿಗೆ (ಮೇಲೆ ಹೇಳಿರುವ ಉಪಾಯದಿಂದ) ಇದನ್ನು ಹೊಂದಲು ಸಾಧ್ಯವು.

ಆದುದರಿಂದ ಒಬ್ಬ ವ್ಯಕ್ತಿಯ ಪ್ರಯತ್ನವು ಸಫಲಗೊಳ್ಳದೆ ಹೋದರೆ ನಿರಾಶೆಯಿಂದ ಅದನ್ನು ಕೈಬಿಡಬಾರದು. ಇದೇ ವೈರಾಗ್ಯ, ಮತ್ತೆ ಮತ್ತೆ ಪ್ರಯತ್ನಿಸುವುದು ಅಭ್ಯಾಸ. ಈ ಎರಡು ನಿಯಮಗಳನ್ನು ಅನುಸರಿಸಿದರೆ ಯೋಗ ಸಿದ್ಧಿಯೇ; ಅಲ್ಲ ಮಾನವನ ಯಾವ ಪ್ರಯತ್ನವಾದರೂ ಫಲಕಾರಿಯಾಗುವುದಿಲ್ಲ.

ಗೀತೆಯಲ್ಲಿ ವಿವರಿಸಿರುವ ಹಾಗೆ ಲೋಕದಲ್ಲಿರುವ ಸಮಸ್ತ ವಸ್ತುಗಳೂ ಮತ್ತು ವರ್ತನೆಗೆ ಸಂಬಂಧಪಟ್ಟ ಸಮಸ್ತ ಅಂಶಗಳೂ ಮೂರು ಗುಣಗಳನ್ನು ಒಳಗೊಂಡಿರುವುವು. ಇವು ಸತ್ವ, ರಜಸ್, ತಮೋಗುಣಗಳು. ಹುಟ್ಟಿದ ಮಗುವಿನ ವರ್ತನೆಯು ತಮೋಗುಣದಿಂದ ಹೆಚ್ಚಾಗಿ ಕೂಡಿದ್ದು, ರಜಸ್ ಸತ್ವ ಗುಣಗಳು ಅಲ್ಪ ಪ್ರಮಾಣದಲ್ಲಿರುವುವು. ಕ್ರಮೇಣ ತಾಯಿ ತಂದೆಗಳ ಪೋಷಣೆಯಿಂದಲೂ ಸ್ವಪ್ರಯತ್ನದಿಂದಲೂ ವ್ಯಕ್ತಿಯು ತನ್ನ ವರ್ತನೆಯಿಂದ ಸಾತ್ವಿಕ ಅಂಶವು ರಜಸ್ ಮತ್ತು ತಮೋಗುಣಗಳಿಗಿಂತ ಹೆಚ್ಚಾಗಿರುವಂತೆ ಮಾಡಿಕೊಳ್ಳಬಹುದು. ಇದೇ ಯೋಗಾಭ್ಯಾಸದ ಗುರಿ. ಸಾಮಾನ್ಯವಾಗಿ ವ್ಯಕ್ತಿಯು ಎಷ್ಟೆ ವಯಸ್ಸು ಬಂದರೂ ಕಾಮಾರ್ಥಗಳ ಸಫಲತೆಗಾಗಿ ದುಡಿದು ಪ್ರಾಣಿವರ್ಗಕ್ಕೆ ಸಮನಾದ ವರ್ತನೆಯನ್ನು ವ್ಯಕ್ತಪಡಿಸುವನು ವಯಸ್ಸಿಗೂ, ವಂಶಕ್ಕೂ, ವಿದ್ಯೆಗೂ, ಆತ್ಮವಿಶ್ವಾಸಕ್ಕೂ ಯಾವ ಸಂಬಂಧವೂ ಇಲ್ಲ. ಎಷ್ಟೆ ವಯಸ್ಸಾದರೂ, ಯಾವ ಕುಲದಲ್ಲಿ ಹುಟ್ಟಿದರೂ ಯಾವ ಮಟ್ಟದ ವಿದ್ಯಾಭ್ಯಾಸವನ್ನು ಯಾವ ಯಾವ ಭಾಷೆಯಲ್ಲಿ ಮಾಡಿದರೂ ಆ ವ್ಯಕ್ತಿಯ ವರ್ತನೆಯು ಪ್ರಾಣಿಮಟ್ಟದಿಂದ ಮತ್ತು ಮಗುವಿನ ಮಟ್ಟದಿಂದ ದೂರವಾಗಿರದೇ ಇರಬಹುದು. ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿ ಮತ್ತು ಬಾಲಯೋಗಿ ಈ ಮೂರು ವ್ಯಕ್ತಿಗಳ ಆತ್ಮವಿಕಾಸ ಮತ್ತು ಅತ್ಯುನ್ನತ ಅನುಭವಗಳು, ಮೇಲೆ ಹೇಳಿದುದನ್ನು ಸ್ಥಿರಪಡಿಸುವುವು. ಆತ್ಮವಿಕಾಸ ಮತ್ತು ಆತ್ಮಸಾಕ್ಷಾತ್ಕರಗಳು ಒಬ್ಬ ವ್ಯಕ್ತಿಯ ಪ್ರಯತ್ನ ಪೂರ್ವಕ ಅಂಶಗಳನ್ನು ಒಳಗೊಂಡಿರುವುವೇ ಹೊರತು ಅವನ ಜಾತಿ, ಮತ, ವಿದ್ಯೆ, ವಯಸ್ಸುಗಳನ್ನಲ್ಲ.

ಈ ಪ್ರಯತ್ನವನ್ನು ಯಾವ ವಿಧವಾಗಿ ಮಾಡಬೇಕೆಂಬುದನ್ನು ಗೀತೆಯ ಕಡೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅನುಬಂಧಂ ಕ್ಷಯಂ ಹಿಂಸಾಮನಪೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ ಯತ್ತತ್ತಾಮಸಮುಚ್ಯತೇ ॥

ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಮ್ ॥
ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ ॥

ಗೀತೆ, 18–25, 24,23.

'ಅನುಬಂಧವನ್ನೂ, ಕ್ಷಯವನ್ನೂ, ಹಿಂಸೆಯನ್ನೂ, ಪೌರುಷವನ್ನೂ ವಿಚಾರಿಸದರೆ ಯಾವ ಕರ್ಮವು ಮೋಹದಿಂದ ಪ್ರಾರಂಭಿಸಲ್ಪಡುತ್ತದೆಯೋ ಅದು ತಾಮಸವೆಂದು ಹೇಳಲ್ಪಡುತ್ತದೆ. ಆದರೆ ಫಲಾಪೇಕ್ಷೆಯುಳ್ಳವನು ಅಥವಾ ಅಹಂಕಾರಿಯು ಬಹುಆಯಾಸದಿಂದ ಕೂಡಿರುವ ಯಾವಕರ್ಮಗಳನ್ನು ಮಾಡುತ್ತಾನೆಯೋ ಅದು ರಾಜಸವೆಂದು ಹೇಳಲ್ಪಟ್ಟಿದೆ; ನಿತ್ಯವಾದ ಸಂಗರಹಿತನಾದ ಫಲಾಪೇಕ್ಷೆಯಿಲ್ಲದವನಿಂದ ರಾಗದ್ವೇಷಗಳಿಲ್ಲದೆ ಮಾಡಲ್ಪಟ್ಟ ಯಾವ ಕರ್ಮವಿದೆಯೋ ಅದು ಸಾತ್ತ್ವಿಕವೆಂದು ಹೇಳಲ್ಪಡುತ್ತದೆ.

ಈ ವಿಧವಾಗಿ ಮನುಷ್ಯನು ಕೇವಲ ವಿಚಾರರಹಿತ ಮೋಹಪೂರ್ವಕವಾದ ಮತ್ತು ಹಿಂಸೆಯನ್ನು ಒಳಗೊಂಡ ಕೆಲಸಗಳನ್ನು ಬಿಟ್ಟು ಫಲಾಪೇಕ್ಷೆಯಿಲ್ಲದವನಾಗಿಯೂ, ರಾಗದ್ವೇಷಗಳಿಗೆ ಒಳಪಡದೆ ಕರ್ತವ್ಯನಿಷ್ಠನಾಗಿ ತನ್ನ ಕೆಲಸವನ್ನು ಬುದ್ಧಿಪೂರ್ವಕವಾಗಿಯೂ, ಪ್ರಯತ್ನಪೂರ್ವಕವಾಗಿಯೂ ಮಾಡುವುದನ್ನು ಕಲಿಯಬೇಕು. ಹೀಗೆ ಮಾಡಿದರೆ ಆತನ ಮನಸ್ಸಿನಲ್ಲಿಯೂ ಸಹ ಒಂದು ಪರಿವರ್ತನೆಯು ಉಂಟಾಗುವುದು. ಈ ಪರಿವರ್ತನೆಯನ್ನು ಇದೇ ಹದಿನೆಂಟನೆಯ ಅಧ್ಯಾಯದ 26, 27 ಮತ್ತು 28 ನೇ ಶ್ಲೋಕಗಳಲ್ಲಿ ಸೂಚಿಸಲಾಗಿದೆ.

ಹೀಗೆ ಬುದ್ಧಿಪೂರ್ವಕವಾಗಿ ಪ್ರಯತ್ನಪಟ್ಟು ತನ್ನ ವರ್ತನೆಯನ್ನು ತಾಮಸಿಕ ಮಟ್ಟದಿಂದ ಸಾತ್ವಿಕ ಮಟ್ಟಕ್ಕೆ ತೆಗೆದುಕೊಂಡು ಹೋದರೆ ಇದರಿಂದ ಉಂಟಾಗುವ ಪರಿಣಾಮವನ್ನು ಗೀತೆಯಲ್ಲಿ ಹೀಗೆ ವಿವರಿಸಲಾಗಿದೆ.

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ।
ಶಬ್ದಾದೀನ್ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥
ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗ ಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥
ಅಹಂಕಾರಂ ಬಲಂ ದರ್ಪಂ ಕಾಮಕ್ರೋಧಂ ಪರಿಗ್ರಹಮ್ ।
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥

ಗೀತೆ. 18–51,52,53

ವಿಶುದ್ಧವಾದ ಬುದ್ಧಿಯಿಂದ ಕೂಡಿದವನಾಗಿ, ಧೃತಿಯಿಂದ ತನ್ನನ್ನು ನಿಗ್ರಹಿಸಿ ಶಬ್ದಾದಿ ವಿಷಯಗಳನ್ನು ಬಿಟ್ಟು ರಾಗದ್ವೇಷಗಳನ್ನು ನಿರಾಕರಿಸಿ ನಿರ್ಜನ ಪ್ರದೇಶಗಳಲ್ಲಿ ವಾಸಮಾಡುವವನಾಗಿ, ಮಿತಾಹಾರಿಯಾಗಿ ವಾಕ್, ಶರೀರ, ಮನಸ್ಸುಗಳನ್ನು ನಿಗ್ರಹಿಸಿದವನಾಗಿ, ಯಾವಾಗಲೂ ಧ್ಯಾನಯೋಗ ಪರಾಯಣನಾಗಿ, ವೈರಾಗ್ಯವನ್ನು ಆಶ್ರಯಿಸಿದವನಾಗಿ, ಅಹಂಕಾರ ಬಲ, ದರ್ಪ, ಕಾಮ, ಕ್ರೋಧ, ಪರಿಗ್ರಹ ಇವುಗಳನ್ನು ತ್ಯಜಿಸಿ, ಮಮತೆಯಿಲ್ಲದವನಾಗಿ, ಶಾಂತನಾಗಿ, ಬ್ರಹ್ಮಭಾವವನ್ನು ಹೊಂದಲು ಸಮರ್ಥನಾಗುತ್ತಾನೆ.

ಇಂತಹ ಬ್ರಹ್ಮಭಾವವನ್ನು ಹೊಂದಿರುವ ವ್ಯಕ್ತಿಯ ಸಾಮಾಜಿಕ ದೃಷ್ಟಿ ಯಾವ ವಿಧವಾಗಿ ಇರುವುದೆಂಬುದನ್ನು ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖ ಸುಖಃ ಕ್ಷಮೀ ॥

ಗೀತೆ 12-13

ಯಾವನು ಯಾರಲ್ಲಿಯೂ ದ್ವೇಷಭಾವವನ್ನು ಹೊಂದಿರುವುದಿಲ್ಲವೋ, ಯಾವನು ಎಲ್ಲರಲ್ಲಿಯೂ ಮಿತ್ರಭಾವವನ್ನು ಮತ್ತು ಕರುಣೆಯನ್ನು ಹೊಂದಿರುವನೋ, ಯಾವನು ಅಹಂಕಾರ ಮಮಕಾರವಿಲ್ಲದವನೋ, ಸುಖದುಃಖಗಳಲ್ಲಿ ಸಮಾನವಾಗಿರುವನೋ ಮತ್ತು ಕ್ಷಮಾಶೀಲನೊ (ಅವನು ನಿಜವಾಗಿಯೂ ಆತ್ಮ ಸಾಕ್ಷಾತ್ಕಾರವನ್ನು ಹೊಂದಿರುವನು.

ಇಂತಹ ವ್ಯಕ್ತಿಯು ಹದಿನೆಂಟನೆಯ ಶ್ಲೋಕದಲ್ಲಿ ಹೇಳಿರುವ ಹಾಗೆ ಶತ್ರುಮಿತ್ರರಲ್ಲಿ ಸಮಬುದ್ಧಿಯುಳ್ಳವನೂ ಮತ್ತು ಸ್ತುತಿನಿಂದೆಗಳಲ್ಲಿ ಸಮಭಾವನೆಯುಳ್ಳವನೂ ಆಗಿರುವನು.

ಈ ವಿಧವಾಗಿ ಭಾರತ ದೇಶದಲ್ಲಿ ಮೂರು ಸಾವಿರ ವರ್ಷಗಳ ಹಿಂದೆಯೇ ಮನುಷ್ಯ ಪ್ರಯತ್ನವು ಯಾವ ವಿಧವಾಗಿರಬೇಕು, ಆತನು ಯಾವ ಸ್ಥಿತಿಯನ್ನು ಪಡೆಯಲು ಹೇಗೆ ಪ್ರಯತ್ನಿಸಬೇಕು, ಆತನಿಗೂ ಸಮಾಜದಲ್ಲಿರುವ ಇತರ ವ್ಯಕ್ತಿಗಳಿಗೂ ಯಾವ ಸಂಬಂಧವಿರಬೇಕು, ಎಂಬ ಈ ವಿಷಯಗಳನ್ನೆಲ್ಲ ಕೂಲಂಕಷವಾಗಿ ಪುರುಷಾರ್ಥಗಳ ನಿರೂಪಣೆಯಲ್ಲಿ ವಿಶದಪಡಿಸಿದೆ. ಮಾನವನು ಮಾನವನೆನ್ನಿಸಿಕೊಳ್ಳಲು ತನ್ನ ಕಾಮಾರ್ಥಗಳನ್ನು ಧರ್ಮದ, ಅಂದರೆ, ನೀತಿನಿಯಮಗಳಿಗೆ ಮತ್ತು ಮನಸ್ಸಾಕ್ಷಿಗೆ ಅನುಗುಣವಾಗಿ ಪೂರೈಸಿಕೊಳ್ಳಬೇಕು. ಮತ್ತು ಪ್ರತಿಯೊಬ್ಬ ಮಾನವನ ಅಂತಿಮ ಗುರಿಯು ಆತ್ಮಸಾಕ್ಷಾತ್ಕಾರವನ್ನು ಪಡೆದು ಸಮಸ್ಥಿತಿಯನ್ನು ಹೊಂದುವುದಾಗಿರಬೇಕು.

ಆಶ್ರಮ ಧರ್ಮ

ಅಧ್ಯಾಯ—೫

a) ಆಶ್ರಮ ವ್ಯವಸ್ಥೆ :—

ಆಶ್ರಮ ಧರ್ಮವು ಭಾರತೀಯ ಸಂಸ್ಕೃತಿಯ ಒಂದು ಮುಖ್ಯ ಅಂಶ. ನಿಜವಾಗಿಯೂ ಮನುಷ್ಯನ ಜೀವನವು ನಾಲ್ಕು ಆಶ್ರಮಗಳನ್ನು ಒಳಗೊಂಡಿರುವುದೆಂದು ನಿರೂಪಿಸಿರುವುದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಇದು ಮಾನವನ ಸಂಸ್ಕೃತಿಗೆ ಒಂದು ಕೊಡುಗೆ. ಆಧುನಿಕ ಮನಶ್ಶಾಸ್ತ್ರ ಮತ್ತು ಸಮಾಜಶಾಸ್ತ್ರಗಳು ಈ ನಿರೂಪಣೆಯ ಸತ್ಯಾಂಶವನ್ನು ವ್ಯಕ್ತಪಡಿಸುವುವು.

ಆಶ್ರಮಧರ್ಮವನ್ನು ಚತುರ್ವಿಧ ಪುರುಷಾರ್ಥಗಳ ಆಧಾರದ ಮೇಲೆ ರಚಿಸಲಾಗಿರುವುದು. ಆದುದರಿಂದಲೇ ಪುರುಷಾರ್ಥಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಆಶ್ರಮಧರ್ಮದ ಪ್ರಾಮುಖ್ಯತೆಯು ವಿಶದವಾಗುವುದು. ಪುರುಷಾರ್ಥಗಳು ಯಾವವಿಧವಾಗಿ ವ್ಯಕ್ತಿಯ ಜೀವನಗುರಿಗಳನ್ನೂ ಮಾನವ ಸಮಾಜದ ಧ್ಯೇಯಗಳನ್ನೂ ವಿಶದೀಕರಿಸುವುವೋ ಹಾಗೆಯೇ ಆಶ್ರಮ ಚತುಷ್ಟಯದ ನಾಲ್ಕು ಮೆಟ್ಟಿಲುಗಳು ಒಬ್ಬ ವ್ಯಕ್ತಿಯು ಯಾವ ವಿಧವಾಗಿ ಅವುಗಳನ್ನು ಸಾಧಿಸಬೇಕೆಂಬುದನ್ನು ನಿರೂಪಿಸುವುದು.

'ಆಶ್ರಮ' ಎಂಬ ಪದವು 'ಶ್ರಮ' ಎಂಬ ಸಂಸ್ಕೃತ ಧಾತುವಿನಿಂದ ಬಂದಿದೆ. ಶ್ರಮ ಎಂದರೆ ಪ್ರಯತ್ನಿಸುವುದು. ಆಶ್ರಮ ಎಂಬುದಕ್ಕೆ ಪದಶಃ ಅರ್ಥವು ವಿಶ್ರಮಿಸುವ ಸ್ಥಳ, ಆದುದರಿಂದ ಈ ನಾಲ್ಕು ಆಶ್ರಮಗಳು ಜೀವನದ ಪಥದಲ್ಲಿ ಇರುವ ನಾಲ್ಕು ವಿಶ್ರಮಿಸುವ ಸ್ಥಳಗಳು ಅಥವಾ ಕಾಲಗಳು ಎಂದು ಸೂಚಿಸುವುವು; ಮತ್ತು ಜೀವನ ಪಥದ ಗುರಿಯನ್ನು ಸೂಚಿಸುವುವು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸಾಶ್ರಮಗಳ ಗುರಿಯು ಮಾನವನ ಅಂತಿಮಗುರಿಯಾದ ಆತ್ಮಸಾಕ್ಷಾತ್ಕಾರಕ್ಕೆ ದಾರಿ. ಪ್ರತಿಯೊಂದು ಹಂತದಲ್ಲಿಯೂ ವ್ಯಕ್ತಿಯು ಈ ಅಂತಿಮ ಗುರಿಯನ್ನು ಸಾಧಿಸುವುದಕ್ಕೋಸ್ಕರ ತಕ್ಕ ಸಿದ್ಧತೆಯನ್ನು ಮಾಡಿಕೊಳ್ಳುವನು. ಆದುದರಿಂದ ಇದು ಮನುಷ್ಯನ ಪ್ರಯತ್ನ ಪೂರ್ವಕವಾದ ಜೀವನ ಕ್ರಮ. ಇದೇ ಆಶ್ರಮಧರ್ಮದ ವೈಶಿಷ್ಟ್ಯ, ಮಹಾಭಾರತದ ಶಾಂತಿ ಪರ್ವದಲ್ಲಿ ಈ ಆಶ್ರಮ ವ್ಯವಸ್ಥೆಯನ್ನು ಕುರಿತು ಹೀಗೆ ಹೇಳಲಾಗಿದೆ.

ಚತುಷ್ಪದೀ ಹಿ ನಿಶ್ರೇಣೀ ಬ್ರಹ್ಮಣ್ಯೇಷಾ ಪ್ರತಿಷ್ಠಿತಾ ।
ಏತಾಮಾರುಹ್ಯ ನಿಶ್ರೇಣೀಂ ಬ್ರಹ್ಮಲೋಕೇ ಮಹೀಯತೇ ॥

ಮ. ಭಾ. ಶಾಂತಿ. 242, 15

'ಈ ನಾಲ್ಕು ಹಂತಗಳಿಂದ ಕೂಡಿರುವ ಮೆಟ್ಟಲು ಬ್ರಹ್ಮಲೋಕಕ್ಕೆ ಏರಲು ಸಹಾಯಕವಾಗುವುದು.'

ಆದುದರಿಂದ ಪ್ರತಿಯೊಂದು ಆಶ್ರಮದಲ್ಲೂ ಮನುಷ್ಯನು ಆ ಆಶ್ರಮಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ನಿರ್ವಹಿಸುವುದೊಂದೇ ಅಲ್ಲದೆ ಮುಂದಿನ ಹಂತವನ್ನು ಏರುವುದಕ್ಕೆ ತನ್ನ ಜೀವನವನ್ನು ಸಿದ್ಧಗೊಳಿಸಬೇಕು.

ಆದರೆ ಪ್ರಾಚೀನ ಗ್ರಂಥಗಳಲ್ಲಿ ಈ ಆಶ್ರಮಗಳ ಸಂಖ್ಯೆಯನ್ನು ಕುರಿತು ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ಛಾಂದೋಗ್ಯೋಪನಿಷತ್ತಿನಲ್ಲಿ ಮೂರು ಆಶ್ರಮಗಳನ್ನು ಸೂಚಿಸಲಾಗಿದೆ.

ತ್ರಯೋ ಧರ್ಮಸ್ಕಂಧಾ ಯಜ್ಞೋಽಧ್ಯಯನಂ ದಾನಮಿತಿ
ಪ್ರಥಮಸ್ತಪ ಏವ ದ್ವಿತೀಯೋ ಬ್ರಹ್ಮಚಾರ್ಯಾಚಾರ್ಯಕುಲವಾಸೀ
ತೃತಿಯೋಽತ್ಯಂತಮಾತ್ಮಾನಮಾಚಾರ್ಯಕುಲೇಽವಸಾಯಯನ್
ಸರ್ವ ಏತೇ
ಪುಣ್ಯಲೋಕಾ ಭವಂತಿ ಬ್ರಹ್ಮ ಸಂಸ್ಥೋಽಮೃತತ್ವಮೇತಿ ॥

ಛಾ. ಉ. 2-23-i

'ಧರ್ಮಸ್ಕಂಧಗಳು ಮೂರು: ಯಜ್ಞ, ಅಧ್ಯಯನ, ದಾನ ಇವು ಮೊದಲನೆಯವು; ತಪಸ್ಸೇ ಎರಡನೆಯದು; ಯಾವಜ್ಜೀವವೂ ಆಚಾರ್ಯಗೃಹದಲ್ಲಿ ವಾಸಿಸುತ್ತಾ ಅಲ್ಲಿ ದೇಹದಂಡನೆಯನ್ನು ಮಾಡಿಕೊಳ್ಳುತ್ತಿರುವ ಬ್ರಹ್ಮಚಾರಿಯು ಮೂರನೆಯವನು ....'

ಪ್ರಾಯಶಃ ಉಪನಿಷತ್ಕಾಲದಲ್ಲಿ ಸಂನ್ಯಾಸವು ಒಂದು ಆಶ್ರಮವಲ್ಲ ಆತನು ನಿಜವಾಗಿಯೂ ಅತ್ಯಾಶ್ರಮಿನ್ – ಆಶ್ರಮಗಳನ್ನು ದಾಟಿ ಹೋಗಿರುವವನು ಎಂದು ಪರಿಗಣಿಸಲಾಗಿರಬಹುದು. ಏತಕ್ಕೆಂದರೆ ಸಂನ್ಯಾಸಿಯು ಎಲ್ಲವನ್ನೂ ತ್ಯಜಿಸಿ ವಾಸಸ್ಥಳವಿಲ್ಲದೆ ದೇಶದಲ್ಲಿ ತಿರುಗಾಡುವ ಒಬ್ಬ ವ್ಯಕ್ತಿ.

ಮನುಸ್ಮೃತಿಯಲ್ಲೂ ಮತ್ತು ಇತರ ಸ್ಮೃತಿಗಳಲ್ಲೂ ಈ ನಾಲ್ಕು ಆಶ್ರಮಗಳನ್ನು ನಿರೂಪಿಸಿರುವುದೇ ಅಲ್ಲದೆ ಅವುಗಳನ್ನು ಕ್ರಮದಿಂದ ಆಶ್ರಯಿಸಬೇಕೆಂಬುದನ್ನು ಸೂಚಿಸಿದೆ. ಹಾಗೂ ಮೊದಲ ಮೂರು ಆಶ್ರಮಗಳಲ್ಲಿ ಮೂರು ಋಣಗಳನ್ನು ತೀರಿಸಬೇಕೆಂದು ಹೇಳಲಾಗಿದೆ. ಬ್ರಹ್ಮಚರ್ಯಾಶ್ರಮದಲ್ಲಿ ವೇದಾಧ್ಯಯನವನ್ನು ಮಾಡಿ, ಋಷಿ ಋಣವನ್ನು ತೀರಿಸಿಕೊಳ್ಳಬೇಕು. ಗೃಹಸ್ಥಾಶ್ರಮ

ದಲ್ಲಿ ಮಕ್ಕಳನ್ನು ಪಡೆದು ಪಿತೃ ಋಣವನ್ನು ತೀರಿಸಿಕೊಳ್ಳಬೇಕು. ವಾನಪ್ರಸ್ಥಾಶ್ರಮದಲ್ಲಿ ಯಜ್ಞತಪಸ್ಸುಗಳ ಮೂಲಕ ಮತ್ತು ಸರ್ವ ಪ್ರಜಾಹಿತವನ್ನು ಗುರಿಯಾಗಿಟ್ಟುಕೊಂಡು ದೇವಋಣವನ್ನು ತೀರಿಸಿಕೊಳ್ಳಬೇಕು. ಸಂನ್ಯಾಸಾಶ್ರಮದಲ್ಲಿ ಮೋಕ್ಷಾಭಿಲಾಷೆಯನ್ನು ಅನುಸರಿಸಿ ಧ್ಯಾನದ ಮೂಲಕ ಸಿದ್ಧಿಯನ್ನು ಹೊಂದಬೇಕು. ಈ ಕ್ರಮವನ್ನು ಸರಿಯಾಗಿ ಅನುಸರಿಸದೇ ಹೋದರೆ ತಾತ್ಕಾಲಿಕ ವೈರಾಗ್ಯದಿಂದ ನಿಷಿದ್ಧಮಾರ್ಗವನ್ನು ಅನುಸರಿಸಿ ವ್ಯಕ್ತಿಯು ಭ್ರಷ್ಟನಾಗುವನೆಂದು ಮನುಧರ್ಮಶಾಸ್ತ್ರದಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ.

ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್ ।
ಅನಪಾಕೃತ್ಯ ಮೋಕ್ಷಂ ತು ಸೇವಮಾನೋ ವ್ರಜತ್ಯಧಃ ॥
ಅನಧೀತ್ಯ ದ್ವಿಜೋ ವೇದಾನನುತ್ಪಾದ್ಯ ತಥಾಸುತಾನ್ ।
ಅನಿಷ್ಟ್ವಾ ಚೈವ ಯಜ್ಞೈಶ್ಚ ಮೋಕ್ಷಮಿಚ್ಛನ್ ವ್ರಜತ್ಯಧಃ ॥

ಮನು – 6 – 85, 37

ಹಿಂದಿನ ಮೂರು ಆಶ್ರಮಗಳಲ್ಲಿ ಮೂರು ಋಣಗಳನ್ನು ತೀರಿಸಿ ಮೋಕ್ಷಾಭಿಲಾಷೆಯನ್ನು ಅಪೇಕ್ಷಿಸಬಹುದು. ಈ ಮೂರು ಋಣಗಳನ್ನು ತೀರಿಸದೆ ಮೋಕ್ಷಾಭಿಲಾಷೆಯನ್ನು ಹೊಂದಿದರೆ ಅವನು ಅಧೋಗತಿಯನ್ನು ಹೊಂದುವನು. ದ್ವಿಜನು ವೇದವನ್ನು ಓದದೆ, ಸುತನನ್ನು ಪಡೆಯದೆ ಯಾಗವನ್ನು ಮಾಡದೆ ಮೋಕ್ಷವನ್ನು ಇಚ್ಛಿಸಿದರೆ ಅವನು ಅಧೋಗತಿಯನ್ನು ಹೊಂದುವನು.'

ಈ ವಿಧವಾಗಿ ಮನುಸ್ಮೃತಿಯ ಪ್ರಕಾರ ಮೂರು ಆಶ್ರಮಗಳ ಕರ್ತವ್ಯಗಳನ್ನು ಪೂರೈಸಿ ಒಬ್ಬ ವ್ಯಕ್ತಿಯು ನಾಲ್ಕನೇ ಆಶ್ರಮವಾದ ಸಂನ್ಯಾಸಾಶ್ರಮಕ್ಕೆ ಮುಂದುವರೆಯಬೇಕು.

b) ಬ್ರಹ್ಮಚರ್ಯಾಶ್ರಮ :—

ವೇದಗಳ ಕಾಲದಿಂದಲೂ ಒಂದು ವಿದ್ಯಾಕ್ರಮವು ವ್ಯಕ್ತಿಯ ವಿಕಾಸಕ್ಕೂ, ಸಮಾಜದ ಅಭ್ಯುದಯಕ್ಕೂ ಅತಿ ಮುಖ್ಯವೆಂದು ಪರಿಗಣಿಸಲಾಗಿದೆ. ವಿದ್ಯಾಸಂಸ್ಥೆಯ ಮೂಲಕ ಪ್ರತಿಯೊಂದು ಸಮಾಜಕ್ಕೂ ತನ್ನ ಸಂಸ್ಕೃತಿಯನ್ನು ಪರಂಪರೆಯಾಗಿ ಸ್ಥಿರವಾಗಿರುವಂತೆ ಪ್ರಯತ್ನಮಾಡುವುದು. ಪ್ರತಿಯೊಬ್ಬ ಬಾಲಕ ಬಾಲಕಿಯೂ ವಿದ್ಯಾಭ್ಯಾಸದ ಮೂಲಕ ತನ್ನ ಸಾಮಾಜಿಕ ಆದರ್ಶಗಳನ್ನೂ ಭಾವನೆಗಳನ್ನೂ ತಿಳಿದುಕೊಳ್ಳಬೇಕು. ಆದುದರಿಂದ ವಿದ್ಯಾಭ್ಯಾಸದ ಅನುಕೂಲತೆ ಇಲ್ಲದೆ ಹೋದರೆ ಆ ವ್ಯಕ್ತಿಯು ತನ್ನ ಜೀವನವನ್ನೂ, ತನ್ನ ಸಮಾಜವನ್ನೂ ಉತ್ಕೃಷ್ಟ ಮಟ್ಟಕ್ಕೆ ಒಯ್ಯಲಾರನು. ಈ ಕಾರಣದಿಂದಲೇ ಎಲ್ಲ ಸಮಾಜಗಳೂ ಎಲ್ಲ ಕಾಲದಲ್ಲಿಯೂ ವಿದ್ಯಾಭ್ಯಾಸಕ್ಕೆ ಒಂದು ಉನ್ನತಸ್ಥಾನವನ್ನು ಕೊಟ್ಟಿರುವುವು.

ಪ್ರಾಚೀನ ಭಾರತೀಯ ಸಂಸ್ಕೃತಿಯ ಪ್ರಕಾರ ವಿದ್ಯಾಭ್ಯಾಸವೆಂದರೆ ವೇದಾಧ್ಯಯನ. ಅಥರ್ವ ವೇದದಲ್ಲಿಯೇ (XI—5) ಉಪನಯನ ಸಂಸ್ಕಾರವನ್ನು ಕುರಿತು ಹೇಳಲಾಗಿದೆ. ಆಮೇಲೆ ಗೃಹ್ಯಸೂತ್ರಗಳಲ್ಲಿಯೂ ಸ್ಮೃತಿಗಳಲ್ಲಿಯೂ ಉಪನಯನ ಸಂಸ್ಕಾರದ ವಿಧಿಯನ್ನು ವಿವರಿಸಲಾಗಿದೆ. 'ಉಪನಯನ' ಶಬ್ದವು ಗುರುವಿನ ಹತ್ತಿರ ಮಗುವನ್ನು ಕಳೆದುತರುವುದು ಎಂಬ ಅರ್ಥವನ್ನು ಕೊಡುವುದು. ಆದುದರಿಂದ ಉಪನಯನ ಸಂಸ್ಕಾರವು 'ಮಗುವಿನ ವಿದ್ಯಾಭ್ಯಾಸವು ಒಂದು ನಿರ್ದಿಷ್ಟವಾದ ಗುರುವಿನ ಮೂಲಕ ಪ್ರಾರಂಭಿಸಲಾಗಿದೆ' ಎಂದು ಸೂಚಿಸುವುದು.

ಭಾರತೀಯ ಸಂಸ್ಕೃತಿಯ ಪ್ರಕಾರ ಕೇವಲ ಪ್ರಾಕೃತಿಕ ಜನ್ಮವು ಹುಡುಗನ ಅಥವಾ ಹುಡುಗಿಯ ಮೊದಲನೆಯ ಹಂತ. ವ್ಯಕ್ತಿಯ ವಿಕಾಸಕ್ಕೆ ಉಪನಯನ ಅಂದರೆ ಗುರುವಿನ ಹತ್ತಿರ ಹೋಗಿ ವಿದ್ಯಾಭ್ಯಾಸವನ್ನು ಮಾಡುವುದು ಅತ್ಯಗತ್ಯ. ವಿದ್ಯಾಭ್ಯಾಸವೇ ಪ್ರತಿಯೊಬ್ಬ ವ್ಯಕ್ತಿಗೂ ಕೊಡುವ ಸಾಂಸ್ಕೃತಿಕ ಜನ್ಮ. ಆದುದರಿಂದಲೇ ಹಿಂದಿನ ಕಾಲದಲ್ಲಿ ಉಪನಯನ ಸಂಸ್ಕಾರವನ್ನು ಪಡೆದು ಗುರುಕುಲವಾಸದಲ್ಲಿ ಹತ್ತು-ಇಪ್ಪತ್ತು ವರುಷ ವಿದ್ಯಾಭ್ಯಾಸವನ್ನು ಮಾಡಿದವರನ್ನು ದ್ವಿಜರು ಎಂದು ಕರೆಯಲಾಗುತ್ತಿತ್ತು.

ಮನುಧರ್ಮದ ಪ್ರಕಾರ ಈ ಉಪನಯನ ಸಂಸ್ಕಾರವು ಅಂದರೆ ಗುರುವಿನ ಹತ್ತಿರ ಹೋಗಿ ವಿದ್ಯಾಭ್ಯಾಸವನ್ನು ಕಲಿಯುವುದು ಮೊದಲು ಮೂರು ವರ್ಣಗಳಿಗೆ ಸೇರಿದ ಬಾಲಕರಿಗೆ ಮಾತ್ರ ಸೀಮಿತವಾಗಿರುವುದು.

ಗರ್ಭಾಷ್ಟಮೇಽಬ್ದೇ ಕುರ್ವೀತ ಬ್ರಾಹ್ಮಣಸ್ಯೋಪನಾಯನಂ ।
ಗರ್ಭಾದೇಕಾದಶೇ ರಾಜ್ಞೋ ಗರ್ಭಾತ್ತು ದ್ವಾದಶೇ ವಿಶಃ ॥

ಮನು 2 – 36

'ಗರ್ಭದಿಂದ ಎಂಟನೇ ವರ್ಷದಲ್ಲಿ ಬ್ರಾಹ್ಮಣನಿಗೂ, ಹನ್ನೊಂದನೇ ವರ್ಷದಲ್ಲಿ ಕ್ಷತ್ರಿಯನಿಗೂ, ಹನ್ನೆರಡನೇ ವರ್ಷದಲ್ಲಿ ವೈಶ್ಯನಿಗೂ ಉಪನಯನ ಸಂಸ್ಕಾರವನ್ನು ಮಾಡಬೇಕು.

ಮತ್ತೊಂದು ಕಡೆ ಮನುಧರ್ಮಶಾಸ್ತ್ರವು ವರ್ಣ ವ್ಯವಸ್ಥೆಯನ್ನು ಸೂಚಿಸುವಾಗ ಯಾವ ಯಾವ ವರ್ಣದವರು ಏಕಜರು ಎಂಬುದನ್ನು ತಿಳಿಸಿದೆ.

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಸ್ತ್ರಯೋ ವರ್ಣಾ ದ್ವಿಜಾತಯಃ ।
ಚತುರ್ಥ ಏಕಜಾತಿಸ್ತು ಶೂದ್ರೋ ನಾಸ್ತಿ ತು ಪಂಚಮಃ ।

ಮನು, 10 – 4

'ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಣದವರು ದ್ವಿಜರು, ನಾಲ್ಕನೇ ಜಾತಿಯಾದ ಶೂದ್ರವರ್ಣದವರು ಏಕಜರು. ಐದನೇ ಜಾತಿ ಇಲ್ಲ.'

ಮತ್ತೊಂದು ಕಡೆ ಮನುಸ್ಮೃತಿಯು ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಹೀಗೆ ಹೇಳಿದೆ.

ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ ।
ಪತಿಸೇವಾ ಗುರೌ ವಾಸೋ ಗೃಹಾರ್ಥೋಽಗ್ನಿಪರಿಕ್ರಿಯಾ ॥

ಮನು 2 – 67.

'ಸ್ತ್ರೀಯರಿಗೆ ವಿವಾಹವು ವೈದಿಕ ಸಂಸ್ಕಾರವು, ಪತಿಸೇವೆಯೇ ಗುರು ಕುಲವಾಸ, ಗೃಹಕೃತ್ಯಕಾರ್ಯಗಳೇ ಅಗ್ನಿಕಾರ್ಯಗಳು.'

ಚರಿತ್ರಕಾರರ ಪರಿಶೀಲನೆಗಳು ಮನುಸ್ಮೃತಿಯ ರಚನೆಯು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಆಗಿರಬಹುದೆಂದೂ ಸೂಚಿಸುವುವು. ಆ ಕಾಲದಲ್ಲಿ ವರ್ಣ ವ್ಯವಸ್ಥೆಯ ಅಂಕಿಅಂಶಗಳು ಹೇಗಿತ್ತೆಂಬುದನ್ನು ಊಹಿಸಲು ಯಾವವಿಧವಾದ ಆಧಾರವೂ ಇಲ್ಲ. ಆದರೆ ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತು ಈ ಶತಮಾನದಲ್ಲಿ ದ್ವಿಜವರ್ಣಗಳಿಗೆ ಸೇರಿದ ಪುರುಷರ ಪ್ರಮಾಣವು ಕೇವಲ ಶೇ. 4–5 ಎಂದು ಹೇಳಬಹುದು. ಅಂದರೆ ಈ ಶ್ಲೋಕಗಳ ಪ್ರಕಾರ ಶೇ. 95 ಮಂದಿ ಅವಿದ್ಯಾವಂತರೇ ಅಲ್ಲದೆ ಅನಕ್ಷರಸ್ಥರೂ ಸಹ ಎಂದು ಹೇಳಬಹುದು. ಇದು ಹತ್ತೊಂಭತ್ತನೇ ಶತಮಾನದ ಆದಿಭಾಗದಲ್ಲಿ ಭಾರತೀಯ ಸಮಾಜದಲ್ಲಿ ಇದ್ದ ಸತ್ಯ. ಚರಿತ್ರೆಯ ಪ್ರಕಾರ, 1835 ರಲ್ಲಿ ಈಗ ಇರುವ ವಿದ್ಯಾಭ್ಯಾಸ ಕ್ರಮವು ಪ್ರಾರಂಭವಾಯಿತು. ಸಾವಿರದ ಒಂಭೈನೂರ ಎಪ್ಪತ್ತೊಂದನೇ ಜನಗಣತಿಯ ಪ್ರಕಾರ ನಮ್ಮ ದೇಶ ದಲ್ಲಿ ಶೇ. 70 ಮಂದಿ ಅನಕ್ಷರಸ್ಥರು ಇರುವರೆಂದು ಗೊತ್ತಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಬಹುಸಂಖ್ಯಾಕ ಶೂದ್ರವರ್ಣದವರ ಮತ್ತು ಅರ್ಧಸಂಖ್ಯೆಯ ಸ್ತ್ರೀ ಯರ ಅನಧಿಕಾರತ್ವವೆಂದು ಹೇಳಬಹುದು. ಪಟ್ಟಣಗಳಲ್ಲಿ, ಮುಂದುವರೆದ ಗುಂಪು ಗಳಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿದ್ದರೂ ಶೇ. 80 ಮಂದಿ ವಾಸವಾ ಗಿರುವ ಹಳ್ಳಿಗಳಲ್ಲಿ, ಇಂದಿಗೂ ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಮಟ್ಟದ ವಿದ್ಯಾ ಭ್ಯಾಸವನ್ನೂ ಸಹ ಪಡೆಯಲು ಅವರ ಕುಟುಂಬಗಳಲ್ಲಿ ಅವಕಾಶವಿಲ್ಲ. ಶಾಲೆ ಗಳಿದ್ದರೂ ತಾಯಿ ತಂದೆಯರು ತಮ್ಮ ಹೆಣ್ಣು ಮಕ್ಕಳನ್ನು ಪ್ರಾಥಮಿಕಶಾಲೆಗೂ ಕಳುಹಿಸುವುದಿಲ್ಲ. ಈ ವಿಧವಾಗಿ ಸಾವಿರಾರು ವರ್ಷಗಳಿಂದ ಬಂದ ಸಂಪ್ರ ದಾಯವು ಇಂದಿನ ವಿದ್ಯಾಭ್ಯಾಸದ ಮುನ್ನಡೆಗೆ ಅಡಚಣೆಯನ್ನು ತರುತ್ತಿರುವುದು. ಮೇಲೆ ಹೇಳಿರುವ ಹಾಗೆ ವಿದ್ಯಾವಿಹೀನ ಮತ್ತು ಅಕುಶಲ ಜನಾಂಗವು ಆರ್ಥಿಕ ಮುನ್ನಡೆಯನ್ನು ಪಡೆಯಲು ಇಂದಿನ ಕಾಲದಲ್ಲಿ ಅಸಾಧ್ಯ. ಒಂದು ಕಾಲದಲ್ಲಿ

ಯಾವುದು ಧರ್ಮವಾಗಿತ್ತೋ ಅದು ಈಗ ಅಧರ್ಮವಾಗಿರುವುದು. ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವುದು ಕಾನೂನಿಗೆ ವಿರುದ್ಧವಾದರೂ ಸಂಪ್ರದಾಯದ ಆಧಾರದ ಮೇಲೆ ಮಕ್ಕಳನ್ನು ತಾಯಿತಂದೆಗಳು ಶಾಲೆಗೆ ಕಳುಹಿಸುತ್ತಿಲ್ಲ. ಇದರಿಂದಲೇ ದೇಶದ ಅನಕ್ಷರಸ್ಥತೆಯ ಮಟ್ಟವು ಕಡಿಮೆಯಾಗಲು ಸಾಧ್ಯವಾಗುತ್ತಿಲ್ಲ.

ದೇಶದ ಪ್ರತಿಯೊಂದು ಮಗುವೂ ಆ ವಯಸ್ಸಿನಲ್ಲಿ ತಕ್ಕ ವಿದ್ಯಾಭ್ಯಾಸವನ್ನೂ, ಶಿಕ್ಷಣವನ್ನೂ ಉಪಾಧ್ಯಾಯನ ಸಹಾಯದಿಂದ ಪಡೆದು ವ್ಯಕ್ತಿಯ ವಿಕಾಸಕ್ಕೂ ದೇಶದ ಅಭ್ಯುದಯಕ್ಕೂ ಕಾರಣರಾಗುವರೆಂಬುದೇ ಭಾರತೀಯ ಸಂಸ್ಕೃತಿಯ ಬ್ರಹ್ಮಚರ್ಯಾಶ್ರಮದ ಮುಖ್ಯ ಉದ್ದೇಶ, ಆದರೆ ಕಾರಣಾಂತರಗಳಿಂದ ಈ ಧ್ಯೇಯವು ಸಂಪ್ರದಾಯದಿಂದ ನಾಶವಾಗಿದೆ. ಇದರ ಪರಿಣಾಮವನ್ನು ನಾವು ಇಂದಿಗೂ ಕಾಣುತ್ತಿರುವೆವು. ಸಂಪ್ರದಾಯವನ್ನು ಬಿಟ್ಟು ಪ್ರಾಚೀನ ಆದರ್ಶಗಳನ್ನು ಯಥಾರ್ಥಮಾಡದೇ ಹೋದರೆ ದೇಶದ ವಿದ್ಯಾಭ್ಯಾಸದ ಪರಿಸ್ಥಿತಿಯನ್ನು ಕೇವಲ ಹಣವ್ಯಯದ ಮೂಲಕವೋ ಅಥವಾ ಶಾಲೆಗಳನ್ನು ನಿರ್ಮಿಸುವುದರ ಮೂಲಕವೋ ಬದಲಾಯಿಸಲು ಸಾಧ್ಯವಾಗುವುದಿಲ್ಲ. ಇದು ಸಾಮಾಜಿಕ ಸಮಸ್ಯೆ. ಪ್ರತಿಯೊಂದು ಗುಂಪಿನಲ್ಲೂ ವಿದ್ಯಾಭ್ಯಾಸದ ಮೇಲಿರುವ ಮನೋಭಾವವು ಬದಲಾವಣೆ ಹೊಂದದೇ ಹೋದರೆ ದೇಶದ ವಿದ್ಯಾಭ್ಯಾಸದ ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾಗುವುದು ಅಸಾಧ್ಯ.

ಬ್ರಹ್ಮಚರ್ಯಾಶ್ರಮವು ಶಿಕ್ಷಣಕ್ಕೆ ಸಂಬಂಧಪಟ್ಟ ಆಶ್ರಮ. ವ್ಯಕ್ತಿಯು ತನ್ನ ಸಮಾಜದಲ್ಲಿರುವ ಭಾವನೆಗಳನ್ನೂ ಧ್ಯೇಯಗಳನ್ನೂ ಕುಶಲತೆಗಳನ್ನೂ ಕಲಿತು, ಆ ಸಮಾಜದ ಮೌಲ್ಯಗಳನ್ನು ಅಂತರೀಕೃತ ಮಾಡಿಕೊಂಡು ತನ್ನ ಉದ್ಧಾರಕ್ಕೂ ಆ ಸಮಾಜದ ಉದ್ಧಾರಕ್ಕೂ ದುಡಿಯುವಂತೆ ಪರಿವರ್ತನೆ ಮಾಡುವುದೇ ಶಿಕ್ಷಣದ ಗುರಿ. ಬ್ರಹ್ಮಚರ್ಯ ಆಶ್ರಮದ ವೈಶಿಷ್ಟ್ಯವೇನೆಂದರೆ ಶಿಕ್ಷಣವು ಪುರುಷಾರ್ಥಗಳನ್ನು ಅನುಸರಿಸಬೇಕು. ಆದುದರಿಂದ ಹುಡುಗನೇ ಆಗಲಿ ಹುಡುಗಿಯೇ ಆಗಲಿ ಗುರುಕುಲಕ್ಕೆ ಹೋಗಿ ಒಂದು ಕ್ರಮಬದ್ಧವಾದ ಜೀವನ ಮಾರ್ಗವನ್ನು ಅನುಸರಿಸಿ ಗುರುವಿನಿಂದ ಶಿಕ್ಷಣವನ್ನು ಪಡೆಯಬೇಕು. ಪ್ರಾಚೀನ ಕಾಲದಲ್ಲಿ ಈಗಿರುವ ಹಾಗೆ ಶಾಲೆಗಳು ಮತ್ತು ವಿಶ್ವವಿದ್ಯಾನಿಲಯಗಳು ಇರಲಿಲ್ಲ. ವೇದಾಧ್ಯಯನವನ್ನು ಚೆನ್ನಾಗಿ ಮಾಡಿರುವ ಗುರುವು ತನ್ನ ಆಶ್ರಮಕ್ಕೆ ಎಂಟು ಹತ್ತು ವರುಷ ವಯಸ್ಸಿನ ಬಾಲಕರನ್ನು ಸೇರಿಸಿಕೊಳ್ಳುತ್ತಿದ್ದ ಪದ್ಧತಿ ಇತ್ತು. ಈ ಗುರು ಹಾಗೂ ಅವನ ಪತ್ನಿ ಮತ್ತು ಮಕ್ಕಳು ಸರಳ ಜೀವನವನ್ನು ನಡೆಸುವ ಧ್ಯೇಯವನ್ನು ಇಟ್ಟುಕೊಂಡಿದ್ದರು. ಆದುದರಿಂದ ಗುರುಕುಲಕ್ಕೆ ಬರುತ್ತಿದ್ದ ಪ್ರತಿಯೊಬ್ಬ ಹುಡುಗನೂ, ರಾಜಮನೆತನದವನೇ ಆಗಿರಲಿ, ಧನಿಕರ ಮನೆಯವನೇ ಆಗಿರಲಿ, ಬಡವರ ಮನೆಯವನೇ ಆಗಿರಲಿ, ಎಲ್ಲರಂತೆ ಒಂದೇ ವಿಧವಾದ

ಜೀವನವನ್ನು ಅನುಸರಿಸಬೇಕಾಗಿತ್ತು. ಆಶ್ರಮದ ಕೆಲಸಗಳೆಲ್ಲವನ್ನೂ ಬಾಲಕರೇ ಮಾಡಬೇಕಾಗಿತ್ತು. ಆದುದರಿಂದಲೇ ಉಪನಯನಸಂಸ್ಕಾರವಾದ ನಂತರ ಆ ಹುಡುಗನಿಗೆ ಎರಡನೇ ಜನ್ಮ ಉಂಟಾಯಿತೆಂದೂ ಅವನನ್ನು ದ್ವಿಜನೆಂದೂ ಕರೆಯುತ್ತಿದ್ದರು. ದ್ವಿಜನೆಂದರೆ ನಿಯಮಾನುಸಾರ ಜೀವನವನ್ನು ನಡೆಸಿಕೊಂಡು ತನ್ನ ಸಮಾಜದ ಸಾಂಸ್ಕೃತಿಕ ಸಂಪ್ರದಾಯವನ್ನು ಅಂತರೀಕರಣಮಾಡಿಕೊಂಡು ಒಂದು ಹೊಸ ದೃಷ್ಟಿಯನ್ನು ಕಾಣುವವನು ಎಂದರ್ಥ. ಈ ಹೊಸದೃಷ್ಟಿಯು ಗುರುಕುಲ ವಾಸದಿಂದಲೇ ಬರಬೇಕಾಗಿತ್ತು. ಮನುಸ್ಮೃತಿಯಲ್ಲಿ ಹೇಳಿರುವ ಹಾಗೆ ಈ ಗುರುಕುಲ ವಾಸವು ಹತ್ತು ವರ್ಷಗಳಿಂದ ಮುವತ್ತಾರು ವರ್ಷಗಳ ವರೆಗೂ ಇದ್ದಿತು.

ಷಟ್ತ್ರಿಂಶದಾಬ್ದಿಕಂ ಚರ್ಯಂ ಗುರೌ ತ್ರೈವೇದಿಕವ್ರತಂ ।
ತದರ್ಧಿಕಂ ಪಾದಿಕಂ ವಾ ಗ್ರಹಣಾಂತಿಕಮೇವ ವಾ ॥

ಮನು. 3 – 1

'ಮೂರು ವೇದಗಳ ಅಧ್ಯಯನವನ್ನು ಮಾಡುವುದಕ್ಕೆ ಮುವತ್ತಾರು ವರುಷ ಬ್ರಹ್ಮಚರ್ಯವ್ರತ ಗುರುಕುಲವಾಸಿಗಳಾಗಿರಬೇಕು. ಅದಾಗದೆಹೋದರೆ ಹದಿನೆಂಟು ವರುಷವೊ, ಒಂಬತ್ತು ವರುಷವೊ ಅಥವಾ ಆ ವಿದ್ಯಾರ್ಥಿಯು ವೇದಾಧ್ಯಯನವನ್ನು ಸರಿಯಾಗಿ ಮಾಡುವವರೆಗೂ ಗುರುಕುಲವಾಸಿಯಾಗಿರಬೇಕು.

ಇದೇ ಬ್ರಹ್ಮಚಾರ್ಯಾಶ್ರಮದ ವೈಶಿಷ್ಟ್ಯ. ತನ್ನ ಅಧ್ಯಯನವನ್ನು ಮುಂದುವರೆಸಬೇಕಾದರೆ ತನ್ನ ಮನೆಯನ್ನೂ, ಊರನ್ನೂ ಬಿಟ್ಟ ಬಾಲಕನು ಹತ್ತಾರು ವರುಷ ಗುರುಕುಲವಾಸಿಯಾಗಿರಬೇಕಾಗಿತ್ತು.

ಮನುಸ್ಮೃತಿಯಲ್ಲಿ ಹೇಳಿರುವ ಹಾಗೆ ಗುರುವಿನ ಮೊದಲನೇ ಕರ್ತವ್ಯವೇನೆಂದರೆ ಹುಡುಗನಿಗೆ ತನ್ನ ದೇಹವನ್ನು ಶುಚಿಯಾಗಿಡುವುದನ್ನು ಕಲಿಸಿಕೊಡುವುದಾಗಿತ್ತು.

ಉಪನೀಯ ಗುರುಃ ಶಿಷ್ಯಂ ಶಿಕ್ಷಯೇಚ್ಛೌಚಮಾದಿತಃ ।
ಆಚಾರಮಗ್ನಿಕಾರ್ಯಂ ಚ ಸಂಧ್ಯೋಪಾಸನಮೇವ ಚ ॥

ಮನು. 2 – 69

'ಗುರುವು ಶಿಷ್ಯನಿಗೆ ಉಪನಯನ ಮಾಡಿ ಮೊದಲು ಶೌಚವನ್ನು (ಶುದ್ಧಿಯನ್ನು) ಕಲಿಸಬೇಕು. ಬಳಿಕ ಸ್ನಾನಾಚಮನಾದಿಗಳನ್ನೂ ಅಗ್ನಿಕಾರ್ಯವನ್ನೂ ಸಂಧ್ಯೋಪಾಸನೆಯನ್ನೂ ತಿಳಿಸಬೇಕು.

ಆಚಾರ್ಯನು ತನ್ನ ಹತ್ತಿರ ಬರುವ ಅಥವಾ ಇರುವ ವಿದ್ಯಾರ್ಥಿಗಳಿಗೆ ಮೊದಲು ಹೇಳಬೇಕಾಗಿರುವುದು ದೇಹವನ್ನು ಶುಚಿಯಾಗಿ ಇಡುವುದು. ಎರಡು ಸಾವಿರ ವರ್ಷಗಳ ಹಿಂದೆ ಮನು ಹೇಳಿದ ಮಾತು ಇಂದಿಗೂ ಅನ್ವಯಿಸುತ್ತದೆ.

ಪ್ರಾಯಶಃ ಈಗ ಈ ದೈಹಿಕ ಶುಚಿಯ ಶಿಕ್ಷಣವು ಅತಿಮುಖ್ಯ. ಏಕೆಂದರೆ ಪ್ರಾಥಮಿಕ ಶಾಲೆಗಳಿಗೆ ಬರುವ ಶೇ. 90 ರಷ್ಟು ಮಕ್ಕಳು ಬಹಳ ಬಡತನದ ಮನೆಗಳಿಂದ ಬರುವವರು; ಮತ್ತು ಆ ಮನೆಗಳಲ್ಲಿ ಪ್ರತಿದಿನ ಸ್ನಾನಮಾಡುವುದು ಸಂಪ್ರದಾಯವಲ್ಲ. ಅಂದು ಗುರುಕುಲವಾಸಿಗಳಿಗೆ ಈ ದೇಹನೈರ್ಮಲ್ಯ ಶಿಕ್ಷಣ ನೀಡುವುದು ಆ ಆಚಾರ್ಯನ ಆದ್ಯಕರ್ತವ್ಯವಾಗಿದ್ದಹಾಗೆ ಇಂದಿಗೂ ಸಹ ಪ್ರಾಥಮಿಕ ಶಾಲೆಯ ಉಪಾಧ್ಯಾಯನ ಪ್ರಥಮ ಕರ್ತವ್ಯವು ಇದೇ ಆಗಿರುತ್ತದೆ. ಈ ಕೆಲಸವು ತನ್ನ ಕರ್ತವ್ಯವೆಂಬುದನ್ನು ಮರೆತು ಮಕ್ಕಳು ಅಶುಚಿಯಾಗಿದ್ದರೆ ಅವರ ತಾಯಿತಂದೆಗಳನ್ನು ತಿರಸ್ಕಾರದಿಂದ ನೋಡುವುದು ಅಯುಕ್ತ. ಅಮೇರಿಕಾ ದೇಶದಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋದರೆ ಅಲ್ಲಿ ಮೊದಲು ಕಾಣುವುದು ಮಕ್ಕಳ ದೈಹಿಕ ಕಾರ್ಯಗಳಿಗೆ ಸಂಬಂಧಪಟ್ಟ ಅನುಕೂಲಗಳು, ಇವು ಯಾವು ವೆಂದರೆ ಸ್ನಾನಗೃಹಗಳು, ಈಜುವ ಕೊಳಗಳು, ಶುಭ್ರವಾದ ಬಟ್ಟೆಗಳನ್ನು ಇಡಲು ಅಲಮಾರುಗಳು, ಪೌಷ್ಟಿಕ ಆಹಾರಗಳನ್ನು ವಿಕ್ರಯಿಸುವ ಕ್ಯಾಂಟೀನು ಗಳು ಇತ್ಯಾದಿ. ನಮ್ಮ ದೇಶದ ಪ್ರಾಥಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಗತಿಯು ತೀವ್ರ ವಿಷಾದಕರ. ದೈಹಿಕ ಶುಚಿ, ವ್ಯಾಯಾಮ, ಪೌಷ್ಟಿಕ ಆಹಾರ ಈ ಅಂಶಗಳನ್ನು ನಾವು ಇನ್ನೂ ಶಿಕ್ಷಣದ ಮುಖ್ಯ ಅಂಶಗಳೆಂಬ ಭಾವನೆ ಯನ್ನು ಹೊಂದಿಲ್ಲ. ಈ ಭಾವನೆಗಳು ಬರುವವರೆಗೂ ದೇಶದ ಜನಸಾಮಾನ್ಯರ ಜೀವನ ಉತ್ತಮಗೊಳ್ಳಲು ಅಸಾಧ್ಯ.

ಗುರುಕುಲವಾಸಕ್ಕೆ ಹೋದ ಬ್ರಹ್ಮಚಾರಿಯನ್ನು ಗುರುವು ತನ್ನ ಆಶ್ರಮದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವಂತೆ ಆಜ್ಞಾಪಿಸುವರು. ಗುರುಕುಲಕ್ಕೆ ಸೇರಿದ ದನಕರುಗಳನ್ನು ನೋಡಿಕೊಳ್ಳುವುದು ಮತ್ತು ಇತರ ಗೃಹಕೃತ್ಯಗಳನ್ನು ಮಾಡುವುದು, ಹೋಮಗಳಿಗೆ ಬೇಕಾದ ಸಾಮಗ್ರಿಗಳನ್ನು ಶೇಖರಿಸುವುದು, ಇವೇ ಮುಂತಾದ ಕೆಲಸಗಳನ್ನು ಬ್ರಹ್ಮಚಾರಿಯು ಮಾಡಬೇಕಾಗಿತ್ತು. ನಂತರ ಊರಿನ ಮನೆಗಳಿಗೆ ಹೋಗಿ ಭಿಕ್ಷೆಯನ್ನು ತೆಗೆದುಕೊಂಡು ಬಂದು ಗುರುಪತ್ನಿಗೆ ಕೊಡುವುದು. ಈ ವಿವರಗಳ ಉದ್ದೇಶವನ್ನು ಆಲೋಚಿಸಿದರೆ ಗುರುಕುಲದಲ್ಲಿ ಗೃಹಕೃತ್ಯ ಕರ್ಮಗಳನ್ನು ಮಾಡುವ ಅಭ್ಯಾಸವು ಮುಖ್ಯಗುರಿಯಾಗಿತ್ತೆಂಬುದನ್ನು ಹೇಳಬಹುದು. ಇಂದಿನ ವಿದ್ಯಾಭ್ಯಾಸಕ್ರಮದಲ್ಲಿ ಈ ಅನುಭವಗಳ ಅಭಾವವೇ ಒಂದು ಪ್ರಮುಖ ಲಕ್ಷಣವಾಗಿರುವುದು. ಇದನ್ನು ಸರಿಪಡಿಸುವುದಕ್ಕೋಸ್ಕರ ಗಾಂಧೀಜಿಯವರು ತಮ್ಮ ಮೂಲಶಿಕ್ಷಣದ ಪದ್ಧತಿಯನ್ನು ರಚಿಸಿದರು. ಆದರೆ ಅನೇಕ ಕಾರಣಗಳಿಂದ ಈ ಪದ್ಧತಿಯನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ. ಆದುದರಿಂದ 1966 ರಲ್ಲಿ ವಿದ್ಯಾ ಸಮಿತಿಯು ವರ್ಕ್ ಎಕ್ಸ್‌ಪೀರಿಯನ್ಸ್ (Work Experience) ನ್ನು ಶಾಲೆಯಲ್ಲಿ ಆಚರಣೆಗೆ ತರಬೇಕೆಂಬು

ಸೂಚಿಸುವುದು. ವಿದ್ಯಾಭ್ಯಾಸದ ಬಗ್ಗೆ ನಮ್ಮ ದೃಷ್ಟಿಯು ಸಂಕುಚಿತವಾದುದರಿಂದ ಈ ವಿಚಿತ್ರ ಪದ್ಧತಿಯು ಏರ್ಪಟ್ಟಿರುವುದು. ವಿದ್ಯಾವಂತರಾದ ಬಾಲಕ ಬಾಲಕಿಯರು ಗೃಹಕಾರ್ಯಗಳನ್ನು ಮಾಡುವುದು ಉಚಿತವಲ್ಲವೆಂಬ ಭಾವನೆಯು ನಮ್ಮಲ್ಲಿ ಗಾಢವಾಗಿ ಮೂಡಿದೆ. ಇದಕ್ಕೆ ಮುಖ್ಯ ಕಾರಣ ಕಡಿಮೆ ಸಂಬಳಕ್ಕೆ ಆಳುಗಳು ಮತ್ತು ಸೇವಕರು ಸುಲಭವಾಗಿ ಸಿಗುವನು. ಸೇವಕನೆಂದರೆ ಅವಿದ್ಯಾವಂತ. ಆದುದರಿಂದ ವಿದ್ಯೆಗೂ ಸೇವಾವೃತ್ತಿಗೂ ಒಂದು ವಿರೋಧಭಾವನೆ ನಮ್ಮಲ್ಲಿ ಇರುವುದು. ಈ ಕಾರಣದಿಂದಲೇ, ದೇಹಶ್ರಮದಿಂದ ತಮ್ಮ ಜೀವನವನ್ನು ನಡೆಸುವವರನ್ನು ಕಂಡರೆ ತಿರಸ್ಕಾರ. ಆದರೆ ಗುರುಕುಲಾಶ್ರಮದ ಪದ್ಧತಿಯು ಬೇರೆಯಾಗಿತ್ತು. ದಿನಚರಿಗೆ ಸಂಬಂಧಪಟ್ಟ ಕೆಲಸಗಳನ್ನು ವಿದ್ಯಾರ್ಥಿಯು ಸಮರ್ಪಕವಾಗಿ ಮಾಡಿದರೆ ಆಗ ಅವನಿಗೆ ವಿದ್ಯೆಯನ್ನು ಕಲಿಸಬಹುದೆಂದು ಗುರುವು ತೀರ್ಮಾನಿಸುತ್ತಿದ್ದನು.

ಗುರುಕುಲ ವಿದ್ಯಾಭ್ಯಾಸದ ಮತ್ತೊಂದು ವೈಶಿಷ್ಟ್ಯವೆಂದರೆ ವಿದ್ಯಾರ್ಥಿಗೆ ಗುರುವಿನಲ್ಲಿರುವ ಗೌರವ. ಇದನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ.

ಚೋದಿತೋ ಗುರುಣಾ ನಿತ್ಯಮಪ್ರಚೋದಿತ ಏವ ವಾ ।
ಕುರ್ಯಾದಧ್ಯಯನೇ ಯತ್ನಮಾಚಾರ್ಯಸ್ಯ ಹಿತೇಷು ಚ ॥
ಶರೀರಂ ಚೈವ ವಾಚಂ ಚ ಬುದ್ಧೀಂದ್ರಿಯಮನಾಂಸಿ ಚ ।
ನಿಯಮ್ಯ ಪ್ರಾಂಜಲಿಸ್ತಿಷ್ಠೇದ್ವೀಕ್ಷಮಾಣೋ ಗುರೋರ್ಮುಖಂ ॥
ನಿತ್ಯಮುದ್ಧೃತಪಾಣಿಃ ಸ್ಯಾತ್ಸಾಧ್ವಾಚಾರಃ ಸುಸಂಯತಃ ।
ಆಸ್ಯತಾಮಿತಿ ಚೋಕ್ತಃ ಸನ್ನಾಸಿತಾಭಿಮುಖಂ ಗುರೋಃ ॥
ಹೀನಾನ್ನವಸ್ತ್ರವೇಷಃ ಸ್ಯಾತ್ಸರ್ವದಾ ಗುರುಸನ್ನಿಧೌ ।
ಉತ್ತಿಷ್ಠೇತ್ಪ್ರಥಮಂ ಚಾಸ್ಯ ಚರಮಂ ಚೈವ ಸಂವಿಶೇತ್ ॥
ಪ್ರತಿಶ್ರವಣಸಂಭಾಷೇ ಶಯಾನೋ ನ ಸಮಾಚರೇತ್ ।
ನಾಸೀನೋ ನ ಚ ಭುಂಜಾನೋ ನ ತಿಷ್ಠನ್ನಪರಾಙ್ಮುಖಃ ॥

ಮನು. ೨,191—195

“ ತನ್ನ ಪಾಠ ಪ್ರವಚನಗಳಲ್ಲಿ ತಾನೇ ಆಸಕ್ತನಾಗಿರಬೇಕು. ಗುರು ಪ್ರೇರಣೆಯನ್ನು ಕಾಯಬಾರದು, ಯಾವಾಗಲೂ ಗುರುಗಳಿಗೆ ಸೇವೆಯನ್ನು ಮಾಡುವುದಕ್ಕೆ ಸಿದ್ಧನಾಗಿರಬೇಕು. ಶರೀರ, ವಾಕ್, ಇಂದ್ರಿಯ, ಮನಸ್ಸುಗಳನ್ನು ನಿಯಮಿಸಿ ಅಂಜಲೀಬದ್ಧನಾಗಿ ಗುರು ಮುಖವನ್ನು ನೋಡುತ್ತಾ ಗುರುಸಮ್ಮುಖದಲ್ಲಿ ನಿಲ್ಲಬೇಕು. ಸದಾಚಾರರತನಾಗಿ ತನ್ನ ಬಲಗೈಯನ್ನು ವಸ್ತ್ರದಿಂದ ಮುಚ್ಚದೆ, ಗುರು ಕುಳಿತುಕೋ ಎಂದ ಮೇಲೆ ಗುರುವಿಗೆ ಅಭಿಮುಖವಾಗಿ ಕುಳಿತುಕೊಳ್ಳ

ಬೇಕು. ಗುರುವಿಗಿಂತ ಉತ್ತಮ ವಸ್ತ್ರಾಭರಣಗಳನ್ನು ತೊಡಬಾರದು. ಗುರುವಿಗಿಂತ ಮೊದಲೇ ಎಚ್ಚರಗೊಳ್ಳಬೇಕು. ಗುರು ಮಲಗಿದ ಮೇಲೆ ತಾನು ಮಲಗಬೇಕು. ಹೆಚ್ಚು ಊಟ ಮಾಡಬಾರದು. ಕುಳಿತುಕೊಂಡು, ಊಟಮಾಡುತ್ತಾ, ಮುಖತಿರುಗಿಸಿ ಗುರುಗಳ ಹತ್ತಿರ ಸಂಭಾಷಣೆ ಮಾಡಬಾರದು."

ಈ ವಿಧವಾಗಿ ವಿದ್ಯಾರ್ಥಿಯು ಯಾವ ರೀತಿಯಿಂದ ವರ್ತಿಸಬೇಕೆಂಬುದನ್ನು ಮನುಸ್ಮೃತಿಯಲ್ಲಿ ವಿವರಿಸಲಾಗಿದೆ.

ಮನುಸ್ಮೃತಿಯಲ್ಲಿ ಬ್ರಹ್ಮಚರ್ಯಾಶ್ರಮವನ್ನು ಕುರಿತು ಹೇಳಿರುವ ವಿಷಯವು ನೀತಿ ನಡತೆಗಳಿಗೆ ಅನ್ವಯಿಸುವುದು.

ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು ।
ಸಂಯಮೇ ಯತ್ನಮಾತಿಷ್ಠೇ ದ್ವಿದ್ವಾನ್ಯಂತೇವ ವಾಜಿನಾಂ ॥
ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥
ನ ತಥೈತಾನಿ ಶಕ್ಯಂತೇ ಸನ್ನಿಯಂತುಮಸೇವಯಾ ।
ವಿಷಯೇಷು ಪ್ರಜುಷ್ಟಾನಿ ಯಥಾ ಜ್ಞಾನೇನ ನಿತ್ಯಶಃ ॥

ಮನು. 2-88, 94, 96.

ಇಂದ್ರಿಯಗಳು ಮತ್ತು ಮನಸ್ಸು ಆಕರ್ಷಕವಾದ ವಿಷಯಗಳನ್ನು ಹಿಂಬಾಲಿಸುತ್ತವೆ. ಆದ್ದರಿಂದ ಒಳ್ಳೆಯ ಸಾರಥಿಯು ಕುದುರೆಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವಂತೆ ತಿಳುವಳಿಕಸ್ಥನು ಇಂದ್ರಿಯ ಮನಸ್ಸುಗಳನ್ನು ಸಂಯಮದಿಂದ ಇಟ್ಟಿರಬೇಕು.

'ಇಚ್ಛೆಯು ಇಷ್ಟವಸ್ತುಗಳ ಸೇವನೆಯಿಂದ ಎಂದಿಗೂ ಶಾಂತವಾಗುವುದಿಲ್ಲ. ಬೆಂಕಿಗೆ ತುಪ್ಪವನ್ನು ಹಾಕಿದರೆ ಅದು ಹೇಗೆ ಪ್ರಜ್ವಲಿಸುತ್ತದೆಯೋ ಹಾಗೆಯೇ ಇಷ್ಟವಸ್ತು ಸೇವನೆಯಿಂದ ಇಚ್ಛೆಯು ಹೆಚ್ಚುವುದು.'

'ಇಂದ್ರಿಯಗಳಿಗೆ ವಿಷಯಗಳು ಅತ್ಯಂತ ಪ್ರಿಯವಾದವು. ಇಂದ್ರಿಯಗಳನ್ನು ನಿಗ್ರಹದಿಂದಲೂ ಹತೋಟಿಗೆ ತರಲು ಸಾಧ್ಯವಿಲ್ಲ. ಇಂದ್ರಿಯ ನಿಗ್ರಹಕ್ಕೆ ಒಂದೇ ಮಾರ್ಗ. ಅದು ಯಾವುದೆಂದರೆ ಜ್ಞಾನಾರ್ಜನೆಯನ್ನು ಅವಲಂಬಿಸಿರುವುದು.'

ಈ ರೀತಿಯಾಗಿ ಮನುಸ್ಮೃತಿಯಲ್ಲಿ ಬ್ರಹ್ಮಚರ್ಯಾಶ್ರಮದ ಮತ್ತೊಂದು ಮುಖ್ಯ ಅಂಶವನ್ನು ವಿವರಿಸಲಾಗಿದೆ. ಹಿಂದಿನ ಅಧ್ಯಾಯದಲ್ಲಿ ಹೇಳಿರುವ ಹಾಗೆ ಪುರುಷಾರ್ಥಗಳ ಸಿದ್ಧಿಯು ಚಿತ್ತಶುದ್ಧಿಯಿಂದ ಮತ್ತು ನಿಯಮಬದ್ಧ ಜೀವನದಿಂದ ಉಂಟಾಗುವುದು. ಈ ಜೀವನಕ್ಕೆ ಬಾಲ್ಯಾವಸ್ಥೆ ಮತ್ತು ಯೌವನ

ದಲ್ಲಿಯೇ ತಳಹದಿಯನ್ನು ಹಾಕಬೇಕು. ಮನುಸ್ಮೃತಿಯಲ್ಲಿ ಹೇಳಿದ ಹಾಗೆ ಇಂದ್ರಿಯಗಳನ್ನು ಜಯಿಸಬೇಕಾದರೆ ಅತಿ ಸೇವನೆಯೂ ನಿಷ್ಪ್ರಯೋಜಕ; ಅತ್ಯಂತ ವರ್ಜನೆಯೂ ಮನೋರೋಗವನ್ನು ಉಂಟುಮಾಡುವುದು. ಆದುದರಿಂದ ಇಂದ್ರಿಯ ಗಳನ್ನು ಜಯಿಸಬೇಕಾದರೆ ಆಟಪಾಟಗಳಿಂದಲೇ ಸಾಧ್ಯ. ಶಾಲೆಯಲ್ಲಿ ಈ ಅಂಶಕ್ಕೆ ಸರಿಯಾದ ಗಮನವನ್ನು ಕೊಡಬೇಕಾದುದು ಅಗತ್ಯ.

ಮನುಸ್ಮೃತಿಯು ಮತ್ತೊಂದು ಅಂಶವು ಮೈತ್ರೀಭಾವನೆಯ ಪ್ರಾಮುಖ್ಯತೆ ಯನ್ನು ಕುರಿತು ಹೀಗೆ ಹೇಳಿದೆ.

ಜಪೇನೈವ ತು ಸಂಸಿಧ್ಯೇದ್ಬ್ರಾಹ್ಮಣೋ ನಾತ್ರ ಸಂಶಯಃ ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥

ಮನು. 2 – 87.

'ಸ್ವಾಧ್ಯಾಯ ಒಂದರಿಂದ ಸಿದ್ಧಿಯಿದೆ. ಇದರಲ್ಲಿ ಸಂಶಯವಿಲ್ಲ. ವೇದೋಕ್ತಯಾಗಗಳನ್ನು ಮಾಡಿದರೂ ಸರಿಯೇ ಬಿಟ್ಟರೂ ಸರಿಯೇ. ಯಾವನು ಎಲ್ಲಾ ಮನುಷ್ಯರಲ್ಲಿಯೂ, ಪ್ರಾಣಿಗಳಲ್ಲಿ ಮೈತ್ರೀಭಾವನೆಯನ್ನು ಇಟ್ಟಿರುವನೋ ಅವನೇ ಉತ್ತಮನು.'

ಅಂದರೆ ಬಾಲ್ಯಾವಸ್ಥೆಯಲ್ಲಿಯೂ, ಯೌವನಾವಸ್ಥೆಯಲ್ಲಿಯೂ ಒಬ್ಬ ವ್ಯಕ್ತಿಯು ಮೈತ್ರೀ ಭಾವನೆಯನ್ನು ಬೆಳೆಸಿಕೊಂಡು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ವಿಕಾಸಕ್ಕೆ ಸಹಾಯಕನಾಗಬೇಕು. ಜಗ ದೇಶದ ಅಭ್ಯುದಯವು ಸಾಧ್ಯ. ಮನುಸ್ಮೃತಿಯ ಮತ್ತೊಂದು ಶ್ಲೋಕವು ಇದನ್ನು ಸೂಚಿಸುವುದು.

ಯಸ್ಯ ವಾಙ್ಮನಸೀ ಶುದ್ಧೇ ಸಮ್ಯಗ್ಗುಪ್ತೇ ಚ ಸರ್ವದಾ ।
ಸ ವೈ ಸರ್ವಮವಾಪ್ನೋತಿ ವೇದಾಂತೋಪಗತಂ ಫಲಂ ॥

ಮನು 2. 160

"ಮಾತು ಮನಸ್ಸುಗಳೆರಡೂ ಶುದ್ಧವಾಗಿ ರಕ್ಷಿಸಲ್ಪಟ್ಟಿದ್ದರೆ, ಆ ವ್ಯಕ್ತಿಯು ವೇದಾಂತವು ಕೊಡುವ ಎಲ್ಲಾ ಫಲಗಳನ್ನು ಹೊಂದುತ್ತಾನೆ.

ತೈತ್ತರೀಯ ಉಪನಿಷತ್ತಿನಲ್ಲಿ ಹೇಳಿರುವ ಹಾಗೆ–

ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು । ಮಾ ವಿದ್ವಿಷಾವಹೈ ॥

"(ಪರಮೇಶ್ವರನು) ನಮ್ಮಿಬ್ಬರನ್ನು ಜೊತೆಯಲ್ಲಿ ಕಾಪಾಡಲಿ. ನಮ್ಮಿಬ್ಬರನ್ನು ಜೊತೆಯಲ್ಲಿ ಪೋಷಿಸಲಿ; (ನಾವು) ಜೊತೆಯಲ್ಲಿ ಸಾಮರ್ಥ್ಯವನ್ನು ಉಂಟುಮಾಡುವಂತಾಗಲೀ ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ; (ನಾವು ಪರಸ್ಪರ) ದ್ವೇಷಮಾಡದೇ ಇರುವಂತಾಗಲಿ."

ಒಟ್ಟಿನಲ್ಲಿ ಹೇಳಬೇಕಾದರೆ ಗುರುಕುಲವಾಸದಲ್ಲಿ ವಿದ್ಯಾರ್ಥಿಗಳು ತಮ್ಮ ಪಾಠ ಪ್ರವಚನಗಳನ್ನು ಅಭ್ಯಾಸ ಮಾಡುವುದೊಂದೇ ಅಲ್ಲದೆ ಗೃಹ-ಕೃತ್ಯಗಳನ್ನು ತಾವೇ ನಡೆಸಿಕೊಂಡು ಸಂಯಮದಿಂದ ಸರಳ ಜೀವನವನ್ನು ನಡೆಸುವುದನ್ನೂ ಕಲಿಯುತ್ತಿದ್ದರು. ವಿದ್ಯಾರ್ಥಿಗಳು ಹಣವಂತ ಕುಟುಂಬದವರಾಗಲೀ, ಬಡವರ ಕುಟುಂಬದವರಾಗಲೀ, ರಾಜ ಮನೆತನದಿಂದ ಬಂದಿರಲಿ ಅಥವಾ ಸಾಮಾನ್ಯರಾಗಲೀ ಎಲ್ಲರೂ ಸಮಾನತೆಯನ್ನು ಹೊಂದಿ ಜೀವಿಸಬೇಕಾಗಿತ್ತು; ಮತ್ತು ಇತರ ವ್ಯಕ್ತಿಗಳಲ್ಲಿಯೂ ಜೀವಿಗಳಲ್ಲಿಯೂ ಮೈತ್ರಿಯಿಂದ ವರ್ತಿಸಬೇಕಾಗಿತ್ತು. ಮತ್ತೊಂದು ಮುಖ್ಯ ಅಂಶವೆಂದರೆ ಗುರುವು ಪ್ರತಿಯೊಬ್ಬ ವಿದ್ಯಾರ್ಥಿಯ ಬುದ್ಧಿಶಕ್ತಿಗೆ ಅನುಸಾರವಾಗಿ ವೈಯಕ್ತಿಕ ಶಿಕ್ಷಣವನ್ನು ಕೊಡುತ್ತಿದ್ದನು. ಆದರೆ ಈ ವಿದ್ಯಾಕ್ರಮವು ಕೇವಲ ಹತ್ತು ಹದಿನೈದು ವಿದ್ಯಾರ್ಥಿಗಳಿಗೆ ಮಾತ್ರ ಸಮರ್ಪಕವಾಗಿ ಕೊಡುವುದಕ್ಕೆ ಸಾಧ್ಯ. ನೂರಾರು ಮಕ್ಕಳಿರುವ ಕಡೆ ಈ ಕ್ರಮಗಳನ್ನು ಅನುಸರಿಸುವುದು ಅಸಾಧ್ಯ. ಈಗಲೂ ಈ ಕ್ರಮಗಳನ್ನು ಅನುಸರಿಸಿ ಹರಿಜನ ಗಿರಿಜನರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಕೆಲವು ಗುರುಕುಲಗಳನ್ನು ಸ್ಥಾಪಿಸಿರುವುದು ಬಹಳ ಸಂತೋಷಕರ ಸಂಗತಿ.

ಶಿಷ್ಯನಿಗೆ ಶಿಕ್ಷಣವನ್ನು ಕೊಟ್ಟಮೇಲೆ ಆಚಾರ್ಯರು ಅನುಶಾಸನ ಮಾಡುವ ರೀತಿಯನ್ನು ತೈತ್ತರೀಯ ಉಪನಿಷತ್ತಿನಲ್ಲಿರುವ ಈ ಪ್ರಸಿದ್ಧ ಮಂತ್ರದಲ್ಲಿ ವಿವರಿಸಲಾಗಿದೆ.

"ಸತ್ಯಂ ವದ । ಧರ್ಮಂ ಚರ । ಸ್ವಾಧ್ಯಾಯಾನ್ಮಾ ಪ್ರಮದಃ । ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ । ಸತ್ಯಾನ್ನ ಪ್ರಮದಿತವ್ಯಂ । ಧರ್ಮಾನ್ನ ಪ್ರಮದಿತವ್ಯಂ । ಕುಶಲಾನ್ನ ಪ್ರಮದಿತವ್ಯಂ ಭೂತ್ಯೈ ನ ಪ್ರಮದಿತವ್ಯಂ । ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ । ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ । ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯ ದೇವೋ ಭವ । ಅತಿಥಿದೇವೋ ಭವ । ಯಾನ್ಯನವದ್ಯಾನಿ ಕರ್ಮಾಣಿ । ತಾನಿ ಸೇವಿತವ್ಯಾನಿ । ನೋ ಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿತ್ವಯೋಪಾಸ್ಯಾನಿ । ನೋ ಇತರಾಣಿ । ಯೇ ಕೇಚಾಸ್ಮಚ್ಛ್ರೇಯಾಗ್ಂಸೋ ಬ್ರಾಹ್ಮಣಾಃ । ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಂ । ಶ್ರದ್ಧಯಾದೇಯಂ । ಅಶ್ರದ್ಧಯಾದೇಯಂ । ಶ್ರಿಯಾ ದೇಯಂ । ಹ್ರಿಯಾ ದೇಯಂ । ಭಿಯಾ ದೇಯಂ । ಸಂವಿದಾ ದೇಯಂ । ಅಥ ಯದಿ ತೇ ಕರ್ಮವಿಚಿಕಿತ್ಸಾವಾ ವೃತ್ತವಿಚಿಕಿತ್ಸಾವಾಸ್ಯಾತ್ । ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮ ಕಾಮಾಃ ಸ್ಯುಃ । ಯಥಾ ತೇ ತೇಷು ವರ್ತೇರನ್ । ತಥಾ ತತ್ರ ವರ್ತೇಥಾಃ । ಅಥಾಭ್ಯಾಖ್ಯಾತೇಷು । ಯೇ ತತ್ರ ಬ್ರಾಹ್ಮಣಾಃ

ಸಂಮರ್ಶಿನಃ | ಯುಕ್ತಾ ಆಯುಕ್ತಾಃ ಅಲೂಕ್ಷಾ ಧರ್ಮಕಾಮಾಃ ಸ್ಯುಃ | ಯಥಾ ತೇ ತೇಷು ವರ್ತೇರನ್ | ತಥಾ ತೇಷುವರ್ತೇಥಾಃ | ಏಷ ಆದೇಶಃ | ಏಷ ಉಪದೇಶಃ | ಏಷಾ ವೇದೋಪನಿಷತ್ | ಏತ ದನುಶಾಸನಮ್ | ಏವ ಮುಪಾಸಿತವ್ಯಂ | ಏವಮುಚೈತದುಪಾಸ್ಯಂ ||

. ಶಿಕ್ಷಾವಲ್ಲಿ. ೧.–

'ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದ ಮಾಡಬೇಡ. ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದು ಕೊಟ್ಟು ಸಂತತಿಯನ್ನು ವಿಚ್ಛಿನ್ನಗೊಳಿಸದಿರು. ಸತ್ಯದಿಂದ ಕದಲಕೂಡದು; ಧರ್ಮದಿಂದ ಕದಲಕೂಡದು ಕುಶಲದಿಂದ ಕದಲಕೂಡದು. ಮಂಗಳಯುಕ್ತವಾದ ಕರ್ಮದಿಂದ ಕದಲಕೂಡದು; ಸ್ವಾಧ್ಯಾಯ ಪ್ರವಚನಗಳಿಂದ ಕದಲಕೂಡದು; ದೇವ ಪಿತೃಗಳ ಕಾರ್ಯದಿಂದ ಕದಲಕೂಡದು. ತಾಯಿಯೇ ನಿನಗೆ ದೇವರಾಗಿರಲಿ. ತಂದೆಯೇ ನಿನಗೆ ದೇವರಾಗಿರಲಿ: ಆಚಾರ್ಯನೇ ನಿನಗೆ ದೇವರಾಗಿರಲಿ. ಅತಿಥಿಯೇ ನಿನಗೆ ದೇವರಾಗಿರಲಿ. ಯಾವ ಕರ್ಮಗಳು ಅನಿಂದಿತವೋ ಅವುಗಳನ್ನು ಸೇವಿಸಬೇಕು. ಉಳಿದವುಗಳನ್ನು ಸೇವಿಸಕೂಡದು. ನಮ್ಮಲ್ಲಿ ಯಾವ ಒಳ್ಳೆಯ ನಡತೆಗಳಿವೆಯೋ ಅವುಗಳನ್ನೇ ಸೇವಿಸಬೇಕು. ಉಳಿದುವನ್ನು ಸೇವಿಸಕೂಡದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣರಿರುವರೋ ಅವರನ್ನು ಆಸನಾದಿಪೂರ್ವಕ ನೀನು ಆದರಿಸಬೇಕು ಶ್ರದ್ಧೆಯಿಂದ ಕೊಡಬೇಕು. ಅಶ್ರದ್ಧೆಯಿಂದ ಕೊಡಬಾರದು. ತನ್ನ ಐಶ್ವರ್ಯಕ್ಕೆ ತಕ್ಕಂತೆ ಕೊಡಬೇಕು ವಿನಯದಿಂದ ಕೊಡಬೇಕು ಭಯದಿಂದ ಕೊಡಬೇಕು ಮಿತ್ರಭಾವದಿಂದ ಕೊಡಬೇಕು. ಇನ್ನು ನಿನಗೆ ಶ್ರೌತ ಸ್ಮಾರ್ತ ಕರ್ಮ ವಿಷಯದಲ್ಲಾಗಲೀ ಆಚಾರ ವಿಷಯದಲ್ಲಾಗಲೀ ಸಂಶಯವುಂಟಾದರೆ ಅಲ್ಲಿ ವಿಚಾರಕ್ಷಮರೂ, ಕರ್ಮದಲ್ಲಿ ಸಮರ್ಥರೂ, ಅಕ್ರೂರರೂ, ಅಕಾಮಹತರೂ ಆದ ಬ್ರಾಹ್ಮಣರು ಹೇಗೆ ವರ್ತಿಸುವರೋ ಹಾಗೆಯೇ. ನೀನು ವರ್ತಿಸು. ಇನ್ನು ದೋಷ ಹೊರಿಸಲ್ಪಟ್ಟವರ ವಿಷಯದಲ್ಲಿ ವಿಚಾರಕ್ಷಮರೂ, ಕರ್ಮದಲ್ಲಿ ಸಮರ್ಥರೂ, ಅಕ್ರೂರರೂ ಅಕಾಮಹತರೂ, ಆದ ಬ್ರಾಹ್ಮಣರು ಹೇಗೆ ಅವರಲ್ಲಿ ವರ್ತಿಸುವರೋ ಹಾಗೆಯೇ ನೀನು ಅವರಲ್ಲಿ ವರ್ತಿಸು. ಇದು ವಿಧಿ, ಇದು ಉಪದೇಶ. ಇದು ವೇದರಹಸ್ಯ. ಇದು ಈಶ್ವರಾಜ್ಞೆ. ಹೀಗೆ ಉಪಾಸಿಸಬೇಕು. ಹೀಗೆ ಇದು ಅನುಷ್ಠೇಯ.

ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ತನ್ನ ಮನೆಗೆ ಹಿಂತಿರುಗುವ ಸಂದರ್ಭದಲ್ಲಿ ಗುರುಕುಲದಲ್ಲಿ ನಡೆಸುವ ಸಂಸ್ಕಾರವೇ ಸಮಾವರ್ತನ ಸಂಸ್ಕಾರ. ವಿದ್ಯಾರ್ಥಿ ದೆಸೆಯಿಂದ ಗೃಹಸ್ಥಾಶ್ರಮದ ಹಂತಕ್ಕೆ ಏರಲು ಅರ್ಹನಾಗಿರುವನೆಂಬುದನ್ನು ಸಮಾವರ್ತನೆ ಸಂಸ್ಕಾರವು ಸೂಚಿಸುವುದು. ಗುರುವಿನ ಅನುಮತಿಯನ್ನು ಪಡೆದು ಅವರಿಂದ ಆಶೀರ್ವಾದ ಹೊಂದಿ ಯುವಕನು ಗೃಹಸ್ಥನಾಗುವನು.

c) ಗೃಹಸ್ಥಾಶ್ರಮ :—

ಮನುಸ್ಮೃತಿಯಲ್ಲಿ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ನಿಯಮವನ್ನು ಕುರಿತು ಹೀಗೆ ಹೇಳಲಾಗಿದೆ.

ವೇದಾನಧೀತ್ಯ ವೇದೌ ವಾ ವೇದಂ ವಾಪಿ ಯಥಾಕ್ರಮಂ ।
ಅವಿಪ್ಲುತಬ್ರಹ್ಮಚರ್ಯೋ ಗೃಹಸ್ಥಾಶ್ರಮಮಾವಸೇತ್ ॥

ಮನು 3 – 2

"ಬ್ರಹ್ಮಚಾರಿಯು ಕೆಲವು ವೇದಗಳನ್ನಾಗಲಿ ಎರಡು ವೇದಗಳನ್ನಾಗಲಿ ಒಂದೇ ವೇದವನ್ನಾಗಲಿ ಸಮರ್ಪಕವಾಗಿ ಅಧ್ಯಯನ ಮಾಡಿದ ಮೇಲೆ ಗೃಹಸ್ಥಾಶ್ರಮಕ್ಕೆ ಕಾಲಿಡಲು ಅರ್ಹನಾಗುವನು."

ಮನುಸ್ಮೃತಿಯ ಪ್ರಕಾರ ಹತ್ತು ಇಪ್ಪತ್ತು ವರ್ಷಗಳು ವೇದಾಧ್ಯಯನವನ್ನು ಮಾಡಿ ಮುಗಿಸಿದ ನಂತರ ಗೃಹಸ್ಥಾಶ್ರಮಕ್ಕೆ ಕಾಲಿಡಬೇಕು. ಮನುಸ್ಮೃತಿಯ ಪ್ರಕಾರ (9 – 94) ಇಪ್ಪತ್ತನಾಲ್ಕು ಅಥವಾ ಮೂವತ್ತು ವರುಷ ಕಳೆದ ನಂತರ ಒಬ್ಬನು ಮದುವೆಯಾಗಬಹುದಾಗಿತ್ತು. ಆದರೆ ಕಾರಣಾಂತರದಿಂದ ನಮ್ಮ ದೇಶದಲ್ಲಿ ನೂರಾರು ವರ್ಷಗಳಿಂದಲೂ ಬಾಲ್ಯ ವಿವಾಹವು ಧರ್ಮವಾಯಿತು. ವೇದಾಧ್ಯಯನಕ್ಕೂ ವಿವಾಹ ಸಂಸ್ಕಾರಕ್ಕೂ ಇರುವ ಸಂಬಂಧವು ಕೇವಲ ಕಾಶೀಯಾತ್ರೆಯಲ್ಲಿ ನಿಂತುಹೋಯಿತು. ಗಾಂಧೀಜಿಯವರು ತಮಗಾದ ಬಾಲ್ಯವಿವಾಹದ ಬಗ್ಗೆ ಅತ್ಯಂತ ವಿಷಾದವನ್ನು ವ್ಯಕ್ತಪಡಿಸಿರುವರು. ಸುಮಾರು ಮೂವತ್ತು ನಲವತ್ತು ವರ್ಷಗಳಿಂದ ಈಚೆಗೆ ಯುವಕ ಯುವತಿಯರು ತಮ್ಮ ಉನ್ನತ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಮದುವೆಯನ್ನು ಮಾಡಿಕೊಂಡು ಗೃಹಸ್ಥರಾಗುವರು.

ಆದರೆ ಮನುಸ್ಮೃತಿಯ ಪ್ರಕಾರ—

ಚತುರ್ಥಮಾಯುಷೋ ಭಾಗಮುಷಿತ್ವಾದ್ಯಂ ಗುರೌ ದ್ವಿಜಃ ।
ದ್ವಿತೀಯಮಾಯುಷೋ ಭಾಗಂ ಕೃತದಾರೋ ಗೃಹೇ ವಸೇತ್ ॥

ಮನು. 4–1

ಒಬ್ಬ ವ್ಯಕ್ತಿಗೆ ನೂರು ವರುಷ ಆಯುಸ್ಸೆಂದು ಪ್ರಾಚೀನ ಭಾರತೀಯರು ತಿಳಿದುಕೊಂಡಿದ್ದರು. ಮನುಸ್ಮೃತಿಯ ಪ್ರಕಾರ ಮೊದಲಿನ ಕಾಲು ಭಾಗದಲ್ಲಿ (ಇಪ್ಪತ್ತೈದು ವರ್ಷಗಳು) ಒಬ್ಬ ವ್ಯಕ್ತಿಯು ಅವಿವಾಹಿತನಾಗಿರಬೇಕು. ಎರಡನೆಯ ಕಾಲುಭಾಗದಲ್ಲಿ, ಅಂದರೆ ಇಪ್ಪತ್ತಾರನೇ ವರ್ಷದಿಂದ ಐವತ್ತನೇ ವರ್ಷದವರೆಗೂ ಗೃಹಸ್ಥನಾಗಿರಬೇಕು. ಜೀವನದ ಮೂರನೆಯ ಕಾಲುಭಾಗದಲ್ಲಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು.

ಗೃಹಸ್ಥಾಶ್ರಮದ ಮುಖ್ಯ ಕರ್ತವ್ಯಗಳೆಂದರೆ, ಯಾವುದಾದರೊಂದು ವೃತ್ತಿಯನ್ನು ಅವಲಂಬಿಸಿ ಗೃಹನಿರ್ವಹಣಕ್ಕೆ ತಕ್ಕ ವರಮಾನವನ್ನು ಸಂಪಾದಿಸಬೇಕು. ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ತಾಯಿ ತಂದೆಗಳ ಆಶ್ರಯದಲ್ಲಿ ಇರದೆ ಸ್ವತಃ ಸಂಪಾದನೆಯನ್ನು ಮಾಡಿ ತನ್ನ ಮತ್ತು ದೇಶದ ಆರ್ಥಿಕ ಸ್ಥಿತಿಯ ಹೊಣೆಯನ್ನುಹೊತ್ತು ಮತ್ತು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನಿರತನಾಗಬೇಕು. ವೃತ್ತಿಯ ಮೂಲಕ ತನಗೆ ಮತ್ತು ತನ್ನ ದೇಶಕ್ಕೆ ಬೇಕಾದುದನ್ನು ಸಂಪಾದಿಸಬೇಕು. ವ್ಯಕ್ತಿಯ ಈ ಕರ್ತವ್ಯವನ್ನು ಕುರಿತು ಮನಸ್ಮೃತಿಯಲ್ಲಿ (4-2) ಸೂಚಿಸಲಾಗಿದೆ ಇದು ಎರಡನೆಯ ಪುರುಷಾರ್ಥವಾದ ಅರ್ಥವನ್ನು ಸೂಚಿಸುತ್ತದೆ. ಮೇಲೆ ಹೇಳಿರುವ ಹಾಗೆ ವೃತ್ತಿ, ಸಂಪತ್ತು ಮತ್ತು ಆಸ್ತಿಯ ಸಂಪಾದನೆಯು ಧರ್ಮವನ್ನು ಅನುಸರಿಸಿ ನೀತಿ ನಿಯಮಗಳನ್ನು ಒಳಗೊಂಡಿರಬೇಕು.

ಗೃಹಸ್ಥನ ಎರಡನೆಯ ಕರ್ತವ್ಯವು ವಿವಾಹ ಮತ್ತು ಸಂತಾನೋತ್ಪತ್ತಿ. ಭಾರತೀಯ ಸಂಸ್ಕೃತಿಯ ಪ್ರಕಾರ ಪ್ರತಿಯೊಬ್ಬ ಯುವಕನೂ ಯುವತಿಯೂ ಮದುವೆಮಾಡಿಕೊಳ್ಳಬೇಕು. ಮನುಸ್ಮೃತಿಯ ಪ್ರಕಾರ—

ಪ್ರಜನಾರ್ಥಂ ಸ್ತ್ರಿಯಃ ಸೃಷ್ಟಾಃ ಸಂತಾನಾರ್ಥಂ ಚ ಮಾನವಾಃ ।
ತಸ್ಮಾತ್ಸಾಧಾರಣೋ ಧರ್ಮಃ ಶ್ರುತೌ ಪತ್ನ್ಯಾ ಸಹೋದಿತಃ ॥
ಮನು 9-96

‘ ಗರ್ಭಗ್ರಹಣಕ್ಕಾಗಿ ಸ್ತ್ರೀ ಸೃಷ್ಟಿಯು; ಗರ್ಭೋತ್ಪತ್ತಿಗಾಗಿ ಪುರುಷ ಸೃಷ್ಟಿಯು. ಆದುದರಿಂದ ಸ್ತ್ರೀ ಪುರುಷರಿಗೆ ಸಹಧರ್ಮವು ವೇದ ಪ್ರಸಿದ್ಧವಾಗಿದೆ, ಯುಕ್ತಿ ಯುಕ್ತವಾಗಿದೆ.

ಏತಾವಾನೇವ ಪುರುಷೋ ಯಜ್ಜಾಯಾತ್ಮಾ ಪ್ರಜೇತಿ ಹ ।
ವಿಪ್ರಾಃ ಪ್ರಾಹುಸ್ತಥಾ ಚೈತದ್ಯೋ ಭರ್ತಾ ಸಾ ಸ್ಮೃತಾಂಗನಾ ॥
ಮನು. 9-45.

‘ ಗಂಡು, ಹೆಣ್ಣು, ಸಂತತಿ ಮೂರು ಕೂಡಿ ಒಬ್ಬನು ಪ್ರಜೆ ಎಂಬುದಾಗಿ ಪರಿಗಣಿತವಾಗುವನು. ಆದುದರಿಂದ ತಿಳಿದವರು ಭರ್ತ ಅಂಗನೆಯನ್ನು ಕೂಡಿರುವವನು ಎಂದು ಹೇಳುವರು.

ಯಾರನ್ನು ವಿವಾಹವಾಗಬಹುದು ಎಂಬುದನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ.

ಸವರ್ಣಾಗ್ರೇ ದ್ವಿಜಾತೀನಾಂ ಪ್ರಶಸ್ತಾ ದಾರಕರ್ಮಣಿ ।
ಕಾಮತಸ್ತು ಪ್ರವೃತ್ತಾನಾಮಿಮಾಃ ಸ್ಯುಃ ಕ್ರಮಶೋ ವರಾಃ ॥

ಶೂದ್ರೈವ ಭಾರ್ಯಾ ಶೂದ್ರಸ್ಯ ಸಾ ಚ ಸ್ವಾ ಚ ವಿಶಃ ಸ್ಮೃತೇ ।
ತೇ ಚ ಸ್ವಾ ಚೈವ ರಾಜ್ಞಶ್ಚ ತಾಶ್ಚ ಸ್ವಾ ಚಾಗ್ರ ಜನ್ಮನಃ ॥

ಮನು. 3, 12-13

'ಪ್ರಥಮ ವಿವಾಹವು ತನ್ನ ವರ್ಣದಲ್ಲಿಯೇ ಇರಬೇಕು. ಬೇರೊಂದು ವಿವಾಹವನ್ನು ಮಾಡಬೇಕೆಂಬ ಇಚ್ಛೆಯಿದ್ದರೆ ಆಗ ತನಗಿಂತ ಕೀಳುವರ್ಣದ ಯುವತಿಯರನ್ನು ವಿವಾಹಮಾಡಿಕೊಳ್ಳಬಹುದು. ಆದುದರಿಂದ ಶೂದ್ರವರ್ಣಕ್ಕೆ ಸೇರಿದ ಯುವಕನು ಶೂದ್ರವರ್ಣಕ್ಕೆ ಸೇರಿದ ಯುವತಿಯನ್ನು ಮಾತ್ರ ಮದವೆಯಾಗಬಹುದ, ವೈಶ್ಯವರ್ಣಕ್ಕೆ ಸೇರಿದ ಯುವಕನು ಸವರ್ಣವೈಶ್ಯೆ ಮತ್ತ ಕೀಳು ವರ್ಣದ ಶೂದ್ರಯುವತಿಯನ್ನು ಮದುವೆ ಮಾಡಿಕೊಳ್ಳಬಹುದು ಹೀಗೆ ಕ್ಷತ್ರಿಯನು ತನ್ನ ಮತ್ತು ಕೀಳು ಎರಡು ವರ್ಣಗಳ ಬ್ರಾಹ್ಮಣನು ತನ್ನ ವರ್ಣದ ಮತ್ತು ಕೀಳು ಮೂರು ವರ್ಣಗಳ ಯುವತಿಯರನ್ನು ಮದುವೆ ಮಾಡಿಕೊಳ್ಳಬಹುದು.

ಹೀಗೆ ಮನುಸ್ಮೃತಿಯು ಅನುಲೋಮ ಪದ್ಧತಿಯನ್ನು ಒಪ್ಪಿ ಪ್ರತಿಲೋಮ ಪದ್ಧತಿಯನ್ನು ಖಂಡಿಸಿತು. ಅಂದರೆ ತಾನು ತನ್ನ ಕೆಳಗಿನ ವರ್ಣಗಳಿಗೆ ಸೇರಿದ ಯುವತಿಯರನ್ನು ಮದುವೆ ಮಾಡಿಕೊಳ್ಳಬಹುದೇ ಹೊರತು ತನಗಿಂತ ಮೇಲುವರ್ಣದ ಯುವತಿಯರನ್ನು ಮದುವೆಯಾಗಕೂಡದು, ಭಾರತದ ಪ್ರಾಚೀನ ಚರಿತ್ರೆಯ ವಿಮರ್ಶಕರ ಪ್ರಕಾರ ಈ ಅನುಲೋಮ ಪದ್ಧತಿಯು ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯ ನೀಚಸ್ಥಾನಕ್ಕೆ ಕಾರಣವಾಯಿತೆಂದು ಅಭಿಪ್ರಾಯಪಟ್ಟಿರುವರು. ವೇದಗಳ ಕಾಲದಲ್ಲಿ ವರ್ಣಬೇದವೂ ಇರಲಿಲ್ಲ; ಸ್ತ್ರೀಗೆ ನೀಚಸ್ಥಾನವೂ ಇರಲಿಲ್ಲ, ಹೆಂಗಸರಿಗೂ, ಗಂಡಸರಿಗೂ ವೇದಾಧ್ಯಯನ ಮಾಡುವ ಹಕ್ಕು ಇತ್ತು; ಮತ್ತು ಯಜ್ಞಗಳನ್ನು ಮಾಡಬೇಕಾದರೆ ಗಂಡಹೆಂಡತಿಯರಿಬ್ಬರೂ ಸಮನಾಗಿ ಕುಳಿತು ಮಂತ್ರಗಳನ್ನು ಹೇಳಬೇಕಾಗಿತ್ತು. ಇತರ ವರ್ಣದ ಪತ್ನಿಯರು ವೇದಗಳನ್ನು ಅಭ್ಯಾಸ ಮಾಡದೇ ಇರುವುದರಿಂದ ಒಟ್ಟು ಸ್ತ್ರೀ ಜನಾಂಗಕ್ಕೆ ವೇದಾಧ್ಯಯನವು ನಿಷಿದ್ಧವಾಯಿತು. ಮೇಲೆ ಹೇಳಿರುವ ಹಾಗೆ ಸ್ತ್ರೀಗೆ ಮದುವೆಯೇ ಉಪನಯನ ಸಂಸ್ಕಾರವಾಯಿತು. ಬ್ರಹ್ಮಚರ್ಯಾಶ್ರಮವು ಗೃಹಸ್ಥಾಶ್ರಮವೇ ಆಯಿತು. ಈ ಶತಮಾನದಲ್ಲಿ, ಅದರಲ್ಲೂ 1930 ರಿಂದ ಈಚೆಗೆ ಹೆಂಗಸರು ಈ ಪರಿಸ್ಥಿತಿಯಿಂದ ವಿಮೋಚನೆಯನ್ನು ಹೊಂದಿ ಯುವಕರ ಜೊತೆಯಲ್ಲಿ ಸಮಾನ ವಿದ್ಯಾಭ್ಯಾಸಮಾಡುವ ಹಕ್ಕನ್ನು ಪಡೆದರು.

ಮನುಸ್ಮೃತಿಯ ಪ್ರಕಾರ ನಾಲ್ಕು ವರ್ಣದ ಪ್ರಜೆಗಳು ಎಂಟು ವಿಧವಾದ ಮದವೆಗಳನ್ನು ಮಾಡಿಕೊಳ್ಳಬಹುದು. ಈ ಎಂಟು ವಿಧಗಳನ್ನು ಮನುಸ್ಮೃತಿಯಲ್ಲಿ ಹೀಗೆ ವಿವರಿಸಲಾಗಿದೆ.

ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಾಜಾಪತ್ಯಸ್ತಥಾಸುರಃ ।
ಗಾಂಧರ್ವೋ ರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋಽಧಮಃ ॥

ಮನು. 3-21.

ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಅಸುರ, ಗಾಂಧರ್ವ, ರಾಕ್ಷಸ ಪೈಶಾಚ ಎಂದು ಎಂಟು ವಿವಾಹಗಳು.

ಮೊದಲನೆಯ ವಿಧದ ವಿವಾಹವು ಕನ್ಯಾದಾನ ಅಂದರೆ, ಬಟ್ಟೆ ಆಭರಣಗಳಿಂದ ಕನ್ಯೆಯನ್ನು ಅಲಂಕರಿಸಿ ವಿದ್ಯಾವಂತ ಮತ್ತು ಗುಣವಂತನಿಗೆ ತಂದೆಯು ವಿವಾಹಮಾಡಿಕೊಡುವುದು. ಎರಡನೆಯ ವಿಧದ ವಿವಾಹವು ಕನ್ಯೆಯನ್ನು ಒಬ್ಬ ಋತ್ವಿಜನಿಗೆ ಕೊಡುವುದು. ಇದರ ಹೆಸರು ದೈವ ವಿವಾಹವು. ಮೂರನೆಯ ಧರ್ಮ ವರನಿಂದ ಒಂದು ಎತ್ತನ್ನೋ, ಗೋವನ್ನೋ ತೆಗೆದುಕೊಂಡು ಕನ್ಯೆಯನ್ನು ಅವನಿಗೆ ಕೊಡುವುದು. ನಾಲ್ಕನೆ ವಿವಾಹದ ಹೆಸರು ಪ್ರಾಜಾಪತ್ಯ. ಈ ಕ್ರಮದ ಪ್ರಕಾರ ವರನನ್ನು ಸತ್ಕರಿಸಿ 'ನೀವಿಬ್ಬರೂ ಸಹಜೀವನವನ್ನು ನಡೆಸಿರಿ' ಎಂದು ಕನ್ಯಾದಾನ ಮಾಡುವುದು. ಅಸುರ ವಿವಾಹದ ಕ್ರಮವು ವರನ ಹತ್ತಿರ ಹಣವನ್ನು ತೆಗೆದುಕೊಂಡು ಕನ್ಯೆಯನ್ನು ಅವನಿಗೆ ಕೊಡುವುದು. ಗಾಂಧರ್ವ ವಿವಾಹದಲ್ಲಿ ಕನ್ಯೆ ಮತ್ತು ವರ ತಾವೇ ಸ್ವೇಚ್ಛೆಯಿಂದ ಮದುವೆ ಮಾಡಿಕೊಳ್ಳುವುದು. ಏಳನೆಯ ವಿಧವೆಂದರೆ ಹುಡುಗಿಗೆ ಇಷ್ಟವಿಲ್ಲದಿದ್ದರೂ, ಅವಳ ತಾಯಿ ತಂದೆಗೆ ಇಷ್ಟವಿಲ್ಲದಿದ್ದರೂ ಅವಳನ್ನು ಬಲಾತ್ಕಾರದಿಂದ ಅಪಹಾರ ಮಾಡಿ ಮದುವೆಯಾಗುವುದು. ಎಂಟನೆಯದು ನಿಜವಾಗಿ ಮದುವೆಯೇ ಅಲ್ಲ. ಆದುದರಿಂದ ಇದನ್ನು ಪೈಶಾಚ ವಿವಾಹ ಎಂದು ಕರೆಯಲಾಗಿದೆ ಹುಡುಗಿಯು ನಿದ್ದೆಮಾಡುತ್ತಿರುವಾಗಲೋ, ಮದ್ಯಮತ್ತಳಾಗಿರುವಾಗಲೋ ಅಥವಾ ಅಜಾಗರೂಕಳಾಗಿ ಒಂಟಿಯಿರುವಾಗ ಅವಳ ಶೀಲಭಂಗ

ನಿಜವಾಗಿ ನೋಡಿದರೆ ಸ್ಮೃತಿಗಳಲ್ಲಿ ವಿವರಿಸಿರುವ ಈ ಎಂಟು ವಿಧಗಳ ವಿವಾಹಗಳು ನಾಲ್ಕು ಗುಂಪುಗಳಿಗೆ ಸೇರಿರುವುದೆಂದು ಹೇಳಬಹುದು. ಕನ್ಯಾದಾನ ಮತ್ತು ದೈವ ವಿವಾಹ ಪದ್ಧತಿಗಳಲ್ಲಿ ತಾಯಿ ತಂದೆಗಳು ತಾವೇ ಒಬ್ಬ ವರನನ್ನು ನಿಶ್ಚಯಿಸಿ ಕನ್ಯೆಯನ್ನು ಕೊಡುವರು ಆರ್ಷ ಮತ್ತು ಅಸುರಪದ್ಧತಿಗಳಲ್ಲಿ ಕನ್ಯೆಯ ತಂದೆಯು ವರನಿಂದ ಗೋವನ್ನೋ ಹಣವನ್ನೊ ಸ್ವೀಕರಿಸಿ ಕನ್ಯೆಯನ್ನು ಕೊಡುವನು. ಪ್ರಾಜಾಪತ್ಯ ಮತ್ತು ಗಾಂಧರ್ವ ವಿವಾಹಗಳು ಮೂರನೆಯ ಗುಂಪಿನದಾಗುವವು. ಪ್ರಜಾಪತ್ಯ ವಿವಾಹದಲ್ಲಿ ತಂದೆಯು ವರನನ್ನು ಸತ್ಕರಿಸಿ ಕನ್ಯೆಯನ್ನು ಕೊಡುವನು. ಗಾಂಧರ್ವವಿವಾಹದಲ್ಲಿ ತಂದೆಗೆ ತಿಳಿಯದೆ ಕನ್ಯೆ ವರ ಇಬ್ಬರೂ ಮದುವೆಮಾಡಿಕೊಳ್ಳುವರು. ನಾಲ್ಕನೇ ಗುಂಪಿಗೆ ರಾಕ್ಷಸ ಮತ್ತು ಪೈಶಾಚ ಪದ್ಧತಿಗಳು ಸೇರಿರುವುವು. ಈ ಎರಡು ಕ್ರಮಗಳಲ್ಲೂ

ಬಲಾತ್ಕಾರದಿಂದ ಕನ್ಯೆಯನ್ನು ಅಪಹರಿಸಿ ಅಥವಾ ಶೀಲ ಭಂಗ ಮಾಡಿ ಅವಳನ್ನು ಪಡೆಯುವುದು. ಪ್ರಾಯಶಃ ಯಾವ ಮಾನವ ಗುಂಪಿನಲ್ಲೇ ಆಗಲಿ ವಿವಾಹ ಪದ್ಧತಿಯು ಈ ನಾಲ್ಕು ಗುಂಪುಗಳನ್ನು ಮೀರಿರಲಾರದು. ಹೀಗೆ ಎರಡು ಸಾವಿರ ವರ್ಷಗಳ ಹಿಂದೆಯೇ ಸ್ಮೃತಿಕಾರರು ವಿವಾಹ ಪದ್ಧತಿಗಳನ್ನು ಈ ರೀತಿ ವಿಭಜನೆ ಮಾಡಿರುವುದು ಅತ್ಯಂತ ಆಶ್ಚರ್ಯಕರವು ಎರಡನೆಯ ಗುಂಪಿಗೆ ಸೇರಿದ ಮದುವೆಗಳು ಕೇವಲ ಆರ್ಥಿಕ ಅಥವಾ ಪ್ರತಿಫಲದ ಆಧಾರದ ಮೇಲೆ ನಿಂತಿರುವುವು. ಮೂರನೆಯ ಗುಂಪು ವರ ಮತ್ತು ವಧುಗಳ ಅನ್ಯೋನ್ಯ ಇಚ್ಛೆಯನ್ನು ಒಳಗೊಂಡಿರುವುದು ನಾಲ್ಕನೆಯ ಗುಂಪಿನದು ಹಿಂಸೆ ಮತ್ತು ಬಲಾತ್ಕಾರವನ್ನು ಒಳಗೊಂಡಿರುವುದು. ಆದುದರಿಂದಲೇ ಪ್ರಾಚೀನ ಕಾಲದಿಂದಲೂ ಕನ್ಯಾದಾನವೇ ಶ್ರೇಷ್ಠಪದ್ಧತಿಯೆಂದು ಪರಿಗಣಿಸಲಾಗಿದೆ ಎರಡನೆಯ ಗುಂಪಿಗೆ ಸೇರಿದ ವಿವಾಹಗಳು ಇವತ್ತಿಗೂ ಹಳ್ಳಿಗಳಲ್ಲಿ ಕೆಲವು ಕಡೆ ನಡೆಯುವುವು. ಮೂರನೆಯದಾದ ಸ್ವಯಂವರ ಪದ್ಧತಿಯನ್ನು ಕ್ಷತ್ರಿಯರಿಗೆ ಮಾತ್ರ ಅನ್ವಯಿಸುವುದೆಂದು ಹೇಳುವ ಸಂಪ್ರದಾಯವಿದೆ. ಈಗ ಪಾಶ್ಚಾತ್ಯ ಪ್ರಭಾವದಿಂದ ಪ್ರಣಯ ವಿವಾಹವನ್ನು ನಮ್ಮ ದೇಶದಲ್ಲೂ ಅಲ್ಲಲ್ಲಿ ಕಾಣಬಹುದು. ಆದರೆ ನಾಲ್ಕನೆಯ ಗುಂಪಿಗೆ ಸೇರಿದ ಮದುವೆಗಳನ್ನು ಯಾವಾಗಲೂ ಹಿಂಸಾತ್ಮಕವೆಂದು ಖಂಡನೆ ಮಾಡಲಾಗಿದೆ.

ಕನ್ಯಾದಾನವೇ ಶ್ರೇಷ್ಠವಾದರೂ ಕಾರಣಾಂತರಗಳಿಂದ ತನ್ನ ತಂದೆಯು ತನಗೆ ತಕ್ಕ ಸಮಯದಲ್ಲಿ ಮದುವೆ ಮಾಡದೇ ಹೋದರೆ ಆಗ ಕನ್ಯೆಯು ತನ್ನ ತಂದೆಯ ಮನೆಯಲ್ಲೇ ಅವಿವಾಹಿತಳಾಗಿ ಉಳಿಯಬಹುದು ಅಥವಾ ತನಗೆ ಇಷ್ಟ ಬಂದ ವರನನ್ನು ವರಿಸಬಹುದು, ಎಂದು ಮನುಸ್ಮೃತಿಯಲ್ಲೇ ಹೇಳಿದೆ.

ಕಾಮಮಾಮರಣಾತ್ತಿಷ್ಠೇದ್ಗೃಹೇ ಕನ್ಯರ್ತುಮತ್ಯಪಿ ।
ನ ಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥

ಮನು. 9-89

'ಹುಡುಗಿಯು ಋತುಮತಿಯಾಗಿದ್ದರೂ ತನ್ನ ತಂದೆಯು ಅವಳನ್ನು ಗುಣಹೀನನಿಗೆ ವಿವಾಹಮಾಡಿಕೊಡಬೇಕೆಂದಿದ್ದರೆ ಆಗ ಅವಳು ಮರಣ ಪರ್ಯಂತವೂ ತನ್ನ ತಂದೆಯ ಮನೆಯಲ್ಲೇ ಇರುವುದು ಉತ್ತಮ'

ಆದರೆ ಹುಡುಗಿಯು ಕೆಲಕಾಲದ ನಂತರ ತಾನೆ ಪತಿಯನ್ನು ವರಿಸಬಹುದೆಂದು ಮನುಸ್ಮೃತಿಯಲ್ಲೇ ಹೇಳಲಾಗಿದೆ.

ತ್ರೀಣಿ ವರ್ಷಾಣ್ಯುದೀಕ್ಷೇತ ಕುಮಾರ್ಯೃತುಮತೀ ಸತೀ ।
ಊರ್ಧ್ವಂ ತು ಕಾಲಾದೇತಸ್ಮಾದ್ವಿಂದೇತ ಸದೃಶಂ ಪತಿಂ ॥
ಅದೀಯಮಾನಾ ಭರ್ತಾರಮಧಿಗಚ್ಛೇದ್ಯದಿ ಸ್ವಯಂ ।
ನೈನಃ ಕಿಂಚಿದವಾಪ್ನೋತಿ ನ ಚ ಯಂ ಸಾಧಿಗಚ್ಛತಿ ॥

ಮನು. 9-90,91

ಆದಕೆ ಹುಡುಗಿಯು ಋತುಮತಿಯಾಗಿ ಮೂರು ವರುಷ ಕಾದಿದ್ದ ಮೇಲೆ ತನಗೆ ಅನುರೂಪನಾದ ಪತಿಯನ್ನು ತಾನೇ ವರಿಸಬಹುದು. ಆಮೇಲೆ ಹಿರಿಯರನ್ನು ನಿರೀಕ್ಷಿಸುವುದು ಬೇಡ. ಹಿರಿಯರು ಕೊಡದೇ ತಾನೇ ಗಂಡನನ್ನು ವರಿಸಿದರೆ ಅವಳಿಗೂ ಅವಳನ್ನು ವರಿಸಿದವನಿಗೂ ಪಾಪವಿಲ್ಲ!

ಪತಿ ಮರಣದ ನಂತರ ಹೆಂಗಸೊಬ್ಬಳ ಎರಡನೆಯ ಮದುವೆ ವಿಷಯವನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ.

ಮೃತೇ ಭರ್ತರಿ ಸಾಧ್ವೀ ಸ್ತ್ರೀ ಬ್ರಹ್ಮಚರ್ಯೇ ವ್ಯವಸ್ಥಿತಾ।
ಸ್ವರ್ಗಂ ಗಚ್ಛತ್ಯಪುತ್ರಾಪಿ ಯಥಾ ತೇ ಬ್ರಹ್ಮಚಾರಿಣಃ॥
ವ್ಯಭಿಚಾರಾತ್ತು ಭರ್ತುಃ ಸ್ತ್ರೀ ಲೋಕೇ ಪ್ರಾಪ್ನೋತಿ ನಿಂದ್ಯತಾಂ।
ಶೃಗಾಲಯೋನಿಂ ಪ್ರಾಪ್ನೋತಿ ಪಾಪರೋಗೈಶ್ಚ ಪೀಡ್ಯತೇ॥

ಮನು. 5-160, 164.

'ಪತಿಯು ಮರಣದ ನಂತರ ಹೆಂಗಸು ಬ್ರಹ್ಮಚಾರಿಣಿಯಾಗಿರಬೇಕು ಅದು ಅವಳಿಗೆ ಶ್ರೇಯಸ್ಸು. ತೀರಿಹೋದ ಗಂಡನನ್ನು ಕುರಿತು ತನ್ನ ಬ್ರಹ್ಮಚರ್ಯವನ್ನು ಆಶ್ರಯಿಸದೆ ಹೋದರೆ ಸ್ತ್ರೀಯು ಪಾಪಕೃತ್ಯವನ್ನು ಮಾಡಿದುದರಿಂದ ದುಃಖವನ್ನು ತಪ್ಪದೇ ಅನುಭವಿಸುವಳು.'

ಆದರೆ ಮನುಸ್ಮೃತಿಯಲ್ಲಿ ಮತ್ತೊಂದು ಕಡೆ ಹೀಗೆ ಹೇಳಿದೆ:

ಯಾ ಪತ್ಯಾ ವಾ ಪರಿತ್ಯಕ್ತಾ ವಿಧವಾ ವಾ ಸ್ವಯೇಚ್ಛಯಾ।
ಉತ್ಪಾದಯೇತ್ಪುನರ್ಭೂತ್ವಾ ಸ ಪೌನರ್ಭವ ಉಚ್ಯತೇ॥

ಮನು. 9 175

ವಿಧವೆ ಅಥವಾ ಗಂಡನಿಂದ ಬಿಡಲ್ಪಟ್ಟವಳಿಗೆ ಪುನಃ ಬೇರೆಯವನಿಂದ ಹುಟ್ಟಿದ ಮಗು ಆ ಜನಕನಿಗೆ ಪೌನರ್ಭವ ಪುತ್ರನು.

ದಾಂಪತ್ಯ ಜೀವನದ ಗುರಿಯನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ.

ಅನ್ಯೋನ್ಯಸ್ಯಾವ್ಯಭೀಚಾರೋ ಭವೇದಾಮರಣಾಂತಿಕಃ।
ಏಷ ಧರ್ಮಃ ಸಮಾಸೇನ ಜ್ಞೇಯಃ ಸ್ತ್ರೀಪುಂಸಯೋಃ ಪರಃ॥
ತಥಾ ನಿತ್ಯಂ ಯತೇಯಾತಾಂ ಸ್ತ್ರೀ ಪುಂಸೌ ತು ಕೃತಕ್ರಿಯೌ।
ಯಥಾ ನಾಭಿಚರೇತಾಂ ತೌ ವಿಮುಕ್ತಾವಿತರೇತರಂ॥

ಮನು. 9-101, 102.

"ಕಾಯ ವಾಙ್ಮನಸ್ಸುಗಳಲ್ಲಿ ದಂಪತಿಗಳು ಅನ್ಯೋನ್ಯ ಅತಿಕ್ರಮಿಸದಿರುವುದೇ ಧರ್ಮದ ಮಾರ್ಗವಾಗಿದೆ. ಆಮರಣಾಂತವಾದ ಈ ಧರ್ಮವು ಸ್ಥಿರ

ಬುದ್ಧಿಯು ಪವಿತ್ರ ಸಂಕೇತವಾಗಿದೆ. ವಿವಾಹಿತರಾದ ಸ್ತ್ರೀ ಪುರುಷರು ತಮ್ಮ ಸಂಬಂಧದಲ್ಲಿ ಯಾವ ವಿಧವಾದ ತೊಡಕೂ ಬಾರದಂತೆ ಪ್ರಯತ್ನಿಸಬೇಕು. ಮತ್ತು ಪತಿಪತ್ನಿಯರು ತಮ್ಮ ತಮ್ಮ ನಿಷ್ಠೆಯನ್ನು ಉಲ್ಲಂಘಿಸಬಾರದು "

ಗೃಹಸ್ಥಾಶ್ರಮದಲ್ಲಿನ ಮುಖ್ಯ ಕರ್ತವ್ಯಗಳೆಂದರೆ ಶ್ರಮಪಟ್ಟು ಕೆಲಸ ಮಾಡಿ ಆದಾಯವನ್ನು ಗಳಿಸಿ ತನ್ನ ಮನೆಯನ್ನೂ ತನ್ನ ಕುಟುಂಬವನ್ನೂ ಚೆನ್ನಾಗಿ ನೋಡಿಕೊಳ್ಳಬೇಕು. ಆದರೆ ತನಗೆ ತಿಳಿಯದೆ ಗೃಹಕೃತ್ಯದಲ್ಲಿ ಅನೇಕ ಅನಿವಾರ್ಯಗಳು–ಹಿಂಸೆಗಳು ಉಂಟಾಗುವುವು. ಇದನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ.

ಪಂಚ ಸೂನಾ ಗೃಹಸ್ಥಸ್ಯ ಚುಲ್ಲೀ ಪೇಷಣ್ಯುಪಸ್ಕರಃ ।
ಕಂಡನೀ ಚೋದಕುಂಭಶ್ಚ ಬಧ್ಯತೇ ಯಾಸ್ತು ವಾಹಯನ್ ॥

ಮನು 3–68.

ಒಲೆ, ಒಡೆಯುವ ಕಲ್ಲು, ಕಸಬರಿಕೆ, ಒರಳು. ಒನಕೆ, ಜಲಪಾತ್ರೆ ಇವು ಐದು ಹಿಂಸಾ ಸಾಧನಗಳು. ಇವು ಅನಿವಾರ್ಯವಾದ ಹಿಂಸೆಗಳು. ಆದ್ದರಿಂದ ಈ ಐದು ವಸ್ತುಗಳ ಉಪಯೋಗದಿಂದ ಐದು ವಿಧದ ಪಾಪಗಳುಂಟಾಗುತ್ತವೆ.

ಈ ಪಂಚವಿಧ ದೋಷಗಳಿಂದ ವಿಮುಕ್ತಿಯನ್ನು ಪಡೆಯಲು ಮನುಸ್ಮೃತಿಯು ಗೃಹಸ್ಥರಿಗೆ ಪಂಚಮಹಾಯಜ್ಞಗಳನ್ನು ವಿಧಿಸಿದೆ.

ತಾಸಾಂ ಕ್ರಮೇಣ ಸರ್ವಾಸಾಂ ನಿಷ್ಕೃತ್ಯರ್ಥಂ ಮಹರ್ಷಿಭಿಃ ।
ಪಂಚಕ್ಲೃಪ್ತಾ ಮಹಾಯಜ್ಞಾಃ ಪ್ರತ್ಯಹಂ ಗೃಹಮೇಧಿನಾಮ್ ॥
ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಂ ।
ಹೋಮೋ ದೈವೋ ಬಲಿರ್ಭೌತೋ ನೃಯಜ್ಞೋಽತಿಥಿಪೂಜನಮ್ ॥
ಪಂಚೈತಾನ್ಯೋ ಮಹಾಯಜ್ಞಾನ್ನ ಹಾಪಯತಿ ಶಕ್ತಿತಃ ।
ಸ ಗೃಹೇಪಿ ವಸನ್ನಿತ್ಯಂ ಸೂನಾದೋಷೈರ್ನ ಲಿಪ್ಯತೇ ॥
ದೇವತಾತಿಥಿಭೃತ್ಯಾನಾಂ ಪಿತೃಣಾಮಾತ್ಮನಶ್ಚ ಯಃ ।
ನ ನಿರ್ವಪತಿ ಪಂಚಾನಾಮುಚ್ಛ್ವಸನ್ನ ಸ ಜೀವತಿ ॥

ಮನು. 3–69ರಿಂದ72

ಹಿಂದೆ ಹೇಳಿದ ಐದು ಹಿಂಸಾಪರಾಧ ನಿವೃತ್ತಿಗಾಗಿ ಗೃಹಸ್ಥರಿಗೆ ಪ್ರತಿದಿನ ಪಂಚಯಜ್ಞಗಳನ್ನು ವಿಧಿಸಿದ್ದಾರೆ. ಅಧ್ಯಾಪನಾಧ್ಯಯನಗಳು, ಪಿತೃತರ್ಪಣ ವೈಶ್ವದೇವ, ಭೂತಬಲಿ, ಅತಿಥಿಸತ್ಕಾರಗಳು ಹಿಂಸಾಪ್ರಾಯಶ್ಚಿತ್ತಗಳು ಈ ಐದು ಯಜ್ಞಗಳನ್ನು ಲೋಪಮಾಡದೆ ಶಕ್ತ್ಯನುಸಾರ ಆಚರಿಸುತ್ತಿದ್ದರೆ ಗೃಹವಾಸ ಮಾಡಿದ ಮತ್ತು ಸೂನಾದೋಷದ ಸಂಬಂಧವಿರುವುದಿಲ್ಲ. ದೇವ, ತಿರ್ಯಕ್, ತನ್ನ ಕುಟುಂಬ, ಮೃತಪಿತೃ, ಸ್ವ ಆತ್ಮ ತಾನು, ಇವರ ಪೋಷಣೆಮಾಡುವ ಪಂಚಯಜ್ಞ ಮಾಡದಿದ್ದರೆ ಬದುಕಿಯೂ ಸತ್ತಂತೆ. "

ಈ ವಿಧವಾಗಿ ಸಂಪ್ರದಾಯದ ಋಷಿಋಣ, ಪಿತೃಋಣ ಮತ್ತು ದೇವಋಣಗಳ ಜೊತೆಗೆ ಮನುಸ್ಮೃತಿಯು ವೇದಗಳ ಕಾಲದಿಂದಲೂ ಸಾಂಪ್ರದಾಯಿಕವಾಗಿ ಬಂದಿರುವ ಮತ್ತೆರಡು ಕೃತ್ಯಗಳನ್ನು ಈ ಪಂಚ ಮಹಾಯಜ್ಞದಲ್ಲಿ ಸೇರಿಸಿದೆ. ಇವು ಅತಿಥಿಸತ್ಕಾರ ಮತ್ತು ಭೂತಯಜ್ಞ. ಅತಿಥಿ ಸತ್ಕಾರಗಳ ಬಗ್ಗೆ ಇನ್ನೂ ಕೆಲವು ಶ್ಲೋಕಗಳಲ್ಲಿ ವಿವರಗಳನ್ನು ಕೊಡಲಾಗಿದೆ.

ಶುನಾಂ ಚ ಪತಿತಾನಾಂ ಚ ಶ್ವಪಚಾಂ ಪಾಪರೋಗಿಣಾಂ ।
ವಾಯಸಾನಾಂ ಕೃಮೀಣಾಂ ಚ ಶನಕೈರ್ನಿರ್ವಪೇದ್ಭುವಿ ॥
ಕೃತ್ವೈತದ್ಬಲಿಕರ್ಮೈವಮತಿಥಿಂ ಪೂರ್ವಮಾಶಯೇತ್ ।
ಭಿಕ್ಷಾಂ ಚ ಭಿಕ್ಷವೇ ದದ್ಯಾದ್ವಿಧಿವದ್ಬ್ರಹ್ಮಚಾರಿಣೇ ॥
ಸಂಪ್ರಾಪ್ತಾಯ ತ್ವತಿಥಯೇ ಪ್ರದದ್ಯಾದಾಸನೋದಕೇ ।
ಅನ್ನಂ ಚೈವ ಯಥಾಶಕ್ತಿ ಸತ್ಕೃತ್ಯ ವಿಧಿಪೂರ್ವಕಮ್ ।
ತೃಣಾನಿ ಭೂಮಿರುದಕಂ ವಾಕ್ಚತುರ್ಥೀ ಚ ಸೂನೃತಾ ॥
ಏತಾನ್ಯಪಿ ಸತಾಂ ಗೇಹೇ ನೋಚ್ಛಿದ್ಯಂತೇ ಕದಾಚನ ॥

ಮನು 3–92, 94, 99, 101.

ಶ್ವ, ಪತಿತ, ಶ್ವಪಚ, ಪಾಪರೋಗಿ, ವಾಯಸ, ಕೃಮಿ ಇವುಗಳಿಗೆ ಬೇರೆ ಅನ್ನ ತಂದು ಬಲಿಯನ್ನು ಮೆಲ್ಲಗೆ ನೆಲದ ಮೇಲೆ ಇಡಬೇಕು. ಹಿಂದೆ ಹೇಳಿದ ಪ್ರಕಾರ ಬಲಿಹರಣ ಮಾಡಿ ಮೊದಲು ಅತಿಥಿಯ ಭೋಜನ ಆಗಬೇಕು. ಸನ್ಯಾಸಿ ಬ್ರಹ್ಮಚಾರಿಗಳಿಗೆ ಭಿಕ್ಷೆ ಕೊಡಬೇಕು. ಮನೆಗೆ ಬಂದ ಅತಿಥಿಗೆ ಮುಖ ಕೈ ಕಾಲುಗಳಿಗೆ ನೀರು. ಕುಡಿಯಲು ನೀರು, ಇದ್ದಷ್ಟು ಅನ್ನ ಗೌರವವಾಗಿ ಕೊಡಬೇಕು. ಚಾಪೆ, ನೆಲ, ನೀರು, ಒಳ್ಳೆಯ ಮಾತು ಈ ನಾಲ್ಕಕ್ಕೆ ಒಳ್ಳೆಯವರ ಮನೆಯಲ್ಲಿ ಅಭಾವವೆಂದಿಗೂ ಇರುವುದಿಲ್ಲ.

ಈ ವಿಧವಾಗಿ ಗೃಹಸ್ಥನ ಧರ್ಮವು ಬಹಳ ಉದಾರವಾಗಿರಬೇಕು. ಕ್ರಿಮಿಕೀಟಗಳಿಗೆ, ಕಾಗೆ ನಾಯಿಗಳಿಗೆ ಮಾತ್ರವಲ್ಲದೆ ರೋಗದಿಂದ ನರಳುತ್ತಿರುವ ಜನರಿಗೂ, ದುಷ್ಕಾರ್ಯಗಳನ್ನು ಮಾಡಿದುದರಿಂದ ಬಹಿಷ್ಕಾರಕ್ಕೆ ಒಳಗಾಗಿರುವ ಜನರಿಗೂ, ಅತಿಥಿಗೂ, ವಿದ್ಯಾರ್ಥಿಗೂ, ಸನ್ಯಾಸಿಗೂ, ಊಟ ಉಪಚಾರಗಳನ್ನು ಮಾಡುವುದು ಗೃಹಸ್ಥನ ಧರ್ಮವೆಂದು ಘೋಷಿಸಲಾಗಿದೆ. ಆದರೆ ಇಷ್ಟು ಭೂತದಯೆ ಇರುವ ಗೃಹಸ್ಥನು ಅತಿಥಿಸತ್ಕಾರ ಮಾಡುವಾಗ ವರ್ಣ ವಿಭೇದಗಳನ್ನು ಅನುಸರಿಸಬೇಕೆಂದೂ ಸಹ ಮನಸ್ಮೃತಿಯಲ್ಲಿ ಹೇಳಲಾಗಿದೆ.

ಆಸನಾವಸಥೌ ಶಯ್ಯಾಮನುವ್ರಜ್ಯಾಮುಪಾಸನಂ ।
ಉತ್ತಮೇಷೂತ್ತಮಂ ಕುರ್ಯಾದ್ಧೀನೇ ಹೀನಂ ಸಮೇ ಸಮಂ ॥
ಯದಿ ತ್ವತಿಥಿಧರ್ಮೇಣ ಕ್ಷತ್ರಿಯೋ ಗೃಹಮಾವ್ರಜೇತ್ ।

ಭುಕ್ತವತ್ಸು ಚ ವಿಪ್ರೇಷು ಕಾಮಂ ತಮಪಿ ಭೋಜಯೇತ್ ॥
ವೈಶ್ಯಶೂದ್ರಾವಪಿ ಪ್ರಾಪ್ತೌ ಕುಟುಂಬೇಽತಿಥಿಧರ್ಮಿಣೌ ॥
ಭೋಜಯೇತ್ಸಹ ಭೃತ್ಯೈಸ್ತಾವಾನೃಶಂಸ್ಯಂ ಪ್ರಯೋಜಯನ್ ॥

ಮನು 3-107, 111, 112.

"ಆಸನ, ಸ್ಥಳ, ಶಯ್ಯಾದಿ ಉಪಚಾರವನ್ನು ಅವರವರ ಯೋಗ್ಯತಾನುಸಾರ ಮಾಡಬೇಕು. ಸಮಾನತೆಯು ಬೇಡ. ಆದರೆ ಕ್ಷತ್ರಿಯನು ತನ್ನ ಮನೆಗೆ ಅತಿಥಿಯಾಗಿ ಬಂದರೆ ಉಳಿದ ಬ್ರಾಹ್ಮಣವರ್ಗಕ್ಕೆ ಸೇರಿದ ಜನರನ್ನು ಸತ್ಕರಿಸಿದ ಮೇಲೆ ಆತನಿಗೆ ಭೋಜನವನ್ನು ಕೊಡಬೇಕು. ಹಾಗೆಯೇ ವೈಶ್ಯವರ್ಣ ಮತ್ತು ಶೂದ್ರವರ್ಣಕ್ಕೆ ಸೇರಿದ ಜನರು ಬಂದರೆ ಅವರಿಗೆ ಸೇವಕರ ಜೊತೆಯಲ್ಲಿ ಭೋಜನವನ್ನು ಕೊಡಬೇಕು."

ಇದು ಭಾರತೀಯ ಸಂಸ್ಕೃತಿಯ ಬಹಳ ಶೋಚನೀಯ ಸಂಗತಿ. ಪ್ರಾಣಿಗಳನ್ನೂ ಒಳ್ಳೆಯ ರೀತಿಯಿಂದ ನೋಡಿಕೊಳ್ಳುವುದು ಅವಶ್ಯಕವೆಂದು ಸೂಚಿಸಿರುವ ಸ್ಮೃತಿಕಾರರು ಮನುಷ್ಯರ ವಿಷಯದಲ್ಲಿ ಮಾತ್ರ ಅವರ ಜಾತಿಗಳಿಗೆ ಅನುಸಾರವಾಗಿ ಊಟ ಉಪಚಾರಗಳನ್ನು ಮಾಡಬೇಕೆಂದು ನಿಯಮಿಸಿರುವರು. ಸ್ಮೃತಿಕಾರರು ಬರೆದ ಕಾಲದಲ್ಲಿ ಸಾಮಾಜಿಕ ಸ್ಥಿತಿಗತಿಗಳು ಯಾವ ರೀತಿಯಲ್ಲಿ ಇತ್ತೆಂಬುದನ್ನು ಈಗ ನಮಗೆ ಹೇಳುವುದಕ್ಕೆ ಸಾಕಷ್ಟು ಆಧಾರವಿಲ್ಲ. ಆದರೆ ಕೀಳುಜಾತಿಯಲ್ಲಿ ಹುಟ್ಟಿದರೆಂಬ ಮನೋಭಾವವು ಇರುವುದರಿಂದ ಅವರನ್ನು ದೂರವಿರಬೇಕೆಂದೂ, ಎಲ್ಲರೂ ಊಟಮಾಡಿದ ಮೇಲೆ ಮಿಕ್ಕ ಆಹಾರವನ್ನು ಅವರಿಗೆ ಕೊಡಬೇಕೆಂದೂ ಇರುವ ನಿಯಮಗಳನ್ನು ನಾವು ಇಂದಿಗೂ, ಅದರಲ್ಲೂ ಮುಖ್ಯವಾಗಿ ಶೇ. 80 ಮಂದಿ ವಾಸವಾಗಿರುವ ಹಳ್ಳಿಗಳಲ್ಲಿ ಕಾಣಬಹುದು. ಇದು ಮಾನವತ್ವಕ್ಕೆ ಅತಿ ವಿರುದ್ಧವಾದ ವರ್ತನೆ. ಕೀಳುಜಾತಿಯವರಾದರೋ ಸ್ನಾನ ಮಾಡುವುದಿಲ್ಲ; ಕೊಳಕು ಬಟ್ಟೆಯನ್ನು ಹಾಕಿಕೊಳ್ಳುವರು. ಇವೆಲ್ಲವೂ ಸತ್ಯ. ಆದರೆ ಅವರು ನಮ್ಮಂತೆ ಮಾನವರೆಂಬ ಮನೋಭಾವವನ್ನು ತಾಳಿದರೆ ಅವರನ್ನು ತಿರಸ್ಕರಿಸುವುದು ಅಸಾಧ್ಯ. ಸಮತಾಭಾವನೆಯನ್ನು ಉಪನಿಷತ್ತು ಮತ್ತು ಗೀತೆಗಳಲ್ಲಿಯೇ ಹೇಳಲಾಗಿದೆ. ಎಲ್ಲ ಮಾನವರೂ ಎಲ್ಲ ಪ್ರಾಣಿಗಳೂ ಬ್ರಹ್ಮಸ್ವರೂಪವೆಂದು ಆ ಕಾಲದ ಋಷಿಗಳು ಮನಗಂಡಿದ್ದರು. ಇಂದಿನ ಭಾರತದ ಸಂವಿಧಾನವೂ ಈ ಸಮತಾಭಾವನೆಯನ್ನು ಒಪ್ಪಿಕೊಂಡಿರುವುದು. ಅಲ್ಲದೆ ಯಾರು ಜಾತಿ, ಮತ, ಲಿಂಗ ಭೇದಗಳ ಆಧಾರದ ಮೇಲೆ ಪಕ್ಷಪಾತ ಮಾಡುವರೋ ಅವರು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗುವರೆಂದೂ ಮತ್ತು ಸಮಾನತ್ವವು ಪ್ರತಿಯೊಬ್ಬ ಮಾನವನ ಆಜನ್ಮ ಹಕ್ಕೆಂದೂ ಸಂವಿಧಾನದಲ್ಲಿ ಘೋಷಿಸಲಾಗಿದೆ.

ಸಾವಿರಾರು ವರ್ಷಗಳಿಂದ ಸಮಾಜದ ಆಗಿನ ಕಟ್ಟುನಿಟ್ಟುಗಳನ್ನು ಒಪ್ಪಿಕೊಂಡು ಆ ಜನರು ಪಕ್ಷಪಾತ ವರ್ತನೆಯನ್ನು ಒಪ್ಪಿಕೊಳ್ಳುತ್ತಿದ್ದರು. ಆದರೆ ಈಗ ಸಂವಿಧಾನದ ಮತ್ತು ಕಾನೂನಿನ ಹಕ್ಕುಗಳ ಪರಿಜ್ಞಾನವನ್ನು ಹೊಂದಿರುವವರ ಈ ಭೇದಗಳಿಂದ ಕೂಡಿರುವ ವರ್ತನೆಯನ್ನು ಪ್ರತಿಭಟಿಸಿದರೆ ಆಶ್ಚರ್ಯವೇನೂ ಇಲ್ಲ. ಈ ವಿಧವಾದ ಸಾಮಾಜಿಕ ಕ್ಲಿಷ್ಟಪರಿಸ್ಥಿತಿಯು ಒದಗದೆ ಇರುವ ಹಾಗೆ ಯಾರು ತಾವು ಮೇಲುಜಾತಿಗೆ ಸೇರಿದವರೆಂಬ ಮನೋಭಾವವನ್ನು ಇಟ್ಟಿರ್ರುವರೋ ಅವರು ತಮ್ಮಲ್ಲಿ ಒಂದು ದೊಡ್ಡ ಪರಿವರ್ತನೆಯನ್ನು ಮಾಡಿಕೊಳ್ಳಬೇಕಾಗಿರುವುದು ಅಗತ್ಯ.

ಈಗ ಸಾಮಾಜಿಕ ಭೇದಗಳಿಗೆ ಸೇರಿದ ಮತ್ತೊಂದು ಅಂಶವನ್ನು ಕುರಿತು ಪರ್ಯಾಲೋಚಿಸಬಹುದು. ಮನುಸ್ಮೃತಿಯಲ್ಲಿ ಮಹಿಳೆಯರನ್ನು ಯಾವ ವಿಧವಾಗಿ ಗೌರವಿಸಬೇಕೆಂದು ಈ ಕೆಳಗಿನ ಶ್ಲೋಕಗಳು ತಿಳಿಸುವುವು.

ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।
ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥
ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ।
ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥
ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಂ ।
ನ ಶೋಚಂತಿ ತು ಯತ್ರೈತಾಃ ವರ್ಧತೇ ತದ್ಧಿ ಸರ್ವದಾ ॥
ಜಾಮಯೋ ಯಾನಿ ಗೇಹಾನಿ ಶಪಂತ್ಯಪ್ರತಿಪೂಜಿತಾಃ ।
ತಾನಿ ಕೃತ್ಯಾಹತಾನೀವ ವಿನಶ್ಯಂತಿ ಸಮಂತತಃ ॥
ತಸ್ಮಾದೇತಾಃ ಸದಾ ಪೂಜ್ಯಾ ಭೂಷಣಾಚ್ಛಾದನಾಶನೈಃ ।
ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷು ಚ ॥
ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ ॥

ಮನುಸ್ಮೃತಿ 3—55 ರಿಂದ 60.

'ಮಹಿಳೆಯರನ್ನು ಅವರ ತಂದೆಯರು ಅಣ್ಣತಮ್ಮಂದಿರು ಪತಿ ಮತ್ತು ಆತನ ಅಣ್ಣತಮ್ಮಂದಿರು ಎಲ್ಲರೂ ಗೌರವಿಸಬೇಕು ಮತ್ತು ಅವರಿಗೆ ಬೇಕಾದ ವಸ್ತ್ರ ಆಭರಣಗಳನ್ನು ಕೊಡಬೇಕು. ಯಾವ ಸಮಾಜದಲ್ಲಿ ಮಹಿಳೆಯರನ್ನು ಗೌರವಿಸುವರೋ ಅಲ್ಲಿ ದೇವತೆಗಳಿಗೆ ಪ್ರೀತಿಯುಂಟಾಗುವುದು. ಎಲ್ಲಿ ಅವರನ್ನು

ಗೌರವಿಸುವುದಿಲ್ಲವೋ ಅಲ್ಲಿ ಯಜ್ಞಗಳು ಪೂಜೆ ಪುಸಸ್ಕಾರಗಳು ನಿಷ್ಫಲಃ ಯಾವ ಕುಟುಂಬದಲ್ಲಿ ಮಹಿಳೆಯರು ಶೋಕದಿಂದ ಇರುವರೋ ಆ ಕುಟುಂಬವು ಸರ್ವ ನಾಶವನ್ನು ಹೊಂದುವುದು. ಆದರೆ ಯಾವ ಕುಟುಂಬದಲ್ಲಿ ಮಹಿಳೆಯರು ಸಂತೋಷ ದಿಂದ ಇರುವರೋ ಆ ಕುಟುಂಬವು ಯಾವಾಗಲೂ ಸಮೃದ್ಧಿಯಿಂದ ಕೂಡಿರು ವುದು. ಯಾವ ಮನೆಯಲ್ಲಿ ಮಹಿಳೆಯರನ್ನು ಗೌರವಿಸದೇ ಇರುವುದರಿಂದ ಅವರು ಮನನೊಂದು ನಿಂದೆಮಾಡುವರೋ ಆ ಕುಟುಂಬಗಳು ಸರ್ವನಾಶಕ್ಕೆ ಗುರಿಯಾಗುವುವು. ಆದ್ದರಿಂದ ಪುರುಷರು ತಮ್ಮ ಹಿತಕ್ಕೋಸ್ಕರ ಮಹಿಳೆಯ ರನ್ನು ಗೌರವಿಸಿ ಅವರಿಗೆ ಬೇಕಾದ ತೃಪ್ತಿಕರವಾದ ಊಟ ವಸ್ತ್ರ ಮತ್ತು ಆಭರಣ ಗಳನ್ನು ಕೊಡಬೇಕು. ಯಾವ ಕುಟುಂಬದಲ್ಲಿ ಪತಿಯು ಪತ್ನಿಯನ್ನು ಸಂತೋಷ ಗೊಳಿಸುವನೋ ಹಾಗೆಯೇ ಪತ್ನಿಯು ಪತಿಯನ್ನು ಸಂತೋಷಗೊಳಿಸುವಳೋ ಆ ಕುಟುಂಬದಲ್ಲಿ ಶಾಶ್ವತವಾಗಿ ಸುಖ ಸಂತೋಷವಿರುವುದು ”

ಮೇಲೆ ಕೊಟ್ಟಿರುವ ಮನಸ್ಮೃತಿಯ ಈ ಶ್ಲೋಕಗಳು ಮಹಿಳೆಯರನ್ನು ಕುರಿತು ಇಡಬೇಕಾದ ಪೂಜ್ಯಭಾವನೆಯನ್ನು ವಿವರಿಸುವುವು. ಪ್ರಾಯಶಃ ಇನು ಯಾವ ದೇಶದ ಯಾವ ಭಾಷೆಯ ಸಾಹಿತ್ಯದಲ್ಲೂ ಇದನ್ನು ಮೀರಿದ ಭಾವನೆ ಗಳನ್ನು ಸೂಚಿಸಿರಲಾರದೆಂದು ಹೇಳಬಹುದು.

ಆದರೆ ಸ್ಮೃತಿಯು, ಮಹಿಳೆಯು ಸದಾ ಅಬಲೆಯೆಂದೂ ಅವಳನ್ನು ಎಲ್ಲಾ ಕಾಲದಲ್ಲಿಯೂ ಒಬ್ಬ ಪುರುಷನು ನೋಡಿಕೊಳ್ಳಬೇಕೆಂದೂ ಸಹ ಹೇಳು ತುವುದು.

ಬಾಲಯಾ ವಾ ಯುವತ್ಯಾ ವಾ ವೃದ್ಧಯಾ ವಾಪಿ ಯೋಷಿತಾ
ನ ಸ್ವಾತಂತ್ರ್ಯೇಣ ಕರ್ತವ್ಯಂ ಕಿಂಚಿತ್ಕಾರ್ಯಂ ಗೃಹೇಷ್ವಪಿ ||
ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವನೇ |
ಪುತ್ರಾಣಾಂ ಭರ್ತರಿ ಪ್ರೇತೇ ನ ಭಜೇತ್ ಸ್ತ್ರೀ ಸ್ವತಂತ್ರತಾಂ ||

ಮನು. 5—147, 148.

“ ಒಬ್ಬ ಹುಡುಗಿ, ಯುವತಿ ಅಥವಾ ಮುದುಕಿಯೂ ಸಹ ತನ್ನ ಮನೆ ಯಲ್ಲೇ ಆದರೂ ಸ್ವತಂತ್ರವಾಗಿ ಯಾವ ಕಾರ್ಯವನ್ನೂ ಮಾಡಬಾರದು. ಬಾಲ್ಯ ದಲ್ಲಿ ತಂದೆಯ ರಕ್ಷಣೆಯಲ್ಲಿರಬೇಕು. ಯೌವ್ವನದಲ್ಲಿ ಗಂಡನ ರಕ್ಷಣೆಯಲ್ಲಿ ಇರ ಬೇಕು. ಮುಪ್ಪಿನಲ್ಲಿ ಪುತ್ರರ ಆಶ್ರಯದಲ್ಲಿ ಹೆಂಗಸರು ಬಾಳಬೇಕಾಗಿದೆ. ಸ್ವತಂತ್ರ ವಾಗಿ ಅವಳು ಎಂದಿಗೂ ಇರಕೂಡದು. ”

ಇದೇ ಮನೋಭಾವವನ್ನು ಮನುಸ್ಮೃತಿಯ ಒಂಭತ್ತನೆಯ ಅಧ್ಯಾಯದಲ್ಲೂ ಸಹ ಕಾಣಬಹುದು.

ಹೆಂಗಸಾದರೋ ತನ್ನ ಪತಿಯು ಎಷ್ಟು ದುಷ್ಟನಾದರೂ ದುರ್ಗುಣದಿಂದ ಕೂಡಿದ್ದರೂ ಅವನನ್ನು ಪೂಜ್ಯಭಾವನೆಯಿಂದ ನೋಡಬೇಕು.

ವಿಶೀಲಃ ಕಾಮವೃತ್ತೋ ವಾ ಗುಣೈರ್ವಾ ಪರಿವರ್ಜಿತಃ ।
ಉಪಚರ್ಯಃ ಸ್ತ್ರಿಯಾ ಸಾಧ್ವ್ಯಾ ಸಂತತಂ ದೇವವತ್ಪತಿಃ ॥

ಮನು. 5—154

"ತನ್ನ ಗಂಡನು ಗುಣಹೀನನಾಗಿದ್ದರೂ, ಅವನ ಸುಖಕ್ಕೋಸ್ಕರ ಬೇರೆ ಹೆಂಗಸರ ಸಂಪರ್ಕವಿಟ್ಟುಕೊಂಡಿದ್ದರೂ ಅವನನ್ನು ತನ್ನ ಪತಿದೇವನೆಂದು ತಿಳಿದು ಒಳ್ಳೆಯ ಸಾಧ್ವಿಯು ಅವನನ್ನು ಉಪಚರಿಸಬೇಕು."

ಆ ಕಾಲದಲ್ಲಿ ಸ್ತ್ರೀಯರ ವಿಷಯದಲ್ಲಿ ತುಚ್ಛ ಭಾವನೆಗಳು ಇದ್ದುವೆಂಬುದನ್ನು ಮನುಸ್ಮೃತಿಯ ಮತ್ತೆ ಕೆಲವು ಶ್ಲೋಕಗಳು ಸೂಚಿಸುವುವು.

ಅಸ್ವತಂತ್ರಾಃ ಸ್ತ್ರಿಯಃ ಕಾರ್ಯಾಃ ಪುರುಷೈಸ್ವೈರ್ದಿವಾನಿಶಂ ।
ವಿಷಯೇಷು ಚ ಸಜ್ಜಂತ್ಯಃ ಸಂಸ್ಥಾಪ್ಯಾ ಆತ್ಮನೋ ವಶೇ ॥
ಸೂಕ್ಷ್ಮೇಭ್ಯೋಽಪಿ ಪ್ರಸಂಗೇಭ್ಯಃ ಸ್ತ್ರಿಯೋ ರಕ್ಷ್ಯಾ ವಿಶೇಷತಃ ।
ದ್ವಯೋರ್ಹಿ ಕುಲಯೋಃ ಶೋಕಮಾವಹೇಯುರರಕ್ಷಿತಾಃ ॥
ನ ಕಶ್ಚಿದ್ಯೋಷಿತಃ ಶಕ್ತಃ ಪ್ರಸಹ್ಯ ಪರಿರಕ್ಷಿತುಂ ।
ಏತೈರುಪಾಯಯೋಗೈಸ್ತು ಶಕ್ಯಾಸ್ತಾಃ ಪರಿರಕ್ಷಿತುಂ ॥
ಅರ್ಥಸ್ಯ ಸಂಗ್ರಹೇ ಚೈನಾಂ ವ್ಯಯೇ ಚೈವ ನಿಯೋಜಯೇತ್ ।
ಶೌಚೇ ಧರ್ಮೇಽನ್ನಪಕ್ತ್ಯಾಂ ಚ ಪಾರಿಣಾಹ್ಯಸ್ಯವೇಕ್ಷಣೇ ॥

ಮನು. 9—2,5,10,11.

ಹಗಲೂ ರಾತ್ರಿ ಹೆಂಗಸರನ್ನು ಪುರುಷರು ರಕ್ಷಣೆಮಾಡಬೇಕು. ಸ್ತ್ರೀಯರು ಇಂದ್ರಿಯ ವಿಷಯಗಳಲ್ಲಿ ಆಸಕ್ತರಾದರೆ ಅವರನ್ನು ತನ್ನ ವಶದಲ್ಲಿ ಇಟ್ಟುಕೊಂಡಿರಬೇಕು. ಅತಿ ಚಿಕ್ಕ ಸಂದರ್ಭಗಳಲ್ಲಿಯೂ ಹೆಂಗಸಿನ ಮನಸ್ಸು ಕೆಟ್ಟ ದಾರಿಯಲ್ಲಿ ಹೋಗದಿರುವ ಹಾಗೆ ಅವರನ್ನು ರಕ್ಷಿಸಬೇಕು. ಹಾಗೆ ಮಾಡದೇ ಹೋದರೆ ಎರಡು ಕುಟುಂಬಗಳಿಗೂ ಅವಳಿಂದ ದುಃಖ ಉಂಟಾಗುವುದು. ಯಾವ ಮನುಷ್ಯನೇ ಆಗಲಿ ಹೆಂಗಸರನ್ನು ಬಲಾತ್ಕಾರದಿಂದ ರಕ್ಷಿಸಲು ಅಶಕ್ತನಾಗುವನು. ಧನ ಸಂಗ್ರಹಣೆಯಲ್ಲಿಯೂ, ಧನ ವ್ಯಯದಲ್ಲಿಯೂ, ಗೃಹವನ್ನು ಶುಚಿಯಾಗಿ ಇಡುವುದರಲ್ಲಿಯೂ ವ್ರತಗಳೇ ಮುಂತಾದ ಕರ್ತವ್ಯಗಳನ್ನು ಮಾಡುವುದರಲ್ಲಿಯೂ ಅಡಿಗೆ ಮಾಡುವುದರಲ್ಲಿಯೂ, ಮನೆಯ ಸಾಮಾನುಗಳನ್ನು ನೋಡಿಕೊಳ್ಳುವುದರಲ್ಲಿಯೂ ಇಂತಹ ಉದ್ಯೋಗಗಳಲ್ಲಿ ಆಕೆಯು ನಿರತಳಾಗುವಂತೆ ಮಾಡಿ ಅವಳನ್ನು ಕಾಪಾಡಬೇಕು.

ಈ ವಿಧವಾಗಿ ಮನುಸ್ಮೃತಿಯು ಸ್ತ್ರೀಯರು ಮಕ್ಕಳ ಹಾಗೆ ಅಸ್ವತಂತ್ರ ರೆಂಬ ಭಾವನೆಯನ್ನು ಮತ್ತು ಅವರ ಮನೋದೌರ್ಬಲ್ಯವನ್ನು ಸೂಚಿಸುವುದು ಮತ್ತು ಯಾವ ಪುರುಷನನ್ನು ತಾನು ಹಡೆದು ಸಾಕಿ ಬೆಳೆಸುವಳೋ ಆತನೇ ತನ್ನನ್ನು ನೋಡಿಕೊಳ್ಳಲು ಸಮರ್ಥನಾಗುವನೆಂಬ ಅಭಿಪ್ರಾಯವನ್ನು ಪ್ರತಿಪಾದಿಸುವುದು. ಸ್ಮೃತಿಯ ಈ ದೃಷ್ಟಿಯನ್ನು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಸಂಹಿತೆ ಮಂತ್ರಗಳಲ್ಲಿ ವಿವರಿಸುವುದರ ಜೊತೆಯಲ್ಲಿ ಹೋಲಿಸಿ ನೋಡಿದರೆ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸ್ಥಾನವು ಯಾವ ವಿಧವಾಗಿ ಹೀನ ಸ್ಥಿತಿಯನ್ನು ಹೊಂದಿತೆಂಬುದನ್ನು ತಿಳಿಯಲು ವಿಷಾದವಾಗುವುದು. ವೇದಾಧ್ಯಯನವನ್ನು ಮಾಡಿ ಯಜ್ಞಯಾಗಾದಿಗಳಲ್ಲಿ ತನ್ನ ಗಂಡನ ಜೊತೆಯಲ್ಲಿ ಸರಿಸಮಾನಳಾಗಿ ಮಂತ್ರಗಳನ್ನು ಹೇಳುವ ಹಕ್ಕನ್ನು ಪಡೆದಿದ್ದ ಸ್ತ್ರೀ ಕಾರಣಾಂತರಗಳಿಂದ ಸ್ಮೃತಿಕಾಲದಲ್ಲಿ ಅನಕ್ಷರಸ್ಥಳಾಗಿ ಗಂಡನು ತೀರಿಹೋದ ಮೇಲೆ ತನ್ನ ಮಕ್ಕಳ ಅಧೀನದಲ್ಲಿರುವ ಪರಿಸ್ಥಿಯನ್ನು ಹೊಂದಿದಳು. ಈ ಸ್ಥಿತಿಯು ಸುಮಾರು ಎರಡು ಸಾವಿರ ವರ್ಷಗಳಿದ್ದು ಈಗ ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ ಭಾರತೀಯ ಸಂವಿಧಾನದ ಪ್ರಕಾರ ತನ್ನ ಸ್ವಾತಂತ್ರ್ಯವನ್ನು ಮತ್ತೆ ಗಳಿಸಿ ಪುರುಷನ ಜೊತೆಯಲ್ಲಿ ಸರಿಸಮಾನರಾಗಿ ಪಾಠಪ್ರವಚನಮಾಡಿ ಗೃಹದಲ್ಲಿಯೂ ಸಮಾಜದಲ್ಲಿಯೂ ಸಮಾನ ಹಕ್ಕುಗಳನ್ನು ಪಡೆದಿರುವರು. ಅಂದರೆ ಸ್ತ್ರೀಯರು ವೇದಗಳ ಕಾಲದಲ್ಲಿ ತಮಗಿದ್ದ ಸ್ಥಾನವನ್ನು ಈಗ ಮತ್ತೆ ಪಡೆದಿರುವರು.

ಒಟ್ಟಿನಲ್ಲಿ ಮಾನವ ಸಮಾಜದ ಹಿತಕ್ಕೂ ಮತ್ತು ಅಭ್ಯುದಯಕ್ಕೂ ಗೃಹಸ್ಥಾಶ್ರಮವು ಅಡಿಗಲ್ಲು ಎಂಬ ಅಭಿಪ್ರಾಯವನ್ನು ಮನುಸ್ಮೃತಿಯಲ್ಲಿ ಹೀಗೆ ಸೂಚಿಸಲಾಗಿದೆ.

ಯಸ್ಮಾತ್ತ್ರಯೋಪ್ಯಾಶ್ರಮಿಣೋ ಜ್ಞಾನೇನಾನ್ನೇನ ಚಾನ್ವಹಂ ।
ಗೃಹಸ್ಥೇನೈವ ಧಾರ್ಯಂತೇ ತಸ್ಮಾಜ್ಜ್ಯೇಷ್ಠಾಶ್ರಮೋ ಗೃಹೀ ॥

ಮನು. 3—78

'ಬ್ರಹ್ಮಚಾರಿ, ವಾನಪ್ರಸ್ಥ ಮತ್ತು ಸಂನ್ಯಾಸಿಗಳು ಎಲ್ಲರೂ ಗೃಹಸ್ಥನ ಮೇಲೆ ಪರಾವಾಲಂಬಿಗಳಾಗಿ ಇರುವುದರಿಂದ ಗೃಹಸ್ಥಾಶ್ರಮವೇ ಶ್ರೇಷ್ಠವು.'

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋ ಯತಿಸ್ತಥಾ ।
ಏತೇ ಗೃಹಸ್ಥಪ್ರಭವಾಶ್ಚತ್ವಾರಃ ಪೃಥಗಾಶ್ರಮಾಃ ॥

ಮನು. 6—87

'ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿ ಈ ನಾಲ್ಕು ಮಂದಿಯೂ ಗೃಹಸ್ಥಾಶ್ರಮದಿಂದಲೇ ಉತ್ಪತ್ತಿಯಾಗುತ್ತಾರೆ.'

ದೃಹವೇ ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳ ಸಾಧನೆಗೆ ಮೂಲ. ಮಕ್ಕಳನ್ನು ಪಡೆದು ಅವರನ್ನು ಪ್ರೀತಿಯಿಂದ ಪೋಷಿಸಿ ಅವರು ಸಮಾಜದ ಅಭ್ಯುದಯಕ್ಕೆ ಶ್ರಮಿಸುವ ಹಾಗೆ ಮಾಡುವವರು ತಾಯಿ ತಂದೆಗಳು. ಆದುದರಿಂದಲೇ ಗೃಹಸ್ಥಾಶ್ರಮವು ಮಾನವನ ಜೀವನದಲ್ಲಿ ಮತ್ತು ಮಾನವ ಸಮಾಜದಲ್ಲಿ ಅತಿಮುಖ್ಯವಾದ ಮತ್ತು ಅತಿಶ್ರೇಷ್ಠವಾದ ಆಶ್ರಮ.

d) ವಾನಪ್ರಸ್ಥಾಶ್ರಮ

ತನಗೆ ಮೊಮ್ಮಕ್ಕಳು ಹುಟ್ಟಿದಮೇಲೆ ಗೃಹಸ್ಥಾಶ್ರಮವನ್ನು ತ್ಯಜಿಸಿ ವಾನಪ್ರಸ್ಥಾಶ್ರಮಕ್ಕೆ ಕಾಲಿಡಬೇಕು. ಮನುಸ್ಮೃತಿಯ ಪ್ರಕಾರ ದಂಪತಿಗಳು ಈ ವಯಸ್ಸಿನಲ್ಲಿ ತಮ್ಮ ಮನೆ, ಮಕ್ಕಳು ಮೊಮ್ಮಕ್ಕಳು, ಆಸ್ತಿ, ಊರು ಎಲ್ಲವನ್ನು ಬಿಟ್ಟು ಒಂದು ವನಕ್ಕೆ ಹೋಗಬೇಕು. ಆದರೆ ವಾನಪ್ರಸ್ಥಾಶ್ರಮದಲ್ಲೂ ಪಂಚಮಹಾಯಜ್ಞಗಳನ್ನು ಮಾಡಬೇಕು. ಮನುಸ್ಮೃತಿಯಲ್ಲಿ ಹೇಳಿರುವ ಹಾಗೆ

ಅಪ್ರಯತ್ನಃ ಸುಖಾರ್ಥೇಷು ಬ್ರಹ್ಮಚಾರೀ ಧರಾಶಯಃ ।
ಶರಣೇಷ್ವಮಮಶ್ಚೈವ ವೃಕ್ಷಮೂಲನಿಕೇತನಃ ॥
ನ ಫಾಲಕೃಷ್ಟಮಶ್ನೀಯಾದುತ್ಸೃಷ್ಟಮಪಿ ಕೇನಚಿತ್ ।
ನ ಗ್ರಾಮಜಾತಾನ್ಯಾರ್ತೋಽಪಿ ಮೂಲಾನಿ ಚ ಫಲಾನಿ ಚ ॥
ಸ್ವಾಧ್ಯಾಯೇ ನಿತ್ಯಯುಕ್ತಃ ಸ್ಯಾದ್ದಾಂತೋ ಮೈತ್ರಃ ಸಮಾಹಿತಃ ।
ದಾತಾ ನಿತ್ಯಮನಾದಾತಾ ಸರ್ವಭೂತಾನುಕಂಪಕಃ ॥

ಮನು. 6—26,16,8.

'ಸುಖ ಸಾಧನೆಯಲ್ಲಿ ಪ್ರಯತ್ನ ಮಾಡದೆ ಸ್ತ್ರೀ ಸಂಗ ಬಿಟ್ಟು ನೆಲದಲ್ಲಿ ಮಲಗಿ ಮರದಡಿಯನ್ನೇ ಮನೆಯಾಗಿ ಮಾಡಿಕೊಂಡು ಒಳ್ಳೆಯ ಮನೆಯ ಆಸೆಯನ್ನು ತೊರೆಯಬೇಕು.

ನೇಗಿಲಿನಿಂದ ಉತ್ತು ಬೆಳೆದ ಧಾನ್ಯಗಳನ್ನು ಸ್ವೀಕರಿಸಬಾರದು. ಮತ್ತು ತನಗೆ ಎಷ್ಟು ಹಸಿವಾದರೂ ಗ್ರಾಮದಲ್ಲಿ ಬೆಳೆದ ಹಣ್ಣುಗಳನ್ನಾಗಲೀ, ಗೆಡ್ಡೆಗೆಣಸುಗಳನ್ನಾಗಲೀ ತೆಗೆದುಕೊಳ್ಳಬಾರದು.

ಸದಾ ವೇದಾಧ್ಯಯನ ಮಾಡಬೇಕು. ಶೀತೋಷ್ಣಗಳನ್ನು ಸಹಿಸಿ ಸಕಲ ಪ್ರಾಣಿಗಳಲ್ಲೂ ಮಿತ್ರನಂತೆ ವರ್ತಿಸುತ್ತ ದಯಾಮಯನಾಗಿ ಪ್ರತಿಗ್ರಹ ಮಾಡದೆ ದಾನ ಮಾಡುತ್ತ ಸರ್ವೋಪಕಾರಿಯಾಗಬೇಕು.

ವಾನಪ್ರಸ್ಥಾಶ್ರಮದ ಮುಖ್ಯ ಗುರಿ ಏನೆಂದರೆ ನಾಲ್ಕನೆಯ ಪುರುಷಾರ್ಥವಾದ ಆತ್ಮ ಸಾಕ್ಷಾತ್ಕಾರದ ಪ್ರಯತ್ನ. ಗೃಹಸ್ಥಾಶ್ರಮದಲ್ಲಿ ಅರ್ಥ ಮತ್ತು ಕಾಮಗಳ

ಸಾಧನೆಯನ್ನು ಧರ್ಮರೀತಿಯಲ್ಲಿ ಮಾಡಿ ನಂತರ ಮನೆ ಆಸ್ತಿ ಮಕ್ಕಳಿನ ಮೇಲಿನ ಆಸಕ್ತಿಯನ್ನು ಬಿಟ್ಟು ಆತ್ಮಸಾಕ್ಷಾತ್ಕಾರದ ಕಡೆಗೆ ದೃಷ್ಟಿಯನ್ನು ಒಯ್ಯಬೇಕು.

ಇದು ಮಾನವನ ಜೀವನದಲ್ಲಿ ಬಹು ಮುಖ್ಯವಾದ ಅಂಶ. ಅನೇಕರು ಎಷ್ಟು ಧನವನ್ನು ಸಂಪಾದಿಸಿದರೂ ಎಷ್ಟು ಆಸ್ತಿಯನ್ನು ಗಳಿಸಿದರೂ ತಮ್ಮ ಕಾರ್ಯಕಲಾಪಗಳಿಂದ ನಿವೃತ್ತಿಯನ್ನು ಹೊಂದಲು ಒಪ್ಪುವುದಿಲ್ಲ. ವ್ಯಾಮೋಹ ದಿಂದ ತಮ್ಮ ಕೆಲಸಗಳನ್ನು ಮಾಡಬೇಕೆಂದು ತಮ್ಮ ಮನೆಯಲ್ಲಿ ಅಧಿಕಾರವನ್ನು ಚಲಾಯಿಸಬೇಕೆಂಬ ಆಸೆಯನ್ನು ಹೊಂದಿರುವರು. ಇದರಿಂದ ತಮಗೂ ಕಷ್ಟ; ತಮ್ಮ ಮಕ್ಕಳಿಗೂ ಕಷ್ಟ. ಈ ಆಶಾಭಂಗಗಳ ಮೂಲಕ ಪುರುಷನೇ ಆಗಲಿ ಸ್ತ್ರೀಯೇ ಆಗಲಿ ತಮಗೆ ಸುಮಾರು ಅರವತ್ತು ವರುಷಗಳ ವಯಸ್ಸಿನ ಸಮಯ ದಲ್ಲಿ ಮನೋರೋಗಗಳಿಗೆ ಬಲಿಯಾಗುವರು.

ವ್ಯಕ್ತಿಯು ತನ್ನ ಮಕ್ಕಳೂ, ಮೊಮ್ಮಕ್ಕಳೂ ಬೆಳೆದ ಮೇಲೂ ಸಹ ವಿಷಯಗಳಲ್ಲಿ ಆಸಕ್ತನಾಗಿದ್ದರೆ ಅವನ ಜೀವನದ ಅಂತಿಮ ಗುರಿಯನ್ನು ಸಾಧಿಸಲು ಅಶಕ್ತನಾಗುವನು; ಮತ್ತು ಮಕ್ಕಳು ಬೆಳೆದಮೇಲೆ ಅವರ ಮೇಲೆಯೂ ತನ್ನ ಆಸ್ತಿಯ ಮೇಲೂ ಅಧಿಕಾರವನ್ನು ಚಲಾಯಿಸಲು ಅಸಮರ್ಥ ನಾಗುವನು. ತಾನು ಹೇಳಿದುದನ್ನು ಮಕ್ಕಳು ಒಪ್ಪದೇಹೋದರೆ ನಿರಾಶನಾಗಿ ಮನೋವ್ಯಥೆಗೆ ಗುರಿಯಾಗುವನು. ಸಾಧಾರಣವಾಗಿ ಒಂದು ತಲೆಮಾರಿನ ಜನ ಗಳಿಗೂ ಮತ್ತೊಂದು ತಲೆಮಾರಿನ ಜನಗಳಿಗೂ ಜೀವನದೃಷ್ಟಿಯಲ್ಲಿ ಹೆಚ್ಚಾದ ವ್ಯತ್ಯಾಸಗಳೂ ಇರುವುವು. ಈ ವ್ಯತ್ಯಾಸಗಳು ಮನಶ್ಶಾಂತಿಗೆ ಅಡಚಣೆಯನ್ನು ತಂದೊಡ್ಡುವುವು. ಆದುದರಿಂದ ಭಾರತೀಯ ಸಂಸ್ಕೃತಿಯಲ್ಲಿ ವಾನಪ್ರಸ್ಥಾಶ್ರಮವನ್ನು ಜೀವನ ಪಥದಲ್ಲಿ ಒಂದು ಮುಖ್ಯ ಹಂತವೆಂದು ಪರಿಗಣಿಸಲಾಗಿದೆ. ಈ ಹಂತದ ಗುರಿಯು ನಿರ್ಲಿಪ್ತತೆ. ಆದುದರಿಂದಲೇ ಪತಿ ಪತ್ನಿಯರು ತಮ್ಮ ಮನೆಯನ್ನೂ, ಕುಟುಂಬದವರನ್ನೂ, ಊರನ್ನೂ ಬಿಟ್ಟು ಬೇರೆ ಒಂದು ಸಣ್ಣ ಮನೆ ಮಾಡಿ ಕೊಂಡು ತಮ್ಮ ಕುಟುಂಬದಲ್ಲಿದ್ದ ಆಸಕ್ತಿಯನ್ನು ಕ್ರಮೇಣ ತ್ಯಜಿಸಬೇಕು. ಭಾರತೀಯ ಸಂಸ್ಕೃತಿಯಲ್ಲಿ ಸೂಚಿಸಿರುವ ಹಾಗೆ ಈ ವಯಸ್ಸಿನಲ್ಲಿ ಪ್ರವೃತ್ತಿ ಮಾರ್ಗ ವನ್ನು ತ್ಯಜಿಸಿ ನಿವೃತ್ತಿಮಾರ್ಗವನ್ನು ಅನುಸರಿಸುವುದು ವ್ಯಕ್ತಿಗೆ ಶ್ರೇಯಸ್ಕರ. ಇದು ವಾನಪ್ರಸ್ಥಾಶ್ರಮದ ಮುಖ್ಯ ತತ್ವ. ಕ್ರಮೇಣ ಮನುಸ್ಮೃತಿಯಲ್ಲಿ ಸೂಚಿ ಸಿರುವ ಹಾಗೆ ವಾನಪ್ರಸ್ಥಾಶ್ರಮದಿಂದ ನಾಲ್ಕನೆಯ ಆಶ್ರಮವಾದ ಸನ್ಯಾಸಾ ಶ್ರಮವನ್ನು ಸ್ವೀಕರಿಸಬೇಕು.

ವನೇಷು ಚ ವಿಹೃತ್ಯೈವಂ ತೃತೀಯಂ ಭಾಗಮಾಯುಷಃ ।
ಚತುರ್ಥಮಾಯುಷೋ ಭಾಗಂ ತ್ಯಕ್ತ್ವಾ ಸಂಗಾನ್ ಪರಿವ್ರಜೇತ್ ॥

ಮನು. 6, 33.

ಹೀಗೆ ಜೀವನದ ಮೂರನೆಯ ಭಾಗವನ್ನು ವನದಲ್ಲಿ ಕಳೆದು ನಾಲ್ಕನೆಯ ಭಾಗದಲ್ಲಿ ಸರ್ವಸಂಗಪರಿತ್ಯಾಗ ಮಾಡಬೇಕು.

e) ಸನ್ಯಾಸಾಶ್ರಮ

ಸಂನ್ಯಾಸಾಶ್ರಮವನ್ನು ಕುರಿತು ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ

ಏಕ ಏವ ಚರೇನ್ನಿತ್ಯಂ ಸಿಧ್ಯರ್ಥಮಸಹಾಯವಾನ್ ।
ಸಿದ್ಧಿಮೇಕಸ್ಯ ಸಂಪಶ್ಯನ್ನ ಜಹಾತಿ ನ ಹೀಯತೇ ॥
ಅನಗ್ನಿರನಿಕೇತಃ ಸ್ಯಾದ್ಗ್ರಾಮಮನ್ನಾರ್ಥಮಾಶ್ರಯೇತ್ ।
ಉಪೇಕ್ಷಕೋಽಸಂಕುಸುಕೋ ಮುನಿರ್ಭಾವಸಮಾಹಿತಃ ॥
ಕಪಾಲಂ ವೃಕ್ಷಮೂಲಾನಿ ಕುಚೇಲಮಸಹಾಯತಾ ।
ಸಮತಾಚೈವ ಸರ್ವಸ್ಮಿನ್ನೇತನ್ಮುಕ್ತಸ್ಯ ಲಕ್ಷಣಂ ॥

ಮನು. 6–42, 43, 44.

ಈಗ ಯಾವ ಸಂಗಾತಿಯೂ ಇಲ್ಲದೆ ಒಬ್ಬಂಟಿಗನಾಗಿ ಲೋಕದಲ್ಲಿ ತಿರುಗಾಡಬೇಕು. ಏಕೆಂದರೆ ಸಿದ್ಧಿಯನ್ನು ಪಡೆಯಬೇಕಾದರೆ ಒಬ್ಬಂಟಿಗನಾಗಿ ಇರಬೇಕಾಗುವುದು ಅವಶ್ಯಕ. ಆದುದರಿಂದ ಮನೆ ಮಡದಿಯನ್ನು ಬಿಟ್ಟು ದೇಹ ಸುಖದಲ್ಲಿ ಅನಾಸಕ್ತಿಯನ್ನು ಹೊಂದಿ ಬ್ರಹ್ಮಮನನ ಮತ್ತು ಧ್ಯಾನಮಗ್ನನಾಗಿರ ಬೇಕಾದರೆ ತನಗೆ ಬೇಕಾದ ಸ್ವಲ್ಪ ಆಹಾರವನ್ನು ಭಿಕ್ಷೆಯೆತ್ತಿ ಜೀವಿಸಬೇಕು. ಇದಕ್ಕೆ ಮಣ್ಣಿನ ಓಡು, ಮರದಡಿಯ ನಿವಾಸ, ಹಾನ ಮುಚ್ಚುವಷ್ಟು ಬಟ್ಟೆ ಶತ್ರು ಮಿತ್ರ ಭಾವವನ್ನು ಬಿಡುವುದು ಇವೇ ಸಮಾಹಿತನ ಲಕ್ಷಣಗಳು.

ಈ ವಿಧವಾಗಿ ಜೀವನದ ಅಂತಿಮದೆಸೆಯಲ್ಲಿ ವನದ ಮನೆ ಮತ್ತು ಹೆಂಡತಿಯನ್ನೂ ಸಹ ಬಿಟ್ಟು ಆತ್ಮಸಾಕ್ಷಾತ್ಕಾರವೇ ಜೀವನದ ಮುಖ್ಯಗುರಿಯನ್ನಾಗಿ ಮಾಡಿಕೊಳ್ಳುವವನು ಸಂನ್ಯಾಸಿ. ವಾನಪ್ರಸ್ಥಾಶ್ರಮದಲ್ಲಿ ಭಿಕ್ಷೆ ಬೇಡಬಾರದು. ಗೆಡ್ಡೆಗೆಣಸುಗಳನ್ನು ಫಲಗಳನ್ನು ತನ್ನ ಅತಿಥಿಗಳಿಗೂ ಕೊಟ್ಟು ತಾನೂ ತಿನ್ನಬೇಕು. ಆದರೆ ಸನ್ಯಾಸಾಶ್ರಮದಲ್ಲಿ ಭಿಕ್ಷೆ ಬೇಡಿ ಆಹಾರವನ್ನು ಪಡೆಯಬಹುದು. ಈ ವ್ಯತ್ಯಾಸಕ್ಕೆ ಕಾರಣವೇನೆಂಬುದನ್ನೂ ಊಹಿಸಬಹುದು. ವಾನಪ್ರಸ್ಥಾಶ್ರಮದಲ್ಲಿ ಮನೆ ಮತ್ತು ಊರನ್ನು ಬಿಟ್ಟು ವನದಲ್ಲಿ ವಾಸಿಸಬೇಕು. ಆದರೆ ಸಂನ್ಯಾಸಾಶ್ರಮದಲ್ಲಿ ಊರಿನಲ್ಲಿ ಮತ್ತು ಸಮಾಜದಲ್ಲಿ ಪುನಃ ಬದುಕಬೇಕಾಗಿರುವುದು. ಆದರೆ ಈ ವಯಸ್ಸಿನಲ್ಲಿ ಈ ಸ್ಥಿತಿಯಲ್ಲಿ ಕೆಲಸಮಾಡಿ ಹಣ ಸಂಪಾದಿಸುವುದು ಅಸಾಧ್ಯ. ಆದುದರಿಂದಲೇ ಸಂನ್ಯಾಸಿಯು ತನಗೆ ಬೇಕಾದಷ್ಟನ್ನು ಮಾತ್ರ ಭಿಕ್ಷೆಯ ಮೂಲಕ ಪಡೆಯಬಹುದೆಂಬ ನಿಯಮವು. ಆದರೆ ಆ ಕಾಲದಲ್ಲಿಯೂ

ಸಹ ಸಂನ್ಯಾಸಿಗಳಲ್ಲಿ ಪ್ರೀತಿ ವಿಶ್ವಾಸಗಳು ಇರಲಿಲ್ಲವೆಂದು ಮನುಸ್ಮೃತಿಯೇ ಸೂಚಿಸುವುದು.

ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ ।
ನ ಚೇಮಂ ದೇಹಮಾಶ್ರಿತ್ಯ ವೈರಂ ಕುರ್ವೀತ ಕೇನಚಿತ್ ॥
ಕ್ರುಧ್ಯಂತಂ ನ ಪ್ರತಿಕ್ರುಧ್ಯೇದಾಕ್ರುಷ್ಟಃ ಕುಶಲಂ ವದೇತ್ ।
ಸಪ್ತದ್ವಾರಾವಕೀರ್ಣಾಂ ಚ ನ ವಾಚಮನೃತಾಂ ವದೇತ್ ॥
ಅಲ್ಪಾನ್ನಾಭ್ಯವಹಾರೇಣ ರಹಃಸ್ಥಾನಾಸನೇನ ಚ ।
ಹ್ರಿಯಮಾಣಾನಿ ವಿಷಯೈರಿಂದ್ರಿಯಾಣಿ ನಿವರ್ತಯೇತ್ ॥
ಇಂದ್ರಿಯಾಣಾಂ ನಿರೋಧೇನ ರಾಗದ್ವೇಷಕ್ಷಯೇಣ ಚ ।
ಅಹಿಂಸಯಾ ಚ ಭೂತಾನಾಮಮೃತತ್ವಾಯ ಕಲ್ಪತೇ ॥

ಮನು. 6—47,48,59,60.

'ಇತರರು ತನ್ನನ್ನು ನಿಂದಿಸಿದರೂ ತಾನು ಶಾಂತಿಯಿಂದ ಇರಬೇಕು. ತನ್ನ ದೇಹವನ್ನು ಕಾಪಾಡುವುದಕ್ಕೋಸ್ಕರ ತನ್ನನ್ನು ನಿಂದಿಸುವವರಲ್ಲಿ ವೈರವನ್ನು ಬೆಳೆಸಬಾರದು. ತನ್ನ ಮೇಲೆ ಕೋಪಿಸಿಕೊಂಡವನ ಮೇಲೆ ತಾನು ಕೋಪ ಮಾಡಬಾರದು. ತನ್ನನ್ನು ಬೈಯುವವರಿಗೆ ಶುಭವನ್ನು ಕೋರಬೇಕು, ತನ್ನ ಮಾತು ಎಂದಿಗೂ ಅಸತ್ಯದಿಂದ ಕೂಡಿರಬಾರದು. ಅಲ್ಪಾಹಾರಮಾಡುವುದರಿಂದಲೂ ಯಾವಾಗಲೂ ಒಂಟಿಯಾಗಿರುವುದರಿಂದಲೂ ತನ್ನ ಇಂದ್ರಿಯಗಳ ಮೇಲೆ ಹತೋಟಿ ಇಟ್ಟುಕೊಂಡಿರಬೇಕು, ಇಂದ್ರಿಯಗಳ ನಿರೋಧದಿಂದಲೂ ಮತ್ತು ರಾಗದ್ವೇಷಗಳ ಕ್ಷೀಣತೆಯಿಂದಲೂ, ಅಹಿಂಸೆಯಿಂದಲೂ, ಅಮೃತತ್ವವನ್ನು ಪಡೆಯಬಹುದು.

ಈ ವಿಧವಾಗಿ ಆ ಕಾಲದಲ್ಲಿಯೇ ಸಂನ್ಯಾಸವನ್ನು ಸ್ವೀಕರಿಸಿದ ವ್ಯಕ್ತಿಯು ಜನರ ದೂಷಣೆಗೆ ಪಾತ್ರನಾಗುತ್ತಿದ್ದನೆಂದು ತಿಳಿಯಲು ವಿಷಾದವಾಗುವುದು. ಇಂದೂ ಅದೇ ಸ್ಥಿತಿ ಇರುವುದು. ಅನಾಸಕ್ತಿಯಿಂದ ಎಲ್ಲವನ್ನೂ ತ್ಯಜಿಸಿದ ವ್ಯಕ್ತಿ ಯಾರು? ಕೇವಲ ಕೆಲಸಮಾಡದೆ ತನ್ನ ಜೀವನೋಪಾಯಕ್ಕೋಸ್ಕರ ಸಂನ್ಯಾಸವೇಷವನ್ನು ಹಾಕಿರುವವನು ಯಾರು? ಎಂದು ಪತ್ತೆಹಚ್ಚಲು ಬಹಳ ಕಷ್ಟ. ನಿಜವಾದ ಸಂನ್ಯಾಸಿ ಒಬ್ಬನಾದರೆ ಕಪಟಿಗಳು ಸಾವಿರಾರು ಇರಬಹುದು. ಆದುದರಿಂದ ಜನಗಳಿಗೆ ಸಂನ್ಯಾಸಿಗಳನ್ನು ಕಂಡರೆ ಒಂದು ಕಡೆ ಗೌರವ. ವಿಶ್ವಾಸ, ಮತ್ತೊಂದುಕಡೆ ತಿರಸ್ಕಾರ. ಆದುದರಿಂದಲೇ ಆದಿಶಂಕರಾಚಾರ್ಯರು ಎಂಟನೆಯ ಶತಮಾನದಲ್ಲಿಯೇ ದೇಶದ ನಾಲ್ಕು ಭಾಗಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ, ಅಲ್ಲಿ ಯತಿಗಳಿಗೆ ಅನುಕೂಲವಾಗುವ ಹಾಗೆ ಮಾಡಿದರು. ಹಾಗೆಯೇ ಸ್ವಾಮಿ ವಿವೇಕಾನಂದರು ಇತ್ತೀಚೆಗೆ ಶ್ರೀ ರಾಮಕೃಷ್ಣಾಶ್ರಮಗಳನ್ನು ಸ್ಥಾಪಿಸಿ ಅಲ್ಲಿ ಸಂನ್ಯಾಸಿಗಳು ಸಮಾಜ ಸೇವೆಯನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವರು.

ಇದೇ ವಿಧವಾಗಿ ಇತ್ತೀಚೆಗೆ ದೇಶದ ನಾನಾಕಡೆ ಮಠಗಳನ್ನೂ, ಆಶ್ರಮಗಳನ್ನೂ ಸ್ಥಾಪಿಸಲಾಗಿದೆ. ಆದರೂ ಲಕ್ಷಾಂತರ ಮಂದಿ ಸಂನ್ಯಾಸಿಗಳು ಅಲೆಯುತ್ತಿರುವರು. ಇವರಿಗೋಸ್ಕರ ಬಹು ಹಿಂದಿನ ಕಾಲದಿಂದಲೂ ಋಷಿಕೇಶ ಮತ್ತು ಹರಿದ್ವಾರ ಮುಂತಾದ ಪ್ರಸಿದ್ಧ ಸ್ಥಳಗಳಲ್ಲಿ ಪ್ರತಿ ಮಧ್ಯಾಹ್ನ ಒಂದು ಉಚಿತ ಊಟದ ವ್ಯವಸ್ಥೆ ಮಾಡಿರುವರು.

ಮುಖ್ಯವಾಗಿ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಹಳೆಯ ಸಂಪ್ರದಾಯದ ಅನಿಕೇತ ಸಂನ್ಯಾಸಿಗಳು ದೇಶದ ನಾನಾಕಡೆ ತಿರುಗಾಡುವುದು ಸರಿಯಲ್ಲ. ಅವರು ಯಾವುದಾದರೊಂದು ಆಶ್ರಮದಲ್ಲಿ ಇದ್ದು ಸಮಾಜಸೇವೆಯನ್ನು ಮತ್ತು ತಮ್ಮ ಆತ್ಮಸಾಕ್ಷಾತ್ಕಾರದ ಸಿದ್ಧತೆಯ ಪ್ರಯತ್ನವನ್ನು ಮಾಡಬೇಕು.

ಸುವರ್ಣ ನಿಯಮ

ಅಧ್ಯಾಯ — 6

'ನಿನ್ನಂತೆಯೇ ನಿನ್ನ ನೆರೆಯವರನ್ನು ಪ್ರೀತಿಸು' ಎಂಬ ಬೈಬಲ್ಲಿನ ಅಮೋಘ ವಚನವು 'ಸುವರ್ಣ ನಿಯಮ'ವೆಂದು ಪ್ರಸಿದ್ಧವಾಗಿದೆ. ಆದರೆ ಬೈಬಲ್ಲಿಗಿಂತ ಸುಮಾರು ಐನೂರು ವರ್ಷಗಳ ಹಿಂದೆಯೇ ಈ ನಿಯಮವನ್ನು ಮಹಾಭಾರತದಲ್ಲೂ ಭಗವದ್ಗೀತೆಯಲ್ಲೂ ಅನೇಕ ಕಡೆ ಸೂಚಿಸಿರುವುದನ್ನು ಭಾರತೀಯ ಮತ್ತು ಇತರ ದೇಶಗಳ ವಿದ್ವಾಂಸರು ಸರಿಯಾಗಿ ಗಮನಿಸದಿರುವುದು ಸರ್ವಥಾ ಶೋಚನೀಯ. ವ್ಯಾಸರ ಪ್ರಕಾರ ಧರ್ಮದ ಸಾರಸರ್ವಸ್ವವು ಹೀಗಿರುವುದು.

ಶ್ರೂಯತಾಂಧರ್ಮ ಸರ್ವಸ್ವಂ ಶ್ರುತ್ವಾಚಾಪ್ಯವಧಾರ್ಯತಾಂ ।
ಆತ್ಮನಃ ಪ್ರತಿಕೂಲಾನಿ ನ ಪರೇಷಾಂ ಸಮಾಚರೇತ್ ॥

'ನಮಗೆ ಯಾವುದು ಪ್ರತಿಕೂಲವೊ ಅದನ್ನು ಇತರರಿಗೆ ಮಾಡಬಾರದು.' ಅನುಶಾಸನ ಪರ್ವದಲ್ಲಿ (113–8) ಈ ರೀತಿ ಹೇಳಿದೆ :

ನ ತತ್ಪರಸ್ಯ ಸಂದಧ್ಯಾತ್ ಪ್ರತಿಕೂಲಂ ಯದಾತ್ಮನಃ ।
ಏಷ ಸಂಕ್ಷೇಪತೋ ಧರ್ಮಃ ಕಾಮಾದನ್ಯಃ ಪ್ರವರ್ತತೇ ॥

"ಯಾವುದು ನಮಗೆ ಹಾನಿಕರವೊ ಅದನ್ನು ನಾವು ಇತರರಿಗೆ ಮಾಡಬಾರದು. ಇದೇ ಧರ್ಮದ ಸಾರ. ಉಳಿದ ವರ್ತನೆಯು ಕಾಮ ಪ್ರಚೋದಿತವಾದುದು."

ಶಾಂತಿಪರ್ವದಲ್ಲಿ ತುಲಾಧಾರನು ಜಾಜಲಿಗೆ ಹೀಗೆ ಹೇಳಿರುವನು.

ಸರ್ವೇಷಾಂ ಯಃ ಸ್ಯುಹೃನ್ನಿತ್ಯಂ ಸರ್ವೇಷಾಂ ಚ ಹಿತೇ ರತಃ ।
ಕರ್ಮಣಾ ಮನಸಾ ವಾಚಾ ಸ ಧರ್ಮಂ ವೇದ ಜಾಜಲೇ ॥

ಮಹಾ. ಶಾಂತಿ. 261·9

"ಯಾರು ತನ್ನ ವರ್ತನೆ, ಮಾತು ಮತ್ತು ಮನಸ್ಸುಗಳಲ್ಲಿ ಇತರರ ಹಿತವನ್ನು ಕೋರುವನೋ ಮತ್ತು ಇತರರಲ್ಲಿ ಸ್ನೇಹಪೂರ್ವಕವಾಗಿ ಇರುವನೋ ಆತನಿಗೆ ಧರ್ಮದ ಅರ್ಥವು ಸರಿಯಾಗಿ ತಿಳಿದಿದೆ."

ತನಗೆ ಯಾವುದು ನೋವನ್ನುಂಟುಮಾಡುತ್ತದೋ ಅದನ್ನು ಇತರರಿಗೆ ಮಾಡಬಾರದು. ತನಗೆ ಯಾವುದು ಹಿತಕರವಲ್ಲವೋ ಅದನ್ನು ಇತರರಿಗೆ

ಮಾಡಬೇಕು. ಇದೇ 'ಸುವರ್ಣ ನಿಯಮ'ದ ಮುಖ್ಯಭಾವ. ಈ ಭಾವನೆಯು ಯಾವ ಮನುಷ್ಯನಲ್ಲಿರುವುದೋ ಅವನು ನಿಜವಾಗಿಯೂ ಮಾನವ ವರ್ಗಕ್ಕೆ ಸೇರಿದ ವ್ಯಕ್ತಿ. ಈ ಭಾವನೆ ಇಲ್ಲದಿದ್ದರೆ ಅವನನ್ನು ಕೇವಲ ಪಶು ಎಂದು ಹೇಳಬೇಕಾಗುವುದು.

ಒಂದು ಬೆಕ್ಕನ್ನೋ, ನಾಯಿಯನ್ನೋ ಅಥವಾ ಕೋತಿಯನ್ನೋ ಒಬ್ಬನು ತಿವಿದರೆ ಕೂಡಲೇ ಆ ಪ್ರಾಣಿಯು ಅವನನ್ನು ಪರಚುವುದು. ಇದು ಪ್ರಾಣಿಯ ಸ್ವಭಾವ. ಇದೇ ವಿಧವಾದ ವರ್ತನೆಯನ್ನು ಚಿಕ್ಕ ಮಕ್ಕಳಲ್ಲಿಯೂ ಬಾಲಕರಲ್ಲಿಯೂ ಕೋಪಭಯಗ್ರಸ್ತರಾದ ವಯಸ್ಕರಲ್ಲಿಯೂ. ಮದ್ಯಪಾನ ಮಾಡಿದವರಲ್ಲಿಯೂ, ನಿದ್ರಾವಸ್ಥೆಯಲ್ಲಿರುವವರಲ್ಲಿಯೂ ನೋಡಬಹುದು. ಅಂದರೆ ಸಣ್ಣ ವಯಸ್ಸಿನವರೂ ಮತ್ತು ವಯಸ್ಕರಾದವರೂ ಆ ಅವಸ್ಥೆಗಳಲ್ಲಿರಬೇಕಾದ ನೀತಿನಿಯಮಗಳನ್ನು ಪಾಲಿಸದೆ ಬಂದು ಪ್ರಾಣಿಯು ವರ್ತಿಸುವಂತೆ ವರ್ತಿಸುವರು. ಆದರೆ ಮನುಷ್ಯನ ವರ್ತನೆಯು ನೀತಿನಿಯಮಗಳನ್ನು ಅನುಸರಿಸುವುದು. ಈ ನೀತಿನಿಯಮಗಳಲ್ಲಿ ಸುವರ್ಣ ನಿಯಮವು ಅಡಿಗಲ್ಲು ಎಂದು ಹೇಳಬಹುದು.

ಈ ಸುವರ್ಣ ನಿಯಮಕ್ಕೆ ಆಧಾರವೆಂದರೆ ಉಪನಿಷತ್ತುಗಳು ಸೂಚಿಸಿರುವ ಸತ್ಯ, ಎಲ್ಲಾ ಭೂತಗಳೂ ಪ್ರಾಣಿಗಳೂ ಬ್ರಹ್ಮಸ್ವರೂಪ ಎಂಬ ದೃಷ್ಟಿ.

ಈಶಾವಾಸ್ಯೋಪನಿಷತ್ತಿನ ಆರನೇ ಮಂತ್ರವು ಹೀಗೆ ಹೇಳಿದೆ.

> ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।
> ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ।

'ಯಾವನು ಸರ್ವಪ್ರಾಣಿಗಳನ್ನು ತನ್ನ ಆತ್ಮದಲ್ಲಿಯೇ ನೋಡುವನೋ ಮತ್ತು (ತನ್ನ) ಆತ್ಮವನ್ನು ಸರ್ವಪ್ರಾಣಿಗಳಲ್ಲಿ (ನೋಡವನೋ) ಅವನು ಅವರಿಂದ ಜುಗುಪ್ಸೆಯನ್ನು ಹೊಂದುವುದಿಲ್ಲ.

ಇತರರು ತನ್ನಂತೆಯೇ ಮನುಷ್ಯರು; ಅವರಿಗೂ ತನ್ನಂತೆಯೇ ಕೋಪ. ಭಯ, ಮಾನ, ಅವಮಾನ ಮುಂತಾದ ಮನೋಭಾವಗಳು ಮನೋವ್ಯಾಪಾರಗಳು ಇರುವುವೆಂಬುದನ್ನು ಮನಗಂಡರೆ ಅವರ ವಿಷಯದಲ್ಲಿ ಅಸಹ್ಯತೆ ಉಂಟಾಗಲು ಸಾಧ್ಯವಾಗುವುದಿಲ್ಲ. ಇದೇ ಸತ್ಯವನ್ನು ಗೀತೆಯು ಸ್ಪಷ್ಟವಾಗಿ ನಿರೂಪಿಸಿರುವುದು.

> ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
> ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥
> ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
> ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥

ಗೀತೆ. VI — 29, 32.

" ಎಲ್ಲೆಲ್ಲಿಯೂ ಸಮದರ್ಶಿಯಾಗಿರುವ ಯೋಗ ಯುಕ್ತಾತ್ಮನು ಆತ್ಮನನ್ನು ಸರ್ವಭೂತಗಳಲ್ಲಿಯೂ, ಸರ್ವಭೂತಗಳನ್ನು ಆತ್ಮನಲ್ಲಿಯೂ ಕಾಣುತ್ತಾನೆ. (ಎಲೈ ಅರ್ಜುನ) ಯಾವನು ಎಲ್ಲಾ ಪ್ರಾಣಿಗಳಲ್ಲಿಯೂ ಸುಖವನ್ನಾಗಲಿ, ದುಃಖವನ್ನಾಗಲಿ ತನ್ನಂತೆಯೇ ಸಮವಾಗಿ ನೋಡುವನೋ ಆ ಯೋಗಿಯು ಶ್ರೇಷ್ಠನೆಂದು (ನನ್ನ) ಅಭಿಪ್ರಾಯ. "

ಈ ವಿಷಯವನ್ನು ಕುರಿತು ಆಪಸ್ತಂಬ ಧರ್ಮಸೂತ್ರವು ಹೀಗೆ ಹೇಳಿದೆ:

' ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ । '

ಎಲ್ಲಾ ಪ್ರಾಣಿಗಳನ್ನೂ, ಎಲ್ಲ ಮನುಷ್ಯರನ್ನೂ ತನ್ನಂತೆಯೇ ಯಾವನು ನೋಡುವನೋ ಅವನೇ ಸರಿಯಾಗಿ ನೋಡುತ್ತಾನೆ.

ಗೀತೆಯಲ್ಲಿ ಮತ್ತೊಂದು ಶ್ಲೋಕವು ಈ ಸತ್ಯವನ್ನು ಇನ್ನೊಂದು ರೀತಿಯಲ್ಲಿ ಪ್ರತಿಪಾದಿಸುತ್ತದೆ.

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥

ಗೀತೆ — IX — 29.

ನಾನು ಸಮಸ್ತ ಭೂತಗಳಲ್ಲಿಯೂ ಸಮನಾಗಿರುತ್ತಾನೆ. ನನಗೆ ಶತ್ರುವೂ ಇಲ್ಲ, ಮಿತ್ರನೂ ಇಲ್ಲ. ಆದರೆ ಭಕ್ತಿಪೂರ್ವಕವಾಗಿ ಯಾರು ನನ್ನನ್ನು ಭಜಿಸುತ್ತಾರೆಯೋ ಅವರು ನನ್ನಲ್ಲಿ ಇರುವರು ಮತ್ತು ನಾನೂ ಕೂಡ ಅವರಲ್ಲಿ ಇರುವೆನು.

ಡಿ.ವಿ.ಜಿ.ಯವರು ತಮ್ಮ ಗ್ರಂಥ ' ಸಂಸ್ಕೃತಿ 'ಯಲ್ಲಿ ಈ ರೀತಿ ಹೇಳಿರುವರು. "ಯಾವ ತನ್ನ ಒಂದು ನಡುವಳಿಕೆಯಿಂದ ಅನ್ಯರಿಗೆ ಸಂತುಷ್ಟಿಯಾದೀತು, ಯಾವುದರಿಂದ ಅನಿಷ್ಟವಾದೀತು ಎಂಬುದನ್ನು ಮನಗಾಣಬೇಕಾದರೆ ಆ ಇತರರ ಸ್ಥಾನದಲ್ಲಿ ತನ್ನನ್ನು ತಾನು ಇರಿಸಿಕೊಳ್ಳಬೇಕು." (ಪು. 80) ಈ ವಿಧವಾಗಿ ತನ್ನನ್ನು ಮತ್ತೊಬ್ಬನಲ್ಲಿ ಐಕ್ಯಮಾಡಿ ನೋಡುವ ಅಭ್ಯಾಸವನ್ನು ಮಾಡುವವನೇ ಸುಸಂಸ್ಕೃತನು.

ಗೀತೆಯ ಬಹಳ ಪ್ರಸಿದ್ಧವಾದ ಶ್ಲೋಕವು ಹೀಗೆ ಹೇಳಿದೆ.

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥

' ವಿದ್ಯಾವಿನಯಗಳಿಂದ ಕೂಡಿದವನನ್ನೂ, ಬ್ರಾಹ್ಮಣನನ್ನೂ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು — ಇವರೆಲ್ಲರಲ್ಲೂ ಜ್ಞಾನಿಗಳು ಸಮದರ್ಶಿಗಳಾಗಿರುವರು. '

ಈ ಶ್ಲೋಕದಲ್ಲಿ ಎಲ್ಲಾ ಪ್ರಾಣಿಗಳನ್ನೂ ಎಲ್ಲ ಕುಲಗಳಿಗೆ ಸೇರಿದ ಮಾನವರನ್ನು ಬ್ರಹ್ಮಸ್ವರೂಪವೆಂದು ತಿಳಿಯುವುದು ಜ್ಞಾನಿಗಳ ಲಕ್ಷಣ ಎಂದು ಹೇಳಲಾಗಿದೆ. ಆದರೆ ಈ ಸಮದೃಷ್ಟಿಯನ್ನು ಎಲ್ಲ ಮಾನವರೂ ಹೊಂದಬೇಕು. ನಿಜವಾಗಿ ನೋಡಿದರೆ ನಾಲ್ಕಾರು ತಿಂಗಳ ಮಗು ಈ ಸಮದೃಷ್ಟಿಯನ್ನು ಹೊಂದಿರುವುದು. ನಾಲ್ಕಾರು ವರ್ಷದ ಮಕ್ಕಳೂ ಸಹ ಸಾಮಾಜಿಕ ಸ್ತರವಿನ್ಯಾಸಗಳ ತಿಳುವಳಿಕೆ ಇಲ್ಲದಿರುವಾಗ ಎಲ್ಲರಲ್ಲಿಯೂ ಸಮತ್ವದಿಂದ ವರ್ತಿಸುವುವು. ಆದರೆ ತಾಯಿತಂದೆಗಳು ಮಕ್ಕಳ ಈ ಸಮವರ್ತನೆಯು ತಮ್ಮ ಗುಂಪಿನ ಸಾಮಾಜಿಕ ಕಟ್ಟುನಿಟ್ಟಿಗೆ ಸರಿಹೊಂದುವುದಿಲ್ಲವೆಂದೂ, ಸ್ವಾಭಾವಿಕವಾದ ಸಮತಾಭಾವವನ್ನು ಮಗುವು ತ್ಯಜಿಸಿ ಮನುಷ್ಯರಲ್ಲಿ ಭೇದಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬೇರೆಬೇರೆ ಗುಂಪುಗಳಿಗೆ ಸೇರಿದ ಬೇರೆಬೇರೆ ವ್ಯಕ್ತಿಗಳನ್ನು ಅಸಮಾನತೆಯಿಂದ ನೋಡುವ ಹಾಗೆ ಮಕ್ಕಳಿಗೆ ಹೇಳಿಕೊಡುವರು. ಮಕ್ಕಳು ಹಾಗೆ ಮಾಡದೆ ಎಲ್ಲ ಗುಂಪಿನ ವ್ಯಕ್ತಿಗಳನ್ನು ಸಮವಾಗಿ ಕಂಡರೆ ಅವರನ್ನು ಶಿಕ್ಷಿಸುವರು. ಈ ವಿಧವಾಗಿ ಮಗು ಬೆಳೆಯುತ್ತಾ ಸಮತಾಭಾವವನ್ನು ತ್ಯಜಿಸಿ ಭೇದಭಾವವನ್ನು ಹೊಂದುವ ಹಾಗೆ ತಾಯಿತಂದೆಗಳು ಮತ್ತು ನೆಂಟರು ಮಗುವಿಗೆ ಶಿಕ್ಷಣವನ್ನು ಕೊಡುವರು. ಇದು ಶೋಚನೀಯ ಮತ್ತು ದೇಶದ ಅಭಿವೃದ್ಧಿಗೆ ಅಡಚಣೆಯನ್ನು ಉಂಟುಮಾಡುವುದು. ಒಂದು ಹಳ್ಳಿಯ ಜನರಲ್ಲಿ ನೀವು ಬೇರೆ ಗುಂಪಿನವರು, ನಾವು ಬೇರೆ ಗುಂಪಿನವರು. ನಿಮ್ಮನ್ನು ನಾವು ಮುಟ್ಟಬಾರದು. ಎಂಬ ಭಾವನೆಗಳು ಇದ್ದರೆ ಅವು ಹಳ್ಳಿಯ ಅಭಿವೃದ್ಧಿಗೆ ಅಡಚಣೆಯನ್ನು ತರುವುವು. ಗೀತೆಯಲ್ಲಿ ಹೇಳಿರುವ ಹಾಗೆ

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ ।
ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂಗತಿಮ್ ॥

ಏಕೆಂದರೆ ಎಲ್ಲಾ ಕಡೆಯಲ್ಲಿಯೂ ಸಮನಾಗಿರುವ ಈಶ್ವರನನ್ನು ಸಮನಾಗಿ ನೋಡುತ್ತಿರುವವನು ತನ್ನಿಂದ ತನ್ನನ್ನು ನಾಶಮಾಡಿಕೊಳ್ಳುವುದಿಲ್ಲ. ಆ ಕಾರಣದಿಂದ ಅವನು ಪರಗತಿಯನ್ನು ಹೊಂದುತ್ತಾನೆ.

ಮೇಲೆ ಕೊಟ್ಟಿರುವ ಗೀತೆಯ ಆರನೇ ಅಧ್ಯಾಯದ ಮೂವತ್ತೆರಡನೇ ಶ್ಲೋಕವು ಹೀಗೆ ಹೇಳಿದೆ. '**ಯಃ ಸರ್ವತ್ರ ಆತ್ಮೌಪಮ್ಯೇನ ಯದಿ ವಾ ಸುಖಂ ವಾ ದುಃಖಂ ಸಮಪಶ್ಯತಿ.**' ಅಂದರೆ ಯಾವನು ಎಲ್ಲ ಮಾನವರನ್ನೂ ತನ್ನಂತೆಯೇ ನೋಡುವನೋ ಆವನು ಅವರಿಗೂ ತನ್ನಂತೆಯೇ ಸುಖದುಃಖಗಳು ಇರುವುವೆಂದೂ, ಅವರಿಗೆ ಸುಖವುಂಟಾದರೆ ತಾನೂ ಸಂತೋಷಪಡಬೇಕೆಂದೂ, ಅವರಿಗೆ ದುಃಖವುಂಟಾದರೆ ತಾನೂ ವ್ಯಥೆಪಡಬೇಕೆಂದೂ ಇರುವ ಧ್ಯೇಯವು

ನಿಜವಾಗಿಯೂ ಮಾನವತ್ವವನ್ನು ಸೂಚಿಸುವುದು. ಇದು ಯೋಗಿ ಮಾತ್ರ ಮಾಡುವ ಕೆಲಸವಲ್ಲ. ಇದು ಪ್ರತಿಯೊಬ್ಬ ಮಾನವನ ಕರ್ತವ್ಯ. ಮಕ್ಕಳು ಬೆಳೆಯುತ್ತಾ ತಮಗೆ ಸಹಜವಾಗಿ ಇರುವ ಸಮತಾಭಾವವನ್ನು ಬೆಳೆಸಿಕೊಂಡು ಬರುವ ಹಾಗೆ ಮಾಡುವುದು ತಂದೆತಾಯಿಗಳ ಕರ್ತವ್ಯ.

ಈ ವಿಧವಾಗಿ. ಸುವರ್ಣನಿಯಮದ ಪ್ರತಿಪಾದನೆಯು ಮತ್ತು ಈ ನಿಯಮಕ್ಕೆ ಅಡಿಗಲ್ಲಾದ ಸಮತಾಭಾವನೆಯು ಉಪನಿಷತ್ತುಗಳಲ್ಲೂ, ಗೀತೆಯಲ್ಲೂ, ಧರ್ಮಸೂತ್ರಗಳಲ್ಲೂ ನಿರೂಪಿತವಾಗಿದೆ. ವರ್ಣಧರ್ಮ ಮತ್ತು ಜಾತಿಧರ್ಮಗಳು ಸಾಮಾಜಿಕ ಏಣಿಶ್ರೇಣಿಯು, ಮೇಲುಕೀಳು ಜನ್ಮತಃ ಸಿದ್ಧವಾಗಿವೆ ಎಂಬ ಅಭಿಪ್ರಾಯವನ್ನು ಸೂಚಿಸಿದರೆ ತದ್ವಿರೋಧವಾಗಿ ಈ ಸಮತಾಭಾವವು ಎಲ್ಲಾ ಮಾನವರನ್ನೂ ಸಮದೃಷ್ಟಿಯಿಂದ ನೋಡಬೇಕೆಂದು ಆದೇಶಿಸುವುದು. ಈ ಭಾವನೆಯು ಆಧುನಿಕ ಸಮಾಜದ ಆದರ್ಶವು. ಆದುದರಿಂದ ಸಮತ್ವವು ಮೂಲ ಭೂತಹಕ್ಕೆಂದು ಭಾರತೀಯ ಸಂವಿಧಾನವು ಒಪ್ಪಿಕೊಂಡು ಜಾತಿ, ಮತ, ಲಿಂಗ ಭೇದ ಮುಂತಾದವುಗಳ ಆಧಾರದ ಮೇಲೆ ತಾರತಮ್ಯಗಳನ್ನು ಅಥವಾ ಭೇದ ಭಾವನೆಗಳನ್ನು ವ್ಯಕ್ತಪಡಿಸಿದರೆ ಅದು ಕಾನೂನಿಗೆ ವಿರುದ್ಧವೆಂದು ಘೋಷಿಸಿದೆ. ಈ ರೀತಿಯಾಗಿ ಸಂವಿಧಾನವು ಧರ್ಮನಿಯಮವನ್ನು ಕಾನೂನಿನ ರೂಪದಲ್ಲಿ ಪ್ರತಿಪಾದಿಸುವುದು.

ಅಧ್ಯಾಯ — 7

ಸಾಧಾರಣ ಧರ್ಮ

ಸಾಮಾನ್ಯವಾಗಿ 'ಧರ್ಮ' ಎನ್ನುವ ಪದವು ವರ್ಣಧರ್ಮವನ್ನೊ, ಆಶ್ರಮಧರ್ಮವನ್ನೊ ಸೂಚಿಸುವುದೆಂದು ತಿಳಿಯುವರು. ಮೂರನೆಯ ಅಧ್ಯಾಯದಲ್ಲಿ ವಿವರಿಸಿರುವ ಹಾಗೆ ವರ್ಣಧರ್ಮವು ಸಾಮಾಜಿಕ ಕಟ್ಟುನಿಟ್ಟುಗಳನ್ನು ಒಳಗೊಂಡಿರುವುದು. ಒಬ್ಬ ವ್ಯಕ್ತಿಯು ಯಾವ ಜಾತಿಯಲ್ಲಿ ಹುಟ್ಟುವನೋ ಆ ಜಾತಿಯ ಪದ್ಧತಿಗಳನ್ನು ಅವನು ಅವಲಂಬಿಸಬೇಕೆಂಬುದೇ ವರ್ಣಧರ್ಮದ ಮುಖ್ಯ ತತ್ವ. ತನ್ನ ಜಾತಿಯ ವೃತ್ತಿಯನ್ನು ಅನುಸರಿಸಿ ತನ್ನ ಜಾತಿಯಲ್ಲಿ ಮದುವೆ ಮಾಡಿಕೊಂಡು ತನ್ನ ಜಾತಿಯವರ ಮನೆಗಳಲ್ಲಿ ಅಥವಾ ತನಗಿಂತ ಉತ್ತಮ ಜಾತಿಯವರ ಮನೆಯಲ್ಲಿ ಊಟಮಾಡಿ ಮತ್ತು ತನಗಿಂತ ಕೀಳು ಜಾತಿಯವರ ಮನೆಯಲ್ಲಿ ಊಟಮಾಡದೆ ಹೋದರೆ ಆಗ ವರ್ಣಧರ್ಮವನ್ನು ಪಾಲಿಸಿದಂತಾಗುವುದು.

ಜಾತಿಗೂ ವೃತ್ತಿಗೂ ಇರುವ ಈ ಸಂಬಂಧವು ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಅರ್ಥವಿಲ್ಲದು. ಮುಖ್ಯವಾಗಿ ದೊಡ್ಡದೊಡ್ಡ ಪಟ್ಟಣಗಳಲ್ಲಿ ಔದ್ಯೋಗಿಕ ಕ್ರಾಂತಿ ಕಾರಣದಿಂದ ಸಾವಿರಾರು ಹೊಸ ಉದ್ಯೋಗಗಳು ಉಂಟಾಗಿವೆ. ಆದುದರಿಂದ ಜಾತಿವೃತ್ತಿಗೂ ಮತ್ತು ಸಮಾಜದಲ್ಲಿ ಇರುವ ಇತರ ವೃತ್ತಿಗಳಿಗೂ ಯಾವ ಸಂಬಂಧವೂ ಇಲ್ಲ. ಆದರೆ ಹಳ್ಳಿಯ ಆರ್ಥಿಕ ಸ್ಥಿತಿಯು ಇಂದಿಗೂ ಸಾಂಪ್ರದಾಯಿಕ ಮಟ್ಟದಲ್ಲಿಯೇ ಇರುವುದರಿಂದ ಹಳ್ಳಿಯ ಆರ್ಥಿಕ ಜೀವನದಲ್ಲಿ ಜಾತಿಗೂ ವೃತ್ತಿಗೂ ನಿಕಟ ಸಂಬಂಧವಿರುವುದು. ಆರ್ಥಿಕ ಅಭಿವೃದ್ಧಿಯು ಹಳ್ಳಿಗಳಿಗೆ ವಿಸ್ತರಿಸಿದರೆ ಆಗ ಜಾತಿಗೂ ವೃತ್ತಿಗೂ ಇರುವ ಸಂಬಂಧವು ಅಳಿಸಿಹೋಗುವುದಕ್ಕೆ ಅವಕಾಶವಿರುವುದು.

ಸಾಮಾನ್ಯವಾಗಿ ಪಟ್ಟಣಗಳಲ್ಲಿ ಸಹಪಂಕ್ತಿಯು ಬಳಕೆಗೆ ಬಂದಿರುವುದರಿಂದ ಭೋಜನ ವಿಷಯದಲ್ಲಿ ಜಾತಿಗಿಂತ ನೈರ್ಮಲ್ಯವೇ ಮುಖ್ಯ ಅಂಶವೆಂದು ಪರಿಗಣಿಸಲಾಗುತ್ತಿದೆ. ಆದರೆ ವರ್ಣಧರ್ಮದ ಅಥವಾ ಜಾತಿಧರ್ಮದ ಮುಖ್ಯ ಚಟುವಟಿಕೆಯಾದ ಮದುವೆ ಬಹಳ ಮಟ್ಟಿಗೆ ಜಾತಿ ಪದ್ಧತಿಯನ್ನೇ ಅನುಸರಿಸುತ್ತಿರುವುದು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ, ಅಂದರೆ 1955 ರಲ್ಲಿ ಮದುವೆಯನ್ನು ಕುರಿತ ಶಾಸನವು ಬದಲಾವಣೆಯನ್ನು ಪಡೆದಿರುವ ಕಾರಣ ಈಗ ಕಾನೂನಿನ ಪ್ರಕಾರ ಅಂತರ್ಜಾತೀಯ ವಿವಾಹಗಳು ಸಮರ್ಪಕ. ಆದರೂ ಸಾಮಾನ್ಯ

ವಾಗಿ ಸಂಪ್ರದಾಯದ ಬಲದಿಂದಲೂ, ಮದುವೆಗಳನ್ನು ಪರಸ್ಪರ ಕುಟುಂಬಗಳ ಹಿರಿಯರು ಏರ್ಪಡಿಸುವ ಕಾರಣದಿಂದಲೂ ವಿವಾಹಗಳು ಜಾತಿಯ ಒಳಗೇ ನಡೆಯುವುವು.

ಸಂಪ್ರದಾಯದ ಪ್ರಕಾರ ವರ್ಣಧರ್ಮವನ್ನು ಅಥವಾ ಜಾತಿಧರ್ಮವನ್ನು ಉಲ್ಲಂಘಿಸಿದರೆ ಅವನು ಪಾಪಮಾಡಿದವನೆಂದು ಪರಿಗಣಿಸಲಾಗುತ್ತಿತ್ತು. ಇದಕ್ಕೆ ಕಾರಣ ಸಂಪ್ರದಾಯಗಳನ್ನು ಆಚರಿಸುವವರು ನೀತಿಯುತ ಜೀವಿಗಳೆಂದೂ, ಪರಂಪರಾಗತವಾಗಿ ಬಂದ ಸಂಪ್ರದಾಯಗಳನ್ನು ಬಿಟ್ಟವರು ಅನೀತಿ ನಡತೆಯನ್ನು ಪಾಲಿಸುವವರು ಎಂದು ತಿಳಿಯಲಾಗಿತ್ತು. ಇಪ್ಪತ್ತನೆಯ ಶತಮಾನದಲ್ಲಿ ಎರಡು ಮಹಾಯುದ್ಧಗಳು ನಡೆದ ನಂತರ ಮತ್ತು ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಭಾರತೀಯ ಸಮಾಜದಲ್ಲಿ ಒಂದು ಕ್ರಾಂತಿಯುಂಟಾಗಿದೆ. ದೇಶದಲ್ಲಿ ಬೃಹತ್ ಕಾರ್ಖಾನೆಗಳು ನಿರ್ಮಿತವಾದ ಕಾರಣ ಕೋಟ್ಯಂತರ ಜನರು ಈ ಆಧುನಿಕ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವರು. ಅಲ್ಲದೆ ಈ ದೊಡ್ಡ ಕಾರ್ಖಾನೆಗಳು ದೊಡ್ಡ ಪಟ್ಟಣಗಳಲ್ಲಿ ಇರುವುದರಿಂದ ಪಟ್ಟಣಗಳ ಜನಸಂಖ್ಯೆಯು ಕ್ರಮೇಣವಾಗಿ ಹೆಚ್ಚುತ್ತಿರುವುದು. ಸಾವಿರದ ಒಂಭೈನೂರ ಎಪ್ಪತ್ತೊಂದನೆಯ ಜನಗಣತಿ ಪ್ರಕಾರ ಪಟ್ಟಣಗಳಲ್ಲಿ ಸುಮಾರು ಹನ್ನೊಂದು ಕೋಟಿ ಜನರು ವಾಸಿಸುತ್ತಿರುವರು. ಪ್ರಜಾ ಪ್ರಭುತ್ವವು ಸ್ಥಾಪನೆಯಾಗಿರುವುದರಿಂದ ಎಲ್ಲ ವಯಸ್ಕರಿಗೂ ಮತದಾನದ ಹಕ್ಕು ಸಿಕ್ಕಿದೆ. ಈ ಬದಲಾವಣೆಗಳೆಲ್ಲವೂ ಆಧುನಿಕೀಕರಣದ ವಿವಿಧ ಅಂಶಗಳು. ಆದ್ದರಿಂದ ಪಟ್ಟಣಗಳಲ್ಲಿ ಕೇವಲ ಪೂರ್ಣವಾದ ಸಂಪ್ರದಾಯಬದ್ಧ ಜೀವನವನ್ನು ನಡೆಸಲು ಬಹಳ ಕಷ್ಟ. ಅದರಲ್ಲಿಯೂ ನಮ್ಮ ಜೀವನವನ್ನು ನಾವು ಸಂಪ್ರದಾಯಬದ್ಧವಾಗಿ ವ್ಯವಸ್ಥಿತಗೊಳಿಸಬಹುದು. ಆದರೆ ಬೇರೆಯವರನ್ನು 'ನೀವು ಕೀಳುಜಾತಿಯವರು. ನೀವು ಸಂಪ್ರದಾಯದ ಪ್ರಕಾರ ಈ ವಿಧವಾಗಿ ವರ್ತಿಸಬೇಕು,' ಎಂದು ಹೇಳುವುದು ಸಾಧ್ಯವಿಲ್ಲ.

ಇವೆಲ್ಲವೂ ಸಾಮಾಜಿಕ ಕಟ್ಟುನಿಟ್ಟುಗಳು. ಹಿಂದಿನ ಕಾಲದ ಹಳ್ಳಿಯ ಜೀವನಕ್ಕೆ ಇವು ಸಹಾಯಕವಾಗಿದ್ದವು. ಆದರೆ ಈ ಆಧುನಿಕ ವ್ಯವಸ್ಥೆಯಲ್ಲಿ ಮಾನವನ ವರ್ತನೆಯು ಕೇವಲ ಕಟ್ಟುನಿಟ್ಟುಗಳ ಆಧಾರದ ಮೇಲೆ ಇರಲು ಸಾಧ್ಯವಿಲ್ಲ. ಪರಂಪರೆಯಾಗಿ ಬಂದ ಸಂಪ್ರದಾಯಗಳನ್ನು ಪರೀಕ್ಷಿಸಬೇಕಾಗಿರುವುದು ಅಗತ್ಯ. ಯಾವ ಸಂಪ್ರದಾಯಗಳು ಕಾಲಕ್ಕನುಸಾರವಾಗಿರುವುವೋ ಮತ್ತು ಆತ್ಮ ಸಾಕ್ಷಿಗೆ ಅನುಗುಣವಾಗಿರುವುವೋ ಅಂತಹ ಸಂಪ್ರದಾಯಗಳನ್ನು ಆಚರಿಸಬೇಕು. ಯಾವುವು ಈ ಕಾಲಕ್ಕೆ, ಈಗಿರುವ ಸಾಮಾಜಿಕ ವ್ಯವಸ್ಥೆಗೆ ಅಸಂಬದ್ಧವೋ ಅವುಗಳನ್ನು ತ್ಯಜಿಸಬೇಕು. ಇದು ವಿವೇಕ.

ಈ ದೃಷ್ಟಿಯಿಂದ ಭಾರತೀಯ ಸಂಪ್ರದಾಯವನ್ನು ಪರೀಕ್ಷಿಸಿದರೆ ಮೂರು ಅತ್ಯುನ್ನತವಾದ ಮಾನವಧ್ಯೇಯಗಳು ಕಾಣಬರುವುವು. ಈ ಧ್ಯೇಯಗಳಲ್ಲಿ ಪ್ರಥಮ ಧ್ಯೇಯವಾದ ಸುವರ್ಣ ನಿಯಮವನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಎರಡನೆಯದಾದ ಸಾಧಾರಣ ಧರ್ಮವನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗುವುದು. ಮೂರನೇ ಧ್ಯೇಯವಾದ ಸ್ವಧರ್ಮವನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವುದು.

ಉಪನಿಷತ್ತುಗಳಲ್ಲಿ, ಧರ್ಮಶಾಸ್ತ್ರಗಳಲ್ಲಿ, ಮಹಾಭಾರತದಲ್ಲಿ, ಗೀತೆಯಲ್ಲಿ ಸಾಧಾರಣ ಧರ್ಮವನ್ನು ಕುರಿತು ಹೇಳಲಾಗಿದೆ. ಸಾಧಾರಣಧರ್ಮವು ಕೇವಲ ಆಚಾರವನ್ನು ಅನ್ವಯಿಸಿಲ್ಲ. ಈ ಸಾಧಾರಣಧರ್ಮಗಳು ಸದ್ಗುಣಗಳು. ಇವು ನೀತಿಯುತ ಜೀವನವನ್ನು ಸೂಚಿಸುವುವು. ಆದುದರಿಂದ ಸುವರ್ಣನಿಯಮವನ್ನು, ಸಾಧಾರಣಧರ್ಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ಜೀವನವನ್ನು ನಡೆಸುವವನು ನಿಜವಾಗಿಯೂ ಧರ್ಮಮಾರ್ಗವನ್ನು ಅನುಸರಿಸುವನು.

ಛಾಂದೋಗ್ಯೋಪನಿಷತ್ತಿನಲ್ಲಿ ಈ ರೀತಿ ಹೇಳಿರುವುದು.

ಅಥ ಯತ್ತಪೋ ದಾನಮಾರ್ಜವಮಹಿಂಸಾ ಸತ್ಯವಚನ ಮಿತಿ ತಾ ಅಸ್ಯ ದಕ್ಷಿಣಾಃ || (3—17. 9)

"ಇನ್ನು ತಪಸ್ಸು, ದಾನ, ಋಜುತ್ವ, ಅಹಿಂಸೆ ಸತ್ಯವಚನ ಇವೆಲ್ಲ ಯಜ್ಞದ ದಕ್ಷಿಣೆಗಳು."

ಈ ಮಂತ್ರದಲ್ಲಿ ಸತ್ಯ, ಅಹಿಂಸೆ, ಋಜುತ್ವ, ಉದಾರ ಮನೋಭಾವ, ನಿಯಮ ಬದ್ಧಜೀವನ ಇವು ಮುಖ್ಯವೆಂದು ಸೂಚಿಸಲಾಗಿದೆ. ಈ ಐದು ಧರ್ಮಗಳು ಸನಾತನ ಧರ್ಮಗಳು. ಇವು ಎಲ್ಲ ಕಾಲಗಳಿಗೂ, ಎಲ್ಲ ಸಮಾಜಗಳಿಗೂ ಎಲ್ಲ ಸಂಸ್ಕೃತಿಗಳಿಗೂ ಅನ್ವಯಿಸುವ ಧರ್ಮಗಳು. ಈ ಧರ್ಮಗಳಿಗೆ ವರ್ಣಭೇದವಿಲ್ಲ, ಜಾತಿಭೇದವಿಲ್ಲ, ದೇಶಕಾಲಗಳ ಭೇದಗಳಿಲ್ಲ ಆದುದರಿಂದಲೇ ಈ ಛಾಂದೋಗ್ಯೋಪನಿಷತ್ತಿನ ಮಂತ್ರಗಳು ಮಾನವ ಚರಿತ್ರೆಯಲ್ಲಿಯೇ ಬಹಳ ಶ್ರೇಷ್ಠವಾದವು. ಇಲ್ಲಿ ಸೂಚಿಸಿರುವ ಧ್ಯೇಯಗಳನ್ನು ಪ್ರತಿಯೊಬ್ಬ ಮನುಷ್ಯನೂ ದೃಷ್ಟಿಯಲ್ಲಿಟ್ಟುಕೊಂಡು ಬುದ್ಧಿಪೂರ್ವಕವಾಗಿ ಆಚರಿಸಿಕೊಂಡು ಬಂದರೆ ಆತನು ನಿಜವಾಗಿಯೂ ಶೀಲವಂತನು, ನೀತಿವಂತನು ಮತ್ತು ಸುಸಂಸ್ಕೃತನು.

ತೈತ್ತರೀಯ ಉಪನಿಷತ್ತಿನಲ್ಲಿ (I–9) ತಪಸ್ಸಿನ ವಿಷಯವನ್ನು ಕುರಿತು ಈ ಪಟ್ಟಿಯನ್ನು ಕೊಡಲಾಗಿದೆ. ಋತ, ಸತ್ಯ, ತಪಸ್ಸು ದಮ, ಶಮ ಇವೆಲ್ಲವೂ ಸ್ವಾಧ್ಯಾಯ ಅಂದರೆ ಕಲಿಯಬೇಕಾಗುವುವು ಮತ್ತು ಪ್ರವಚನ ಅಂದರೆ ಇತರರಿಗೆ ಹೇಳಿಕೊಡಬೇಕಾದುವು. ಈ ನಿಯಮಗಳನ್ನು ಯತ್ನ ಪೂರ್ವಕವಾಗಿ

ಮಾಡಬೇಕೆಂಬುದನ್ನು ತಿಳಿಸಲು ಪ್ರತಿಯೊಂದರ ಜೊತೆಗೂ ಈ ಮಂತ್ರದಲ್ಲಿ 'ಸ್ವಾಧ್ಯಾಯ ಪ್ರವಚನ' ಎಂದು ಪುನಃಪುನಃ ಸೇರಿಸಿಕೊಂಡು ಹೇಳಿರುತ್ತದೆ.

ಮನುಸ್ಮೃತಿಯ ಪ್ರಕಾರ ಎಲ್ಲರೂ ಆಚರಿಸಬೇಕಾದ ಧರ್ಮದ ದಶ ಲಕ್ಷಣಗಳನ್ನು ಈ ವಿಧವಾಗಿ ಹೇಳಲಾಗಿದೆ.

ಚತುರ್ಭಿರಪಿ ಚೈವೈತೈರ್ನಿತ್ಯಮಾಶ್ರಮಿಭಿರ್ದ್ವಿಜೈಃ ।
ದಶಲಕ್ಷಣಕೋ ಧರ್ಮಃ ಸೇವಿತವ್ಯಃ ಪ್ರಯತ್ನತಃ ॥
ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ ॥

ಮನು. 6—91, 92.

'ಈ ನಾಲ್ಕು ಆಶ್ರಮದವರೂ ಹತ್ತು ವಿಧವಾದ ಧರ್ಮವನ್ನು ಸೇವಿಸಲೇ ಬೇಕು. ಧೃತಿ, ಕ್ಷಮಾ, ಅಸ್ತೇಯ, ಶುಚಿ ಇಂದ್ರಿಯ ನಿಗ್ರಹ, ಬುದ್ಧಿ, ವಿದ್ಯೆ, ಸತ್ಯ, ಅಕ್ರೋಧ, ಇವು ಧರ್ಮದ ಹತ್ತು ಲಕ್ಷಣಗಳು.'

ಶಾಂತಿ ಪರ್ವದಲ್ಲಿ ಸಾಧಾರಣಧರ್ಮದ ಬಗ್ಗೆ ಈ ಕೆಳಗಿನ ಎರಡು ಶ್ಲೋಕಗಳಲ್ಲಿ ಹೇಳಲಾಗಿದೆ.

ಸತ್ಯಂ ಚ ಸಮತಾ ಚೈವ ದಮಶ್ಚೈವ ನ ಸಂಶಯಃ ।
ಅಮಾತ್ಸರ್ಯಂ ಕ್ಷಮಾ ಚೈವ ಹ್ರೀಸ್ತಿತಿಕ್ಷಾಽನಸೂಯತಾ ॥
ತ್ಯಾಗೋ ಧ್ಯಾನಮಥಾರ್ಯತ್ವಂ ಧೃತಿಶ್ಚ ಸತತಂ ಸ್ಥಿರಾ ।
ಅಹಿಂಸಾ ಚೈವ ರಾಜೇಂದ್ರ ಸತ್ಯಾಕಾರಾಸ್ತ್ರಯೋದಶ ॥

ಮಹಾಭಾರತ ಶಾಂ. ಪ. 169,—8, 9,

ಸತ್ಯ, ಸಮತಾ, ದಮ, ಅಮಾತ್ಸರ್ಯ, ಕ್ಷಮೆ, ನಾಚಿಕೆ, ತಿತಿಕ್ಷೆ, ಅನಸೂಯೆ, ತ್ಯಾಗ, ಇತರರ ಹಿತ ಬಯಸುವಿಕೆ, ಶುಭ ಹಾರೈಕೆಗಳು, ಸ್ಥಿರವಾದ ಧೃತಿ ಮತ್ತು ಅಹಿಂಸೆ ಇವು ಹದಿಮೂರು ಸತ್ಯದ ವಿವಿಧ ಆಕಾರಗಳು.

ಗೀತೆಯ ಹದಿನಾರನೆಯ ಅಧ್ಯಾಯವು ದೈವೀಸಂಪತ್ತಿನ ಮತ್ತು ಆಸುರೀಸಂಪತ್ತಿನ ಗುಣಗಳನ್ನು ಈ ಶ್ಲೋಕಗಳಲ್ಲಿ ವಿವರಿಸಿದೆ.

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಂ ॥
ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥

ತೇಜಃ ಕ್ಷಮಾಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥

ಗೀತೆ. 16—1, 2, 3.

ಅಭಯ, ಸತ್ತ್ವಸಂಶುದ್ಧಿ, ಜ್ಞಾನಯೋಗ, ವ್ಯವಸ್ಥಿತಿ, ದಾನ, ದಮ, ಯಜ್ಞ, ವೇದಾಧ್ಯಯನ, ತಪಸ್ಸು, ಸರಳತೆ, ಅಹಿಂಸೆ, ಸತ್ಯ ಅಕ್ರೋಧ, ತ್ಯಾಗ ಶಾಂತಿ, ಅಪೈಶುನ, ಭೂತದಯೆ, ಅಲೋಲತ್ವ, ಮೃದುಸ್ವಭಾವ, ನಾಚಿಕೆ, ಅಚಾಪಲ್ಯ. ತೇಜಸ್ಸು, ಕ್ಷಮೆ, ಧೈರ್ಯ, ಶೌಚ, ಅದ್ರೋಹ, ಅನಭಿಮಾನ ಈ ಗುಣಗಳು ದೈವೀ ಸಂಪತ್ತಿನಲ್ಲಿ ಹುಟ್ಟಿದವನಿಗೆ ಉಂಟಾಗುವುವು.

ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ॥

ಗೀತೆ. 16—4

ದಂಭ, ದರ್ಪ, ಅಹಂಕಾರ, ಕ್ರೋಧ, ಕಠಿಣವಾದ ಮಾತು ಮತ್ತು ಅಜ್ಞಾನ (ಈ ಗುಣಗಳು) ಆಸುರೀಸಂಪತ್ತಿನಲ್ಲಿ ಹುಟ್ಟಿರುವವನಿಗೆ ಉಂಟಾಗುತ್ತವೆ.

ಇದೇ ಅಧ್ಯಾಯದಲ್ಲಿ ಗೀತೆಯು ಕಾಮ, ಕ್ರೋಧ ಮತ್ತು ಲೋಭ ಗಳನ್ನು ಕುರಿತು ಇನ್ನೆರಡು ಶ್ಲೋಕಗಳಲ್ಲಿ ವಿವರಿಸಿದೆ.

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥
ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ ॥
ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂ ಗತಿಮ್ ॥

ಗೀತೆ. 16—21, 22

ಕಾಮ, ಕ್ರೋಧ ಮತ್ತು ಲೋಭ ಈ ಮೂರುವಿಧವಾದ ನರಕ ದ್ವಾರವು ಆತ್ಮನಾಶಕ್ಕೆ ಕಾರಣ. ಆದುದರಿಂದ ಈ ಮೂರನ್ನು ಬಿಡಬೇಕು. ಈ ಮೂರು ತಮೋದ್ವಾರಗಳಿಂದ ಬಿಡಲ್ಪಟ್ಟ ಮನುಷ್ಯನು ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳುತ್ತಾನೆ. ಅದರಿಂದ ಪರಗತಿಯನ್ನು ಹೊಂದುತ್ತಾನೆ.

ಈ ವಿಧವಾಗಿ ವೇದಗಳ ಕಾಲದಿಂದಲೂ ನೀತಿಯುತ ಜೀವನದ ಲಕ್ಷಣ ಗಳೇನೆಂಬುದನ್ನು ಅನೇಕ ಗ್ರಂಥಗಳಲ್ಲಿ ವಿವರಿಸಲಾಗಿದೆ. ಗೀತೆಯಲ್ಲಿ ಪ್ರತಿಯೊಬ್ಬ ಮಾನವನೂ ಸದ್ಗುಣಗಳಿಂದಲೂ ರಾಕ್ಷಸ ಗುಣಗಳಿಂದಲೂ ಕೂಡಿರುವನೆಂದೂ ಬುದ್ಧಿವಂತನಾದವನು ಆಸುರೀ ಗುಣಗಳನ್ನು ಹತೋಟಿಯಲ್ಲಿಟ್ಟುಕೊಂಡು ಸದ್ಗುಣ ಗಳನ್ನು ಬೆಳಸಬೇಕೆಂದೂ ಸೂಚಿಸಿದೆ.

ಈಗ ಈ ಸದ್ಗುಣಗಳನ್ನೂ ಮತ್ತು ದುರ್ಗುಣಗಳನ್ನೂ ಸ್ವಲ್ಪ ವಿವರವಾಗಿ ನೋಡಬಹುದು.

1) **ಋತ :** ಋತ ಎಂಬ ಪದವು ಋಗ್ವೇದ ಮಂತ್ರಗಳಲ್ಲಿ ಇರುವುದು. ಆ ಕಾಲದಲ್ಲಿ ಪ್ರಕೃತಿಯ ವಾಯು, ಸೂರ್ಯ, ಅಗ್ನಿ ಮುಂತಾದವುಗಳು ಒಂದು ನಿಯಮಾನುಸಾರವಾಗಿ ಉಂಟಾಗುವುವೆಂದೂ, ರಾತ್ರಿ ಹಗಲು ಮತ್ತು ಋತುಗಳು ಒಂದು ಕ್ರಮಬದ್ಧವಾಗಿ ಉಂಟಾಗುವ ಹಾಗೆ ಪ್ರಕೃತಿಯ ಎಲ್ಲಾ ಅಂಶಗಳೂ ಒಂದು ಕ್ರಮಬದ್ಧವಾದವೆಂಬ ಭಾವನೆಯು ಉದ್ಭವಿಸಿತು. ಈ ಕ್ರಮವನ್ನು 'ಋತ' ಎಂಬ ಶಬ್ದ ಸೂಚಿಸಲಾಯಿತು. ಈ ಕ್ರಮಬದ್ಧ ಘಟನೆಗಳು ಪ್ರಕೃತಿಗೆ ಮಾತ್ರ ಸೀಮಿತವಾಗದೆ ಮಾನವನ ಸಾಮಾಜಿಕ ಮತ್ತು ನೈತಿಕ ಅಂಶಗಳಿಗೂ ಅನ್ವಯಿಸುವುವೆಂದು ತಿಳಿಯಲಾಯಿತು. ಈ ಪ್ರಕೃತಿಯ ಮತ್ತು ನೀತಿಯ ನಿಯಮಗಳಿಗೆ ಅಧಿಪತಿಯು ವರುಣನೆಂದು ಭಾವಿಸಲಾಯಿತು. ಆದುದರಿಂದ ಋತವೆಂಬ ಪದವು ಪ್ರಪಂಚದ ಎಲ್ಲಾ ಅಂಶಗಳನ್ನೂ ಕ್ರಮಬದ್ಧವಾಗಿ ನಡೆಸುವ ಹಾಗೆ ನೋಡಿಕೊಳ್ಳುವ ನಿಯಮವಾಯಿತು. ಹೀಗೆ ವಿಶ್ವವೇ ಕ್ರಮಬದ್ಧವೆಂದೂ, ಮಾನವನ ವರ್ತನೆಯೂ ಕ್ರಮಬದ್ಧವೆಂದೂ ಪರಿಗಣಿಸಲಾಯಿತು. ಅಂದರೆ, ಜಗತ್ತು ಕ್ರಮ, ನ್ಯಾಯ ನೀತಿಗಳನ್ನು ಒಳಗೊಂಡ ಸಂಸ್ಥೆ ಎಂಬ ಭಾವನೆಯು ಸುಮಾರು ಐದು ಸಾವಿರ ವರ್ಷಗಳ ಹಿಂದೆಯೇ ಭಾರತ ದೇಶದಲ್ಲಿ ಉಂಟಾಯಿತು, ಎಂಬುದನ್ನು ಋತ ಎಂಬ ಭಾವನೆಯು ಸ್ಪಷ್ಟಪಡಿಸುವುದು. ಉಪನಿಷತ್ಕಾಲದಲ್ಲಿ ಈ ಋತ ಎಂಬ ಭಾವನೆಯು ಧರ್ಮ ಎಂಬ ಭಾವನೆಯಾಗಿ ಮಾರ್ಪಾಡಾಯಿತು. ಆದರೆ ಇಂದಿಗೂ ಋತ ಎಂಬ ಪದಕ್ಕೆ ವಿರುದ್ಧ ಪದವಾದ ಅನೃತ ಎಂಬ ಪದವು ಬಳಕೆಯಲ್ಲಿರುವುದು. ಇಂದಿಗೂ ಅಸತ್ಯವನ್ನು ಅನೃತ ಎಂಬ ಪದದಿಂದ ಸೂಚಿಸುವೆವು. ಋಜು ಭಾವವಿಲ್ಲದವನನ್ನು ಇಂದಿಗೂ ನಂಬುವುದಿಲ್ಲ.

2) **ಸತ್ಯ :** ಸತ್ಯ ಎಂಬ ಪದವು 'ಸತ್' ಎಂಬ ಧಾತುವಿನಿಂದ ಹುಟ್ಟಿದೆ. ಸತ್ ಎಂದರೆ ಇರುವುದು, ವಾಸ್ತವಿಕ. ಭಾರತೀಯ ಸಂಸ್ಕೃತಿಯ ಪ್ರಕಾರ ಯಾವುದು ಸದಾಕಾಲವೂ ಇರುವುದೋ ಅದೇ ಸತ್ಯ. ಆದುದರಿಂದ ಉಪನಿಷತ್ತುಗಳಲ್ಲಿ ಬ್ರಹ್ಮ ಮತ್ತು ಆತ್ಮವನ್ನು ಕುರಿತು ವಿವೇಚಿಸುವಾಗ ಕೆಲವು ಮಹಾವಾಕ್ಯಗಳನ್ನು ಉಪಯೋಗಿಸಲಾಗಿದೆ. ಇವು "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ," "ಸತ್ ಚಿತ್ ಆನಂದಂ ಬ್ರಹ್ಮ" ಆದುದರಿಂದ ಸತ್ಯ ಬ್ರಹ್ಮ ಸ್ವರೂಪ. ಗಾಂಧೀಜಿಯವರು ಈ ಕಾರಣದಿಂದಲೇ ಸತ್ಯವೇ ದೇವರು ಎಂದು ಹೇಳಿ ತಾವೂ ಮತ್ತು ತಮ್ಮ ಅನುಯಾಯಿಗಳೂ ಯಾವಾಗಲೂ ಸತ್ಯವನ್ನು ಹೇಳುವುದೇ

ಅಲ್ಲದೆ, ಸತ್ಯ ಮಾರ್ಗವನ್ನು ಅನುಸರಿಸಬೇಕಾಗುವುದು ಅಗತ್ಯ ಎಂದು ದೇಶದ ಸ್ವಾತಂತ್ರ್ಯದ ಹೋರಾಟವನ್ನು ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹ ಎಂಬ ಮೂರು ತತ್ವಗಳ ಆಧಾರದ ಮೇಲೆ ನಡೆಸಿ ದೇಶಕ್ಕೆ ಸ್ವಾತಂತ್ರ್ಯ ಸಿಗುವ ಹಾಗೆ ಮಾಡಿದರು. ಸತ್ಯವು ಕೇವಲ ಮಾತಿನಲ್ಲಿ ಮಾತ್ರವಲ್ಲ. ಇದು ತ್ರಿಕರಣಗಳಿಗೆ ಸೇರಿದುದು. ಆದುದರಿಂದ ಸತ್ಯ ವಚನವು ಸತ್ಯ ಚಿಂತನ ಮತ್ತು ಸತ್ಯಕರ್ಮ ದಿಂದ ಕೂಡಿರಬೇಕು. ಉಪನಿಷತ್ತಿನಲ್ಲಿ 'ಸತ್ಯಮೇವ ಜಯತೇ, ನಾನೃತಂ' ಎಂದು ಹೇಳಿದೆ. ಅಂದರೆ ಯಾವಾಗಲೂ ಸತ್ಯಕ್ಕೆ ಜಯ. ಅಸತ್ಯಕ್ಕೆ ಎಂದಿಗೂ ಜಯವಿಲ್ಲ.

3) **ಅಹಿಂಸೆ :** ಮಹಾಭಾರತದ ಅನುಶಾಸನ ಪರ್ವದಲ್ಲಿ 'ಅಹಿಂಸಾ ಪರಮೋ ಧರ್ಮಃ' ಎಂದು ಹೇಳಿದೆ. ಅಂದರೆ ಅಹಿಂಸೆಯೇ ಪರಮ ಧರ್ಮ. ಅಹಿಂಸೆಯನ್ನೂ ಸಹ ತ್ರಿಕರಣಪೂರ್ವಕವಾಗಿ ಆಚರಿಸಬೇಕಾಗಿದೆ. ನಮ್ಮ ಕಾರ್ಯಕಲಾಪಗಳು ಹಿಂಸೆಯನ್ನು ಅವಲಂಬಿಸಬಾರದು ಮಾತು ಸಹ ಹಿಂಸೆ ಯಿಂದ ಕೂಡಿರಬಾರದು. ಇವೆರಡಕ್ಕೂ ತಳಹದಿ ಮನಸ್ಸಿನ ಚಿಂತನ. ಯಾವ ಮನುಷ್ಯನು ತನ್ನ ನಡತೆಯನ್ನು ಸತ್ಯ ಮತ್ತು ಅಹಿಂಸೆಗಳ ಆಧಾರದ ಮೇಲೆ ಹೃತ್ಪೂರ್ವಕವಾಗಿ ಬುದ್ಧಿಪೂರ್ವಕವಾಗಿ ರಚಿಸಿಕೊಂಡಿರುವನೋ ಅವನಿಗೆ ಭಯ ಎಂದಿಗೂ ಇರುವುದಿಲ್ಲ. ಇದನ್ನು ಗಾಂಧೀಜಿಯವರು ಅಕ್ಷರಶಃ ತೋರಿಸಿಕೊಟ್ಟಿ ರುವರು. ಸಾಮಾನ್ಯ ಮನುಷ್ಯರೂ ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಸತ್ಯ ಅಹಿಂಸೆಗಳನ್ನು ಪರಿಪಾಲಿಸುವುದರ ಮೂಲಕ ನಿರ್ಭೀಕರಾಗಿ ಪ್ರತಿಯೊಂದು ಸನ್ನಿ ವೇಶವನ್ನೂ ಎದುರಿಸಿದರು. ಅಲ್ಲದೆ ಸತ್ಯ ಅಹಿಂಸೆಗಳನ್ನು ಪರಮ ಧರ್ಮಗಳೆಂದು ಆಚರಣೆಯಲ್ಲಿ ಇಟ್ಟಿರುವ ವ್ಯಕ್ತಿ ಪ್ರತಿಯೊಬ್ಬ ಮಾನವನನ್ನೂ ಪ್ರೀತಿಯಿಂದ ನೋಡುವನು. ಇವು ಉದಾರ ಭಾವನೆಗೆ ಮೂಲ, ಮತ್ತು ಮನಸ್ಸು ಇವರಿಂದ ಯಾವಾಗಲೂ ಸಮತ್ವದಿಂದಲೂ ಶಾಂತಿಯಿಂದಲೂ ಕೂಡಿರುವುದು.

4) **ಶೌಚ :** ಶೌಚ ಎಂದರೆ ಶುದ್ಧಿ, ನೈರ್ಮಲ್ಯ. ಇದು ಶರೀ ರಕ್ಕೂ ಮನಸ್ಸಿಗೂ ಸಂಬಂಧಪಟ್ಟಿದ್ದು. ಶಾರೀರಿಕ ಮತ್ತು ಮಾನಸಿಕ ನೈರ್ಮಲ್ಯ ಇಲ್ಲದಿದ್ದರೆ ಶಾರೀರಿಕ ಮತ್ತು ಮಾನಸಿಕ ಅನಾರೋಗ್ಯ ಉಂಟಾಗುವುವು. ಆದು ದರಿಂದ ಮಾಡುವ ಕೆಲಸ, ಆಡುವ ಮಾತು, ಚಿಂತಿಸುವ ಯೋಚನೆ ಇವುಗಳು ಶುದ್ಧವಾಗಿಯೂ ಸತ್ಯಪೂರ್ಣವಾಗಿಯೂ ಇರಬೇಕು. ದೇಹವನ್ನು ಸ್ನಾನದ ಮೂಲಕ, ಒಗೆದ ಮತ್ತು ಶುಭ್ರವಾದ ವಸ್ತ್ರಗಳನ್ನು ಧರಿಸುವುದರ ಮೂಲಕ ಮನೆಯ ಒಳಗೂ ಮತ್ತು ಸುತ್ತಲೂ ನಿರ್ಮಲವಾಗಿ ಇರಿಸುವುದರ ಮೂಲಕ ಹಾಗೆಯೇ ಊರನ್ನೂ ಸಹ ನಿರ್ಮಲವಾಗಿ ಇಡುವುದರ ಮೂಲಕ ಶಾರೀರಿಕ ಮತ್ತು ಮಾನಸಿಕ ಶುದ್ಧಿಗೆ ಅವಕಾಶವಿರುವುದು. ನಮ್ಮ ದೇಹ ಮತ್ತು ವಾತಾ

ವರಣ ಮಾತ್ರವಲ್ಲದೆ ಅಂತಃಕರಣವೂ ಪರಿಶುದ್ಧವಾಗಿರಬೇಕು.

5) **ಶಮ :** ಶಮ ಎಂದರೆ ಮನಸ್ಸನ್ನು ಹತೋಟಿಯಲ್ಲಿ ಇಟ್ಟು ಕೊಳ್ಳುವುದು. ಮನಸ್ಸಿನಿಂದಲೇ ಮನುಷ್ಯನ ಮಾತು ಮತ್ತು ಕೆಲಸಗಳಿಗೆ ಪ್ರೇರಣೆಯುಂಟಾಗುವುದು. ಆದುದರಿಂದ ಮನಸ್ಸನ್ನು ಹತೋಟಿಯಲ್ಲಿ ಇಟ್ಟಿದ್ದರೆ ಮಾತು ಮತ್ತು ಕೆಲಸಗಳು ಹತೋಟಿಯಲ್ಲಿರುತ್ತವೆ. ಮೈತ್ರಿ ಉಪನಿಷತ್ತಿನಲ್ಲಿ ಹೀಗೆ ಹೇಳಿದೆ.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಬಂಧಾಯ ವಿಷಯಾಸಂಗಂ ಮೋಕ್ಷೋ ನಿರ್ವಿಷಯಂ ಸ್ಮೃತಮ್ ॥

ಮೈತ್ರಿ. ಉ. 6—34

"ಮನುಷ್ಯನಿಗೆ ಬಂಧ ಅಥವಾ ಮೋಕ್ಷ ಉಂಟಾಗಲಿಕ್ಕೆ ಮನಸ್ಸೇ ಕಾರಣವು; ಮನಸ್ಸು ವಿಷಯಾಸಕ್ತವಾಗುವುದೇ ಬಂಧ; ಅದು ನಿರ್ವಿಷಯ ಅಂದರೆ ನಿಷ್ಕಾಮ ಅಥವಾ ವಿಷಯಾಸಕ್ತವಾಗದಿರುವುದೇ ಮೋಕ್ಷ

ಈ ಮಂತ್ರದ ಪ್ರಕಾರ ವಿಷಯ ಸಂಗವೇ ಬಂಧನಕ್ಕೆ ಕಾರಣ. ಆದುದರಿಂದ ಮನಸ್ಸಿನ ಮೇಲೆ ಸರಿಯಾದ ಹತೋಟಿಯನ್ನು ಇಟ್ಟು ನಿಸ್ಸಂಗವನ್ನು ಅಂದರೆ ವಿಷಯಗಳ ಮೇಲಿನ ಆಸಕ್ತಿಯನ್ನು ಬಿಡುವುದೇ ಮೋಕ್ಷ. ಆದುದರಿಂದ ಬಂಧನಕ್ಕೂ ಮೋಕ್ಷಕ್ಕೂ ಕಾರಣ ಮನಸ್ಸು. ಮನಸ್ಸಿನ ಮೇಲೆ ಹತೋಟಿ ಇಲ್ಲದಿದ್ದರೆ ಬಂಧನ. ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಂಡರೆ ಮೋಕ್ಷ. ಮನಸ್ಸನ್ನು ಹತೋಟಿಯಲ್ಲಿಡುವುದಕ್ಕೆ ಉದಾತ್ತವಾದ ಭಾವನೆಗಳನ್ನು ಕುರಿತು ಸದಾ ಚಿಂತಿಸಬೇಕು. ವಿಷಯಗಳ ಮೇಲಿನ ಅನುರಾಗವನ್ನು ತ್ಯಜಿಸಬೇಕು. ಇದಕ್ಕೆ ಸತತ ಅಭ್ಯಾಸ ಒಂದೇ ಮಾರ್ಗ.

6) **ದಮ :** ದಮ ಎಂದರೆ ಪಂಚೇಂದ್ರಿಯಗಳ ಮೇಲಿನ ಹತೋಟಿ. ಸಾಮಾನ್ಯವಾಗಿ ಇಂದ್ರಿಯಾನುಭವದ ಮೂಲಕ ಸುಖವನ್ನು ಪಡೆಯಬೇಕೆಂಬ ಇಚ್ಛೆ ಇರುವುದು. ಆದರೆ ಕಣ್ಣು ಕಿವಿ ಮುಂತಾದ ಇಂದ್ರಿಯಗಳ ಮೂಲಕ ಸಿಗುವ ಸುಖವು ಅನಿತ್ಯವು. ಆದುದರಿಂದ ಬಾಹ್ಯೇಂದ್ರಿಯಗಳ ನಿಗ್ರಹವನ್ನು ಪಡೆಯುವುದು ಅಗತ್ಯ.

ಶಮವು ಮನೋನಿಗ್ರಹವನ್ನು ಸೂಚಿಸುವುದು. ದಮವು ಇಂದ್ರಿಯ ನಿಗ್ರಹವನ್ನು ಸೂಚಿಸುವುದು. ಇಂದ್ರಿಯಗಳ ಮೇಲೆ ಹತೋಟಿ ಇಲ್ಲದಿದ್ದರೆ ನಮ್ಮ ಕೆಲಸ ಕಾರ್ಯಗಳಲ್ಲಿ ಅವ್ಯವಸ್ಥೆಯುಂಟಾಗುವುದು. ಗೀತೆಯಲ್ಲಿ (2-58) ಹೇಳಿರುವ ಹಾಗೆ ಆಮೆಯು ತನ್ನ ಅಂಗಗಳನ್ನು ಒಳಕ್ಕೆ ಎಳೆದುಕೊಳ್ಳುವಂತೆ ಜ್ಞಾನಿಯು ಇಂದ್ರಿಯಗಳನ್ನು ಅವುಗಳ ವಿಷಯದಿಂದ ಎಳೆದುಕೊಳ್ಳುವನು.

ಆದರೆ ಮನಸ್ಸಿನಲ್ಲಿ ತೃಷ್ಣೆಯು ಇದ್ದರೆ ಕೇವಲ ಇಂದ್ರಿಯ ನಿಗ್ರಹವು ಫಲಕಾರಿಯಲ್ಲ. ಗೀತೆಯಲ್ಲಿ ಹೇಳಿರುವ ಹಾಗೆ (2, 61-63) ವಿಷಯಗಳನ್ನು ಚಿಂತಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಇದರಿಂದ ಕಾಮವು ಹುಟ್ಟುತ್ತದೆ. ಕಾಮಕ್ಕೆ ಅಡಚಣೆಯುಂಟಾದರೆ ಕ್ರೋಧವು ಹುಟ್ಟುತ್ತದೆ. ಆಗ ಸ್ಮೃತಿ ಭ್ರಮೆಯು ಉಂಟಾಗುತ್ತದೆ. ಸ್ಮೃತಿಭ್ರಮೆಯಿಂದ ಬುದ್ಧಿನಾಶವಾಗಿ ಇದರಿಂದ ಪುರುಷನು ನಾಶವಾಗುತ್ತಾನೆ. ಆದುದರಿಂದ ಯಾವನ ಇಂದ್ರಿಯಗಳು ವಶದಲ್ಲಿರುವುವೋ ಅವನ ಪ್ರಜ್ಞೆಯು ಸ್ಥಿರವಾಗಿರುವುದು.

7) **ಸಮತ್ವ :** ಶೀತೋಷ್ಣಗಳ ದ್ವಂದ್ವವಿರುವ ಹಾಗೆ ಸುಖ ದುಃಖಗಳ ದ್ವಂದ್ವವು ಜೀವನದಲ್ಲಿ ಅನಿವಾರ್ಯ. ಈ ಅನುಭವಗಳು ಮನುಷ್ಯರಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಉಂಟಾಗುವುವು. ಸಾಮಾನ್ಯವಾಗಿ ಸುಖ ಉಂಟಾದಾಗ ಹಿಗ್ಗುವೆವು; ದುಃಖ ಬಂದಾಗ ಕುಗ್ಗುವೆವು. ಈ ವಿಧವಾಗಿ ಸುಖದುಃಖಗಳೆಂಬ ಅನುಭವಗಳಿಗೆ ಒಳಗಾಗುವೆವು. ಆದರೆ ಸಮತ್ವವನ್ನು ಬೆಳೆಸಿಕೊಂಡ ಮನುಷ್ಯನು ಈ ಅನುಭವಗಳು ಉಂಟಾದರೆ ಹಿಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ. ಗೀತೆಯಲ್ಲಿ ಹೇಳಿರುವ ಹಾಗೆ (2-38) ಸಮತ್ವವನ್ನು ಹೊಂದಿರುವ ಮನುಷ್ಯನು ಸುಖ ದುಃಖಗಳನ್ನೂ. ಲಾಭ ನಷ್ಟಗಳನ್ನೂ, ಜಯ ಅಪಜಯಗಳನ್ನೂ ಸಮಾನವಾಗಿ ಭಾವಿಸುವನು.

8) **ತುಷ್ಟಿ :** ಭಾರತೀಯ ಸಂಸ್ಕೃತಿಯಲ್ಲಿ ಇದು ಬಹಳ ಮುಖ್ಯವಾದುದು ತುಷ್ಟಿ ಎಂದರೆ ತನಗೆ ಯಾವುದು ದೊರಕುವುದೋ ತನ್ನ ಹತ್ತಿರ ಯಾವುದು ಇರುವುದೋ ಅದರಲ್ಲಿ ತೃಪ್ತಿಯನ್ನು ಪಡೆದುಕೊಳ್ಳುವುದು. ಅಸಂತೃಪ್ತಿಯು ಭಗ್ನ ಮನೋಭಾವವನ್ನು ಉಂಟುಮಾಡಿ ಮನಸ್ಸನ್ನು ಕೆಡಿಸುವುದು. ಆದರೆ ತನ್ನ ಸ್ಥಿತಿಯನ್ನು ಕುರಿತು ತೃಪ್ತಿ ಪಡೆಯುವ ಮನುಷ್ಯನು ಕೇವಲ ಪಶುವಿನ ಜೀವನವನ್ನು ನಡೆಸಿದ ಹಾಗೆ ಆಗುವುದು. ಮಾನವನಿಗೂ ಪಶುವಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಮಾನವನಲ್ಲಿ ಉತ್ಕಾಂಕ್ಷೆಯು ಇರುವುದು. ತಾನು ಉತ್ತಮನಾಗಬೇಕೆಂಬ ಆಕಾಂಕ್ಷೆಯೇ ಅವನ ಮುಖ್ಯ ಲಕ್ಷಣ. ಕೇವಲ ತನ್ನ ಸ್ಥಿತಿಯನ್ನು ಕುರಿತು ತೃಪ್ತಿಪಡೆಯುವ ಕಾರಣ ಹೊಂದಿರುವುದರಿಂದಲೇ ಭಾರತೀಯ ಸಂಸ್ಕೃತಿಯು ಜನಜೀವನದ ಮಟ್ಟವನ್ನು ಅಭಿವೃದ್ಧಿ ಮಾಡದೆ ಪಶುಗಳ ಹಾಗೆ ಇದ್ದುದರಲ್ಲಿಯೇ ತೃಪ್ತಿಯನ್ನು ಹೊಂದಿ ತಮ್ಮ ಜೀವನವನ್ನು ಮುಂದುವರಿಸುವಂತೆ ಮಾಡುವುದೆಂಬ ಟೀಕೆ ಇರುವುದು. ಈ ಟೀಕೆಯಲ್ಲಿ ನಿಜಾಂಶವಿಲ್ಲವೆಂದು ವಾದಿಸಲು ಕಷ್ಟ. ಆದರೆ ಇದನ್ನು ಒಪ್ಪಿಕೊಳ್ಳುವುದೂ ಕಷ್ಟ. ತುಷ್ಟಿಯೆಂಬುದು ಬಹಳ ಸೂಕ್ಷ್ಮವಾದ ಅಂಶ. ನಿಜವಾಗಿಯೂ ತುಷ್ಟಿಯ ಮನೋಭಾವವು ಅಭಿವೃದ್ಧಿಗೆ ವಿರೋಧವಲ್ಲ. ಮುಖ್ಯವಾಗಿ ತನ್ನ ಸ್ಥಿತಿಯಲ್ಲಿ ತೃಪ್ತಿಯನ್ನು ಹೊಂದಿ ,

ವುದರಿಂದ ತನ್ನ ಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಮಾಡಬಾರದೆಂಬುದಲ್ಲ. ಅತೃಪ್ತಿಯು ಪ್ರಯತ್ನಕ್ಕೆ ತಳಹದಿಯೂ ಅಲ್ಲ. ಭಗ್ನಮನೋಭಾವವು ಉತ್ಕಾಂಕ್ಷೆಯ ಸೂಚಕವೂ ಅಲ್ಲ, ಭಗ್ನಮನೋಭಾವದಿಂದ ಸಮತ್ವಗುಣವನ್ನು ಕಳೆದುಕೊಳ್ಳಬಹುದು. ಆದುದರಿಂದ ತನ್ನ ಸ್ಥಿತಿಯನ್ನು ಕುರಿತು ದುಃಖವನ್ನು ಹೊಂದದೆ ಅಭಿವೃದ್ಧಿಗೆ ಪ್ರಯತ್ನಮಾಡಬೇಕೆಂಬುದೇ ತುಷ್ಟಿಯ ಸತ್ಯಾಂಶ.

9) **ಮೈತ್ರಿ :** ಪಾತಂಜಲಯೋಗ ಸೂತ್ರದಲ್ಲಿ (1-33) ಚಿತ್ತಪ್ರಸಾದವನ್ನು ಹೊಂದಬೇಕಾದರೆ ಇತರರಲ್ಲಿ ಮೈತ್ರಿಯನ್ನು ಬೆಳೆಸಬೇಕು ಎಂದು ಹೇಳಿರುವುದು. ಸರ್ವರಲ್ಲಿಯೂ ಮೈತ್ರೀಭಾವನೆಯನ್ನು ಬೆಳೆಸಿಕೊಂಡರೆ ಆಗ ಚಿತ್ತಪ್ರಸಾದ ಉಂಟಾಗುತ್ತದೆ. ಇದರಿಂದ ಇತರರಲ್ಲಿ ಏಕೀಭಾವವನ್ನು ಪಡೆಯಲು ಸಾಧ್ಯ. ಸಮಸ್ತಮಾನವರನ್ನು ಏಕೀಭಾವನೆಯಿಂದ ಕಂಡರೆ ಇದರಿಂದ ಹೃದಯ ವಿಶಾಲತೆಯನ್ನು ಪಡೆದು ಮೈತ್ರೀಗುಣವನ್ನು ಬೆಳೆಸಲು ಸಾಧ್ಯ. ಈ ತತ್ವವೇ 'ಸರ್ವೇ ಜನಾಃ ಸುಖಿನೋ ಭವಂತು.' ಎಂಬ ನಾಣ್ನುಡಿಯಲ್ಲಿ ಹೃದಯ ವೈಶಾಲ್ಯದ ಬಗ್ಗೆ ಸೂಚಿಸುವುದು. ಸಮಸ್ತರಲ್ಲಿಯೂ ಮೈತ್ರೀಭಾವವನ್ನು ಬೆಳೆಸಿಕೊಂಡರೆ ಅಸೂಯೆಯನ್ನು ದೂರಮಾಡಬಹುದು. ಇತರರಲ್ಲಿ ಮೈತ್ರೀಭಾವನೆಯನ್ನು ಬೆಳಸದೆ ಇರುವ ಕಾರಣದಿಂದ ಅಸೂಯೆಯು ಬೆಳೆದು ಅಸತ್ಯವನ್ನು ನುಡಿಯುವುದಕ್ಕೂ, ಹಿಂಸಾತ್ಮಕಕೃತ್ಯಗಳನ್ನು ಮಾಡುವುದಕ್ಕೂ ಕಾರಣವಾಗುವುದು. ಅಸೂಯೆಯಿದ್ದರೆ ಇತರರು ಮುಂದುವರಿಯುವುದಕ್ಕೂ ಅಸಾಧ್ಯವಾಗುವುದು. ಈಗಿನ ಪರಿಸ್ಥಿತಿಯಲ್ಲಿ ಅವರವರ ಸ್ಥಾನದಲ್ಲಿ ಅವರವರಿಗೆ ನೇಮಿತವಾದ ಕರ್ತವ್ಯಗಳನ್ನು ಪರಿಪಾಲಿಸಿಕೊಂಡು ಹೋಗುವುದು ಸಮಾಜದ ಮುಖ್ಯ ಧ್ಯೇಯವಾಗಿರುವುದು. ಯಾರಾದರು ತಮ್ಮ ಸ್ವಪ್ರಯತ್ನದಿಂದ ತಮ್ಮ ಸ್ಥಾನವನ್ನು ಉತ್ತಮಗೊಳಿಸಿಕೊಳ್ಳಲು ಯತ್ನಿಸಿದರೆ ತಕ್ಷಣ ಆ ಗುಂಪಿನಲ್ಲಿ ಅಸೂಯೆಯುಂಟಾಗಿ ಅವರ ಮೇಲೆ ಅಪಪ್ರಚಾರವನ್ನು ಮಾಡಿ ಅವರು ಮುಂದುವರಿಯುವುದಕ್ಕೆ ಅವಕಾಶವನ್ನು ಕೊಡದೆ ಅಡಚಣೆಯನ್ನು ತರುವುದು ಸಾಮಾನ್ಯ ಘಟನೆಯಾಗಿದೆ. ಪತಂಜಲಿಯು ಸೂತ್ರದಲ್ಲಿ ತಿಳಿಸಿರುವ ಹಾಗೆ ಇದರಿಂದ ಯಾರಿಗೂ ಚಿತ್ತಪ್ರಸಾದ ಉಂಟಾಗುವುದಿಲ್ಲ.

10) **ಕರುಣೆ :—** ಪತಂಜಲಿಯು ಇದೇ ಸೂತ್ರದಲ್ಲಿ ಸಮಸ್ತ ಮಾನವರಲ್ಲಿಯೂ ಅವರು ದುಃಖಿಗಳಾಗಿರುವಾಗ ಅವರನ್ನು ಕುರಿತು ಕರುಣೆಯನ್ನು ತೋರಿಸಬೇಕಾದುದು ಅಗತ್ಯವೆಂದು ಸೂಚಿಸಿದ್ದಾರೆ. ಇತರರು ನೋವನ್ನು ಹೊಂದಿದಾಗ ತನಗೂ ಆ ನೋವುಂಟಾಯಿತೆಂಬ ಕರುಣಭಾವನೆಯನ್ನು ಪ್ರಚೋದಿಸಬೇಕು. ಆದುದರಿಂದ ಕರುಣೆಗೆ ಸುವರ್ಣನಿಯಮವೆ ತಳಹದಿಯು. ಇದು, 'ತನ್ನಂತೆಯೆ ಇತರರು' ಎಂಬ ತತ್ವದ ಆಧಾರದ ಮೇಲೆ

ಇರುವುದು. ಇತರರ ದುಃಖವನ್ನು ನಿವಾರಿಸಬೇಕೆಂಬ ಮನೋಭಾವವನ್ನು ಬೆಳೆಸಿಕೊಂಡರೆ ಆಗ ಇತರರಿಗೆ ಅಪಕಾರ ಮಾಡುವ ಇಚ್ಛೆಯು ಹುಟ್ಟುವುದಿಲ್ಲ.

11) **ಮುದಿತ :** ಯಾರಾದರು ಸ್ವಪ್ರಯತ್ನದಿಂದ ಶ್ರೇಷ್ಠತೆಯನ್ನು ಪಡೆದರೆ ಅವರ ಬಗ್ಗೆ ಮುದಿತ ಭಾವವನ್ನು ಹೆಂಪಬೇಕು. ಅಂದರೆ ಯಾರಾದರು ತಮ್ಮ ಕಾರ್ಯದಲ್ಲಿ ಸಿದ್ಧಿಹೊಂದಿದರೆ ಅವರನ್ನು ಕಂಡು ಇತರರು ಹರ್ಷಪಡಬೇಕು. ಇತರರ ಜಯ ನಮಗೆ ಹರ್ಷವನ್ನು ಉಂಟುಮಾಡಿದರೆ ಆಗ ನಮಗೆ ಅವರಲ್ಲಿ ಅಸೂಯೆ ಇರುವುದಿಲ್ಲ. ಇತರರು ತಮ್ಮ ಪ್ರಯತ್ನಗಳಲ್ಲಿ ಸಫಲರಾದರೆ ಆಗ ಅವರೊಡನೆ ಅಸಹನೆಯನ್ನು ತೋರಿಸುವ ಬದಲು ಅವರ ಹಾಗೆಯೇ ನಾವೂ ಪ್ರಯತ್ನಪಟ್ಟು ಜಯಗಳಿಸಬೇಕು ಎಂಬ ಮನೋಭಾವವು ಹುಟ್ಟಬೇಕು. ಆಗ ಸಮಾಜದ ಅಭ್ಯುದಯವು ಸಾಧ್ಯ. ಜಯಹೊಂದಿದವರನ್ನು ಅಲ್ಲಗಳೆದರೆ ಆಗ ಎಲ್ಲರೂ ಪ್ರಯತ್ನಮಾಡುವ ಮನೋಭಾವವನ್ನು ತ್ಯಜಿಸವರು. ಈ ಕಾರಣದಿಂದ ಸಮಾಜವು ಇದ್ದ ಸ್ಥಿತಿಯಲ್ಲೇ ಉಳಿಯುವುದು. ಮುಂದು ವರೆಯಬೇಕೆಂಬ ಆಕಾಂಕ್ಷೆಯು ನಿರ್ಮೂಲವಾಗುವುದು.

12) **ಉಪೇಕ್ಷೆ :** ಪತಂಜಲಿಯು ಇದೇ ಸೂತ್ರದಲ್ಲಿ ಹೇಳಿರುವ ನಾಲ್ಕನೇ ಗುಣವು ಉಪೇಕ್ಷೆ. ದುಷ್ಕೃತ್ಯಗಳನ್ನು ಮಾಡುವವರನ್ನು ಕಂಡರೆ ಉದಾಸೀನವನ್ನು ವ್ಯಕ್ತಪಡಿಸಬೇಕು.

ಆದರೆ ಇಲ್ಲಿ ಒಂದು ನೈತಿಕ ಸಮಸ್ಯೆಯು ಇದೆ. ದುಷ್ಕೃತ್ಯ ಮಾಡು ವವರನ್ನು ಕಂಡು ನಾವು ಉದಾಸೀನ ಭಾವನೆಯನ್ನು ಬೆಳೆಸಿಕೊಂಡರೆ ಆಗ ಸಮಾಜದಲ್ಲಿ ದುಷ್ಕೃತ್ಯಗಳಿಗೆ ಬೆಂಬಲ ಕೊಟ್ಟ ಹಾಗೆ ಆಗುವುದು. ಈ ಸಂದರ್ಭ ದಲ್ಲಿ ಗಾಂಧೀಜಿಯವರು ತಮ್ಮ ಜೀವನದಲ್ಲಿ ಆಚರಣೆಗೆ ತಂದ ತತ್ವವನ್ನು ತಿಳಿದು ಕೊಳ್ಳಬೇಕು. ಭಾರತದಲ್ಲಿ ಆ ಕಾಲದಲ್ಲಿ ಆಂಗ್ಲರು ತಮ್ಮ ದರ್ಪವನ್ನು ತೋರಿಸುವುದಕ್ಕೋಸ್ಕರ ಭಾರತೀಯರನ್ನು ತುಚ್ಛರೀತಿಯಿಂದ ಕಾಣುತ್ತಿದ್ದರು. ಸಾಮಾನ್ಯವಾಗಿ ಎಲ್ಲ ಭಾರತೀಯರೂ ದುಷ್ಟ ಆಂಗ್ಲರ ಈ ವರ್ತನೆಯನ್ನು ಕಂಡು ಕುಪಿತರಾದರೂ ತಮ್ಮ ಕೋಪವನ್ನು ವ್ಯಕ್ತಪಡಿಸುವುದಕ್ಕೆ ಹೆದರುತ್ತಿದ್ದರು. ಆ ಸಂದರ್ಭದಲ್ಲಿ ಗಾಂಧೀಜಿಯವರು ಉಪೇಕ್ಷೆಯನ್ನು ತೋರಿಸದೆ ಆಗ್ರಹವನ್ನು ಹೊಂದಿದರು. ಆದರೆ ತಮ್ಮ ಆಗ್ರಹವನ್ನು ಮತ್ತೊಂದು ದುಷ್ಕಾರ್ಯದಿಂದ ತೋರಿ ಸುವ ಬದಲು ಸತ್ಯಾಗ್ರಹ ತತ್ವವನ್ನು ಆಚರಿಸಿದರು ಸರ್ಕಾರವೇ ಆಗಲಿ ಗುಂಪುಗಳೇ ಆಗಲಿ ವ್ಯಕ್ತಿಗಳೇ ಆಗಲಿ ದುಷ್ಕೃತ್ಯಗಳನ್ನು ಮಾಡಿದರೆ ಅವರು ಕಾನೂನು ತಿರಸ್ಕಾರವನ್ನೊ, ಉಪವಾಸವನ್ನೊ ಕೈಗೊಂಡು ತಮ್ಮ ಅಸಮ್ಮತ ವನ್ನು ವ್ಯಕ್ತಿಪಡಿಸುತ್ತಿದ್ದರು. ಸಾಮಾನ್ಯವಾಗಿ ಕೋಪ, ಆಗ್ರಹ ಮುಂತಾದ ಭಾವನೆಗಳು ಧ್ವಂಸಾತ್ಮಕವಾಗಿರುವುವು. ಆದರೆ ಗಾಂಧೀಜಿಯವರು ಆ ದಾರಿ

ಯನ್ನು ಅನುಸರಿಸದೆ ಸತ್ಯ ಅಹಿಂಸೆಗಳನ್ನು ಅನುಸರಿಸಿ ಸತ್ಯಾಗ್ರಹ ಮಾರ್ಗವನ್ನು ಹಿಡಿದರು. ಇದು ಮಾನವ ಚರಿತ್ರೆಯಲ್ಲಿಯೇ ಒಂದು ಉತ್ಕೃಷ್ಟ ಮತ್ತು ಅಪೂರ್ವ ಘಟನೆ.

ಮುಖ್ಯವಾಗಿ ಪತಂಜಲಿಯು ಸೂಚಿಸಿರುವ ಉಪೇಕ್ಷಾ ಭಾವನೆಯ ಗುರಿಯೂ ಗಾಂಧೀಜಿಯವರ ಸತ್ಯಾಗ್ರಹದ ಭಾವನೆಯೂ ಒಂದೇ. ದುಷ್ಕೃತ್ಯಗಳಿಂದ ಉಂಟಾದ ಕೋಪವನ್ನು ಹತೋಟಿಗೆ ತಂದುಕೊಳ್ಳುವುದೇ ಈ ಎರಡು ಮಾರ್ಗಗಳ ಗುರಿಯು. ವ್ಯತ್ಯಾಸವೆಂದರೆ ಉಪೇಕ್ಷೆಯು ವ್ಯಕ್ತಿಗೆ ಮನಶ್ಶಾಂತಿಯನ್ನು ಕೊಡುವುದು. ಆದರೆ ಸತ್ಯಾಗ್ರಹವು ಸಮಾಜದ ಒಂದು ರಚನಾತ್ಮಕ ದಾರಿಯಾಗುವುದು.

13) **ಧೈರ್ಯ :** ಸಾಮಾನ್ಯವಾಗಿ ಧೈರ್ಯ ಎಂಬ ಪದಕ್ಕೆ ನಿರ್ಭೀತಿ ಎಂಬರ್ಥವು ಬರುವುದು. ಆದರೆ ಜೀವನದಲ್ಲಿ ವಿಪತ್ತು ಬಂದಾಗ ಭಯಗೊಳ್ಳದೆ ನಿರಾಶೆಯನ್ನು ಹೊಂದದೆ ತನ್ನ ಕರ್ತವ್ಯವನ್ನು ತಾನು ಮಾಡುವುದೇ ಧೈರ್ಯ. ಆದುದರಿಂದ ಜೀವನದಲ್ಲಿ ನಮ್ಮ ಕೆಲಸಗಳನ್ನು ಸಾಧಿಸಬೇಕಾದರೆ ಧೈರ್ಯ ಅಗತ್ಯ. ಧೈರ್ಯವೇ ಆತ್ಮಶಕ್ತಿ ಕೊಡುವುದು. ಭೀತಿಯು ದುರ್ಬಲತೆಯನ್ನು ತಂದೊಡುವುದು. ಯಾವುದನ್ನು ನಮ್ಮ ಕರ್ತವ್ಯವೆಂದು ನಾವು ತಿಳಿಯುವೆವೋ ಅದನ್ನು ಮಾಡುವಾಗ ಎಂತಹ ಅಡಚಣೆಗಳು ಬಂದರೂ ಎಂತಹ ವಿಪತ್ತುಗಳು ಒದಗಿದರೂ ಅದನ್ನು ನಿರ್ವಹಿಸುವ ಧೈರ್ಯ.

14) **ಶ್ರದ್ಧೆ :** ಶ್ರದ್ಧೆ ಅಶ್ರದ್ಧೆಯನ್ನು ಕುರಿತು ಗೀತೆಯಲ್ಲಿ ಈ ಕೆಳಗಿನ ಶ್ಲೋಕಗಳಿವೆ.

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥
ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥

ಗೀತೆ 4—39, 40.

ಶ್ರದ್ಧೆಯುಳ್ಳವನೂ ತತ್ಪರನೂ ಜಿತೇಂದ್ರಿಯನೂ ಜ್ಞಾನವನ್ನು ಹೊಂದುತ್ತಾನೆ. ಜ್ಞಾನವನ್ನು ಪಡೆದು ಶೀಘ್ರದಲ್ಲಿಯೇ ಪರಮಶಾಂತಿಯನ್ನು ಪಡೆಯುತ್ತಾನೆ. ಜ್ಞಾನವಿಲ್ಲದವನೂ, ಶ್ರದ್ಧೆಯಿಲ್ಲದವನೂ ಸಂಶಯಾತ್ಮನೂ ಈ ಮೂವರೂ ನಾಶಹೊಂದುವರು. ಸಂಶಯಾತ್ಮನಿಗೆ ಈ ಲೋಕವಿಲ್ಲ, ಪರಲೋಕವಿಲ್ಲ, ಸುಖವೂ ಇಲ್ಲ.

ಮುಖ್ಯವಾಗಿ ಆಕಾಂಕ್ಷೆಯಿದ್ದರೆ ಶ್ರದ್ಧೆಯಿಂದ ಕೆಲಸ ಮಾಡುವರು. ಶ್ರದ್ಧೆಯಿಂದ ಕೆಲಸ ಮಾಡಿದರೆ ಕಾರ್ಯಸಿದ್ಧಿಯಾಗುವುದು. ಒಬ್ಬ ಮನುಷ್ಯನು

ಯಾವುದನ್ನು ಮಾಡಬೇಕಾದರೂ ಗುರಿಯಿಡಬೇಕು. ಗುರಿ ಇದ್ದರೆ ಶ್ರದ್ಧೆಯಿರುವುದು. ಆಗ ಆ ಗುರಿಯನ್ನು ಸಾಧಿಸಲು ಸುಲಭ.

15) **ವಿನಯ :** ಭಾರತೀಯ ಸಂಸ್ಕೃತಿಯಲ್ಲಿ ವಿನಯ ಅಥವಾ ವಿಧೇಯತೆ ಪ್ರತಿಯೊಬ್ಬ ಮನುಷ್ಯನಲ್ಲೂ ಇರಬೇಕಾದ ಮುಖ್ಯಗುಣ. ವಿನಯವಿಲ್ಲದಿರುವವನು ಅಹಂಕಾರದಿಂದ ಕೂಡಿರುವನು. ಅಹಂಕಾರಕ್ಕೆ ತಳಹದಿ ಅವಿವೇಕ. ಆದುದರಿಂದಲೇ ಗೀತೆಯಲ್ಲಿ (V—18) 'ವಿದ್ಯಾವಿನಯ ಸಂಪನ್ನನು ಸಮದರ್ಶಿಯಾಗಿರುವನು' ಎಂದು ಹೇಳಿದೆ. ಸಾಮಾನ್ಯವಾಗಿ ವಿನಯಕ್ಕೂ ವಿಧೇಯತೆಗೂ ಇರುವ ವ್ಯತ್ಯಾಸವನ್ನು ನಾವು ಮನಸ್ಸಿನಲ್ಲಿ ಇಡುವುದಿಲ್ಲ. ಈ ಎರಡು ಪದಗಳೂ ಸಮಾನ ಅರ್ಥಹೊಂದಿವೆಯೆಂದು ಉಪಯೋಗಿಸುವೆವು. ಇದು ಸರಿಯಲ್ಲ. ವಿ ಧೇ ಯ ತೆ ಎಂದರೆ ಹೇಳಿದಂತೆ ಕೇಳುವುದು, ನಡೆಯುವುದು. ಆಜ್ಞಾನುಸಾರ ವರ್ತಿಸುವುದು. ಅಂದರೆ ಇತರರು ಹೇಳುವುದನ್ನು ಶಿರಸಾವಹಿಸುವುದು. ಆದರೆ ವಿನಯವೆಂದರೆ ನಮ್ರತೆ. ಅಹಂಕಾರರಹಿತ ವರ್ತನೆ. ಇದು ಅಂತಃಕರಣದಿಂದ ಬರುವುದು. ವಿಧೇಯತೆಯು ದೊಡ್ಡ ಪದವಿಯಲ್ಲಿರುವವರ ಭೀತಿಯಿಂದ ಉಂಟಾಗುವ ವರ್ತನೆ. ವಿನಯಕ್ಕೆ ಮೂಲ ಭೀತಿಯಲ್ಲ. ತಿಳುವಳಿಕೆ. ತನ್ನ ಮೇರೆಯನ್ನು ತಾನು ಅರಿಯುವುದು. ವಿಧೇಯತೆಯು ಸಂಪ್ರದಾಯ ಜೀವನದ ಒಂದು ಅಂಶ. ಆದರೆ ವಿನಯವು ಸಾರ್ವತ್ರಿಕಗುಣ. ಇದು ಎಲ್ಲ ಸಮಾಜಗಳಿಗೂ ಎಲ್ಲ ಕಾಲದೇಶಗಳಿಗೂ ಅನ್ವಯಿಸುವುದು.

16) **ತಪಸ್ಸು :** ಉಪನಿಷತ್ಕಾಲದಲ್ಲಿ 'ತಪಸ್' ಎನ್ನುವುದು ಶ್ರೇಷ್ಠ ವರ್ತನೆಯಾಗಿತ್ತು. ತಪಸ್ಸೆಂದರೆ ಮನೋವಾಕ್ಕಾಯಗಳ ಮೇಲಿನ ಹತೋಟಿ. ಈ ಮೂರು ಶಕ್ತಿಗಳನ್ನು ದುರ್ವ್ಯಯ ಮಾಡದೆ ಅವುಗಳನ್ನು ಮಿತವ್ಯಯಮಾಡಿ ಕಾಪಾಡಿಕೊಳ್ಳುವುದು ತಪಸ್ಸು. ಮನಸ್ಸಿಗೆ ತೋಚಿದ ಯೋಚನೆ, ಬಾಯಿಗೆ ಬಂದ ಮಾತು, ಇಷ್ಟಾನುಸಾರ ವರ್ತನೆ ಇವುಗಳಿಂದ ನಮ್ಮ ಶಕ್ತಿಯನ್ನು ಕಳೆದುಕೊಳ್ಳುವೆವು. ನಿಯಮಬದ್ಧಯೋಚನೆ, ಮಿತಭಾಷಣ ಮತ್ತು ಸಂಯಮದಿಂದ ಕೂಡಿದ ವರ್ತನೆ ಇವು ಆತ್ಮಶಕ್ತಿಯನ್ನು ಬೆಳೆಸುವುವು. ಬಹುಶಃ ಈ ಕಾರಣದಿಂದಲೇ ಗಾಂಧೀಜಿಯವರು ಪ್ರತಿಸೋಮವಾರವೂ ಮೌನವನ್ನು ಆಚರಿಸುತ್ತಿದ್ದರು. ಮೌನವನ್ನು ಆಚರಿಸುವವನು ಮುನಿ.

17) **ದಾನ :** ಸಾಮಾನ್ಯವಾಗಿ ಭಿಕ್ಷುಕನಿಗೆ ಕಾಸು ಕೊಡುವುದನ್ನು ಅಥವಾ ಧಾನ್ಯಕೊಡುವುದನ್ನು ದಾನ ಎಂದು ಪರಿಗಣಿಸುವರು. ಶ್ರಾವಣ ಮಾಸದಲ್ಲಿ ಪ್ರತಿ ಶನಿವಾರವೂ ಭಿಕ್ಷೆಯನ್ನು ಪಡೆಯುವುದು ಅವಶ್ಯಕವೆಂದು ಅನೇಕರು ತಿಳಿದುಕೊಂಡಿರುವರು. ತಮ್ಮ ಮಕ್ಕಳಿಗೆ ಹಣೆಯ ಮೇಲೆ ನಾಮ ಹಾಕಿ ಮನೆ

ಮನೆಗೂ ಕಳುಹಿಸಿ ಭಿಕ್ಷೆಯನ್ನು ಬೇಡಿಸುವರು. ಅನುಕೂಲವಂತರು ತಮ್ಮ ಮಕ್ಕಳನ್ನು ವರ್ಷಕ್ಕೊಮ್ಮೆ ಭಿಕ್ಷಾಟನೆಗೆ ಕಳುಹಿಸಿದರೂ ಆಗ ಭಿಕ್ಷಾಟನೆಯು ಮಾಡಬಹುದಾದ ಕೆಲಸವೆಂದು ಪರಿಗಣಿಸಲಾಗುವುದು, ಆದುದರಿಂದ ಸೋಮಾರಿಗಳು ತಾವು ಭಿಕ್ಷೆ ಬೇಡಿದರೆ ತಪ್ಪಿಲ್ಲ ಎಂಬ ಮನೋಭಾವವನ್ನು ಹೊಂದುವರು. ಈ ಕಾರಣಗಳಿಂದ ಭಿಕ್ಷುಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು. ಇವನ್ನು ತಡೆಯಲು ಸರ್ಕಾರವು ಅನೇಕ ಕ್ರಮಗಳನ್ನು ತೆಗೆದು ಕೊಂಡಿರುವುದು. ಭಿಕ್ಷಾವೃತ್ತಿಯು ಈಗ ಅಪರಾಧ, ಭಿಕ್ಷುಕನು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗುವನು. ಅದರೆ ದಾನಮಾಡುವುದು ಒಂದು ಉತ್ಕೃಷ್ಟ ವರ್ತನೆಯೆಂಬ ಭಾವನೆಯು ಇರುವುದರಿಂದ ಭಿಕ್ಷುಕನು ಮನೆಗೋ, ಅಂಗಡಿಯ ಮುಂದೆಯೋ ಬಂದರೆ ಅವನಿಗೆ ಒಂದು ಪೈಸೆ ಕೊಡುವುದು ವಾಡಿಕೆಯಾಗಿಬಿಟ್ಟಿದೆ. ಇದರಿಂದ ದೇವಸ್ಥಾನದ ಸುತ್ತಲೂ ಮಾರುಕಟ್ಟೆಯ ಸುತ್ತಲೂ ಭಿಕ್ಷುಕರ ಕಾಟವನ್ನು ತಪ್ಪಿಸಿಕೊಳುವುದು ಒಂದು ಪ್ರಯಾಸವು. ಜನಸಾಮಾನ್ಯರಲ್ಲಿ ಭಿಕ್ಷುಕರಿಗೆ ಒಂದು ಪೈಸೆ ಕೊಡುವುದು ಒಳ್ಳೆಯದು ಎಂಬ ಭಾವನೆಯಿರುವುದು. ಈ ಭಾವನೆ ಇರುವವರೆಗೂ ಯಾವ ಕಾನೂನೂ ಭಿಕ್ಷಾಟನೆಯನ್ನು ತಪ್ಪಿಸಲಾರದು. ನಿಜವಾಗಿಯೂ ದಾನವೆಂದರೆ ಕೊಡುಗೆ, ಅದರಿಂದ ಅನೇಕ ವ್ಯಕ್ತಿಗಳಿಗೆ ಸಹಾಯವಾಗಬೇಕು. ಅನೇಕರಿಗೆ ಸಹಾಯವಾಗಬೇಕಾದರೆ ದಾನವನ್ನು ಜನಗಳಿಗೆ ಸಹಾಯಮಾಡುವ, ಕಷ್ಟದಲ್ಲಿರುವ ಜನಗಳ ಉದ್ಧಾರಕ್ಕಾಗಿ ಕೆಲಸಮಾಡುವ ಸಂಸ್ಥೆಗಳಿಗೆ ಕೊಡಬೇಕೇ ಹೊರತು ವೇಷವನ್ನು ಹಾಕಿಕೊಂಡಿರುವ ವ್ಯಕ್ತಿಗೆ ಕೊಡುವುದಲ್ಲ. ದಾನವನ್ನು ಯಾವ ವ್ಯಕ್ತಿಗೂ ನೇರವಾಗಿ ಕೊಡಬಾರದು. ಹಾಗೆ ಮಾಡಿದರೆ ಆ ದಾನದಿಂದ ಸೋಮಾರಿತನ, ಆಶ್ರಯ ಮನೋಭಾವ, ದುರ್ವರ್ತನೆ ಮುಂತಾದವುಗಳು ಉಂಟಾಗುವುದೇ ಹೊರತು ಭಿಕ್ಷೆಯನ್ನು ತೆಗೆದುಕೊಳ್ಳುವ ವ್ಯಕ್ತಿ ಎಂದಿಗೂ ಅಭ್ಯುದಯವನ್ನು ಪಡೆಯಲಾರನು. ದಾನದ ಗುರಿ ವ್ಯಕ್ತಿಯ ಅಭ್ಯುದಯವಾಗಲು ಸಹಾಯಕವಾಗಿರಬೇಕು. ಈ ಗುರಿ ಸಫಲತೆಯನ್ನು ಹೊಂದಬೇಕಾದರೆ ಕೇವಲ ಸಂಸ್ಥೆಗಳಿಂದ ಮಾತ್ರ ಸಾಧ್ಯ.

ಗೀತೆಯಲ್ಲಿ ದಾನವನ್ನು ಕುರಿತು ಕೆಳಗಿನ ಈ ಶ್ಲೋಕಗಳಿವೆ.

ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥
ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಮುದಾಹೃತಮ್ ॥
ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್ ॥

ಗೀತೆ. 18—20, 21, 22.

'ದಾನ ಮಾಡತಕ್ಕದೆಂಬ ಯಾವ ದಾನವು ಅನುಪಕಾರಿಯಾದವನಿಗೆ ದೇಶ ಕಾಲ ಪಾತ್ರಗಳಲ್ಲಿ ಕೊಡಲ್ಪಡುವುವೋ ಆ ದಾನವು ಸಾತ್ವಿಕವೆಂದು ಹೇಳಲ್ಪಟ್ಟದೆ. ಆದರೆ ಯಾವುದು ಪ್ರತ್ಯುಪಕಾರಕ್ಕಾಗಿ ಅಥವಾ ಪುನಃ ಫಲವನ್ನು ಉದ್ದೇಶಿಸಿ ಪರಿಕ್ಲೇಶದಿಂದ ಕೊಡಲ್ಪಡುವುವೋ ಆ ದಾನವು ರಾಜಸವೆಂದು ಹೇಳಲ್ಪಟ್ಟದೆ. ಯಾವ ದಾನವು ಅದೇಶಗಳಲ್ಲಿ, ಅಕಾಲಗಳಲ್ಲಿ, ಅಪಾತ್ರನಿಗೆ, ಸತ್ಕಾರವಿಲ್ಲದೆ ತಿರಸ್ಕಾರದಿಂದ ಕೊಡಲ್ಪಡುವುದೋ ಅದು ತಾಮಸವೆಂದು ಹೇಳಲ್ಪಟ್ಟದೆ.

ಚತುರೋಪಾಯಗಳಲ್ಲಿ ದಾನವೂ ಒಂದು. ಅಲ್ಲಿ ದಾನ ಎಂಬ ಪದಕ್ಕೆ ಬೇರೆ ಅರ್ಥವಿದೆ. ಹಣವನ್ನೋ ಆಸ್ತಿಯನ್ನೋ ಕೊಟ್ಟು ತನ್ನ ವೈರಿಯ ಬಲವನ್ನು ಕ್ಷೀಣಿಸುವುದು, ಹಣವನ್ನು ಕೊಟ್ಟು ತನ್ನ ಕೆಲಸವನ್ನು ಸಾಧಿಸಿಕೊಳ್ಳುವುದು, ಇದೇ ಈಗಿನ ಭ್ರಷ್ಟಾಚಾರ.

18) ಅನಾಸಕ್ತಿ :— ಮಾನಸಿಕ ಬೆಳವಣಿಗೆಯ ಕ್ರಮವು ಆಸಕ್ತಿಯಿಂದ ಅನಾಸಕ್ತಿಯ ಕಡೆಗೆ. ಆಗ ತಾನೇ ಹುಟ್ಟಿದ ಮಗು ಮೂರು ವಿಷಯದಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸುವುದು. ಅವು ಹಾಲು, ಶಾಕ ಮತ್ತು ನಿದ್ರೆ. ಬೆಳೆಯುತ್ತಾ ಬೆಳೆಯುತ್ತಾ ಯಾವ ವಸ್ತುವನ್ನು ನೋಡುತ್ತದೆಯೋ ಆ ವಸ್ತುವನ್ನು ಕೈಯಲ್ಲಿ ಹಿಡಿದು ಬಾಯಲ್ಲಿ ಇಟ್ಟು ಚಪ್ಪರಿಸುವುದಕ್ಕೆ ಪ್ರಯತ್ನಿಸುವುದು. ಹೀಗೆ ಬೆಳೆಯುತ್ತಾ ಬೆಳೆಯುತ್ತಾ ಮಗುವಿನ ಆಸಕ್ತಿ ಇಂದ್ರಿಯ ವಿಷಯಗಳಲ್ಲಿ ಹೆಚ್ಚುತ್ತಾ ಹೋಗುವುದು. ಈ ಆಸಕ್ತಿಗಳಿಗೆ ಒಂದು ರೂಪವನ್ನು ಕೊಡುವುದೇ ಶಿಶುವಿಹಾರ ಮತ್ತು ಶಾಲೆಗಳ ಗುರಿ. ಮನಸ್ಸಿಗೆ ತೋಚಿದಂತೆ ಕೆಲಸಗಳನ್ನು ಮಾಡುವುದನ್ನು ಬಿಟ್ಟು ಒಂದು ಗುರಿಯನ್ನು ಸಾಧಿಸುವುದಕ್ಕೋಸ್ಕರ ಕೆಲಸಗಳನ್ನು ಮಾಡುವುದಕ್ಕೆ ಶಿಶುವಿಹಾರಗಳಲ್ಲಿರುವ ಸಲಕರಣೆಗಳ ಮತ್ತು ಪ್ರಾಥಮಿಕ ಶಾಲೆಯ ಆಟಪಾಠಗಳ ಮೂಲಕ ಉಪಾಧ್ಯಾಯರು ಪ್ರಯತ್ನಿಸುವರು. ಆದರೂ ಬಾಲಕನ ಮನಸ್ಸು ಅನೇಕ ವಿಷಯಗಳ ಕಡೆ ಹರಿಯುವುದು. ಯಾವ ಬಾಲಕನು ಈ ವಿಷಯಗಳ ಮೇಲಿನ ಆಸಕ್ತಿಯನ್ನು, ಮನಸ್ಸಿನ ಯೋಚನೆಗಳ ಚಂಚಲತ್ವವನ್ನು ಬಿಟ್ಟು ತನ್ನ ಪಾಠಗಳ ಮೇಲೆ ಮತ್ತು ಕರ್ತವ್ಯಗಳ ಮೇಲೆ ಆಟಗಳ ಮೇಲೆ ದೃಷ್ಟಿ ಇಡುವನೋ ಆ ಬಾಲಕನು ತಾನು ಕೇಳಿದುದನ್ನು ಮತ್ತು ಓದಿದುದನ್ನು ಗ್ರಹಿಸುವನು. ಈ ವಿಧವಾಗಿ ಐದಾರು ವರ್ಷಗಳ ಮಗು ವಿಷಯಗಳ ಮೇಲಿನ ಆಸಕ್ತಿಯನ್ನು ಯೋಚನೆಗಳ ಚಂಚಲತ್ವವನ್ನು ತ್ಯಜಿಸುವುದನ್ನು ಕಲಿಯಬೇಕು. ಆಗ ಕಾರ್ಯ ಸಿದ್ಧಿಯುಂಟಾಗುವುದು. ಇದೇ ವಿಧವಾಗಿ ಮನುಷ್ಯನು ಯಾವ ಕೆಲಸವನ್ನು ಮಾಡಿದರೂ ಆ ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಆಗ ಅದರಲ್ಲಿ ಚತುರತೆಯನ್ನು ಪಡೆಯುವನು. ಉದಾಹರಣೆಗೆ ಮನೆ

ಯಲ್ಲೋ, ಶಾಲೆಯಲ್ಲೋ ಓದುತ್ತಿರುವ ಸಮಯದಲ್ಲಿ ತಿಂಡಿಯ ಮೇಲೆ ಯೋಚನೆ ಹೋದರೆ ಅಥವಾ ತನ್ನ ಸ್ನೇಹಿತರ ಜೊತೆಯಲ್ಲಿ ಆಟವಾಡಬೇಕೆಂಬ ಆಸೆ ಹುಟ್ಟಿದರೆ ಆ ಹುಡುಗನು ತನ್ನ ಪಾಠವನ್ನು ಸರಿಯಾಗಿ ಕಲಿಯಲಾರನು. ಇದೇ ವಿಧವಾಗಿ ಪರೀಕ್ಷೆಯ ಕೊಠಡಿಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಸರಿಯಾಗಿ ಓದಿ ಪ್ರತಿಯೊಂದು ಪ್ರಶ್ನೆಗೂ ಸರಿಯಾದ ಉತ್ತರವನ್ನು ಕೊಡದೆ ಅವನ ಮನಸ್ಸು ಚಲ್ಲಾಪಿಲ್ಲಿಯಾಗಿ ಅತ್ತಿತ್ತ ಹರಿದರೆ ಅವನು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದುವುದು ಹೇಗೆ ಸಾಧ್ಯ? ಇದೇ ವಿಧವಾಗಿ ವಯಸ್ಕನಾದವನು ತಾನು ಮಾಡುವ ಕೆಲಸದ ಮೇಲೆ ಮನಸ್ಸು ಇಡದೇ ಹೋದರೆ ಆ ಕೆಲಸವನ್ನು ಸರಿಯಾಗಿ ಮಾಡಲು ಅಸಾಧ್ಯ. ಚಮ್ಮಾರನ ಕೆಲಸವೇ ಆಗಲಿ, ವೈದ್ಯಕೀಯ ವೃತ್ತಿಯೇ ಆಗಲಿ ಅಧಿಕಾರದ ಕೆಲಸವೇ ಆಗಲಿ, ಆಯಾ ಕೆಲಸಕ್ಕೆ ಅನ್ವಯಿಸಿದ ವಿಷಯಗಳಲ್ಲಿ ಅನಾಸಕ್ತಿಯನ್ನು ಹೊಂದಿದರೆ ಮಾತ್ರ ಆ ಕೆಲಸವನ್ನು ನಿರ್ವಹಿಸಲು ಸಾಧ್ಯ. ಕೆಲಸದಲ್ಲಿ ಆಸಕ್ತಿಯಿರಬೇಕು. ಕೆಲಸಕ್ಕೆ ಸಂಬಂಧವಿಲ್ಲದ ವಿಷಯಗಳಲ್ಲಿ ಅನಾಸಕ್ತಿಯಿರಬೇಕು. ಆಗ ಒಂದು ಶಿಸ್ತಿನಿಂದ ಕೆಲಸಗಳನ್ನು ನೆರವೇರಿಸಲು ಸಾಧ್ಯ. ಇದನ್ನು ಕುರಿತು ಗೀತೆಯಲ್ಲಿ ಹೀಗೆ ಹೇಳಿದೆ.

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥

ಗೀತೆ. 2—4

'ಕರ್ಮಯೋಗದಲ್ಲಿ ನಿಶ್ಚಯ ಸ್ವಭಾವವುಳ್ಳ ಬುದ್ಧಿಯು ಏಕನಿಷ್ಠವಾಗಿರುತ್ತದೆ. ನಿಶ್ಚಯ ಸ್ವಭಾವವಿಲ್ಲದವರ ಬುದ್ಧಿಗಳು ಅನೇಕ ಶಾಖೆಗಳುಳ್ಳವಾಗಿಯೂ ಅನಂತವಾಗಿಯೂ ಇರುತ್ತವೆ.

ಚಿತ್ತದ ಏಕಾಗ್ರತೆಯನ್ನು ಬಾಲ್ಯಾವಸ್ಥೆಯಿಂದಲೂ ಕಲಿಯಬೇಕು. ಏಕಾಗ್ರತೆಯನ್ನು ಕಲಿಯದಿರುವ ವ್ಯಕ್ತಿಯು ಯಾವ ಕೆಲಸವನ್ನೂ ಸರಿಯಾಗಿ ಮಾಡಲಾರನು. ಕ್ರಮೇಣ ಪ್ರಪಂಚದಲ್ಲಿರುವ ಸುಖ ಭೋಗಗಳನ್ನು ಕುರಿತು ಅನಾಸಕ್ತಿಯನ್ನು ಹೊಂದಬೇಕು. ಆಗ ಆಧ್ಯಾತ್ಮಿಕವಾದ ಉನ್ನತಿಯನ್ನು ಪಡೆಯಲು ಸಾಧ್ಯ. ಗೀತೆಯು ಮತ್ತೊಂದು ಶ್ಲೋಕದಲ್ಲಿ (2—62) 'ವಿಷಯಗಳನ್ನು ಚಿಂತಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಆಸಕ್ತಿಯು ಹುಟ್ಟುತ್ತದೆ. ಆಸಕ್ತಿಯಿಂದ ಕಾಮವು ಹುಟ್ಟುತ್ತದೆ. ಕಾಮ ಪೀಡಿತನಾದ ವ್ಯಕ್ತಿಯು ಆಧ್ಯಾತ್ಮಿಕದ ಕಡೆಗೆ ದೃಷ್ಟಿಯನ್ನು ಇಡಲಾರನು.'

19) ವಿವೇಕ :— ಅನಾಸಕ್ತಿಯನ್ನು ಪಡೆಯಬೇಕಾದರೆ ವಿವೇಕವು ಅತ್ಯಗತ್ಯ. ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು; ಯಾವುದು

ಒಳ್ಳೆಯದು, ಯಾವುದು ಕೆಟ್ಟದ್ದು, ಯಾವ ಮೌಲ್ಯಗಳು ಶಾಶ್ವತ, ಯಾವ ಮೌಲ್ಯಗಳು ತಾತ್ಕಾಲಿಕ ಎಂಬುದನ್ನು ನಿಶ್ಚಯಿಸುವುದೇ ವಿವೇಕ.

20) ದಯೆ :— ಇತರರ ಕಷ್ಟನೋವುಗಳಿಗೆ ಅನುಕಂಪವನ್ನು ತೋರಿಸುವುದು ದಯೆ. ದಯಾಗುಣವು ಬೆಳೆದರೆ ಒಬ್ಬ ವ್ಯಕ್ತಿಯ ಹೃದಯವು ವಿಶಾಲವಾಗುವುದು. ಆಗ ಸಮಾಜದಲ್ಲಿನ ಎಲ್ಲ ಮನುಷ್ಯರಲ್ಲಿಯೂ ಪ್ರೀತಿಯನ್ನು ಕಾಣುವವನಾಗುವನು. ತನ್ನಿಂದ ಇತರರಿಗೆ ಉಪಕಾರ, ಇತರರಿಂದ ತನಗೆ ಉಪಕಾರ. ಆದುದರಿಂದ 'ಧರ್ಮದ ಮೂಲವೇ ದಯೆ' ಎಂದರೆ ಅತಿಶಯೋಕ್ತಿಯಾಗಲಾರದು. ಇದೇ ಅಹಿಂಸೆಗೆ ಮೂಲ. ಇದೇ ಸುವರ್ಣ ನಿಯಮಕ್ಕೆ ಆಧಾರ. ಗೀತೆಯಲ್ಲಿ ಹೇಳಿರುವ ಹಾಗೆ

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ ॥
ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನತದಸ್ತಿ ವಿನಾ ಯತ್ ಸ್ಯಾನ್ಮಯಾ ಭೂತಂ ಚರಾಚರಮ್ ॥

ಗೀತೆ. 10—20, 39.

'ಸಮಸ್ತ ಪ್ರಾಣಿಗಳ ಹೃದಯದಲ್ಲಿರುವ ಆತ್ಮ ನಾನೇ ಸಮಸ್ತ ಭೂತಗಳ ಆದಿ, ಮಧ್ಯ ಮತ್ತು ಅಂತ ಸಹ ನಾನೇ.'

'ಸರ್ವ ಭೂತಗಳಿಗೆ ಯಾವುದು ಕಾರಣವೋ ಅದೂ ಕೂಡ ನಾನೇ. ನಾನಿಲ್ಲದೆ ಇರುವ ಯಾವ ಚರಾಚರವಾದ ಭೂತವೂ ಇಲ್ಲ.'

ಗೀತೆಯಲ್ಲಿ ಮತ್ತೊಂದು ಕಡೆ ಸರ್ವಾತ್ಮವನ್ನು ಕುರಿತು ಹೀಗೆ ಹೇಳಿದೆ.

ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್ ।
ಭೂತಭರ್ತೃ ಚ ತಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥

ಗೀತೆ. 13—16.

'ಅದು ವಿಭಾಗವಿಲ್ಲದೆ ಇರುವುದು. ಪ್ರಾಣಿಗಳಲ್ಲಿ ವಿಭಾಗವಾಗಿರುವಂತೆ ಕಾಣುತ್ತಿರುವುದು. ಆ ಜ್ಞೇಯವು ಸಮಸ್ತ ಭೂತಗಳ ಪಾಲಕ, ಸಂಹಾರ ಕರ್ತೃ ಮತ್ತು ಸೃಷ್ಟಿ ಕರ್ತೃ.'

ಭೂತದಯೆಯು ಇಂತಹ ತತ್ವದ ಮೇಲೆ ವ್ಯವಸ್ಥಿತವಾಗಿದ್ದರೂ ಭಾರತೀಯ ಸಂಸ್ಕೃತಿಯಲ್ಲಿ ಕೋಟ್ಯಂತರ ಜನ ಅಸ್ಪೃಶ್ಯರ ಕಡೆಗೂ ಗಿರಿಜನರ ಕಡೆಗೂ ಈ ದೃಷ್ಟಿಯನ್ನು ಇಡದೆ ಇರುವುದರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದರೂ, ಪಂಚವಾರ್ಷಿಕ ಯೋಜನೆಗಳು ಮುಂದುವರೆದರೂ ಭಾರತ ದೇಶದಲ್ಲಿ ಅನ

ಕ್ಷರಸ್ಥತೆ ಮತ್ತು ಬಡತನ ಕಡಿಮೆಯಾಗಲಿಲ್ಲ. ಈ ಸ್ಥಿತಿಗಳು ಸಾವಿರಾರು ವರ್ಷಗಳಿಂದ ಇರುವುದರಿಂದ ಅವುಗಳನ್ನು ನಿರ್ಮೂಲಮಾಡಲು ದಶಕಗಳೆಲ್ಲಿ, ಶತಮಾನಗಳೇ ಬೇಕಾಗುವುದು. ಅವರೂ ನಮ್ಮ ಹಾಗೆ ಮಾನವರು, ಅವರಲ್ಲಿಯೂ ಉತ್ತಮ ಜೀವನದ ಆಸೆ ಆಕಾಂಕ್ಷೆಗಳಿರುವುದು, ಎಂಬ ಅರಿವು ಇದ್ದಿದ್ದರೆ ಈ ದುಃಸ್ಥಿತಿ ಈಗ ಇರುತ್ತಿರಲಿಲ್ಲ. ಮನೆಯ ಯಜಮಾನನು ಎಷ್ಟೇ ಒಳ್ಳೆಯವನಾಗಿದ್ದರೂ ಎಷ್ಟೇ ನೀತಿವಂತನಾಗಿದ್ದರೂ ಆತನ ಮಕ್ಕಳು ಸರಿಯಾಗಿಲ್ಲದಿದ್ದರೆ ಆ ಮನೆತನವು ಮುಂದಕ್ಕೆ ಬರಲಾರದು. ಇದೇ ವಿಧವಾಗಿ ದೇಶದಲ್ಲಿ ಶೇ. 10 ಮಂದಿ ಉತ್ತಮ ಜೀವನವನ್ನು ನಡೆಸಿದರೂ ಉತ್ತಮ ಧ್ಯೇಯಗಳನ್ನು ಪಾಲಿಸಿದರೂ ಉತ್ತಮ ಆಚರಣೆಗಳನ್ನಿಟ್ಟಿದ್ದರೂ, ಶೇ. 90 ಮಂದಿ ಅಸಂಸ್ಕೃತರಾದರೆ ಆ ದೇಶದ ಸಂಸ್ಕೃತಿಯ ಮಟ್ಟವು ಮತ್ತು ಆರ್ಥಿಕ ಮಟ್ಟವು ಕೀಳು ದರ್ಜೆಯಲ್ಲಿದ್ದರೆ ಇದು ಆಶ್ಚರ್ಯವಲ್ಲ. ಆದುದರಿಂದ ದೇಶದಲ್ಲಿನ ಅಸಂಸ್ಕೃತಿಯನ್ನು ನಿರ್ಮೂಲ ಮಾಡುವುದೇ ಸುಸಂಸ್ಕೃತರ ಮುಖ್ಯ ಕರ್ತವ್ಯ. ಈ ಕೆಲಸವು ಎಷ್ಟು ಬೇಗ ನಡೆಯುವುದೋ ಅಷ್ಟು ಬೇಗ ದೇಶದ ಅಭ್ಯುದಯ ಸಾಧ್ಯ. ಇದಕ್ಕೆ ಹೃದಯ ವೈಶಾಲ್ಯತೆ ಅವಶ್ಯಕ.

ಭಾರತೀಯ ಸಂಸ್ಕೃತಿಯಲ್ಲಿ ಬಹಳ ಹಿಂದಿನ ಕಾಲದಿಂದಲೂ ಮೇಲೆ ವಿವರಿಸಿರುವ ಸದ್ಗುಣಗಳು ವ್ಯಕ್ತಿಯ ಸಂತೋಷಕ್ಕೂ, ಸಾಮಾಜಿಕ ಸಾಮರಸ್ಯಕ್ಕೂ ಅತಿ ಮುಖ್ಯವೆಂದು ಪರಿಗಣಿಸಲಾಗಿದೆ. ಸದ್ಗುಣಗಳನ್ನು ಬೆಳೆಸಿಕೊಳ್ಳುವುದು ಎಷ್ಟು ಅಗತ್ಯವೋ ದುರ್ಗುಣಗನ್ನು ಬಿಡುವುದು ಅಷ್ಟೇ ಅಗತ್ಯ. ಆದುದರಿಂದ ಮೇಲೆ ಸೂಚಿಸಿರುವ ಹಾಗೆ ಗೀತೆಯಲ್ಲಿ ಕಾಮ, ಕ್ರೋಧ ಮತ್ತು ಲೋಭ ಈ ಮೂರು ಆತ್ಮನಾಶಕ್ಕೆ ಕಾರಣಗಳೆಂದು ಸ್ಪಷ್ಟೀಕರಿಸಲಾಗಿದೆ. ಸಾಮಾನ್ಯವಾಗಿ ಈ ದುರ್ಗುಣಗಳನ್ನು ಒಟ್ಟಿಗೆ ಅರಿಷಡ್ವರ್ಗಗಳೆಂದು ಹೇಳುವುದುಂಟು. ಈಗ ಈ ಆರು ದುರ್ಗುಣಗಳನ್ನು ಸಂಕ್ಷೇಪವಾಗಿ ವಿವರಿಸಲಾಗುವುದು.

1) **ಕಾಮ :** ಇದು ಪುರುಷಾರ್ಥಗಳಲ್ಲಿ ಒಂದಾದರೂ ಅರಿಷಡ್ವರ್ಗಗಳಲ್ಲೂ ಒಂದು. ಜೀವನ ತೃಪ್ತಿಗೂ ಮತ್ತು ಮಾನವ ಕುಲವು ಉಳಿಯಬೇಕಾದರೂ ಕಾಮದ ಪಾತ್ರ ಅತಿಮುಖ್ಯ. ಆದರೆ ಸುಖ ಭೋಗಗಳ ಬಯಕೆ ಮಾನವನ ಪರಮ ಗುರಿಯಾದರೆ ಅವನನ್ನು ಅದು ಧ್ವಂಸ ಮಾಡುವುದು. ಆಸೆಯೇ ಜೀವನದ ಸುಖ ದುಃಖ ಬಂಧನಗಳಿಗೂ ಕಾರಣ ಎಂದು ಅನೇಕ ಗ್ರಂಥಗಳು ಸೂಚಿಸುವುವು. ಆದುದರಿಂದ ಆಸೆಯನ್ನು ಸುಖಭೋಗಗಳನ್ನು ಒಂದು ಮಿತಿಯಲ್ಲಿ ಇಟ್ಟಿರುವುದು ಮಾನವನ ಮುಖ್ಯ ಕರ್ತವ್ಯ. ಚಿಕ್ಕ ವಯಸ್ಸಿನಿಂದಲೂ ತಾಯಿ ತಂದೆಗಳು ಅನೇಕ ಕ್ರಮಗಳನ್ನು ಉಪಯೋಗಿಸಿ ಮಗುವಿನ ಬೆಳವಣಿಗೆಯು ಸುವ್ಯವಸ್ಥೆಯಿಂದ ಇರುವ ಹಾಗೆ ಮಾಡುವರು. ಚಿಕ್ಕ ಮಗವು ನೋಡಿದುದೆಲ್ಲಾ

ಬೇಕೆಂದು ಹಟ ಹಿಡಿಯುವುದು. ಸ್ವಲ್ಪ ಬೆಳೆದ ಮೇಲೆ ರುಚಿಕರವಾದ ತಿಂಡಿಗಳನ್ನು ಮಿತಿ ಇಲ್ಲದೆ ಬೇಕೆಂದು ಹಟ ಮಾಡುವುದು. ಇತರ ಮಕ್ಕಳು ತೊಟ್ಟಿರುವ ಉಡುಪುಗಳನ್ನು ನೋಡಿ ಅಂತಹ ಬಟ್ಟೆಗಳೇ ತಮಗೆ ಬೇಕೆಂದು ಹಟ ಹಿಡಿಯುವುವು. ಆದುದರಿಂದ ತಾಯಿ ತಂದೆಗಳು ಈ ಚಿಕ್ಕ ವಯಸ್ಸಿನಿಂದಲೇ ಮಗುವಿಗೆ ತನ್ನ ಆಸೆಗಳ ಮೇಲೆ ಹತೋಟಿ ಇಡುವ ಹಾಗೆ ತರಪೇತು ಕೊಡುವರು. ಆದರೂ ಅನೇಕರು ಎಷ್ಟು ಬೆಳೆದರೂ ಸಹ ತಮ್ಮ ಕಾಮ ಪ್ರವೃತ್ತಿಗಳ ಮೇಲೆ ಹತೋಟಿಯನ್ನು ಪಡೆದಿರುವುದಿಲ್ಲ. ಕಾಮ ಪ್ರವೃತ್ತಿಗಳ ಮೇಲೆ ಹತೋಟಿಯಿಲ್ಲದಿರುವುದರಿಂದ ಅವನಗಳು ನಾನಾವಿಧವಾದ ಅಪರಾಧಗಳನ್ನು ಮಾಡುವರು, ಋಗ್ವೇದ ಸಂಹಿತೆಯಲ್ಲಿಯೇ ಜೂಜು ಆಡುವುದು, ಕುಡಿಯುವುದು ಮುಂತಾದ ಕಾಮ ಪ್ರವೃತ್ತಿಗಳನ್ನು ವಿವರಿಸಲಾಗಿದೆ. ಇಂದು ಭಾರತೀಯ ಸಂಸ್ಕೃತಿಯನ್ನೇ ನಾಶಗೊಳಿಸುವಷ್ಟು ಪ್ರಬಲವಾಗಿರುವ ಭ್ರಷ್ಟಾಚಾರಕ್ಕೆ ಕಾಮ ಪ್ರವೃತ್ತಿಯೇ ಮೂಲ.

2) ಕ್ರೋಧ: – ಜೀವನದಲ್ಲಿ ಕಾಮವು ಎಷ್ಟು ಮೂಲ ಭೂತ ಗುಣವೋ ಕ್ರೋಧವೂ ಅಷ್ಟೆ ಮೂಲ ಭೂತಗುಣ. ಕ್ರೋಧಕ್ಕೆ ಕಾರಣ ಕಾಮ ತೃಪ್ತಿಗೆ ತಡೆ. ಗೀತೆಯಲ್ಲಿ (2—62) ವಿವರಿಸಿರುವ ಹಾಗೆ ' ಕಾಮಾತ್ ಕ್ರೋಧೋಽಭಿಜಾಯತೇ ' ಈ ಕ್ರೋಧವೂ ಸಹ ಕಾಮದ ಹಾಗೆಯೇ ಮನುಷ್ಯರಲ್ಲೂ ಪ್ರಾಣಿಗಳಲ್ಲೂ ಇರುವ ಗುಣ. ಚಿಕ್ಕ ಮಗು ತನಗೆ ಅತೃಪ್ತಿಯುಂಟಾದರೆ ತನ್ನನ್ನು ನೋಡಿಕೊಳ್ಳುವ ತಾಯಿಯ ಮೇಲೆಯೇ ತನ್ನ ಕ್ರೋಧವನ್ನು ಕಚ್ಚುವುದು. ಪರಚುವುದು ಮತ್ತು ಹೊಡೆಯುವುದರ ಮೂಲಕ ವ್ಯಕ್ತಪಡಿಸುವುದು. ಆದುದರಿಂದ ಕಾಮ ಪ್ರವೃತ್ತಿಯ ಮೇಲೆ ಮಗು ಹತೋಟಿಯನ್ನು ಪಡೆಯುವುದಕ್ಕೆ ತಾಯಿ ತಂದೆಗಳು ಎಷ್ಟು ಶ್ರಮಿಸುವರೋ ಕ್ರೋಧದ ಮೇಲೆ ಹತೋಟಿಯನ್ನು ಪಡೆಯುವುದಕ್ಕೂ ಹಾಗೆಯೇ ಶ್ರಮಿಸುವರು. ಆದರೂ ಅನೇಕರು ತಮ್ಮ ಕ್ರೋಧಕ್ಕೆ ವಶವಾಗಿ ಅನೇಕ ಅಪರಾಧಗಳನ್ನು ಮಾಡುವರು. ಸಾಮಾನ್ಯವಾಗಿ ಮಾನವನ ಎಲ್ಲ ಅಪರಾಧಗಳಿಗೂ ಕಾಮಕ್ರೋಧಗಳೆಂಬ ಎರಡು ದುರ್ಗುಣಗಳೇ ಮೂಲ ಕಾರಣಗಳು. ಕ್ರೋಧಕ್ಕೆ ಬಲಿಯಾದವನು ತನ್ನ ತಂದೆ ತಾಯಿಗಳನ್ನೂ ಸಹ ಖೂನಿ ಮಾಡುವನು. ಅನೇಕ ಸಲ ಇಬ್ಬರು ಜಗಳವಾಡುತ್ತಿದ್ದರೆ ಜಗಳವನ್ನು ಬಿಡಿಸಲು ಹೋಗುವ ಮೂರನೆಯವನು ಇಬ್ಬರಿಂದಲೂ ಹಾನಿಯನ್ನು ಅವರ ಕ್ರೋಧದ ಪರಿಣಾಮದಿಂದ ಹೊಂದುವನು. ಧ್ವಂಸಾತ್ಮಕವಾದ ಯುದ್ಧಗಳು ಕಾಮ ಕ್ರೋಧಗಳ ಮೇಲೆ ನಿಂತಿರುವುವು. ಒಟ್ಟಿನಲ್ಲಿ ಹೇಳಬೇಕಾದರೆ ತಾಂತ್ರಿಕ ಮುನ್ನಡೆಯು ಕಾಮ ಕ್ರೋಧಗಳ ಆಧಾರದ ಮೇಲಿರುವುದು. ಆದಿಮಾನವನು ಚೂಪಾದ ಕಲ್ಲನ್ನು ಉಪಯೋಗಿಸಿ ಗೆಡ್ಡೆ ಗೆಣಸುಗಳನ್ನು ಪಡೆ

ಯುತ್ತಿದ್ದನು. ಅದೇ ಕಲ್ಲಿನ ಸಹಾಯದಿಂದ ಇತರ ಪ್ರಾಣಿಗಳನ್ನೂ ಮಾನವ ರನ್ನು ಕೊಲ್ಲುತ್ತಿದ್ದನು. ಈಗ ವಿಜ್ಞಾನದ ಬೆಳವಣಿಗೆಯ ಆಧಾರದ ಮೇಲಿನ ಅಣುಸ್ಫೋಟನೆಯು ಮಾನವನ ಹಿತಕ್ಕೂ ನಾಶಕ್ಕೂ ಕಾರಣವು.

3) **ಮೋಹ:—** ನ್ಯಾಯಸೂತ್ರದಲ್ಲಿ ಹೇಳಿರುವ ಹಾಗೆ ಮಾನವನ ಪ್ರವೃತ್ತಿಗಳು ಮೂರು ದೋಷಗಳಿಂದ ಉಂಟಾಗುವುವು.

' **ತತ್** ತ್ರೈರಾಶ್ಯಂ ರಾಗದ್ವೇಷಸಂಮೋಹಾರ್ಥಾಂತರಭಾವಾತ್ ' (ನ್ಯಾಯಸೂತ್ರ. IV. 1. 3)

' ರಾಗ, ದ್ವೇಷ, ಮೋಹ ಎಂಬ ಮೂರು ದೋಷಗಳು ಮನುಷ್ಯನ ಕೆಲಸ ಕಾರ್ಯಗಳಿಗೆ ಮೂಲಭೂತ ಕಾರಣಗಳು ' ಇವು ಮನುಷ್ಯನನ್ನು ಕೆಲಸ ಮಾಡುವ ಹಾಗೆ ಪ್ರೇರೇಪಿಸುವುವು.

ಮೋಹವು ಮಿಥ್ಯಾ ಜ್ಞಾನದಿಂದ ಉಂಟಾಗುವುದು. ಮೋಹದಿಂದ ರಾಗ ದ್ವೇಷಗಳು ಉಂಟಾಗುವುವು. ವ್ಯಕ್ತಿಗಳಲ್ಲಿ ಮತ್ತು ಪದಾರ್ಥಗಳಲ್ಲಿ ಅನುರಾಗಕ್ಕೂ ದ್ವೇಷಕ್ಕೂ ಮೋಹವೇ ಕಾರಣ. ಯಾವ ಮನುಷ್ಯನು ಮೋಹದಿಂದ ಬಿಡುಗಡೆ ಹೊಂದುವನೋ ಅವನು ರಾಗ ದ್ವೇಷಗಳಿಂದಲೂ ವಿಮುಕ್ತನಾಗುವನು. ಆದುದರಿಂದ ಪ್ರತಿಯೊಬ್ಬ ಮಾನವನ ಮುಖ್ಯ ಕರ್ತವ್ಯವು ಮೋಹದಿಂದ ಬಿಡುಗಡೆ ಹೊಂದು ವುದು. ಆಗ ಭಾವೋದ್ರೇಕಗಳಿಗೆ ವಶವಾಗದೆ ಸಮತ್ವದಿಂದ ಬಾಳುವುದಕ್ಕೆ ಸಾಧ್ಯ. ಗೀತೆಯ ಪ್ರಕಾರ ತಮೋಗುಣ ವೃದ್ಧಿಯೇ ಮೋಹಕ್ಕೆ ಕಾರಣ.

ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥

ಗೀತೆ. 14 – 13

' ತಮೋಗುಣವು ವೃದ್ಧಿಯನ್ನು ಹೊಂದಿದಾಗ ಅಪ್ರಕಾಶ, ಅಪ್ರವೃತ್ತಿ, ಪ್ರಮಾದ ಮತ್ತು ಮೋಹ ಇವು ಉಂಟಾಗುವುವು. '

ಗೀತೆಯ ಇನ್ನೂ ಅನೇಕ ಶ್ಲೋಕಗಳಲ್ಲಿ ಮೋಹದಿಂದ ಉಂಟಾಗುವ ಪರಿಣಾಮಗಳನ್ನು ಸೂಚಿಸಲಾಗಿದೆ. ' ಕ್ರೋಧಾತ್ ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿ ವಿಭ್ರಮಃ ' ಗೀತೆ (2-63) ಕ್ರೋಧದಿಂದ ಸಂಮೋಹವು ಉಂಟಾಗುವುದು. ಸಂಮೋಹದಿಂದ ಸ್ಮೃತಿಯ ಭ್ರಮೆಯುಂಟಾಗುವುದು. " ಇಚ್ಛಾ ದ್ವೇಷ ಸಮುತ್ಥೇನ ದ್ವಂದಮೋಹೇನ ಭಾರತ. " (ಗೀತೆ 7 27), ಇಚ್ಛಾ ದ್ವೇಷಗಳಿಂದ ಹುಟ್ಟಿದ ದ್ವಂದ್ವಗಳ ಮೋಹದಿಂದ ಸರ್ವ ಪ್ರಾಣಿಗಳೂ ಭ್ರಾಂತಿ ಯನ್ನು ಹೊಂದುತ್ತವೆ.

ಮೋಹದಿಂದ ವಿಮುಕ್ತಿಯನ್ನು ಹೊಂದುವ ದಾರಿಯನ್ನು ಸಹ ಗೀತೆಯಲ್ಲಿ ಅನೇಕ ಕಡೆಗಳಲ್ಲಿ ಸೂಚಿಸಲಾಗಿದೆ. 'ಜ್ಞಾನದಿಂದ ಮೋಹವು ನಾಶವಾಯಿತು.' (10 . 1)

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥

ಗೀತೆ. 18 — 73

"ನಿನ್ನ ಅನುಗ್ರಹದಿಂದ ನನ್ನ ಮೋಹವು ನಷ್ಟವಾಯಿತು. ಸ್ಮೃತಿಯು ಉಂಟಾಯಿತು; ಸಂದೇಹ ಶೂನ್ಯವಾಗಿ ಇರುವೆನು, ನಿನ್ನ ಉಪದೇಶದಂತೆ ನಡೆಯುತ್ತೇನೆ."

ಪರಿಜ್ಞಾನವು ಉಂಟಾಗ ಬೇಕಾದರೆ ಮನುಷ್ಯನ ಸತ್ವಗುಣವು ಪ್ರಧಾನವಾಗಿರಬೇಕು. ಇದನ್ನು ಗೀತೆಯಲ್ಲಿ ಮತ್ತೊಂದು ಕಡೆ ಸೂಚಿಸಿದೆ.

ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ ॥

ಗೀತೆ. 14 — 11

'ಈ ದೇಹದ ಸಮಸ್ತ ಇಂದ್ರಿಯ ದ್ವಾರಗಳಲ್ಲಿಯೂ ಜ್ಞಾನನೆಂಬ ಪ್ರಕಾಶವು ಯಾವಾಗ ಉಂಟಾಗುತ್ತದೆಯೋ ಆಗ ಸತ್ತ್ವಗುಣವು ವೃದ್ಧಿಯಾಗಿದೆ' ಎಂದು ತಿಳಿಯಬೇಕು.

ಈ ವಿಧವಾಗಿ ಗೀತೆಯ ಪ್ರಕಾರ ಮೋಹದಿಂದ ಮಿಥ್ಯಾಜ್ಞಾನವು ಜನಿಸುವುದು. ಮಿಥ್ಯಾಜ್ಞಾನದಿಂದ ರಾಗದ್ವೇಷಗಳು ಉಂಟಾಗುವುವು. ಇವೆಲ್ಲಕ್ಕೂ ಮೂಲಕಾರಣ ತಮೋಗುಣದ ಪ್ರಾಧಾನ್ಯತೆ. ಮೋಹದಿಂದ ಬಿಡುಗಡೆಯನ್ನು ಹೊಂದುವ ಮಾರ್ಗ ತಮೋಗುಣದ ಪ್ರಾಧಾನ್ಯವನ್ನು ಕಡಿಮೆ ಮಾಡಿ ಸತ್ವಗುಣದ ಪ್ರಾಧಾನ್ಯವನ್ನು ಹೆಚ್ಚು ಮಾಡಿ ಜ್ಞಾನೋದಯವಾಗಬೇಕು.

4) **ಲೋಭ:—** ಲೋಭವೆಂದರೆ ಎಲ್ಲವೂ ತನಗೆ ಬೇಕು; ತನ್ನಲ್ಲಿ ಇರುವ ಎಲ್ಲ ವಸ್ತುಗಳೂ ಸದಾ ತನ್ನಲ್ಲಿಯೇ ಉಳಿಯಬೇಕು. ಆದುದರಿಂದ ಲೋಭವು ಸಂಗ್ರಹ ಪ್ರವೃತ್ತಿಯನ್ನು ಹೆಚ್ಚುಮಾಡಿ ಆ ವ್ಯಕ್ತಿಯು ಅನೇಕ ಅನ್ಯಾಯಗಳನ್ನು ಮಾಡುವ ಹಾಗೆ ಪ್ರೇರೇಪಿಸುವುದು. ಗೀತೆಯ ಪ್ರಕಾರ ಲೋಭವು ರಜೋಗುಣದಿಂದ ಉತ್ಪನ್ನವಾಗುವುದು.

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥

ಗೀತೆ. 14 — 12

‘ ರಜೋಗುಣವು ವೃದ್ಧಿಯನ್ನು ಹೊಂದಿದಾಗ ಲೋಭ ಪ್ರವೃತ್ತಿ ಕರ್ಮಗಳ ಪ್ರಾರಂಭ ಅಶಮ ಸ್ಪೃಹೆ ಇವು ಉಂಟಾಗುವುವು.

5) **ಮದ:—** ತಾನು, ತನ್ನದು ಎಂಬ ಅಹಂಕಾರ ಮಮಕಾರಗಳಿಂದ ಮದವು ಜನಿಸುವುದು. ತಾನು ಇತರರಿಗಿಂತ ಯಾವುದರಲ್ಲಿಯೂ ಕಡಿಮೆ ಇಲ್ಲ ವೆಂದೂ, ತನ್ನ ಸ್ಥಾನಮಾನಗಳಲ್ಲಿ ತನಗೆ ಇರುವ ಅಹಂಭಾವವೇ ಮದ. ಮದದ ಮೂಲಕ ತನ್ನಲ್ಲಿ ಇಲ್ಲದಿರುವ ಉತ್ತಮ ಗುಣಗಳನ್ನು ತನಗೆ ಇವೆಯೆಂದು ಭಾವಿಸಿಕೊಳ್ಳುವುದು ಮತ್ತು ಪ್ರಚಾರ ಮಾಡುವುದು, ಇದರಿಂದ ತನಗಿಂತ ಕಡಿಮೆ ದರ್ಜೆಯಲ್ಲಿ ಇರುವವರನ್ನು ಕಂಡರೆ ತಾತ್ಸಾರ. ಹೀಗೆ ಮದದ ಮೂಲಕ ತನ್ನಲ್ಲಿ ದುರಭಿಮಾನ; ಇತರರಲ್ಲಿ ತಾತ್ಸಾರ ಉಂಟಾಗುವುದು. ಆದುದರಿಂದ ಮದ, ಗರ್ವ, ದರ್ಪ ಇವೆಲ್ಲವೂ ಸಾಮಾನ್ಯವಾಗಿ ಒಬ್ಬ ವ್ಯಕ್ತಿಯಲ್ಲಿ ಒಟ್ಟಿಗೆ ಇರುವುವು ತನ್ನ ಆಸ್ತಿ ಹೆಚ್ಚಾಗಿರುವುದೆಂದೂ, ತನ್ನ ಕುಲ ಉತ್ತಮವೆಂದೂ, ತನ್ನ ವಿದ್ಯೆ ಶ್ರೇಷ್ಠ ವೆಂದೂ, ಇದರಿಂದ ಅಹಂಭಾವವು ಉಂಟಾಗುವುದು.

6) **ಮಾತ್ಸರ್ಯ:—** ಇತರರ ಸುಖ ಅಭಿವೃದ್ಧಿಗಳ ಬಗ್ಗೆ ತೋರುವ ಅಸಹನೆಯೆ ಮಾತ್ಸರ್ಯ. ಇತರರು ಚೆನ್ನಾಗಿದ್ದರೆ ತಾನು ಸಹಿಸಲಾರ. ತನ್ನ ಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಿಸುವ ಬದಲು ಇತರರು ಅನೇಕ ಅನೀತಿ ಮಾರ್ಗಗಳನ್ನು ಅನುಸರಿಸಿ ಉತ್ತಮ ಸ್ಥಿತಿಯಲ್ಲಿ ಇರುವರೆಂಬ ಭಾವನೆ ಯನ್ನು ಮಾತ್ಸರ್ಯದಿಂದ ಹೊಂದುವನು. ತನ್ನ ಕೈಯ್ಯಲ್ಲಿ ಆಗದಿರುವುದು ಮತ್ತೊಬ್ಬನ ಕೈಯ್ಯಲ್ಲಿ ಹೇಗೆ ಸಾಧ್ಯ ? ಇದೇ ಆ ವ್ಯಕ್ತಿಯ ಮುಖ್ಯ ಸಮಸ್ಯೆ. ಆಂಗ್ಲ ಭಾಷೆಯಲ್ಲಿರುವ ಒಂದು ನಾಣ್ಣುಡಿಯ ಪ್ರಕಾರ ‘ ನೀನೂ ಬಾಳು, ಇತರರೂ ಬಾಳಲಿ ; ಈ ಮನೋಗುಣದ ಅಭಾವವು ಮಾತ್ಸರ್ಯದಿಂದ ಉಂಟಾ ಗುವುದು.

ವ್ಯವಸಾಯದ ಆಧಾರದ ಮೇಲೆ ಇರುವ ಜನಾಂಗಗಳಲ್ಲಿ ಸಾಮಾನ್ಯ ವಾಗಿ ಮಾತ್ಸರ್ಯವು ಪ್ರಬಲವಾಗಿರುವುದು. ಇದಕ್ಕೆ ಕಾರಣ ಸತ್ಯಾಂಶ, ಕೃಷಿಯ ಆಧಾರದ ಮೇಲೆ ಇರುವ ಸಮಾಜದಲ್ಲಿ ಸಂಪತ್ತು ಮಿತಿಗೊಳಪಟ್ಟಿರುವುದು. ಆ ಸಮಾಜಗಳಲ್ಲಿ ಎಷ್ಟು ದುಡಿದರೂ ಸಂಪತ್ತನ್ನು ಹೆಚ್ಚಿಸಲು ಅಸಾಧ್ಯ. ಕಾರಣ ಸಂಪತ್ತು ಭೂಮಿಯ ಫಲವತ್ತಿನ ಮೇಲೆಯೂ, ಮಳೆಯ ಮೇಲೂ ಸೀಮಿತ ಗೊಂಡಿರುವುದು. ಆದರೆ ಕೈಗಾರಿಕಾ ಸಮಾಜದಲ್ಲಿ ಯಂತ್ರಗಳನ್ನು ಉಪಯೋಗಿಸಿ ಪ್ರಾಣಿಗಳ ಶಕ್ತಿಯ ಆಧಾರವಿಲ್ಲದೆ ಪ್ರಕೃತಿಯ ಮತ್ತು ಬುದ್ಧಿ ಪೂರ್ವಕ ಹೊಸ ಮಾರ್ಗಗಳನ್ನು ಅನುಸರಿಸಿ ಶಕ್ತಿಯನ್ನು ಉತ್ಪನ್ನಮಾಡಿ ಆ ಶಕ್ತಿಯನ್ನು ಉಪ ಯೋಗಿಸಿ ಯಂತ್ರಗಳನ್ನು ನಡೆಸಿ ಮಿತಿಯಿಲ್ಲದೆ ಸಂಪತ್ತನ್ನು ಹೆಚ್ಚಿಸಲು ಸಾಧ್ಯ

ಆದುದರಿಂದ ಕೈಗಾರಿಕಾ ಸಮಾಜದಲ್ಲಿ ಮಾತ್ಸರ್ಯಕ್ಕೆ ಸ್ಥಾನವಿಲ್ಲ. ಅದರ ಅವಶ್ಯಕತೆ ಇಲ್ಲ. ಈ ಹೊಸಯುಗದಲ್ಲಿ ಎಷ್ಟು ಬೇಗ ಮಾತ್ಸರ್ಯವನ್ನು ತ್ಯಜಿಸುವೆವೋ ಅಷ್ಟು ಬೇಗ ಅಭ್ಯುದಯವನ್ನು ಪಡೆಯಲು ಸಾಧ್ಯ.

ಹೀಗೆ ನೀತಿಯುತ ಜೀವನಕ್ಕೂ ವ್ಯಕ್ತಿಯ ಬೆಳವಣಿಗೆಗೂ ಸಮಾಜದ ಅಭ್ಯುದಯಕ್ಕೂ ಸಾಧಾರಣ ಧರ್ಮಗಳ ಆಚರಣೆ ಅವಶ್ಯಕ. ಈ ಧರ್ಮಗಳು ಮಾನವತ್ವದ ಆಧಾರದ ಮೇಲಿವೆ. ಈ ಧರ್ಮಗಳ ಆಚರಣೆಗೆ ಮೇಲು ಕೀಳೆಂಬ ಭಾವನೆಗಳು ಅನಗತ್ಯ. ಬದಲಾಗಿ ಈ ಮೇಲು ಕೀಳೆಂಬ ಭಾವನೆಗಳಿದ್ದರೆ ಸಾಧಾರಣ ಧರ್ಮಗಳನ್ನು ಆಚರಣೆಯಲ್ಲಿ ಇಡಲು ಅಸಾಧ್ಯ. ಬಡವ ಬಲ್ಲಿದ, ಉತ್ತಮ ಜಾತಿಯವ, ಕೀಳು ಜಾತಿಯವ, ಹೆಂಗಸು ಗಂಡಸು, ವಯಸ್ಸಿನಲ್ಲಿ ಚಿಕ್ಕವನು ದೊಡ್ಡವನು, ಯಜಮಾನ ಆಳು ಈ ವ್ಯತ್ಯಾಸಗಳಿಗೆ ಅವಕಾಶವೇ ಇರುವುದಿಲ್ಲ. ಮಕ್ಕಳನ್ನೂ ಸಹ ಸಾಧಾರಣ ಧರ್ಮದ ಪ್ರಕಾರ ಗೌರವದಿಂದ ನೋಡಬೇಕು. ಹೆಂಗಸರು ಗಂಡಸರು ಸರಿಸಮಾನ ಸ್ಥಾನವನ್ನು ಪಡೆದಿರುವರು. ಆದುದರಿಂದ ಹೆಂಗಸರ ವ್ಯಕ್ತಿತ್ವವನ್ನು ಗೌರವಿಸಬೇಕಾಗುವುದು ಅಗತ್ಯ. ಈ ಭೇದಗಳೆಲ್ಲವೂ ಅನಿತ್ಯ ಭೇದಗಳು ಆದುದರಿಂದ ಈ ಭೇದಗಳಿಗೆ ಬೆಲೆ ಕೊಡಬೇಕಾಗಿಲ್ಲ. ಇದಕ್ಕೆ ಆಧಾರ ಸರ್ವಾತ್ಮ ಭಾವ.

ಸ್ವಧರ್ಮ

ವೇದಗಳಲ್ಲಿಯೂ, ಧರ್ಮಸೂತ್ರ ಮತ್ತು ಸ್ಮೃತಿಗಳಲ್ಲೂ, ಗೀತೆಯ ಯಲ್ಲಿಯೂ ಅನೇಕ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಲಾಗಿದೆ. ಆದರೆ ಕ್ರಮಬದ್ಧವಾಗಿ ಈ ಪದಗಳ ಲಕ್ಷಣ ನಿರೂಪಣೆಗಳನ್ನು (definition) ಪ್ರತಿಯೊಂದು ಸಲವೂ ಮಾಡಿರುವ ಹಾಗೆ ಗೋಚರವಾಗುವುದಿಲ್ಲ. ಪ್ರಾಯಶಃ ಆ ಕಾಲದಲ್ಲಿ ಈ ಪದಗಳು ಬಳಕೆಯಲ್ಲಿದ್ದುದರಿಂದ ಪ್ರತಿಯೊಂದು ಶಬ್ದದ ಲಕ್ಷಣ ನಿರೂಪಣೆಯನ್ನು ಮಾಡುವ ಆವಶ್ಯಕತೆ ಉಂಟಾಗಲಿಲ್ಲವೆಂದು ಊಹಿಸಬಹುದು. ಆದರೆ ದಾರ್ಶನಿಕಾರರು ತಮ್ಮ ಸೂತ್ರಗಳಲ್ಲಿ ತಾವು ಉಪಯೋಗಿಸುವ ಪಾರಿಭಾಷಿಕ ಪದಗಳನ್ನು ಸ್ಪಷ್ಟವಾಗಿ ನಿರೂಪಿಸಿರುವರು. ಆದುದರಿಂದಲೇ ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಉಪಯೋಗಿಸಿರುವ ಪಾರಿಭಾಷಿಕ ಪದಗಳ ನಿರೂಪಣೆಯನ್ನು ಕುರಿತು ಭಿನ್ನಾಭಿಪ್ರಾಯಗಳು ಬರುವುವು.

ಗೀತೆಯಲ್ಲಿ ಕೆಲವು ಪಾರಿಭಾಷಿಕ ಪದಗಳ ಲಕ್ಷಣ ನಿರೂಪಣೆಯನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಉದಾ: ಸಾಂಖ್ಯ, ಯೋಗ, ನಿಷ್ಕಾಮಕರ್ಮ, ತ್ರಿಗುಣ ಮುಂತಾದ ಪಾರಿಭಾಷಿಕ ಪದಗಳ ನಿರೂಪಣೆಯನ್ನು ಸ್ಪಷ್ಟವಾಗಿ ಮಾಡಲಾಗಿದೆ. ಆದರೆ ಮತ್ತೆ ಕೆಲವು ಪಾರಿಭಾಷಿಕ ಪದಗಳ ಲಕ್ಷಣ ನಿರೂಪಣೆಗಳನ್ನು ಈ ವಿಧವಾಗಿ ಮಾಡಿಲ್ಲ. ಉದಾ: ಲೋಕ ಸಂಗ್ರಹ-ಸ್ವಧರ್ಮ ಮುಂತಾದ ಬಹುಗಾಢವಾದ ಮತ್ತು ಪರಿಪೂರ್ಣವಾದ ಭಾವನೆಗಳ ಲಕ್ಷಣ ನಿರೂಪಣೆಯನ್ನು ಮಾಡಿಲ್ಲ.

ಸ್ವಧರ್ಮ ಎಂಬ ಭಾವನೆಯು ಗೀತೆಯ ಬಹು ಪ್ರಮುಖವಾದ ಮತ್ತು ಆಳವಾದ ಭಾವನೆ. ಇದರ ಲಕ್ಷಣ ನಿರೂಪಣೆಯನ್ನು ಮಾಡುವುದು, ವ್ಯಾಪ್ತಿಯ ನಿರ್ಣಯವನ್ನು ಮಾಡುವುದು ಮತ್ತು ಆಧುನಿಕ ಜೀವನದಲ್ಲಿ ಈ ಭಾವನೆಯ ಪ್ರಯೋಗವನ್ನು ಇತ್ಯರ್ಥ ಮಾಡುವುದೇ ಈ ಅಧ್ಯಾಯದ ಗುರಿ.

ಗೀತೆಯಲ್ಲಿ ಈ ಪದವನ್ನು ಎರಡನೆಯ ಅಧ್ಯಾಯದಲ್ಲೂ (31, 33) ಮೂರನೆಯ ಅಧ್ಯಾಯದಲ್ಲೂ (35) ಮತ್ತು ಹದಿನೆಂಟನೆಯ ಅಧ್ಯಾಯದಲ್ಲೂ (47) ಉಪಯೋಗಿಸಲಾಗಿದೆ. ಈ ಶ್ಲೋಕಗಳನ್ನು ಕೆಳಗೆ ಕೊಡಲಾಗಿದೆ.

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತು ಮರ್ಹಸಿ।
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯನ ವಿದ್ಯತೇ॥
ಅಥ ಚೇತ್ ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ॥

II—31, 33.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ॥

III—35

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್॥

XVIII—47

ಸ್ವಧರ್ಮವನ್ನು ಲಕ್ಷಿಸಿದರೂ ನೀನು ಭಯಪಡಬಾರದು. ಏಕೆಂದರೆ ಧರ್ಮಯುಕ್ತವಾದ ಯುದ್ಧಕ್ಕಿಂತ ಕ್ಷತ್ರಿಯನಿಗೆ ಬೇರೆ ಯಾವ ಶ್ರೇಯಸ್ಸೂ ಇರುವುದಿಲ್ಲ.

ಹಾಗಿಲ್ಲದೆ ಈ ಧರ್ಮಯುಕ್ತವಾದ ಯುದ್ಧವನ್ನು ನೀನು ಮಾಡದಿದ್ದರೆ, ಆ ಕಾರಣದಿಂದ ಸ್ವಧರ್ಮವನ್ನೂ ಕೀರ್ತಿಯನ್ನೂ ನಾಶಮಾಡಿಕೊಂಡು ಪಾಪ ಹೊಂದುತ್ತೀಯೆ.

ಗುಣವಿಲ್ಲದ ಸ್ವಧರ್ಮವು ಅನುಷ್ಠಾನ ಮಾಡಿದ ಮೇಲೆ ಪರಧರ್ಮಕ್ಕಿಂತಲೂ ಶ್ರೇಯಸ್ಕರವಾದದ್ದು. ಸ್ವಧರ್ಮದಲ್ಲಿ ಮರಣವು ಒಳ್ಳೆಯದು. ಪರಧರ್ಮವು ಭಯಂಕರವಾದದ್ದು.

ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ ಗುಣವಿಲ್ಲದ ಸ್ವಧರ್ಮವೇ ಶ್ರೇಷ್ಠವಾದದ್ದು. ಸ್ವಭಾವದಿಂದ ನಿಯತವಾದ ಕರ್ಮವನ್ನು ಮಾಡುತ್ತ (ಮನುಷ್ಯನು) ಕಿಲ್ಬಿಷವನ್ನು ಹೊಂದುವುದಿಲ್ಲ.

ಎರಡನೆಯ ಅಧ್ಯಾಯದ ಮುವ್ವತ್ತೊಂದು ಮತ್ತು ಮುವ್ವತ್ತ ಮೂರನೇ ಶ್ಲೋಕಗಳು ಅರ್ಜುನನು ತನ್ನ ಸ್ವಧರ್ಮವಾದ ಕ್ಷತ್ರಿಯವರ್ಣದ ಕೆಲಸವನ್ನು ಈಡೇರಿಸುವುದಕ್ಕೆ ಯುದ್ಧಮಾಡಲೇಬೇಕು ಎಂದು ತಿಳಿಸುವುವು. ಅರ್ಜುನನು ಹುಟ್ಟಿದುದು ಕ್ಷತ್ರಿಯ ವರ್ಣದಲ್ಲಿ. ಕ್ಷತ್ರಿಯ ವರ್ಣದ ಮುಖ್ಯಕೆಲಸ ಧರ್ಮಯುದ್ಧ ಮಾಡುವುದು. ಆದುದರಿಂದ ಯುದ್ಧದಲ್ಲಿ ವೈರಿಗಳನ್ನು ಕೊಲ್ಲುವುದು ಅನಿವಾರ್ಯ. ಅದು ದುಷ್ಕೃತ್ಯವಲ್ಲ. ವೈರಿಗಳನ್ನು ಕೊಲ್ಲುವುದು ಕ್ಷತ್ರಿಯನ ಕರ್ತವ್ಯ. ಹಾಗೆ

ಯುದ್ಧ ಮಾಡದೇ ಹೋದರೆ ಕ್ಷತ್ರಿಯನು ಪಾಪಕೃತ್ಯವನ್ನು ಮಾಡಿದ ಹಾಗೆ ಆಗುವುದು. ಧರ್ಮಯುದ್ಧದಲ್ಲಿ ಭಾಗವಹಿಸದೆ ಹೋದರೆ ಅಧರ್ಮಕ್ಕೆ ಪ್ರೋತ್ಸಾಹ ಕೊಟ್ಟಂತೆ ಆಗುವುದು.

ಈ ದೃಷ್ಟಿಯಲ್ಲಿ ನೋಡಿದರೆ ಒಬ್ಬ ಮನುಷ್ಯನು ಯಾವ ವರ್ಣದಲ್ಲೇ ಆಗಲಿ, ಜಾತಿಯಲ್ಲೇ ಆಗಲಿ ಹುಟ್ಟಿರುವನೋ ಆ ವರ್ಣದ ಅಥವಾ ಜಾತಿಯ ಕೆಲಸವನ್ನು ಶ್ರದ್ಧೆಯಿಂದ ಮಾಡುವುದು ಸ್ವಧರ್ಮದ ಲಕ್ಷಣ ಎಂಬುದು ಸಿದ್ಧವಾಗುವುದು. ಇದೇ ಅಂಶವನ್ನು ಮಹಾಭಾರತದ ವನಪರ್ವದಲ್ಲಿ (207–28) ವಿವರಿಸಿರುವ ಧರ್ಮವ್ಯಾಧನ ಕಥೆಯು ತಾನು ಹುಟ್ಟಿದ ಜಾತಿಯ ವೃತ್ತಿಯನ್ನು ಅನುಸರಿಸುವುದೇ ಸ್ವಧರ್ಮವೆಂಬುದನ್ನು ಸಿದ್ಧಪಡಿಸುವುದು. ಜಾತಿಯಲ್ಲಿ ಮತ್ತು ವೃತ್ತಿಯಲ್ಲಿ ಆತನು ವ್ಯಾಧನು. ಆದರೆ ತನ್ನ ಕುಲಕಸುಬನ್ನು ತಾನು ಮಾಡುತ್ತಿರುವುದರಿಂದ ಆತನು ಪರಿಪಕ್ವವನ್ನು ಹೊಂದಿ ತಪಸ್ಸು ಮಾಡಿ ಬ್ರಹ್ಮಚರ್ಯವನ್ನು ಆಚರಿಸಿ ಅನೇಕ ಶಕ್ತಿಗಳನ್ನು ಪಡೆದಿರುವ ಬ್ರಾಹ್ಮಣನಾದ ಕೌಶಿಕನಿಗೂ ಸಹ ಧರ್ಮವನ್ನು ಕುರಿತು ಉಪದೇಶಿಸುವ ಶಕ್ತಿಯನ್ನು ಪಡೆದಿದ್ದನು. ತನ್ನ ವೃತ್ತಿಯು ಪ್ರಾಣಿಗಳನ್ನು ಕೊಂದು ಮಾಂಸವನ್ನು ಮಾರುವುದಾದರೂ ನಿಯತಕರ್ಮವನ್ನು ಶ್ರದ್ಧಾಪೂರ್ವಕವಾಗಿ ಮಾಡುತ್ತಿದ್ದರಿಂದ ಅತನಿಗೆ ಹಿಂಸೆಯಿಂದ ಹುಟ್ಟಿದ ಪಾಪವು ಅಂಟಲಿಲ್ಲ. ಈ ವಿಧವಾಗಿ ತನ್ನ ಜಾತಿಯ ವೃತ್ತಿಯನ್ನು ಶ್ರದ್ಧೆಯಿಂದ ಮಾಡುವವನು ಬ್ರಹ್ಮಜ್ಞಾನವನ್ನು ಹೊಂದುವುದು ಸಾಧ್ಯವೆಂದು ಮಹಾಭಾರತದ ಈ ಕತೆಯು ಸೂಚಿಸುವುದು. ಆದುದರಿಂದ ಸ್ವಧರ್ಮವೆಂದರೆ ಜಾತಿಯವೃತ್ತಿಯನ್ನು ಅವಲಂಬಿಸಿರುವುದು ಎಂಬ ಸಿದ್ಧಾಂತವನ್ನು ಈ ಕತೆಯು ವ್ಯಕ್ತಪಡಿಸುವುದು.

ಈ ಕಾರಣಗಳಿಂದ ತಾನು ಹುಟ್ಟಿದ ವರ್ಣದ ಕೆಲಸವನ್ನು ನಿರ್ವಹಿಸುವುದೇ ವ್ಯಕ್ತಿಯ ಕರ್ತವ್ಯ; ಅದನ್ನು ಮಾಡುವುದು ಧರ್ಮ, ಮಾಡದೇ ಬಿಡುವುದು ಅಧರ್ಮ ಎಂಬ ಅಭಿಪ್ರಾಯವನ್ನು ಸ್ವಧರ್ಮವು ಬಲಪಡಿಸುವುದು.

ಆದರೆ ಇಲ್ಲಿ ಒಂದು ಸಮಸ್ಯೆ ಇದೆ. ಅರ್ಜುನನು ಪ್ರಖ್ಯಾತ ಯೋಧ. ಯುದ್ಧ ಮಾಡುವ ವೃತ್ತಿಯಲ್ಲಿ ಚೆನ್ನಾಗಿ ತರಪೇತನ್ನು ಪಡೆದು ಮಹಾವೀರನೆಂಬ ಪ್ರಖ್ಯಾತಿಯನ್ನು ಹೊಂದಿರುವವನು. ಅರ್ಜುನನಂತಹ ಮಹಾವೀರರು ತಮ್ಮಲ್ಲಿ ಇರುವುದರಿಂದ ಪಾಂಡವರಿಗೆ ಏಳು ಅಕ್ಷೋಹಿಣಿ ಸೇನೆ ಮಾತ್ರವೆ ಇದ್ದರೂ ಕೌರವರ ಹನ್ನೊಂದು ಅಕ್ಷೋಹಿಣಿ ಸೇನೆಯನ್ನು ಎದುರಿಸಿ ಯುದ್ಧಮಾಡುವ ಧೈರ್ಯವಿತ್ತು ಆದರೆ ಯುದ್ಧವನ್ನು ಆರಂಭಿಸುವ ಸಂದರ್ಭದಲ್ಲಿ ಅರ್ಜುನನಿಗೆ ವಿಷಾದವುಂಟಾಗಿ ಯುದ್ಧವು ಪಾಪಕರ್ಮ: ರಾಜ್ಯದ ಆಸೆಗಾಗಿ ತನ್ನ ನೆಂಟರನ್ನು, ಸ್ನೇಹಿತರನ್ನೂ ಯುದ್ಧದಲ್ಲಿ ಕೊಲ್ಲುವುದು ಅಧರ್ಮವೆಂದು ಅರ್ಜುನನು ಮನಗೊಂಡನು.

ಅರ್ಜುನನು ಯದ್ಧಮಾಡಬೇಕಾದುದು ಯಾವ ಕಾರಣದಿಂದ ? ತಾನು ಕ್ಷತ್ರಿಯ ವಂಶದಲ್ಲಿ ಹುಟ್ಟಿದುದರಿಂದಲೇ ಅಥವಾ ಸಣ್ಣ ವಯಸ್ಸಿನಿಂದಲೂ ತರಪೇತನ್ನು ಪಡೆದು ಅನೇಕ ಯುದ್ಧಗಳಲ್ಲಿ ಜಯಹೊಂದಿ ಮಹಾಯೋಧನೆಂಬ ಹೆಸರನ್ನು ಪಡೆದಿರುವುದರಿಂದಲೇ ? ತಾನು ಕ್ಷತ್ರಿಯ ವಂಶದಲ್ಲಿ ಹುಟ್ಟದೇ ಇದ್ದರೂ ಸೈನಿಕ ವೃತ್ತಿಯಲ್ಲಿ ತರಪೇತನ್ನು ಹೊದಿ ಮಹಾವೀರನೆಂಬ ಪ್ರಖ್ಯಾತಿಯನ್ನು ಪಡೆದು ಕೊಂಡು ಯುದ್ಧವಾರಂಭವಾಗುವ ಸನ್ನಿವೇಶದಲ್ಲಿ ಯುದ್ಧ ಮಾಡುವುದನ್ನು ನಿರಾಕರಿಸಿದ್ದರೆ ಅದನ್ನು ಯಾವ ದೃಷ್ಟಿಯಿಂದ ನೋಡಬೇಕು ? ಕ್ಷತ್ರಿಯ ವರ್ಣ ದಲ್ಲಿ ಹುಟ್ಟಿದುದರಿಂದ ಯಉದ್ಧವನ್ನು ಮಾಡಲೇಬೇಕಾಗಿರುವುದು ಸ್ವಧರ್ಮವೇ ಅಥವಾ ಸರಿಯಾದ ತರಪೇತನ್ನು ಪಡೆದು ಪ್ರಖ್ಯಾತ ಯೋಧನು ತನ್ನ ಕಾರ್ಯವನ್ನು ನಿರ್ವಹಿಸುವುದು ಮುಖ್ಯವೋ ?

ವರ್ಣಧರ್ಮದ ದೃಷ್ಟಿಯಿಂದ ನೋಡಿದರೆ ಒಬ್ಬ ವಕ್ತಿಯು ತನ್ನ ವರ್ಣಕ್ಕೆ ಅನುಸಾರವಾದ ಕರ್ತವ್ಯವನ್ನು ಮಾಡುವುದು ಸ್ವಧರ್ಮವೆನಿಸುವುದು. ವ್ಯಕ್ತಿಯ ದೃಷ್ಟಿಯಿಂದ ನೋಡಿದರೆ ಒಬ್ಬ ವ್ಯಕ್ತಿಯು ಯಾವ ವರ್ಣದಲ್ಲಿ ಹುಟ್ಟಿದರು ತಾನು ಯಾವ ವೃತ್ತಿಯನ್ನು ಅವಲಂಬಿಸುವನೋ ಅ ವೃತ್ತಿಯನ್ನು ಸರಿಯಾಗಿ ಮಾಡು ವುದು ಆತನ ಕರ್ತವ್ಯ. ಅದೇ ಆತನ ಸ್ವಧರ್ಮ.

ಉದಾಹರಣೆಗೆ : ಮಹಾಭಾರತದ ಮತ್ತೊಬ್ಬ ಪ್ರಖ್ಯಾತ ವೀರನೆಂದರೆ ಕರ್ಣ. ಆತನು ಸೂತಪುತ್ರನು, ಕ್ಷತ್ರಿಯವಂಶದವನಲ್ಲಿ ಆದುದರಿಂದ ಅರ್ಜುನನು ಚಿಕ್ಕವಯಸ್ಸಿನಲ್ಲಿ ಕರ್ಣನ ಜೊತೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ್ದನು. ಆಗ ದುರ್ಯೋಧನನು ಕರ್ಣನಿಗೆ ರಾಜ್ಯವನ್ನು ಕೊಟ್ಟು ರಾಜನನ್ನಾಗಿ ಮಾಡಿದನು. ಆದುದರಿಂದ ಕರ್ಣನ ಸ್ವಧರ್ಮವು ವರ್ಣದ ಆಧಾರದ ಮೇಲೆ ಇದೆಯೇ ಅಥವಾ ವೃತ್ತಿಯ ಆಧಾರದ ಮೇಲೆ ಇದೆಯೇ ? ಈ ದೃಷ್ಟಿಯಿಂದ ನೋಡಿದರೆ ಅರ್ಜುನನ ಪ್ರಖ್ಯಾತಿಯು ಕೇವಲ ವರ್ಣದಿಂದ ಜನಿಸಿದುದಲ್ಲ. ಅದು ವೈಯುಕ್ತಿಕ ಪರಾಕ್ರಮ ಆದುದರಿಂದ ಒಬ್ಬ ವ್ಯಕ್ತಿಯ ಸ್ವಧರ್ಮವನ್ನು ನಿರ್ಣಯಿಸುವುದು ಹುಟ್ಟಲ್ಲ. ಅದು ವ್ಯಕ್ತಿಯು ಯಾವ ವೃತ್ತಿಯಲ್ಲಿ ತರಪೇತನ್ನು ಪಡೆದಿರುವನೋ ಆ ವೃತ್ತಿಯನ್ನು ಂ ಆತನ ಸ್ವಧರ್ಮ.

ಈ ದೃಷ್ಟಿಯಿಂದ ನೋಡಿದರೆ ಯುದ್ಧ ಪ್ರಾರಂಭವಾಗುವ ಸಮಯದಲ್ಲಿ ಅರ್ಜುನ ಮಾಡಿದ ನಿಲವು ಅಧರ್ಮವೆಂದು ಹೇಳಬೇಕಾಗುವುದು. ಆತನಿರುವನೆಂಬ ಭರವಸೆಯಿಂದ ಯುದ್ಧವನ್ನು ಮಾಡಲು ಪಾಂಡವರು ಒಪ್ಪಿಕೊಂಡರು. ಆತನು ಯುದ್ಧ ಭೂಮಿಗೆ ಬಂದದ್ದು ಯುದ್ಧ ಮಾಡುವುದಕ್ಕಾಗಿಯೇ. ಯುದ್ಧ ಭೂಮಿ ಯಲ್ಲಿ ತನ್ನ ಸಾರಥಿಯಾದ ಕೃಷ್ಣನನ್ನು ಎರಡು ಸೇನೆಗಳ ನಡುವೆ ನಿಲ್ಲಿಸಬೇಕೆಂದು

ಕೇಳಿಕೊಂಡನು. ಎರಡು ಕಡೆಯೂ ನೋಡಿ ಎರಡು ಕಡೆಯಲ್ಲೂ ತನ್ನ ಅಣ್ಣ ತಮ್ಮಂದಿರ ಬಂಧುಬಳಗದ ಸಮೂಹವನ್ನು ಕಂಡು ಆತನಿಗೆ ವಿಷಾದವುಂಟಾಯಿತು. ಇದು ಮೊದಲೇ ತನಗೆ ಗೊತ್ತಿರಲಿಲ್ಲವೆ ? ಗೊತ್ತಿತ್ತು. ದೃಢ ನಿಶ್ಚಯ ಮಾಡಿದಾಗ ಒಂದು ದೃಷ್ಟಿ. ಯುದ್ಧ ಭೂಮಿಯಲ್ಲಿ ಎರಡು ಕಡೆಯೂ ತನ್ನವರನ್ನು ನೋಡಿದಾಗ ಮತ್ತೊಂದು ದೃಷ್ಟಿ. ರಣಭೂಮಿಯನ್ನು ಈ ವಿಷಾದದ ಮೂಲಕ ಬಿಟ್ಟು ಹೋದರೆ ತನ್ನ ಸೈನ್ಯಕ್ಕೆ ಅಪಘಾತ. ಆದುದರಿಂದ ತನ್ನ ಕರ್ತವ್ಯವನ್ನು ಪರಿಪಾಲಿಸುವುದು ಆತನ ಸ್ವಧರ್ಮ. ಕರ್ತವ್ಯವನ್ನು ತ್ಯಜಿಸಿ ರಣರಂಗದಿಂದ ದೂರ ಹೋಗುವುದು ಅಧರ್ಮ. ಇದು ಮುಖ್ಯಾಂಶ.

ಅರ್ಜುನನು ಕ್ಷತ್ರಿಯನು, ಆತನ ಪ್ರಾಮುಖ್ಯತೆ ಆ ವಂಶದಲ್ಲಿ ಹುಟ್ಟಿದುದರಿಂದಲ್ಲ. ಆತನ ವ್ಯಕ್ತಿತ್ವ ಮತ್ತು ಆತನು ಸಾಧಿಸಿರುವುದು ತನ್ನ ಪ್ರಯತ್ನದಿಂದ ಪಡೆದಿರುವ ನಿಪುಣತೆ. ಇದು ಮುಖ್ಯ. ನಿಪುಣತೆ ಇಲ್ಲದೆ ಕೇವಲ ಜನ್ಮಸಿದ್ಧವಾದ ಸ್ಥಾನವು ಉತ್ತರನಂತೆ.

ಸ್ವಧರ್ಮಎನ್ನುವ ಪದಕ್ಕೆ ಎರಡನೆಯ ಅರ್ಥವನ್ನು ಗೀತೆಯೇ ಸೂಚಿಸುವುದು. ಮೂರನೆಯ ಅಧ್ಯಾಯದ 35 ನೇ ಶ್ಲೋಕವು ಸ್ವಧರ್ಮವೆಂದರೆ ಆಶ್ರಮ ಧರ್ಮವನ್ನು ಸೂಚಿಸುವುದು ಎಂದು ವಾದಿಸಬಹುದು. ಅರ್ಜುನನು ಗೃಹಸ್ಥ. ಗೃಹಸ್ಥ ಧರ್ಮವು ತನ್ನ ವೃತ್ತಿಯನ್ನು ನಿರ್ವಹಿಸಬೇಕಾಗುವುದು. ಆದರೆ ಇದನ್ನು ಮಾಡದೆ ಅರ್ಜನನು ಗೃಹಸ್ಥಾಶ್ರಮವನ್ನು ತ್ಯಜಿಸಿ ಸಂನ್ಯಾಸಾಶ್ರಮವನ್ನು ಅನುಸರಿಸಬೇಕಾದುದೇ ತನ್ನ ಕರ್ತವ್ಯವೆಂದು ವಾದಿಸುವನು. ಈ ಸಂದರ್ಭದಲ್ಲಿ ಗೀತೆಯು ತನ್ನ ಆಶ್ರಮದ ಜವಾಬ್ದಾರಿಯು ಎಷ್ಟು ಕೀಳೆಂದು ತೋರಿಸಿದರೂ ಅದನ್ನು ನಿರ್ವಹಿಸುವುದು ತನ್ನ ಕರ್ತವ್ಯವೂ ಮತ್ತು ತನಗೆ ಶ್ರೇಯಸ್ಕರವೂ ಮತ್ತು ಅದನ್ನು ತ್ಯಜಿಸಿ ಮತ್ತೊಂದು ಆಶ್ರಮದ ಕರ್ತವ್ಯವನ್ನು ಮಾಡುವುದು ಪರಧರ್ಮವಾದುದರಿಂದ ತನಗೆ ಹಾನಿಕರವಾಗುವುದೆಂದು ಈ ಶ್ಲೋಕದ ಮೂಲಕ ತೋರಿಸುವುದು,

ವರ್ಣಾಶ್ರಮವ್ಯವಸ್ಥೆಯು ಪ್ರತಿಯೊಬ್ಬ ತಮ್ಮ ತಮ್ಮ ವರ್ಣ ಅಥವಾ ಆಶ್ರಮದ ಕರ್ತವ್ಯಗಳನ್ನು ನಿರ್ವಹಿಸುವುದೇ ವ್ಯಕ್ತಿಯ ವಿಕಾಸಕ್ಕೂ ಸಮಾಜದ ಸ್ಥಿರತೆಗೂ ಕಾರಣವಾಗುವುದು. ಆದುದರಿಂದ ವರ್ಣಾಶ್ರಮ ವ್ಯವಸ್ಥೆಯ ಪ್ರಕಾರ ಆಯಾವರ್ಣ, ಜಾತಿಯವರು ಆಯಾ ಆಶ್ರಮದಲ್ಲಿ ನಿರೂಪಿಸಿರುವ ಕರ್ತವ್ಯಗಳನ್ನು ನಿರ್ವಹಿಸುವುವೇ ಸ್ವಧರ್ಮವೆಂಬುದನ್ನು ಸೂಚಿಸುವುದು, ಎಂದು ಹೇಳಬಹುದು.

ಮಹಾಭಾರತದ ಮಹಾಯುದ್ಧದ ಪ್ರಾರಂಭದಲ್ಲಿ ಉಂಟಾದ ಅರ್ಜುನನ ವಿಷಾದವು ಗೀತೆಗೆ ಕಾರಣವಾದ ಹಾಗೆ ಯುದ್ಧ ಮುಗಿದ ನಂತರ ಯುಧಿಷ್ಠಿರನಿಗೆ ಉಂಟಾದ ವಿಷಾದವು ಮಹಾಭಾರತದ ಮತ್ತೊಂದು ಶ್ರೇಷ್ಠಕೃತಿಯಾದ ಶಾಂತಿ

ಪರ್ವಕ್ಕೆ ಕಾರಣವಾಯಿತೆಂದು ಹೇಳಬಹುದು. ಹೀಗೇಯೇ ಮಾನವ ಸ್ಥಾನದಲ್ಲಿ ಸುಪ್ರಸಿದ್ಧ ಸ್ಥಾನವನ್ನು ಪಡೆದಿರುವ ಅಶೋಕ ಸಾಮ್ರಾಟನು ಕಳಿಂಗ ಯುದ್ಧದಲ್ಲಿ ಲಕ್ಷಾಂತರ ಜನರ, ಮೃಗಗಳ ನಾಶವನ್ನು ವೀಕ್ಷಸಿ ಪರಿವರ್ತನೆಯನ್ನು ಹೊಂದಿ ಯುದ್ಧವನ್ನು ತ್ಯಜಿಸಿ ಅಹಿಂಸೆಯನ್ನು ಸ್ವೀಕರಿಸಿ ಸುಪ್ರಸಿದ್ಧ ಶಿಲಾಶಾಸನಗಳನ್ನು ನಿರ್ಮಿಸಿದನು.

ಮೇಲೆ ನೋಡಿರುವ ಹಾಗೆ ಸ್ವಧರ್ಮ ಎಂಬ ಪದಕ್ಕೆ ಎರಡನೇ ಅಧ್ಯಾಯದಲ್ಲಿ ಬಳಸಿರುವುದರ ಆಧಾರದ ಮೇಲೆ ವರ್ಣ ಅಥವಾ ಜಾತಿ ಧರ್ಮವೇ ಸ್ವಧರ್ಮವೆಂಬುದನ್ನು ಮೂರನೆಯ ಅಧ್ಯಾಯದಲ್ಲಿ ಬಳಸಿರುವ ಆಧಾರದ ಮೇಲೆ ಸ್ವಧರ್ಮವು ಅಶ್ರಮ ಧರ್ಮವನ್ನು ಆಚರಿಸಬೇಕಾದುದೆಂಬ ಅಭಿಪ್ರಾಯವನ್ನು ಸೂಚಿಸುವುದೆಂದು ಹೇಳಬಹುದು. ಈ ಎರಡು ಅಭಿಪ್ರಾಯಗಳನ್ನು ಬಿಟ್ಟು ಮೂರನೆಯ ಅಭಿಪ್ರಾಯವು ಸಾಧ್ಯವೇ ಎಂಬುದನ್ನು ಈಗ ಪರ್ಯಾಲೋಚಿಸಬಹುದು.

ಹದಿನೆಂಟನೆಯ ಅಧ್ಯಾಯದಲ್ಲಿ ಸತ್ವ, ರಜಸ್, ತಮೋಗುಣಗಳ ವಿವರಗಳನ್ನು ಕೊಟ್ಟು ಚತುವರ್ಣದ ವಿಂಗಡನೆಯು "ಸ್ವಭಾವ ಪ್ರಭವೈ ಗುಣೈಃ, ಅಂದರೆ ಈ ನಾಲ್ಕು ವರ್ಣಗಳ ಕರ್ಮಗಳು ಸ್ವಭಾವದಿಂದ ಹುಟ್ಟಿದ ಗುಣಗಳಿಂದ ವಿಭಾಗಿಸಲ್ಪಟ್ಟಿವೆ ಎಂದು ಹೇಳಲಾಗಿದೆ. (18—40, 41) ಮುಂದೆ ಬರುವ ಮೂರು ಶ್ಲೋಕಗಳಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರಕರ್ಮಗಳು 'ಸ್ವಭಾವಜಂ' ಅಂದರೆ ಸ್ವಭಾವದಿಂದ ಹುಟ್ಟಿದ ಕರ್ಮಗಳೆಂದು ಹೇಳಲಾಗಿದೆ. ಈ ವಿವರಣೆಯು ನಾಲ್ಕನೆ ಅಧ್ಯಾಯುವ ಹದಿಮೂರನೆಯ ಶ್ಲೋಕದಲ್ಲಿ ಕೊಟ್ಟಿರುವ ವಿವರಣೆಯನ್ನು ಬಲಪಡಿಸುವುದು. ಅಲ್ಲಿ ಗುಣ ಮತ್ತು ಕರ್ಮಗಳ ಆಧಾರದ ಮೇಲೆ ಚಾತುರ್ವರ್ಣ್ಯವು ಸೃಷ್ಟಿಸಲಾಗಿದೆ. ಎಂದು ಹೇಳಲಾಗಿದೆ ಹದಿನೆಂಟನೆಯ ಅಧ್ಯಾಯದಲ್ಲಿ ಈ ನಾಲ್ಕು ವರ್ಣಗಳ ಕರ್ಮಗಳು ಸ್ವಭಾವದಿಂದ ಉಂಟಾಗಿವೆ ಎಂದು ಹೇಳಿದೆ. ಅದುದರಿಂದ ಗೀತೆಯ ಪ್ರಕಾರ 'ಮಾನವ ಜಾತಿಯ ವಿಭಜನೆಯು ಸ್ವಭಾವ ಸಿದ್ಧವಾದ ಗುಣಕರ್ಮಗಳ ಆಧಾರದ ಮೇಲೆ ಇರುವುದೇ ಹೊರತು ಕುಲದ ಆಧಾರದ ಮೇಲೆ ಅಲ್ಲ. ಎಂದು ಹೇಳುವುದು ಸಾಧ್ಯ.' ಎಂಬುವುದನ್ನು ಸೂಚಿಸುವುದು. ಆದರೆ ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವವನ್ನು ನಿರ್ಣಯಿಸಿ ಆತನ ವೃತ್ತಿಯನ್ನು ನಿರ್ಣಯಿಸುವುದು ಕಷ್ಟ. ಮತ್ತು ಸಾವಿರಾರು ವರ್ಷಗಳಿಂದ ಇರುವ ಕೃಷಿ ಸಮಾಜದಲ್ಲಿ ವ್ಯಕ್ತಿಗಳು ಬಹಳ ವಿರಳ ಕುಲ ಕಸುಬನ್ನು ಕಲಿಯುವುದು ಕೃಷಿಸಮಾಜದಲ್ಲಿ ಬಹಳ ಸುಲಭ. ಆದುದರಿಂದ ಯಾವ ಮನೆತನದಲ್ಲಿ ಒಬ್ಬ ವ್ಯಕ್ತಿ ಹುಟ್ಟುವನೋ ಆ ಮನೆತನದ ವೃತ್ತಿಯನ್ನು ಅನುಸರಿಸುವುದೇ ಅವನಿಗೆ ಶ್ರೇಯಸ್ಕರ ಮತ್ತು ಅದೇ ಧರ್ಮ ಎಂಬ ಅಭಿಪ್ರಾಯವು ಮತ್ತು ಆಚಾರವು ಉತ್ಪನ್ನವಾಯಿತು.

ಆದರೆ ಕೈಗಾರಿಕಾ ಸಮಾಜದಲ್ಲಿ ಸಾವಿರಾರು ಹೊಸ ವೃತ್ತಿಗಳು ಉಂಟಾಗುವುವು. ಈ ಕಾರಣದಿಂದ ವಾಣಿಜ್ಯದಲ್ಲಿಯೂ ಸರ್ಕಾರದಲ್ಲಿಯೂ ಸಹ ಸಾವಿರಾರು ಹೊಸ ವೃತ್ತಿಗಳು ಉಂಟಾಗುವುವು. ಆದುದರಿಂದ ಜಾತಿಗೂ ವೃತ್ತಿಗೂ ಇರುವ ಸಂಬಂಧವು ಕಳೆದು ಹೋಗುವುದು. ಆಯಾ ವೃತ್ತಿಗೂ ಇರುವ ಸಂಬಂಧಪಟ್ಟ ಗುಣಗಳನ್ನೂ ಶಕ್ತಿಗಳನ್ನೂ ಯಾರಲ್ಲಿ ಇರುವುದನ್ನು ಕಾಣುವರೋ ಆ ವ್ಯಕ್ತಿಗಳನ್ನು ಆ ವೃತ್ತಿಯಲ್ಲಿ ಕೆಲಸ ಮಾಡುವುದಕ್ಕೆ ಆರಿಸುವರು. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯು ತನ್ನ ದೈಹಿಕ ಮತ್ತು ಮಾನಸಿಕ ಶಕ್ತಿ ಸಾಮರ್ಥ್ಯಗಳ ಆಧಾರದ ಮೇಲೆ ತಮಗೆ ಸಮರ್ಪಕವಾದ ಕೆಲಸವನ್ನು ಪಡೆಯಲು ಪ್ರಯತ್ನಿಸುವನು. ಇವನ್ನೇ ಆಧುನಿಕ ಸಮಾಜದಲ್ಲಿ ಔದ್ಯೋಗಿಕ ಆಯ್ಕೆ ಮತ್ತು ಸಲಹೆ (Vocational selection and guidance) ಎನ್ನುವರು.

ಈ ದೃಷ್ಟಿಯಿಂದ ಹದಿನೆಂಟನೆಯ ಅಧ್ಯಾಯದ ಶ್ಲೋಕಗಳನ್ನು ವಿಶ್ಲೇಷಣ ಮಾಡಿದರೆ ಹೊಸ ಭಾವನೆಗಳು ಉದ್ಭವಿಸುವುವು. ವೈಯುಕ್ತಿಕ ವ್ಯತ್ಯಾಸಗಳು ಸ್ವಭಾವ ಸಿದ್ಧವಾದ ವ್ಯತ್ಯಾಸ. ಇವು ಪ್ರಕೃತಿಗೆ ಸಂಬಂಧ ಪಟ್ಟವು.

ಆದರೆ ವರ್ಣವ್ಯವಸ್ಥೆಯು ಈ ಸ್ವಭಾವಸಿದ್ಧ ವೈಯುಕ್ತಿಕ ಗುಣಗಳು ಅನುವಂಶಿಕವೆಂದು ಪ್ರತಿಪಾದಿಸುವುದು. ಆದುದರಿಂದ ವ್ಯಕ್ತಿಯ ಗುಣಗಳಿಗೂ ಜಾತಿಯ ನಿಕಟ ಸಂಬಂಧವಿರುವುದೆಂದು ಊಹಿಸಬಹುದು. ಇದೇ ವಿಧವಾಗಿ ದಕ್ಷಿಣ ಆಫ್ರಿಕಾದೇಶದಲ್ಲೂ, ಅಮೆರಿಕಾದೇಶದಲ್ಲೂ ಬಿಳಿಯ ಜನರು ತಮ್ಮ ಶಕ್ತಿಸಾಮರ್ಥ್ಯಗಳು ಉನ್ನತಸ್ಥಿತಿಯಲ್ಲಿರುವುದಕ್ಕೂ ಮತ್ತು ಕಪ್ಪು ಜನರ ಶಕ್ತಿ ಸಾಮರ್ಥ್ಯಗಳು ಹೀನ ಸ್ಥಿತಿಯಲ್ಲಿ ಇರುವುದಕ್ಕೆ ಅನುವಂಶಿಕವೇ ಕಾರಣವೆಂದು ವಾದಿಸಿ ಕಪ್ಪು ಜನಾಂಗದವರನ್ನು ದೂರ ಇಟ್ಟಿರುವರು. ಅವರೊಡನೆ ಸಂಪರ್ಕವನ್ನು ಸೀಮಿತಗೊಳಿಸಿರುವರು. ಈ ರೀತಿಯ ನಡುವಳಿಕೆಯ ಮುಖ್ಯ ಉದ್ದೇಶವೆಂದರೆ ಶಕ್ತಿ ಸಾಮರ್ಥ್ಯಗಳು ಕೆಲವು ಕುಟುಂಬಗಳಲ್ಲಿ ಮಾತ್ರ ಜನ್ಮತಃ ಇರುವುದೆಂದೂ ಇತರ ಕುಟುಂಬಗಳಲ್ಲಿ ಜನಿಸಿದವರಿಗೆ ಅವು ಇರುವುದಿಲ್ಲವೆಂದೂ, ಅಂತಹವರು ತಮ್ಮ ಸ್ವಪ್ರಯತ್ನದಿಂದ ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಅಸಾಧ್ಯವೆಂದು ಭಾವಿಸಿರುವುದು.

ಈ ಅಭಿಪ್ರಾಯಗಳು ಆಧುನಿಕ ಸಾಮಾಜಿಕ ಅಭಿಪ್ರಾಯಗಳಿಗೆ ವಿರುದ್ಧ ಮತ್ತು ಅಭಿಪ್ರಾಯಗಳಿಗೆ ಜೀವಶಾಸ್ತ್ರದ ಪರಿಶೋಧನೆಗಳಾಗಲಿ ಮನಶ್ಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರದ ಪರಿಶೋಧನೆಗಳಾಗಲಿ ಯಾವ ರೀತಿಯ ಆಧಾರವನ್ನು ಕೊಡುವುದಿಲ್ಲ. ಆಧುನಿಕ ಸಾಮಾಜಿಕ ಆದರ್ಶಗಳ ಪ್ರಕಾರ ಕೆಲವು ಜನಾಂಗಗಳು ಹಿಂದಿಳಿಗುವುದಕ್ಕೆ ಕಾರಣ ಸ್ವಭಾವ ನ್ಯೂನತೆಯಲ್ಲ, ವಾತಾವರಣದ ನ್ಯೂನತೆಯು. ಯಾವ ಕುಲ

ದಲ್ಲೇ ಆಗಲಿ, ಯಾವ ವಂಶದಲ್ಲೇ ಆಗಲಿ, ಯಾವ ಮಾನವ ಬುಡಕಟ್ಟಿನಲ್ಲಾಗಲಿ ಮಗುಹುಟ್ಟಿದರೆ ಅದಕ್ಕೆ ಸಹಜವಾದ ಶಕ್ತಿ ಸಾಮರ್ಥ್ಯಗಳಿರುವುವು. ಮಗುವಿಗೆ ಸರಿಯಾದ ಪೋಷಣೆಯು ದೊರೆತರೆ ತನ್ನ ಸಹಜವಾದ ಶಕ್ತಿಸಾಮರ್ಥ್ಯಗಳನ್ನು ಉಪಯೋಗಿಸುವುದಕ್ಕೆ ಅವಕಾಶಗಳು ಉಂಟಾಗುವುವು. ಅವಕಾಶಗಳು ದೊರೆಯದೆ ಹೋದರೆ ಆ ಮಗುವಿನಲ್ಲಿರುವ ಶಕ್ತಿಸಾಮರ್ಥ್ಯಗಳು ವಿಕಾಸಗೊಳ್ಳುವುದಕ್ಕೆ ಸಾಧ್ಯ ವಾಗದೇ ಆ ಮಗುವು ಕೀಳು ಮಟ್ಟದಲ್ಲೇ ಉಳಿಯುವುದು. ಈ ಸಿದ್ಧಾಂತದ ಆಧಾರದ ಮೇಲೆ ಆಧುನಿಕ ಸಮಾಜದಲ್ಲಿ ಪ್ರತಿಯೊಂದು ಮಗುವಿಗೂ ಶಿಕ್ಷಣದ ಅವಕಾಶ ದೊರಕಿಸಿಕೊಡುವುದು ಆ ಸಮಾಜದ ಮತ್ತು ರಾಷ್ಟ್ರದ ಜವಾಬ್ದಾರಿ. ಭಾರತ ದೇಶದಲ್ಲಿ ಬ್ರಿಟೀಷರು ಆಳುತ್ತಿದ್ದ ಕಾಲದಲ್ಲಿ ಬ್ರಿಟೀಷರು ಭಾರತೀಯರನ್ನು ಬಹಳ ಕೀಳುದರ್ಜೆಯವರೆಂದೂ ಅವರಿಗೆ ಸಹಜವಾದ ಶಕ್ತಿಸಾಮರ್ಥ್ಯಗಳು ಇಲ್ಲವೆಂದೂ ವಾದಿಸುತ್ತಿದ್ದರು. ಸ್ವಾತಂತ್ರ್ಯವು ಬಂದ ಮೇಲೆ ಈಶಾನ್ಯ ದಿಕ್ಕಿನಲ್ಲಿ ಈಗ ಗಿರಿ ಜನರಿರುವ ಪ್ರಾಂತ್ಯಗಳು ಸ್ವಯಮಾದಿಪತ್ಯ ರಾಷ್ಟ್ರಗಳಾಗಿವೆ. ಈ 1974 ನೇ ಸಂವತ್ಸರದಲ್ಲಿ ಅಣುಸ್ಫೋಟನೆಯನ್ನು ಮಾಡಿ ಭಾರತೀಯ ವಿಜ್ಞಾನಿಗಳು ಭಾರತ ದೇಶಕ್ಕೆ ಪ್ರಪಂಚದಲ್ಲಿ ಒಂದು ಉನ್ನತಸ್ಥಾನವನ್ನು ಗಳಿಸಿಕೊಟ್ಟಿರುವರು. ಇಂತಹ ಘಟನೆಯು ಸ್ವಾತಂತ್ರ್ಯದ ಮುನ್ನ ಆಗುವುದು ಅಸಾಧ್ಯವಾಗಿತ್ತು. ವ್ಯಕ್ತಿಗೆ ತಕ್ಕ ಆವರಣವನ್ನು ನಿರ್ಮಿಸಿ ಪೋಷಣೆಯನ್ನು ಕೊಟ್ಟು ಸ್ವಾವಲಂಬಿಯಾಗಿ ಬೆಳೆಯು ವುದಕ್ಕೆ ಅವಕಾಶ ಕಲ್ಪಿಸಿಕೊಟ್ಟರೆ ಆತನು ಮುಂದುವರೆಯುವುದಕ್ಕೆ ಸಾಧ್ಯ. ಇದೇ ಆಧುನಿಕ ಸಮಾಜದ ಮುಖ್ಯ ಆದರ್ಶ.

ಗೀತೆಯ 18 ನೇ ಅಧ್ಯಾಯದಲ್ಲಿ (41,44) ಚಾತುರ್ವರ್ಣದ ಗುಂಪು ಗಳ ಗುಣಗಳು ಸ್ವಭಾವ ಜನಿತವೆಂದು ಹೇಳಿವೆಯೇ ಹೊರತು ಆ ಗುಂಪಿನಲ್ಲಿ ಜನ್ಮತಾಳಿದುದರಿಂದ ಆಗುಣಗಳು ಬಂದಿವೆ ಎಂದು ಹೇಳಿಲ್ಲ. ಈ ಸ್ವಭಾವವೆಂಬ ಪದವು ತಾಯಿತಂದೆಗಳಿಂದ ಮತ್ತು ಆ ಪರಂಪರೆಯಲ್ಲಿ ಉಂಟಾದುದೆಂದು ಹೇಳ ಬಹುದು. ಇಂತಹ ದೃಷ್ಟಿಯು ಸತ್ಯಾಂಶಕ್ಕೆ ವಿರುದ್ಧವೆಂದು ನಮ್ಮ ಅನುಭವವು ಸಿದ್ಧಪಡಿಸುವುವು. ಒಂದೇ ಕುಟುಂಬದಲ್ಲಿ ಹುಟ್ಟಿದ ಮಕ್ಕಳಲ್ಲಿ ವೈಯುಕ್ತಿಕ ವ್ಯತ್ಯಾಸವಿರುವುದು ಸಾಮಾನ್ಯ. ತಂದೆತಾಯಿಗಳು ಎಷ್ಟು ಶ್ರಮಪಟ್ಟರೂ ಕೆಲವು ಮಕ್ಕಳು ಮಾಧ್ಯಮಿಕ ದರ್ಜೆಯನ್ನೂ ಸಹ ದಾಟುವುದಿಲ್ಲ. ಮತ್ತೆ ಕೆಲವು ಮಕ್ಕಳು ಯಾವ ಪ್ರೋತ್ಸಾಹವೂ ಇಲ್ಲದೆ ಎಲ್ಲ ಪರೀಕ್ಷೆಗಳಲ್ಲೂ ಪ್ರಥಮದರ್ಜೆ ಯಲ್ಲಿ ಉತ್ತೀರ್ಣರಾಗುವರು. ಈ ವೈಯುಕ್ತಿಕ ವ್ಯತ್ಯಾಸಗಳಿಗೂ ತಾಯಿತಂದೆಗಳ ಸಾಮಾಜಿಕಸ್ತರಕ್ಕೂ ಸಂಬಂಧವಿಲ್ಲ. ಪ್ರತಿಯೊಂದು ಮಗುವಿನ ಬುದ್ಧಿಶಕ್ತಿಯು ವ್ಯಕ್ತಿಗತವಾದುದು.

ವರ್ಣ ವ್ಯವಸ್ಥೆಯ ಮತ್ತೊಂದು ನಿಯಮವು ಮಗನು ತಂದೆಯ ವೃತ್ತಿ ಯನ್ನೇ ಅನುಸರಿಸಬೇಕೆಂಬುದು. ಸಾವಿರಾರು ವರ್ಷಗಳ ಹಿಂದೆ ಕೃಷಿ ಸಮಾಜ

ದಲ್ಲಿ ಈ ನಿಯಮವನ್ನು ಎಲ್ಲರೂ ಅನುಸರಿಸಲು ಸಾಧ್ಯವಾಗಿತ್ತು, ಫಲದಾಯಕ ವಾಗಿಯೂ ಇತ್ತು. ಆದರೆ ಆಧುನಿಕ ಕೈಗಾರಿಕಾ ಸಮಾಜದಲ್ಲಿ ಹತ್ತಾರು ಸಾವಿರ ಕಸಬುಗಳು ಉಂಟಾಗಿವೆ. ಮುಖ್ಯವಾಗಿ ವಿಶೇಷಜ್ಞತೆಯಿಂದ ಈಗ ಪ್ರತಿ ಯೊಂದು ಕ್ಷೇತ್ರದಲ್ಲೂ ಅನೇಕ ವಿಶೇಷ ವೃತ್ತಿಗಳುಂಟಾಗಿವೆ. ಅಲ್ಲದೆ ಆಧುನಿಕ ಸಮಾಜದ ಧ್ಯೇಯವು ಪ್ರತಿಯೊಂದು ಮಗುವೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ವನ್ನು ಹೊಂದಿರಬೇಕು ಎಂಬುದಾಗಿದೆ. ಇದರ ಪರಿಣಾಮವಾಗಿ ಅನೇಕ ಯುವಕ ಯುವತಿಯರು ಮಾಧ್ಯಮಿಕ ಶಾಲೆಗಳಿಗೂ, ಕಾಲೇಜುಗಳಿಗೂ ಹೋಗುತ್ತಿರು ವರು. ಆದುದರಿಂದ ತಂದೆಯ ವೃತ್ತಿಯನ್ನೇ ಅವಲಂಬಿಸಬೇಕೆಂಬ ನಿಯಮವು ಇಂದಿನ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಅಸಾಧ್ಯ.

ಹಿಂದಿನ ಕಾಲದಲ್ಲಿ ಜಲಗಾರನ ಮಗ ಜಲಗಾರನಾಗಿದ್ದ. ಪ್ರಾಯಶಃ ಇಂದಿಗೂ ಇದು ಸತ್ಯವಾಗಿರಬಹುದು. ಹಿಂದಿನ ಕಾಲದಲ್ಲಿ ಕ್ಷೌರಿಕನ ಮಗನು ಕ್ಷೌರಿಕನ ವೃತ್ತಿಯನ್ನು ಅವಲಂಬಿಸುತ್ತಿದ್ದನು. ಈ ನಿಯಮವನ್ನು ಮುಂದು ವರಿಸಿ ಡಾಕ್ಟರಿನ ಮಗನು ಡಾಕ್ಟರೇ ಆಗಬೇಕು ಎಂಬುದು ಅರ್ಥವಿಲ್ಲದ ಮಾತು. ಇದು ಒಂದು ಸಮಯ ಸತ್ಯವಾದರೂ ಆ ವೃತ್ತಿಯಲ್ಲಿ ತಂದೆಗೆ ಇರುವ ವಿಶೇಷಜ್ಞತೆ ಯನ್ನೇ ಮಗನೂ ಸಹ ಅನುಸರಿಸಬೇಕೆಂಬುದು ಅಸಂಬದ್ಧ. ಆದುದರಿಂದಲೇ ಆಧುನಿಕ ಸಮಾಜದಲ್ಲಿ ತಂದೆಯ ವೃತ್ತಿಗೂ ಮಕ್ಕಳ ವೃತ್ತಿಗೂ ಸಂಬಂಧವಿಲ್ಲ; ಅಂತಹ ಸಂಬಂಧ ಅಸಾಧ್ಯ.

ವರ್ಣವ್ಯವಸ್ಥೆಯ ಮತ್ತೊಂದು ಊಹೆಯು ಒಬ್ಬ ವ್ಯಕ್ತಿಯ ವೃತ್ತಿಯು ಜನ್ಮಸಿದ್ಧವಾದುದರಿಂದ ಆ ವ್ಯಕ್ತಿಯು ಬುದ್ಧಿ, ಶಕ್ತಿ, ಅಭಿರುಚಿ, ಮನೋಧರ್ಮ ಏನೇಯಿದ್ದರೂ ತಂದೆಯ ವೃತ್ತಿಯನ್ನೇ ಅನುಸರಿಸಬೇಕು. ಅದೇ ಆ ವ್ಯಕ್ತಿಯ ಸ್ವಧರ್ಮ. ತಂದೆಯ ವೃತ್ತಿಯಲ್ಲಿ ತನಗೆ ಇಷ್ಟವಿಲ್ಲದಿದ್ದರೂ, ಆ ವೃತ್ತಿಯನ್ನು ಕಲಿಯಲು ಬುದ್ಧಿಶಕ್ತಿಯಿಲ್ಲದಿದ್ದರೂ ಅದೇ ವೃತ್ತಿಯನ್ನು ಅನುಸರಿಸ ಬೇಕೆಂಬುದು ಸ್ವಧರ್ಮವಾದರೆ ಇದರಿಂದ ವ್ಯಕ್ತಿಗೂ ಮತ್ತು ಸಮಾಜಕ್ಕೂ ಹಾನಿ ಯುಂಟಾಗುವುದು. ಆ ಕೆಲಸಕ್ಕೆ ತಕ್ಕ ಬುದ್ಧಿಶಕ್ತಿ ಮತ್ತು ನಿಪುಣತೆ ಇಲ್ಲದ ವ್ಯಕ್ತಿ ಕೇವಲ ಸ್ವಧರ್ಮವೆಂದು ಆ ವೃತ್ತಿಯನ್ನು ಅನುಸರಿಸಿದರೆ ಆತನ ವ್ಯಕ್ತಿತ್ವಕ್ಕೆ ಕುಂದು ಉಂಟಾಗುವುದು. ತಾನು ಮಾಡುವ ಕೆಲಸದಲ್ಲಿ ತೃಪ್ತಿಹೊಂದಿರುವ ಮನೋ ಭಾವವನ್ನು ಹೊಂದುವುದಿಲ್ಲ. ಇದರಿಂದ ಆತನು ಭಗ್ನ ಮನೋಭಾವದಿಂದ ಕೂಡಿರುವನು. ವೃತ್ತಿಯಲ್ಲಿ ಕುಶಲತೆಯಿರುವುದಿಲ್ಲ. ಇದರ ಸಾಮಾಜಿಕ ಪರಿಣಾಮವು ಎಲ್ಲ ಕೆಲಸ ಕಾರ್ಯಗಳಲ್ಲೂ ಅಸಮರ್ಥತೆ, ಅಶ್ರದ್ಧೆ. ಇದು ಸಮಾಜದ ಏಳಿಗೆಗೆ ಅಡಚಣೆಯನ್ನು ತರುವುದು. ಆದುದರಿಂದ ಒಬ್ಬ ವ್ಯಕ್ತಿಯು ತನಗೆ ಯಾವ ವೃತ್ತಿ ಯಲ್ಲಿ ಅಭಿಲಾಷೆ, ಆಕಾಂಕ್ಷೆ ಹೊಂದಿರುವನೋ ಅದನ್ನು ಅನುಸರಿಸುವುದು ಮತ್ತು

ಆ ಕೆಲಸವನ್ನು ಕುಶಲತೆಯಿಂದಲೂ ಮನಃ ಪೂರ್ವಕವಾಗಿಯೂ ಮಾಡುವುದು ಸ್ವಧರ್ಮ ಎಂದು ಭಾವಿಸಿದರೆ ಆಗ ವ್ಯಕ್ತಿಯ ವಿಕಾಸಕ್ಕೂ ಸಮಾಜದ ಅಭ್ಯುದಯಕ್ಕೂ ಅವಕಾಶವಿರುವುದು.

ಉಪನಿಷತ್ತುಗಳಲ್ಲಿ, ಮುಖ್ಯವಾಗಿ ತೈತ್ತರೀಯ ಉ ಪ ನಿ ಷ ತ್ತಿ ನ ಲ್ಲಿ ಕೋಶ ಸಿದ್ಧಾಂತವನ್ನು ಪ್ರತಿಪಾದಿಸಿದೆ. ಈ ಸಿದ್ಧಾಂತದ ಪ್ರಕಾರ ಲೋಕದಲ್ಲಿಯೂ ವ್ಯಕ್ತಿಯಲ್ಲಿಯೂ ಒಂದು ವ್ಯವಸ್ಥೆಯಿರುವುದು. ಮೊದಲು ಹೊರಗಿನ ಅನ್ನಮಯ ಕೋಶವಿರುವುದು ಇದು ವಸ್ತುವಿಗೆ ಸಂಬಂಧಪಟ್ಟದ್ದು. ಅನಂತರ ಪ್ರಾಣಮಯ ಕೋಶವಿರುವುದು. ಪ್ರಾಣದ ಆಧಾರದ ಮೇಲೆ ಮನೋಮಯಕೋಶವಿರುವುದು. ಮುಂದೆ ವಿಜ್ಞಾನಮಯಕೋಶ ಉತ್ಪನ್ನವಾಗುವುದು. ಕಡೆಗೆ ಆನಂದಮಯ ಕೋಶ. ಈ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬ ಮನುಷ್ಯನೂ ಪ್ರತಿಯೊಂದು ಮೆಟ್ಟಲಿನಲ್ಲೂ ಕುಶಲತೆಯನ್ನು ಪಡೆಯಬೇಕು. ಇದೇ ಪಾತಂಜಲ ಯೋಗಸೂತ್ರದ ತತ್ವ. ಆದುದರಿಂದಲೇ ಪ್ರತಿಯೊಬ್ಬ ವ್ಯಕ್ತಿಯೂ ಆಸನಗಳನ್ನು ಕಲಿತು ದೇಹ ಧಾರಡ್ಯವನ್ನು, ದೇಹ ಚತುರತೆಯನ್ನೂ ಹೊಂದುಬೇಕು. ಆಗ ಎಂತಹ ದೈಹಿಕ ಕೆಲಸವನ್ನಾದರೂ ಶ್ರಮವಿಲ್ಲದೆ ಕುಶಲತೆಯಿಂದ ಮಾಡಬಹುದು. ವರ್ಣ ವ್ಯವಸ್ಥೆಯ ಪ್ರಕಾರ ಇದೇ ಶೂದ್ರವರ್ಣದ ಕೆಲಸ. ಆದರೆ ತನ್ನ ದೇಹದ ಮೇಲೆ ತನಗೆ ಹತೋಟಿ ಯಿಲ್ಲದಿದ್ದರೆ ಆ ವ್ಯಕ್ತಿಯ ಜೀವನ ನಿರರ್ಥಕವೆಂದೂ ಹಾನಿಗೆ ಒಳಗಾಗುವುದೆಂದೂ ಪಾತಂಜಲ ಯೋಗಸೂತ್ರವು ತೋರಿಸಿದೆ. ಈ ಸತ್ಯಾಂಶವನ್ನು ವರ್ಣವ್ಯವಸ್ಥೆಯು ಗಣನೆಗೆ ತೆಗೆದುಕೊಳ್ಳದೆ ಇದ್ದುದರಿಂದ ಭಾರತೀಯ ಸಂಸ್ಕೃತಿಯಲ್ಲಿ ದೈಹಿಕ ಕೆಲಸ ಮಾಡುವವರನ್ನು ಕಂಡರೆ ಅಸಡ್ಡೆ. ಇದರ ಪರಿಣಾಮವಾಗಿ ಪರಾವಲಂಬಿಗಳಾಗಿ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದಿಲ್ಲ.

ಎರಡನೆ ಕೋಶವು ಪ್ರಾಣಮಯಕೋಶ. ಇದು ಜೀವನ ಆಧಾರ. ಪಾತಂಜಲಿ ಯೋಗಸೂತ್ರದ ಪ್ರಕಾರ ಪ್ರಾಣಾಯಾಮದ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ದಕ್ಷತೆಯನ್ನು ಕುಶಲತೆಯನ್ನು ಪಡೆಯಬಹುದು. ವರ್ಣ ವ್ಯವಸ್ಥೆಯ ಪ್ರಕಾರ ಜೀವನದ ಕೆಲಸ ಕಾರ್ಯಗಳನ್ನು ನಡೆಸುವವರು ವೈಶ್ಯವರ್ಣಕ್ಕೆ ಸೇರಿದವರು. ಆದರೆ ಕೆಲಸ ಮಾಡುವುದು, ಹಣ ಸಂಪಾದಿಸಿ ಬೇಕಾದ ಆಹಾರ ವಸ್ತುಗಳನ್ನು ಕೊಂಡು ಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯೂ ಮಾಡಬೇಕಾದ ಕರ್ತವ್ಯ. ವಿಶೇಷಜ್ಞತೆ ಕೆಲವರಲ್ಲಿ ಮಾತ್ರ ಇರುವುದು ಅದು ಅವರ ವೃತ್ತಿಯಾಗುವುದು. ಇದು ಬೇರೆಯವರ ವೃತ್ತಿಯೆಂದು ಜನ ಸಾಮಾನ್ಯರು ಕೆಲಸ ಮಾಡುವುನ್ನು, ಹಣ ಸಂಪಾದನೆ ಮಾಡುವುದನ್ನೂ, ಸಂಪಾದಿಸಿದ ಹಣವನ್ನು ಜಾಗರೂಕತೆಯಿಂದ ನೋಡಿಕೊಳ್ಳುವುದನ್ನೂ ತಮ್ಮ ಕೆಲಸವಲ್ಲದೆಂದೂ ಇದು ಬೇರೆ ವರ್ಣಕ್ಕೆ ಮೀಸಲಾಗಿರುವುದೆಂದು ಪರಿಗಣಿಸಿದರೆ ಆಗ ವ್ಯಕ್ತಿಯು ಹಾನಿಗೆ ಗುರಿಯಾಗುವುದರಲ್ಲಿ ಸಂಶಯವಿಲ್ಲ.

ಕೋಶ ಸಿಧ್ಧಾಂತದ ಮೂರನೆಯ ಅಂಶವು ಮನಸ್ಸಿಗೆ ಸಂಬಂಧಿಸಿದುದು ಭಾರತೀಯ ತತ್ವಶಾಸ್ತ್ರ ದೃಷ್ಟಿಯ ಪ್ರಕಾರ ಮನೋಮಯ ಕೋಶವು ಕೇವಲ ರಾಗದ್ವೇಷಗಳನ್ನು ಒಳಗೊಂಡಿರುವುದು. ಪಾತಂಜಲ ಯೋಗಸೂತ್ರದ ಪ್ರಕಾರ ಈ ರಾಗದ್ವೇಷಗಳ ಮೇಲಿನ ಹತೋಟಿಯನ್ನು ಪಡೆಯಬೇಕಾದರೆ ಒಂದು ಕಡೆ ಯಮನಿಯಮಗಳನ್ನು ಆಚರಿಸಬೇಕು; ಮತ್ತೊಂದು ಕಡೆ ಪ್ರತ್ಯಾಹಾರವನ್ನು ರೂಢಿಗೆ ತಂದುಕೊಳ್ಳಬೇಕು. ವರ್ಣವ್ಯವಸ್ಥೆಯ ಪ್ರಕಾರ ಕ್ಷತ್ರಿಯ ವರ್ಣವು ರಾಗದ್ವೇಷಗಳಿಗೆ ಒಳಗಾಗಿ ಇತರ ಜನಗಳ ಮೇಲೆ ಅಧಿಕಾರವನ್ನು ಚಲಾಯಿಸುವುದು ಮತ್ತು ಅಧಿಕಾರದ ವಿಸ್ತೀರ್ಣವನ್ನು ಹೆಚ್ಚಿಸಿಕೊಳ್ಳುವುದು ಇದೇ ಮುಖ್ಯ ಗುರಿಗಳು ಆದರೆ ಪ್ರತಿಯೊಂದು ಮನೆಯಲ್ಲಿಯೂ ಪ್ರತಿಯೊಂದು ವ್ಯವಸ್ಥೆಯಲ್ಲಿಯೂ ಅಧಿಕಾರ ಮನೋಭಾವದ ವ್ಯಾಪಕನನ್ನು ಕಾಣಬಹುದು. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಂತಸ್ತಿಗೆ ಸರಿಯಾಗಿ ಅಧಿಕಾರವನ್ನು ಚಲಾಯಿಸುವುದನ್ನು ಕಲಿಯಬೇಕಾದುದು ಅಗತ್ಯ.

ನಾಲ್ಕನೆಯ ಕೋಶವು ವಿಜ್ಞಾನಮಯಕೋಶ. ಈ ಅಂತಸ್ತಿನಲ್ಲಿ ಮನುಷ್ಯನು ಬುದ್ಧಿ ಪೂರ್ವಕವಾಗಿ ತನ್ನ ಕೆಲಸಗಳನ್ನು ಮಾಡುವನು. ಮನೋಮಯ ಕೋಶದ ಮಟ್ಟದಲ್ಲಿ ಕೆಲಸಗಳು ದೈಹಿಕ ಮತ್ತು ಮಾನಸಿಕ ಅವಶ್ಯಕತೆಗಳ ಆಧಾರದ ಮೇಲಿರವುದು. ಆದರೆ ವಿಜ್ಞಾನ ಮಟ್ಟದಲ್ಲಿರುವ ವ್ಯಕ್ತಿಯು ಯೋಚನೆ ಮಾಡಿ ನೀತಿನಿಯಮಗಳಿಗೆ ಅನುಸಾರವಾಗಿ ಗುರಿಯನ್ನು ಸಾಧಿಸುವನು. ಈ ಮಟ್ಟವನ್ನು ಪಾತಂಜಲ ಯೋಗಸೂತ್ರದಲ್ಲಿ 'ಧಾರಣ' ಎನ್ನುವರು. ಕೆಲಸದ ಮೇಲೆ ದೃಷ್ಟಿಯನ್ನೂ, ಗಮನವನ್ನು ಇಟ್ಟರೆ ಆಗ ಆ ಕೆಲಸವು ತನ್ನಿಂದ ಸಾಧ್ಯವೋ ಅಸಾಧ್ಯವೋ ಎಂಬ ವಿವೇಕ; ಸಾಧ್ಯವಾದರೆ ಅದನ್ನು ಯಾವ ವಿಧವಾಗಿ ಸಾಧಿಸಬಹುದು ಎಂಬ ನಿರ್ಣಯ ಇವುಗಳನ್ನು ಸುಗವವಾಗಿ ಮಾಡಬಹುದು. ವರ್ಣವ್ಯವಸ್ಥೆಯ ಪ್ರಕಾರ ಇದು ಬ್ರಾಹ್ಮಣ ವರ್ಣಕ್ಕೆ ಅನುಸರಿಸುವುದು. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಬುದ್ಧಿ ಪೂರ್ವಕವಾಗಿ ತನ್ನ ಕೆಲಸ ಕಾರ್ಯಗಳನ್ನು ಮಾಡಬೇಕಾದುದು ಅಗತ್ಯ. ಆಗ ವ್ಯಕ್ತಿಗೆ ತೃಪ್ತಿ ಸಮಾಜದಲ್ಲಿ ಮುನ್ನಡೆ.

ಈ ದೃಷ್ಟಿಯಿಂದ ನೋಡಿದರೆ ಪ್ರತಿಯೊಬ್ಬ ವ್ಯಕ್ತಿಯೂ ಕೋಶ ಸಿದ್ಧಾಂತದ ಪ್ರಕಾರ ಚಾತುರ್ವರ್ಣದ ಪ್ರತಿಯೊಂದು ಕೆಲಸವನ್ನು ಕುಶಲತೆಯಿಂದ ಮಾಡಿದರೆ ಆಗ ದಕ್ಷತೆಯಿಂದ ಬಾಳುವುದು ಸಾಧ್ಯ. ಯಾವ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ದಕ್ಷತೆಯಿಂದ ತನ್ನ ಕೆಲಸಕಾರ್ಯಗಳನ್ನು ಮಾಡುವನೋ ಆ ಸಮಾಜವು ಅಭ್ಯುದಯವನ್ನು ಪಡೆಯಲು ಸಾಧ್ಯ. ಕೋಶ ಸಿದ್ಧಾಂತವು ಒಂದು ಸಮಗ್ರ ನೋಟವನ್ನು ಕೊಡುವುದು. ಇದೇ ಕೋಶ ಸಿದ್ಧಾಂತದ ವೈಶಿಷ್ಟ್ಯ. ತದ್ವಿರುದ್ಧವಾಗಿ ವರ್ಣ ವ್ಯವಸ್ಥೆಯ ನೋಟವು ಅದರಲ್ಲೂ ವರ್ಣಕ್ಕೂ ಹುಟ್ಟಿಗೂ

ಸಂಬಂಭವನ್ನು ಕಲ್ಪಿಸಿದರೆ ಆಗ ಸಂಕುಚಿತ ನೋಟವಾಗಿ ಮಾನವನು ತನ್ನ ಕರ್ತವ್ಯವೇನು ಎಂಬುದನ್ನು ಮರೆತು ಸಾಂಪ್ರದಾಯ ಬದ್ಧನಾಗಿ ಅಸಂಪೂರ್ಣ ಜೀವನವನ್ನು ನಡೆಸಿ ತನಗೂ ಸಮಾಜಕ್ಕೂ ಹಾನಿಕರವಾದ ಮಾರ್ಗವನ್ನು ಹಿಡಿಯುವನು.

ಈಗ ವರ್ಣವ್ಯವಸ್ಥೆಯು ಯಾವ ವಿಧವಾಗಿ ವೈಯುಕ್ತಿಕ ಸತ್ಯಾಂಶ ಗಳಿಗೂ ಸಾಮಾಜಿಕ ಸತ್ಯಾಂಶಗಳಿಗೂ ಅನ್ವಯಿಸುವುದೆಂಬುದನ್ನು ಪರೀಕ್ಷಿಸ ಬಹುದು. ವರ್ಣಧರ್ಮವು ಎರಡು ಅಂಶಗಳನ್ನು ಒಳಗೊಂಡಿರುವುದೆಂದು ಹೇಳ ಬಹುದು.

1) ವರ್ಣ ಧರ್ಮವು ಸಾಧಾರಣವಾಗಿ ಜಾತಿ ಧರ್ಮವನ್ನು ಅನು ಸರಿಸರಿಸುವುದು. ಅಂದರೆ ಒಬ್ಬ ವ್ಯಕ್ತಿಯ ಗುಣಗಳು ಅನುವಂಶಿಕವಾಗಿ ಬಂದಿರು ವುದೆಂಬ ನಂಬಿಕೆಯು ಒಂದು ಮುಖ್ಯವಾದ ಅಂಶ. ಆದುದರಿಂದ ಒಬ್ಬ ವ್ಯಕ್ತಿಯ ವರ್ಣವು ಅವನು ಯಾವ ಕುಲದಲ್ಲಿ ಹುಟ್ಟಿರುವದೋ ಅದನ್ನು ಅನುಸರಿಸುವುದು ಎಂಬ ನಂಬಿಕೆಯು ಈಗ ಸಿದ್ಧಾಂತವಾಗಿದೆ. ಇದಲ್ಲದೆ ಆ ವ್ಯಕ್ತಿಯ ಗುಣವು ಹಿಂದಿನ ಜನ್ಮದ ಕೃತ್ಯದ ಫಲ ಎಂಬುದು ಮತ್ತೊಂದು ನಂಬಿಕೆ. ಗೀತೆಯಲ್ಲಿ (VI 37 ರಿಂದ 45) ಹೇಳಿರುವ ಹಾಗೆ ಒಬ್ಬ ವ್ಯಕ್ತಿಯು ಯೋಗಾ ಭ್ಯಾಸ ವನ್ನು ಮಾಡಿ ಪೂರ್ಣತೆಯನ್ನು ಹೊಂದದ ಪಕ್ಷದಲ್ಲಿ ಸದಾಚಾರ ಶೀಲರು ಶ್ರೀಮಂತರು ಆಗಿರುವವರ ಮನೆಯಲ್ಲಿ ಹುಟ್ಟುವರು ಅಥವಾ ಧೀಮಂತರಾದ ಯೋಗಿಗಳ ಕುಲದಲ್ಲಿ ಹುಟ್ಟುವರು. ಈ ವಂಶಗಳಲ್ಲಿ ಹುಟ್ಟಿದುದರಿಂದ ದೊರೆತ ಸೌಲಭ್ಯಗಳನ್ನು ಪಡೆದು ತನ್ನ ಸಂಸಿದ್ಧಿಗಾಗಿ ಪ್ರಯತ್ನವನ್ನು ಮಾಡು ವುದಕ್ಕೆ ಸಾಧ್ಯವಾಗುವುದು. ಆದುದರಿಂದ ಹಿಂದಿನ ಜನ್ಮದ ಸುಕೃತದಿಂದ ಈ ಜನ್ಮದಲ್ಲಿ ಒಳ್ಳೆಯ ಕುಲದಲ್ಲಿ ಹುಟ್ಟುವುದೊಂದೇ ಅಲ್ಲದೆ ಆ ಕುಟುಂಬದಲ್ಲಿ ಇರುವ ಸೌಲಭ್ಯಗಳು ಆತನಿಗೆ ದೊರೆಯುವುವು. ಅಂದರೆ ಈ ಜನ್ಮದಲ್ಲಿ ಒಬ್ಬ ವ್ಯಕ್ತಿಯ ಬೆಳವಣಿಗೆಯು ಆ ಕುಲದ ಪರಿಸರದ ಆಧಾರದ ಮೇಲೆ ನಿಂತಿರುವುದೆಂಬ ಸತ್ಯಾಂಶ ವನ್ನು ಈ ನಂಬಿಕೆಯು ಸೂಚಿಸುವುದು. ಒಳ್ಳೆಯ ಮನೆತನದಲ್ಲಿ ಹುಟ್ಟಿದುದರಿಂದ ಒಳ್ಳೆಯ ತರಪೇತನ್ನು ಪಡೆಯಲು ಅವಕಾಶವಿರುವುದು. ಬಡವರ, ಕೀಳುಜಾತಿ ಯವರ ಮನೆಯಲ್ಲಿ ಹುಟ್ಟಿದರೆ ಈ ಅವಕಾಶಗಳು ಇರುವುದಿಲ್ಲ ಮತ್ತು ಆ ವ್ಯಕ್ತಿಗೆ ತಕ್ಕ ಸಲಹೆಗಳನ್ನು ಕೊಡುವ ಚೈತನ್ಯವು ತಾಯಿ ತಂದೆಗಳಲ್ಲಿ ಇರು ವುದಿಲ್ಲ. ಕುಟುಂಬದ ಅಂತಸ್ತಿಗೂ ವ್ಯಕ್ತಿಯ ಬೆಳವಣಿಗೆಗೂ ಇರುವ ನಿಕಟ ಸಂಬಂಧವನ್ನು ಈ ಶ್ಲೋಕಗಳು ಸೂಚಿಸುವುವು. ಮೇಲೆ ಹೇಳಿರುವ ಮೂರು ಅಂಶಗಳು ಅಂದರೆ ಅನುವಂಶಿಕತೆ, ಪೂರ್ವಜನ್ಮ ಸುಕೃತ ಮತ್ತು ಪರಿಸರದ ಪ್ರಭಾವ ವ್ಯಕ್ತಿಗೆ ಸಂಬಂಧಪಟ್ಟಿರುವುದು.

2) ಎರಡನೆಯದಾಗಿ ವರ್ಣವ್ಯವಸ್ಥೆಯು ಸಾಮಾಜಿಕ ಅಂಶವನ್ನು ಸಹ ಸೂಚಿಸುವುದು. ಒಂದು ಸಮಾಜವು ಅನೇಕ ಕಾರ್ಯ ಕಲಾಪಗಳಿಂದ ಕೂಡಿದೆ ಎಂಬುದನ್ನು ವರ್ಣತತ್ವವು ಸೂಚಿಸುವುದು. ಈ ವಿಷಯದಲ್ಲಿ ಸಾವಿರಾರು ವರ್ಷಗಳ ಹಿಂದೆ ರೂಪಗೊಂಡ ವರ್ಣ ತತ್ವವು ಈಗಿನ ಸಮಾಜಶಾಸ್ತ್ರದ ತತ್ವಗಳನ್ನು ನಿರೀಕ್ಷಿಸಿದೆ. ಎರಡನೆಯದಾಗಿ ಜನರಲ್ಲಿ ವೈಯುಕ್ತಿಕ ವ್ಯತ್ಯಾಸಗಳಿವೆ ಎಂಬ ಇಂದಿನ ಮನಃಶಾಸ್ತ್ರದ ಪ್ರಾಯೋಗಿಕ ಬಲದಿಂದ ಕಂಡುಹಿಡಿಯಲಾಗಿರುವ ಸತ್ಯವನ್ನೂ ಸಹ ವರ್ಣ ತತ್ವವು ನಿರೀಕ್ಷಿಸಿದೆ. ಮತ್ತು 'ಗೀತೆಯಲ್ಲಿ ಹೇಳಿರುವ ಹಾಗೆ ಈ ವೈಯುಕ್ತಿಕ ವ್ಯತ್ಯಾಸಗಳು ಸ್ವಭಾವ ಸಿದ್ಧವೆಂದೂ ಈ ವ್ಯತ್ಯಾಸಗಳನ್ನು ವಿದ್ಯಾಭ್ಯಾಸದ ಮೂಲಕವಾಗಲೀ, ತರಪೇತಿನ ಮೂಲಕವಾಗಲಿ, ಪ್ರಯತ್ನದ ಮೂಲಕವಾಗಲಿ, ಅವಕಾಶದ ಮೂಲಕವಾಗಲೀ ನಿರ್ಮೂಲಮಾಡಲು ಅಸಾಧ್ಯವೆಂದು ನಿರೂಪಿಸಿರುವುದು. ಶಾಲೆಗೆ ಬರುವ ಮಕ್ಕಳು ವೈಯುಕ್ತಿಕ ವ್ಯತ್ಯಾಸಗಳಿಂದ ಕೂಡಿರುವವರು. ಹಾಗೆಯೇ ಶಾಲೆಯಲ್ಲಿ ಹತ್ತಾರು ವರ್ಷಗಳ ವಿದ್ಯಾಭ್ಯಾಸವನ್ನು ಮಾಡಿದ ನಂತರವೂ ವ್ಯತ್ಯಾಸಗಳೊಂದಿಗೆ ಹೊರಬರುವರು. ಅಂದರೆ ವಿದ್ಯಾಭ್ಯಾಸವು ಅವರಲ್ಲಿ ಎಷ್ಟೇ ಪರಿಣಾಮಗಳನ್ನು ಬೀರಿ ಅದರ ಕುಶಲತೆಗಳನ್ನು ಯೋಚನಾಶಕ್ತಿಯನ್ನು ಹೆಚ್ಚು ಮಾಡಿದರೂ ಅವರಲ್ಲಿರುವ ವೈಯುಕ್ತಿಕ ವ್ಯತ್ಯಾಸಗಳನ್ನು ನಿರ್ಮೂಲ ಮಾಡಲಾರದು. ಈ ಸತ್ಯಾಂಶವನ್ನು ಸಾವಿರಾರು ವರ್ಷಗಳ ಹಿಂದೆಯೇ ವರ್ಣತತ್ವವು ಮನಗೊಂಡಿತು. ಕೊನೆಯದಾಗಿ ಈ ತತ್ವದ ಪ್ರಕಾರ ಈ ವೈಯುಕ್ತಿಕ ವ್ಯತ್ಯಾಸಗಳನ್ನು ತಿಳಿದುಕೊಂಡು ವ್ಯಕ್ತಿಗಳಿಗೆ ತಕ್ಕ ಪೋಷಣೆಯನ್ನು ಕೊಟ್ಟರೆ ಆಗ ಸಮಾಜದ ಸಾಮರಸ್ಯವೂ ಮತ್ತು ಸಮಾಜದ ಮುನ್ನಡೆಗೂ ಕಾರಣವಾಗುವುದೆಂದು ಅರಿವಿತ್ತು. ಈ ಅರಿವೂ ಸಹ ಇಂದಿನ ಕಾರ್ಯ ಕ್ರಮಗಳಾದ ವೃತ್ತಿಯ ಆಯ್ಕೆ (Vocational Selection) ಮತ್ತು ವೃತ್ತಿ ನಿರ್ದೇಶನ (Vocational guidanoe) ಗಳ ತತ್ವವನ್ನು ವರ್ಣ ತತ್ವವು ನಿರೀಕ್ಷಿಸಿತು ಎಂಬುದು ನಿರ್ವಿವಾದ.

ಆದರೆ ಈಗ ಅನುಸರಿಸುತ್ತಿರುವ ಜಾತಿ ಧರ್ಮವು ಮೊದಲು ವಿವರಿಸಿದ ಅಂಶವನ್ನು ಮಾತ್ರ ಒಳಗೊಂಡಿರುವುದೇ ಹೊರತು ಎರಡನೆಯ ಅಂಶಗಳನ್ನು ಒಳಗೊಂಡಿಲ್ಲ. ಅಂದರೆ ಜಾತಿ ಧರ್ಮವು ವಂಶಾನುಕ್ರಮದಿಂದ ಪಡೆದ ಅಂಶಗಳನ್ನು ಪ್ರಧಾನವಾದುದೆಂಬುದನ್ನು ಸೂಚಿಸುವುದು. ಈ ವಂಶಕ್ಕೂ ವ್ಯಕ್ತಿಯ ಗುಣಗಳಿಗೂ ಇರುವ ಸಂಬಂಧವು ಪರಿಸರದ ಮತ್ತು ಶಿಕ್ಷಣದ ಬದಲಾವಣೆಯಿಂದ ಪ್ರಭಾವಕ್ಕೆ ಗುರಿಯಾಗುವುದು. ಆದುದರಿಂದಲೇ ಆಧುನಿಕ ಸಮಾಜಗಳಲ್ಲಿ ಎಲ್ಲ ವ್ಯಕ್ತಿಗಳಿಗೂ ಸಮಾನ ಹಕ್ಕುಗಳು ಸಮಾನ ಅವಕಾಶಗಳು ಇರಬೇಕೆಂಬ ತತ್ವಗಳನ್ನು ಒಪ್ಪಿಕೊಳ್ಳಲಾಗಿದೆ. ಯಾವ ಮನೆತನದಲ್ಲಿ ಹುಟ್ಟಿದರೂ

ಆ ವ್ಯಕ್ತಿಗೆ ಸರಿಯಾದ ಪೋಷಣೆಯನ್ನು ಕೊಟ್ಟರೆ ಅವನು ಮುಂದುವರೆಯು ವುದಕ್ಕೆ ಸಾಧ್ಯ ಎಂಬುದನ್ನು ಈಗ ಒಪ್ಪಿಕೊಳ್ಳಲಾಗಿದೆ. ಈ ಕಾರಣದಿಂದಲೇ ಕೀಳು ಜಾತಿಗಳಲ್ಲಿ ಹುಟ್ಟಿದ ಅನೇಕ ವ್ಯಕ್ತಿಗಳು ಇಂದಿನ ಭಾರತೀಯ ಸಮಾಜದಲ್ಲಿ ಉನ್ನತ ಪದವಿಗಳನ್ನು ಹೊಂದಿರುವರು. ಐವತ್ತು ವರ್ಷಗಳ ಹಿಂದೆ ಇಂತಹ ಘಟನೆಗಳು ಅಸಾಧ್ಯವಾಗಿತ್ತು. ಸಾಮಾಜಿಕ ದೃಷ್ಟಿಯಿಂದ ಇವು ಇಂದು ಸಾಧ್ಯ. ಆದುದರಿಂದ ಕೇವಲ ವಂಶದ ಪ್ರಭಾವವು ಅಷ್ಟು ಮುಖ್ಯವಲ್ಲವೆಂಬುದನ್ನು ಈಗಿನ ಅನುಭವವು ತೋರಿಸಿಕೊಟ್ಟಿದೆ.

ಮಾನವ ಚರಿತ್ರೆಯು ಈ ಸತ್ಯಾಂಶವನ್ನು ವಿಶದಗೊಳಿಸುವುದು. ವಂಶಾನುಕ್ರಮದ ಆಧಾರದ ಮೇಲೆ ನಿಂತಿದ್ದ ಪ್ರಾಚೀನ ಸಂಸ್ಕೃತಿಗಳಲ್ಲಿ ಹುಟ್ಟಿರುವ ಜನ ಸಮುದಾಯಗಳು ಈಗ ಪ್ರಪಂಚದಲ್ಲಿ ನಿಮ್ನ ವರ್ಗಕ್ಕೆ ಸೇರಿದವರಾಗಿರುವರು. ಅತ್ಯಂತ ಉನ್ನತ ಗ್ರೀಕ್. ರೋಮನ್ ಪರ್ಷಿಯನ್, ಈಜಿಪ್ಸಿಯನ್ ಮತ್ತು ಭಾರತೀಯರು ಈಗ ಹಿಂದುಳಿದ ಜನಾಂಗದವರಾಗಿರಿರುವರು. ಅಂದರೆ 1500 ವರ್ಷಗಳ ಹಿಂದೆ ಅಸಂಸ್ಕೃತರಾಗಿದ್ದ ಉತ್ತರ ಮತ್ತು ಪಶ್ಚಿಮ ಯೂರೋಪಿನ ಜನಾಂಗದವರು ಈಗ ಉನ್ನತ ನಾಗರೀಕರಾಗಿರುವರು. ಆದುದರಿಂದಲೇ ಕೇವಲ ವಂಶವೇ ಬಹು ಮುಖ್ಯವಾದ ಅಂಶ ಎಂದು ಒಪ್ಪಿಕೊಂಡರೆ ಆ ಜನಾಂಗವು ಹೀನ ಸ್ಥಿತಿಗೆ ಹೋಗುವ ಸಾಧ್ಯವು ಇರುವುದು. ಇವು ಸಂಕುಚಿತ ದೃಷ್ಟಿಯಿಂದ ಉತ್ಪನ್ನವಾದ ಭಾವನೆಗಳು. ಸಂಕುಚಿತ ದೃಷ್ಟಿಯು ಎಂದಿಗೂ ಸತ್ಯವನ್ನು ಕೊಡಲಾರದು.

ಇದಕ್ಕೆ ವಿರುದ್ಧವಾಗಿ ಮೇಲೆ ಸೂಚಿಸಿರುವ ವರ್ಣತತ್ವದ ಎರಡನೆಯ ಅಂಶವು ವಂಶೀಯ ಕ್ರಮವನ್ನು (Inherited) ಒತ್ತಿ ಹೇಳದೆ ಸ್ವಭಾವ ಸಿದ್ಧವಾದ, ಸಹಜವಾದ (Innate) ಅಂಶಗಳಿಗೆ ಪ್ರಾಧಾನ್ಯತೆಯನ್ನು ಕೊಡುವುದು. ವ್ಯಕ್ತಿಗಳ ಸ್ವಭಾವ ಸಿದ್ಧ ಗುಣಗಳ ಆಧಾರದ ಮೇಲೆ ಅವರಿಗೆ ತಕ್ಕ ಪೋಷಣೆಯನ್ನು ಕೊಟ್ಟರೆ ಆಗ ಅವರು ತಮ್ಮಲ್ಲಿ ಸಹಜವಾಗಿರುವ ಶಕ್ತಿಸಾಮರ್ಥ್ಯಗಳನ್ನು ಮುಂದುವರಿಸುವುದಕ್ಕೆ ಸಾಧ್ಯ. ಹಾಗೆ ವ್ಯಕ್ತಿಗಳು ಮುಂದುವರೆಸಿದರೆ ಇಡೀ ಸಮಾಜವು ಪ್ರಗತಿಯ ಮಾರ್ಗವನ್ನು ಹಿಡಿಯುವುದಕ್ಕೆ ಅವಕಾಶ ಉಂಟಾಗುವುದು. ಜಾತಿಯ ತತ್ವವನ್ನು ಬಿಟ್ಟು ಸ್ವಭಾವ ಸಿದ್ಧ ತತ್ವವನ್ನು ಒಪ್ಪಿಕೊಂಡು ಅದರ ಆಧಾರದ ಮೇಲೆ ಸಮಾಜದ ರಚನೆಯನ್ನು ಮಾಡಿದರೆ ಆಗ ವ್ಯಕ್ತಿಯ ವಿಕಾಸಕ್ಕೂ ಸಮಾಜದ ಅಭ್ಯುದಯಕ್ಕೂ ಅವಕಾಶವಿರುವುದು. ಈ ದೃಷ್ಟಿಯು ಸಾರ್ವತ್ರಿಕ ದೃಷ್ಟಿಯು. ಇದು ಎಲ್ಲ ಸಮಾಜಗಳಿಗೂ ಎಲ್ಲಾ ಕಾಲಗಳಿಗೂ ಅನ್ವಯಿಸುವುದು ಆದುದರಿಂದ ಭಾರತೀಯ ಸಮಾಜದಲ್ಲಿ ಯಾವ ಮನೆತನದಲ್ಲಿ ಮಗು ಹುಟ್ಟಿದರೂ ಅ ಮಗುವಿಗೆ ತಕ್ಕ ಪೋಷಣೆಯನ್ನು ಕೊಟ್ಟು ವಿಕಾಸವನ್ನು ಹೊಂದುವ ಹಾಗೆ ಮಾಡುವುದು ಸಾಮಾಜಿಕ ಮತ್ತು ರಾಷ್ಟ್ರದ ಕರ್ತವ್ಯ

ವೆಂದು ಇತರ ರಾಷ್ಟ್ರಗಳ ಸಂಧಾನಗಳು ಒಪ್ಪಿರುವ ಹಾಗೆ ಭಾರತೀಯ ಸಂವಿಧಾನವೂ ಒಪ್ಪಿಕೊಂಡಿದೆ. ಇದನ್ನು ಕಾರ್ಯರೂಪಕ್ಕೆ ತರುವುದೇ ಇಂದಿನ ಸಮಾಜದ ಮತ್ತು ರಾಷ್ಟ್ರದ ಕರ್ತವ್ಯ.

ಒಬ್ಬ ವ್ಯಕ್ತಿಯ ಸ್ಥಿತಿಗತಿಗಳು ಮತ್ತು ಬೆಳವಣಿಗೆ ಅವನು ಯಾವ ಮನೆತನದಲ್ಲಿ ಹುಟ್ಟಿರುವನೋ ಅದಕ್ಕೆ ಅನುಸಾರವಾಗಿ ಇಲ್ಲದೆ ಆತನ ಸ್ವಭಾವಸಿದ್ಧ ಗುಣಗಳನ್ನು ಅನುಸರಿಸಬೇಕೆಂಬ ತತ್ವವನ್ನು ಭಾರತೀಯ ಸಂವಿದಾನದಲ್ಲಿ ಒಪ್ಪಿಕೊಂಡರೂ ಸಮಾಜದಲ್ಲಿ ಸಂಪ್ರದಾಯ ಜಾತಿ ಧರ್ಮವು ಇನ್ನೂ ಆಚರಣೆಯಲ್ಲಿ ಮುಖ್ಯವಾಗಿ ಹಳ್ಳಿಗಳಲ್ಲಿಯೂ, ಪಟ್ಟಣದ ಕೊಳಚೆ ಪ್ರದೇಶಗಳಲ್ಲಿಯೂ ಇರುವುದರಿಂದ ಭಾರತೀಯ ಸಮಾಜದಲ್ಲಿ ತಿಕ್ಕಾಟವು ಉಂಟಾಗಿದೆ. ಯಾವಾಗಲು ಸಂಪ್ರದಾಯ ಜನಿಕ ಆಚಾರಗಳನ್ನು ಬಿಡುವುದು ಬಹಳ ಕಷ್ಟ. ಆದರೆ ಇವುಗಳನ್ನು ಬಿಡದೇಹೋದರೆ ಮತ್ತೊಂದು ವಿಧವಾದ ಕಷ್ಟವು ಉದ್ಭವಿಸುವುದು. ಈ ಸಾಮಾಜಿಕ ಸ್ಥಿತಿಯು ವಿಷಮ ಪರಿಸ್ಥಿತಿಯನ್ನು ಹೊಂದದೆ ಇರುವ ಹಾಗೆ ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ಗುಂಪೂ ಒಬ್ಬ ವ್ಯಕ್ತಿಯು ಯಾವ ಮನೆತನದಲ್ಲಿ ಹುಟ್ಟಿರುವನೆಂಬುವಕ್ಕೆ ಹೆಚ್ಚು ಗಮನ ಕೊಡದೆ ಆ ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳ ಕಡೆ ಗಮನ ಕೊಡುವುದು ಉತ್ತಮ.

ಈ ದೃಷ್ಟಿಯಿಂದ ಸ್ವಭಾವಕ್ಕೂ ಸ್ವಧರ್ಮಕ್ಕೂ ಇರುವ ಸಂಬಂಧವನ್ನು ಕುರಿತು ಪರ್ಯಾಲೋಚಿಸಬೇಕು. ಗೀತೆಯ ಪ್ರಕಾರ ಸ್ವಧರ್ಮವು ಸ್ವಭಾವದಿಂದ ಉಂಟಾಗುವುದು. ತನ್ನ ಸ್ವಭಾವಕ್ಕೆ ಅನುಸಾರವಾಗಿ ಒಬ್ಬ ವ್ಯಕ್ತಿಯು ತನ್ನ ವೃತ್ತಿಯನ್ನು ನಿರ್ಣಯಿಸದೇಹೋದರೆ ಆಗ ಗೀತೆಯ ಪ್ರಕಾರ ಆತನು ಪರಧರ್ಮವನ್ನು ಆಚರಿಸಿ ಕಷ್ಟಕ್ಕೆ ಒಳಗಾಗುವನು. ಆದುದರಿಂದಲೇ—

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥

ಗೀತೆ 3—35

ತಾನು ಮಾಡುತ್ತಿರುವ ಕೆಲಸವು ತನಗೆ ಬೇಕಾದ ಹಣ, ಸ್ಥಾನ ಮುಂತಾದುವುಗಳನ್ನು ಕೊಡಲಿಲ್ಲವೆಂದು ಅವನ್ನು ತ್ಯಜಿಸಿ ಇನ್ನೊಂದು ವೃತ್ತಿಯು ತನಗೆ ಐಶ್ವರ್ಯವನ್ನು, ಸಾಮಾಜಿಕ ಸ್ಥಾನಗಳನ್ನು ಕೊಡುವುದೆಂಬ ಭ್ರಮೆಯಿಂದ ಅದನ್ನು ಅನುಸರಿಸಿದರೆ ವ್ಯಕ್ತಿಯ ಅನೇಕ ಕಷ್ಟಗಳಿಗೆ ಗುರಿಯಾಗಬಹುದು. ಎಷ್ಟೋ ಜನ ತಮ್ಮ ವೃತ್ತಿಯನ್ನು ಬಿಟ್ಟು ವ್ಯಾಪಾರವನ್ನೂ ರಾಜಕೀಯವನ್ನೂ ಹಿಡಿಯುವರು. ವ್ಯಾಪಾರದಿಂದ ಬೇಗ ಹಣ ಸಂಪಾದನೆ ಮಾಡಬಹುದು. ರಾಜಕೀಯದಿಂದ ಈಗಿನ ಪರಿಸ್ಥಿತಿಗಳಲ್ಲಿ ಐಶ್ವರ್ಯವನ್ನೂ ಸಮಾಜದಲ್ಲಿ ಉನ್ನತ ಪದವಿ

ಯನ್ನು ಬಹಳ ಬೇಗನೆ ಪಡೆಯುವುದಕ್ಕೆ ಸಾಧ್ಯ. ಆದರೆ ವ್ಯಾಪಾರ ವೃತ್ತಿಯನ್ನು ಅನುಸರಿಸಬೇಕಾದರೆ ಅದಕ್ಕೆ ತಕ್ಕ ಶಕ್ತಿ ಸಾಮರ್ಥ್ಯಗಳು ಬೇಕು. ಈತನಲ್ಲಿ ಇವೆಲ್ಲವೂ ಇದ್ದರೆ ಆಗ ಅಭಿವೃದ್ಧಿ ಹೊಂದಬಹುದು. ಇವುಗಳಿಲ್ಲದಿದ್ದರೆ ತನ್ನಲ್ಲಿರುವ ಆಸ್ತಿಯನ್ನು ಕಳೆದುಕೊಂಡು ಭಿಕಾರಿಯಾಗಬೇಕಾದ ಸಂದರ್ಭ ಉಂಟಾಗಬಹುದು. ಇದೇ ಅಲ್ಲದೆ ಹಣವನ್ನೂ, ಸ್ಥಾನವನ್ನೂ ಸಂಪಾದಿಸಿದರೂ ಮನಸ್ಸಿನಲ್ಲಿ ನೆಮ್ಮದಿ ಇಲ್ಲದೆ ಮಾನಸಿಕ ಅಸ್ವಸ್ಥತೆಯುಂಟಾಗಿ ಅದನ್ನು ನಿವಾರಿಸಿಕೊಳ್ಳುವುದಕ್ಕೋಸ್ಕರ ಮಧ್ಯಪಾನ ಮಾಡಿ ಅನೇಕ ಕಷ್ಟಗಳಿಗೆ ಗುರಿಯಾಗಬಹುದು. ಈ ಸತ್ಯಾಂಶವನ್ನು ಗೀತೆಯು ಈ ಶ್ಲೋಕದಲ್ಲಿ ಸೂಚಿಸಿರುವುದು. ಅಂದರೆ, ಸ್ವಧರ್ಮವೆಂದರೆ ತನ್ನ ಶಕ್ತಿಸಾಮರ್ಥ್ಯಗಳಿಗೆ ಅನುಗುಣವಾದ ವೃತ್ತಿಯನ್ನು ಕೈಗೊಳ್ಳುವುದು. ಆಗ ವ್ಯಕ್ತಿಗೆ ತೃಪ್ತಿಯುಂಟಾಗುವುದು. ಐಶ್ವರ್ಯವಿಲ್ಲದಿದ್ದರೂ ಸಮಾಜದಲ್ಲಿ ಉನ್ನತಸ್ಥಾನಮಾನಗಳಿಲ್ಲದಿದ್ದರೂ ತಾನು ತನ್ನ ಕೆಲಸವನ್ನು ಶ್ರದ್ಧೆಯಿಂದಲೂ ನಿಪುಣತೆಯಿಂದಲೂ ಮಾಡುತ್ತಿರುವನೆಂಬ ಅನುಭವವು ತೃಪ್ತಿಯನ್ನು ಮನೋಸ್ಥೈರ್ಯವನ್ನು ಕೊಡುವುದು. ಅಂತಹ ಕೆಲಸವನ್ನು ಬಿಟ್ಟು ಬೇರೆ ಕೆಲಸ ಮಾಡಿದರೆ ಇನ್ನೂ ಹೆಚ್ಚಿನ ಐಶ್ವರ್ಯವನ್ನು ಸಾಮಾಜಿಕ ಸ್ಥಾನಮಾನಗಳನ್ನು ಪಡೆಯಬಹುದೆಂಬ ಮೋಹವು ದುರ್ಗತಿಗೆ ಕಾರಣವಾಗುವುದು. ಆದುದರಿಂದಲೇ ಗೀತೆಯ ಪ್ರಕಾರ ಸ್ವಧರ್ಮವನ್ನು ಮಾಡುವುದೇ ಶ್ರೇಯಸ್ಕರ. ಅದನ್ನು ಬಿಟ್ಟು ಮೋಹದಿಂದ ಪರಧರ್ಮವನ್ನು ಆಚರಿಸುವುದು ಭಯಂಕರವಾದದ್ದು. ಇದೇ ಅಂಶವನ್ನು ಹದಿನೆಂಟನೆಯ ಅಧ್ಯಾಯದ 47 ನೇ ಶ್ಲೋಕದಲ್ಲಿಯೂ ಹೇಳಲಾಗಿದೆ.

ಇದರಲ್ಲಿ ಮತ್ತೊಂದು ಅಂಶವಿರುವುದು. ಈ ಸ್ವಧರ್ಮದ ತತ್ವವು ಸಾರ್ವತ್ರಿಕ ತತ್ವ. ಇದು ಎಲ್ಲಿ ಕಾಲದಲ್ಲಿಯೂ ಎಲ್ಲಾ ಸಮಾಜಗಳಲ್ಲೂ, ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುವ ತತ್ವ. ಉದಾ : ಹಿಟ್ಲರ್ ತನ್ನ ವೃತ್ತಿಯನ್ನು ತ್ಯಜಿಸಿ ಜರ್ಮನಿಯ ದೊಡ್ಡನಾಯಕನಾಗಿ ಕಟ್ಟಕಡೆಗೆ ತನ್ನ ನಾಶಕ್ಕಲ್ಲದೆ ಇಡೀ ಜರ್ಮನ್ ಪ್ರಜೆಗಳ ನಾಶಕ್ಕೆ ಕಾರಣನಾದನು. ಇದೇ ರೀತಿಯಾಗಿ ಇಂಡೋನೇಶ್ಯಾದ ಸುಕರ್ನೋ ಮತ್ತು ಪಾಕಿಸ್ತಾನದ ಯಾಹ್ಯಾಖಾನ್ ಮುಂತಾದವರು ತಮ್ಮ ರಾಷ್ಟ್ರಗಳಿಗೆ ಅತ್ಯಂತ ಕಷ್ಟವನ್ನು ತಂದೊಡ್ಡಿದರು.

ಆಧುನಿಕ ಮನಶ್ಶಾಸ್ತ್ರದ ಪ್ರಯೋಗಗಳು ವ್ಯಕ್ತಿ ವ್ಯತ್ಯಾಸಗಳ ಸತ್ಯವನ್ನು ತೋರಿಸಿಕೊಟ್ಟಿರುವುವು. ಮೇಲೆ ನೋಡಿರುವಹಾಗೆ ಆಧುನಿಕ ಕೈಗಾರಿಕಾ ಸಮಾಜವು ಭಿನ್ನಭಿನ್ನವಾದ ಶಕ್ತಿಸಾಮರ್ಥ್ಯಗಳನ್ನು ಒಳಗೊಂಡಿರುವುವು. ಆದುದರಿಂದ ವ್ಯಕ್ತಿಯ ವಿಕಾಸಕ್ಕೂ ಸಮಾಜದ ಅಭಿವೃದ್ಧಿಗೂ ತನ್ನ ಸ್ವಾಭಾವಿಕ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾದ ವೃತ್ತಿಯನ್ನು ಅವಲಂಬಿಸಬೇಕು. ಆ ಕಡೆ ಒಂದು ಸಂಸ್ಥೆಯು ತಮ್ಮ ಕೆಲಸಕ್ಕೆ ತಕ್ಕ ವ್ಯಕ್ತಿಗಳನ್ನು ಆರಿಸಿಕೊಳ್ಳಬೇಕು.

ಆಗ ವ್ಯಕ್ತಿಯು ಅಭಿವೃದ್ಧಿಯನ್ನು ಹೊಂದಿ ತನ್ನ ಕೆಲಸದಲ್ಲಿ ತೃಪ್ತಿಯನ್ನು ಹೊಂದಲು ಸಾಧ್ಯ. ಸಂಸ್ಥೆಯೂ ಸಹ ನಿಪುಣರಾದ ವ್ಯಕ್ತಿಗಳನ್ನು ಆರಿಸಿಕೊಂಡು ಅವರ ಮೂಲಕ ಅಭಿವೃದ್ಧಿಯನ್ನು ಹೊಂದಲು ಸಾಧ್ಯ.

ಸ್ವಧರ್ಮ ಎಂಬ ಪದಕ್ಕೆ ಮತ್ತೊಂದು ಅರ್ಥವು ಇರುವುದು ಒಬ್ಬ ವ್ಯಕ್ತಿಯು ತಾನು ಕೈಗೊಂಡಿರುವ ಕೆಲಸವನ್ನು ಶ್ರದ್ಧೆಯಿಂದಲೂ ವಿಶ್ವಾಸದಿಂದಲೂ ಮಾಡಿದರೆ ಆಗ ಆತನು ತನ್ನ ಸ್ವಧರ್ಮವನ್ನು ಪಾಲಿಸಿದಂತೆ ಆಗುವುದು. ಪ್ರತಿಯೊಬ್ಬ ವ್ಯಕ್ತಿಯು ತಾನು ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ತನ್ನ ಆತ್ಮ ವಿಶ್ವಾಸವೂ ಸಂಸ್ಥೆಯ ಅಭಿವೃದ್ಧಿಯೂ ಸಾಧ್ಯವಾಗುವುದು. ಕೆಲಸವನ್ನು ಒಪ್ಪಿಕೊಂಡು ಆ ಕೆಲಸವನ್ನು ಶ್ರದ್ಧೆಯಿಂದ ಮಾಡದೆ ಹೋದರೆ ತನಗೂ ತಾನು ಕೆಲಸ ಮಾಡುತ್ತಿರುವ ಸಂಸ್ಥೆಗೂ ಹಾನಿ ಮಾಡಿದ ಹಾಗೆ ಆಗುವುದು. ಇಂತಹ ಪರಿಸ್ಥಿತಿಯನ್ನು ಈಗ ಅನೇಕ ಕಡೆ ಕಾಣಬಹುದು. ಆಕಾಂಕ್ಷೆಗಳು ಹೆಚ್ಚಾಗಿ ಅಶ್ರದ್ಧೆಯು ಹೆಚ್ಚಾಗುವುದು. ಇದರಿಂದ ವ್ಯಕ್ತಿಗೂ ಒಳ್ಳೆಯದಲ್ಲ; ಸಮಾಜಕ್ಕೂ ಒಳ್ಳೆಯದಲ್ಲ.

ಅಂದರೆ ವ್ಯಕ್ತಿಯು ಏನೇ ಆಗಲಿ ತಾನು ಮಾಡುತ್ತಿರುವ ಕೆಲಸವನ್ನೇ ಎಲ್ಲ ಕಾಲಕ್ಕೂ ಮಾಡುತ್ತಿರಬೇಕೇ ಎಂಬ ಸಂಶಯವು ಬರಬಹುದು. ಸ್ವಧರ್ಮ ತತ್ವದ ಉದ್ದೇಶವು ಇದಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಯಾವ ಕೆಲಸವನ್ನು ಮಾಡುತ್ತಿದ್ದರೂ ತನ್ನ ವಿರಾಮ ಕಾಲದಲ್ಲಿ ತನ್ನ ವ್ಯಕ್ತಿತ್ವದ ಬೆಳವಣಿಗೆಗೆ ಗಮನ ಕೊಡಬೇಕು. ತನ್ನ ನಿಪುಣತೆಯನ್ನು ಜ್ಞಾನವನ್ನು ಹೆಚ್ಚಿಸಿಕೊಂಡು ತಾನು ಮುಂದುವರೆಯುವ ಹಾಗೆ ಶ್ರಮಿಸಬೇಕು. ನಮ್ಮ ದೇಶದಲ್ಲಿಯೂ ಇತರ ದೇಶಗಳಲ್ಲೂ ಉನ್ನತ ಸ್ಥಾನವನ್ನು ಪಡೆದಿರುವ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಓದಿದರೆ ಈ ಅಂಶವು ವಿಶದವಾಗುವುದು. ಉದಾ : ಗಾಂಧೀಜಿಯವರು ಸಾಧಾರಣ ವಕೀಲ ವೃತ್ತಿಯಲ್ಲಿ ಸಫಲತೆಯನ್ನು ಹೊಂದಲಿಲ್ಲ. ಆದರೆ ದಕ್ಷಿಣ ಆಫ್ರಿಕಾಗೆ ಹೋಗುವ ಅವಕಾಶವನ್ನು ಉಪಯೋಗಿಸಿಕೊಂಡು ಅಲ್ಲಿ ತಮ್ಮ ನಿಯಮಗಳಿಗೆ ಅನುಸಾರವಾಗಿ ವಕೀಲ ವೃತ್ತಿಯನ್ನು ನಡೆಸಿ ಅತ್ಯಂತ ಐಶ್ವರ್ಯವನ್ನೂ ಮತ್ತು ಸಮಾಜದ ಸ್ಥಾನಮಾನಗಳನ್ನು ಪಡೆದರು. ನಂತರ ಈ ವೃತ್ತಿಯನ್ನೇ ತ್ಯಜಿಸಿ ಇಡೀ ಭಾರತದ ಏಳಿಗೆಗೆ ಕೆಲಸಮಾಡಿ ಭಾರತದಲ್ಲೂ ಮಾನವಕೋಟಿಯಲ್ಲೂ ಅತ್ಯಂತ ಸುಪ್ರಸಿದ್ಧ ಸ್ಥಾನವನ್ನು ಪಡೆದರು. ಅಂದರೆ ತಾನು ಒಪ್ಪಿಕೊಂಡಿರುವ ಕೆಲಸವನ್ನು ಶ್ರದ್ಧೆಯಿಂದಲೂ ಮನಃಪೂರ್ವಕವಾಗಿಯೂ ನಿರ್ವಹಿಸಬೇಕು. ವಿರಾಮ ಕಾಲದಲ್ಲಿ ತನ್ನ ಸ್ವಭಾವಕ್ಕೆ ಯಾವುದು ಅನುಗುಣವೋ ಅದನ್ನು ಕಂಡುಹಿಡಿದು ಅದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಿ ತನ್ನ ಜ್ಞಾನವನ್ನೂ ನಿಪುಣತೆಯನ್ನೂ ಹೆಚ್ಚು ಮಾಡಿಕೊಂಡು ಸೃಜನಾತ್ಮಕ ಬುದ್ಧಿಯಿಂದ ಮುಂದುವರೆಯುವುದು ಸ್ವಧರ್ಮದ ಸಾರ.

ಅಧ್ಯಾಯ—9

ಧರ್ಮ ಮತ್ತು ಪ್ರಜಾಪ್ರಭುತ್ವ

ಈ ಎರಡು ಭಾವನೆಗಳು ಅತ್ಯಂತ ಪ್ರಾಚೀನ ಕಾಲದಿಂದಲೂ ಬಂದಿರುವ ಭಾವನೆಗಳು. ಧರ್ಮ ಎನ್ನುವ ಪದವು ಸುಮಾರು 3000 ವರ್ಷಗಳಿಂದಲೂ ಅಂದರೆ ಉಪನಿಷತ್ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಬಳಕೆಯಲ್ಲಿದೆ. ಹಾಗೆಯೇ ಪ್ರಜಾಪ್ರಭುತ್ವ ಎಂಬುದು 2500 ವರ್ಷಗಳ ಹಿಂದೆ ಗ್ರೀಕ್ ದೇಶದಲ್ಲಿತ್ತು. ಭಾರತ ದೇಶದಲ್ಲಿಯೂ ಅಲೆಗ್ಸಾಂಡರ್ ಧಾಳಿಯೆತ್ತಿದ ಸಮಯದಲ್ಲಿ ಮತ್ತು ಮೌರ್ಯ ಚಕ್ರಾಧಿಪತ್ಯ ಸ್ಥಾಪಿಸುವುದಕ್ಕೆ ಮುನ್ನ ಗಣರಾಜ್ಯಗಳಿದ್ದಿತು. ಬಹಳ ಪ್ರಾಚೀನ ಕಾಲದಿಂದಲೂ ಸಾವಿರಾರು ವರ್ಷಗಳಿಂದಲೂ ಈ ಭಾವನೆಗಳು ಬಳಕೆಯಲ್ಲಿ ಇದ್ದುದರಿಂದ ಈ ಪದಗಳ ಅರ್ಥಗಳು ಅನೇಕ ಬದಲಾವಣೆಗಳನ್ನು ಹೊಂದಿವೆ. ಆದುದರಿಂದಲೇ ಈ ಪದಗಳನ್ನು ಸರಿಯಾಗಿ ನಿರೂಪಿಸಲು ಸಾಧ್ಯವಾಗುವುದಿಲ್ಲ.

ಮೇಲೆ ನೋಡಿರುವ ಹಾಗೆ ಧರ್ಮ ಎನ್ನುವ ಪದವು 'ದೃ' ಎಂಬ ಧಾತುವಿನಿಂದ ಉಂಟಾಗಿ ಒಂದು ಪದಾರ್ಥದ ಅಥವಾ ವ್ಯಕ್ತಿಯ ಅಥವಾ ಸಮೂಹದ ನಾನಾ ಭಾಗಗಳನ್ನು ಒಟ್ಟುಗೂಡಿಸಿ ವ್ಯವಸ್ಥಿತ ರೂಪವನ್ನು ಉಂಟುಮಾಡುವುದು. ಆದರೆ ಬಳಕೆಯಲ್ಲಿ ಈ ಪದವು ಪದಾರ್ಥದ ಲಕ್ಷಣಗಳನ್ನು ಸೂಚಿಸುವುದು. ಮತ್ತೊಂದು ಕಡೆ ಅತ್ಯುತ್ತಮವಾದ ಮಾನವ ನೀತಿ ನಿಯಮಗಳನ್ನು ಮತ್ತು ಆಧ್ಯಾತ್ಮಿಕ ಪ್ರಯತ್ನವನ್ನು ಸೂಚಿಸುವುದು.

ಇದೇ ವಿಧವಾಗಿ ಪ್ರಜಾಪ್ರಭುತ್ವ ಎಂಬ ಪದವೂ ಸಹ ಅನೇಕ ರಾಜಕೀಯ ವ್ಯವಸ್ಥೆಗಳನ್ನು ಸೂಚಿಸುವುದು. ಆದರೂ ಒಟ್ಟಿನಲ್ಲಿ ರಾಜ್ಯದ ಸರ್ಕಾರವು ಪ್ರೌಢಾಭಿಪ್ರಾಯದ ಮತ್ತು ಪ್ರಜೆಗಳ ಬೆಂಬಲದ ಮೇಲೆ ನಿಂತಿರುವುದು ಎಂಬುದನ್ನು ಸೂಚಿಸುವುದು. ಭಾರತ ದೇಶದಲ್ಲಿ ಪ್ರಜಾಪ್ರಭುತ್ವವೆಂದರೆ ವಯಸ್ಕರ ಮತದಾನದ ಆಧಾರದ ಮೇಲೆ ನಡೆಸಿದ ಸಾರ್ವತ್ರಿಕ ಚುನಾವಣೆಯಲ್ಲಿ ಆಯ್ದು ಬಂದ ಪ್ರತಿನಿಧಿಗಳಿಂದ ವ್ಯವಸ್ಥಿತವಾದ ರಾಜ್ಯ ಎಂಬುದಾಗಿದೆ. ಆದರೆ ರಷ್ಯ ಚೀನ ಮುಂತಾದ ದೇಶಗಳಲ್ಲಿಯೂ ಸಹ ಈ ವಿಧವಾದ ಕ್ರಮಗಳನ್ನು ಅನುಸರಿಸದೇ ಹೋದರೂ ಅಲ್ಲಿ ಪ್ರಜಾಪ್ರಭುತ್ವವಿರುವುದರಿಂದ ಅದೂ ಆ ಸರ್ಕಾರಗಳೂ ಸಹ ಪ್ರಜೆಗಳ ಬೆಂಬಲದಿಂದ ಮತ್ತು ಪ್ರಜೆಗಳ ಹಿತಕ್ಕೋಸ್ಕರ ರಚಿಸಲಾಗಿರುವ ಸರ್ಕಾರವೆಂದು ಹೇಳಲಾಗಿದೆ.

ಈ ವಿಧವಾಗಿ ಈ ಎರಡು ಭಾವನೆಗಳಲ್ಲಿಯೂ ನಾನಾ ವಿಧವಾದ ಅರ್ಥಗಳು ಇದ್ದರೂ ಒಟ್ಟಿನಲ್ಲಿ ಹೇಳಬೇಕಾದರೆ ಈ ಎರಡು ಭಾವನೆಗಳು ಮಾನವನ ಉನ್ನತ ಜೀವನಕ್ಕೆ ಸಂಬಂಧಿಸಿದ ಭಾವನೆಗಳು ಎಂದು ಹೇಳಬಹುದು. ಈ ಎರಡು ಭಾವನೆಗಳೂ ಮಾನವ ಕೇವಲ ದೈಹಿಕ ಅವಶ್ಯಕತೆಗಳ ತೃಪ್ತಿಯನ್ನು ಕಲ್ಪಿಸುವ ಕ್ರಿಯೆಗಳ ಆಧಾರದ ಮೇಲೆ ಇರದೆ ಸ್ವಪ್ರಯತ್ನದಿಂದ ಚೇತನಾ ಪೂರಿತವಾದ ಭಾವನೆಗಳ ಆಧಾರದ ಮೇಲೆ ರಚಿಸಲಾಗಿರುವ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳನ್ನು ಒಳಗೊಂಡಿರುವುವು.

ಪ್ರಾಚೀನ ಸಮಾಜಗಳ ಲಕ್ಷಣಗಳು

ಪ್ರಾಚೀನ ಕಾಲದ ಸಮಾಜಗಳು ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಜನಾಂಗಗಳಲ್ಲಿಯೂ ಕೆಲವು ಲಕ್ಷಣಗಳನ್ನು ವ್ಯಕ್ತಪಡಿಸುವುವು. ಮುಖ್ಯವಾಗಿ ಈ ಸಮಾಜಗಳು ಹಿಂದಿನ ಕಾಲದಲ್ಲಿ ಮಾನವ ಮತ್ತು ಸಾಮಾಜಿಕ ಸ್ಥಿತಿಗತಿಗಳು ಆದರ್ಶ ಪೂರ್ವಕವಾಗಿ ಇದ್ದುವೆಂಬ ನಂಬಿಕೆಯನ್ನು ಒಳಗೊಂಡಿರುವುವು. ಆದುದರಿಂದ ಭವಿಷ್ಯ ಕಾಲದಲ್ಲಿ ಈಗಿನ ಪ್ರಯತ್ನಗಳ ಆಧಾರದ ಮೇಲೆ ಒಂದು ಆದರ್ಶವಾದ ಸಮಾಜವನ್ನು ಮಾನವನು ರಚಿಸಬಹುದು ಎಂಬ ಆದರ್ಶವನ್ನಾಗಲೀ ಪ್ರೇರಣೆಯನ್ನಾಗಲೀ ಹಾರೈಕೆಯನ್ನಾಗಲೀ ಹೊಂದಿರಲಿಲ್ಲ. ಆದುದರಿಂದ ಭವಿಷ್ಯವು ತಮ್ಮ ಕೈಯಲ್ಲಿ ಇರುವುದೆಂಬ ಭರವಸೆಯನ್ನು ಹೊಂದಿರಲಿಲ್ಲ ಪಾಶ್ಚಾತ್ಯ ದೇಶಗಳಲ್ಲಿಯೂ ಪೌರಾತ್ಯ ದೇಶಗಳಲ್ಲಿಯೂ ಸಾವಿರಾರು ವರ್ಷಗಳು ಜನರು ಹೊಸ ಸಮಾಜದ ನಿರ್ಮಾಣದ ಕಡೆಗೆ ಪ್ರಯತ್ನ ಪೂರ್ವಕ ಸಾಧನೆಯನ್ನು ಮಾಡಲಿಲ್ಲ. ಅನಾದಿಕಾಲದಿಂದಲೂ ಬಂದಿರುವ ಸಾಮಾಜಿಕ ಪರಿಸ್ಥಿತಿಯನ್ನು ಪ್ರಶ್ನಿಸದೆ ಒಪ್ಪಿಕೊಂಡು ತಮ್ಮ ಬಾಳನ್ನು ಮುಂದುವರೆಸುತ್ತಿದ್ದರು. ಸಾಮಾಜಿಕ ಪೌರತ್ವದ ಮುನ್ನಡೆಗೆ ಪ್ರಯತ್ನ ಮಾಡದೆ ಇರುವ ಪ್ರಶ್ನೆಗಳನ್ನು ಒಪ್ಪಿಕೊಳ್ಳುತ್ತಿದ್ದರು. ಆದುದರಿಂದಲೇ ಈ ಪ್ರಾಚೀನ ಸಮಾಜಗಳಲ್ಲಿ ಸ್ಥಿರವಿನ್ಯಾಸಗಳು ಒಬ್ಬ ವ್ಯಕ್ತಿಯ ಹುಟ್ಟಿನ ಆಧಾರದ ಮೇಲೆ ಇತ್ತೆ ಹೊರತು ಆ ವ್ಯಕ್ತಿಯ ಸ್ವಪ್ರಯತ್ನದಿಂದ ಉಂಟಾದ ಪರಿಣಾಮಗಳ ಆಧಾರದ ಮೇಲೆ ಇರಲಿಲ್ಲ. ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಮತ್ತು ಈಗಲೂ ಸಹ ಜಾತಿ ಧರ್ಮವೇ ಸಾಮಾಜಿಕ ವ್ಯವಸ್ಥೆಗೆ ಆಧಾರವಾಗಿದೆ. ಹೀಗೆಯೇ ಪಾಶ್ಚಾತ್ಯ ದೇಶಗಳಲ್ಲಿ ವರ್ಗ ವ್ಯವಸ್ಥೆಯೂ ಸಹ ಒಬ್ಬ ವ್ಯಕ್ತಿಯ ಹುಟ್ಟನ್ನು ಅನುಸರಿಸುತ್ತಿತ್ತು. ಒಬ್ಬ ವ್ಯಕ್ತಿಯ ಸಮಾಜದ ಸ್ಥಾನವೂ ಅವನ ಹುಟ್ಟಿನಿಂದ ಉಂಟಾಗುತ್ತಿದ್ದುದರಿಂದ ಆ ಸ್ಥಾನವನ್ನು ಉನ್ನತಗೊಳಿಸಿಕೊಳ್ಳಲು ವ್ಯಕ್ತಿಗೆ ಯಾವ ರೀತಿಯ

ಆಕಾಂಕ್ಷೆಯೂ ಇರಲಿಲ್ಲ. ಈ ಕಾರಣದಿಂದ ಪಶ್ಚಿಮ ದೇಶಗಳಲ್ಲಿ ಪೌರಾತ್ಯ ದೇಶಗಳಲ್ಲಿಯೂ ಸಹ ಸಾಮಾಜಿಕ ಸಂಚರಣೆ (Social Mobility) ಇರಲಿಲ್ಲ. ಎರಡು ಸಮಾಜಗಳಲ್ಲಿಯೂ ತಾನು ಯಾವ ಸಾಮಾಜಿಕ ಸ್ಥಾನ ಇರುವ ಕುಲದಲ್ಲಿ ಹುಟ್ಟಿದನೋ ಅದೇ ಸ್ಥಾನದಲ್ಲಿ ಸಾಯಬೇಕಾಗಿತ್ತು. ಸ್ವಪ್ರಯತ್ನದಿಂದ ತನ್ನ ಸಾಮಾಜಿಕ ಸ್ಥಾನವನ್ನು ಉತ್ತಮಗೊಳಿಸುವುದು ಅಸಾಧ್ಯವಾಗಿತ್ತು. ಈ ವಿಧವಾಗಿ ಸಾಮಾಜಿಕ ಸಂಚರಣೆಯ ಅಭಾವಕ್ಕೆ ಕಾರಣವು ಎಲ್ಲ ಕ್ಷೇತ್ರಗಳಲ್ಲಿಯೂ ಅಧಿಕಾರದ ಪ್ರಭಾವದಿಂದ ಉಂಟಾದ ಸ್ಥಾನ ಮಾನಗಳನ್ನು ನಿರ್ವಿವಾದವಾಗಿ ಒಪ್ಪಿಕೊಂಡಿದುದೇ ಆಗಿತ್ತು. ಭಾರತೀಯ ಸಮಾಜದಲ್ಲಿ ದ್ವಿಜ, ಎಕಜ ಎಂಬ ಎರಡು ಪ್ರತ್ಯೇಕ ವಿಭಾಗಗಳಿಂದ ಕೂಡಿರುವುದಾಗಿತ್ತು. ಆದುದರಿಂದ ಜನಸಾಮಾನ್ಯರು ಅನಕ್ಷರಸ್ತರಾಗಿ, ಪ್ರಯತ್ನ ಪೂರ್ವಕ ಜೀವನ ಕ್ರಮವನ್ನು ಅನುಸರಿಸದೆ ಸಂಪ್ರದಾಯದಿಂದ ತಮಗೆ ಲಭಿಸಿದ ಸ್ಥಾನದಲ್ಲಿಯೇ ಹುಟ್ಟಿ ಸಾಯುತ್ತಿದ್ದರು. ಈ ಗುಂಪುಗಳ ವ್ಯಕ್ತಿಗಳು ಅಸ್ಪೃಶ್ಯ ಶೂದ್ರರೇ ಆಗಲಿ ತಮ್ಮ ಅಪೂರ್ವ ಪ್ರಯತ್ನದಿಂದ ಮುಂದಕ್ಕೆ ಬಂದರೆ ಅದು ಪೂರ್ವ ಜನ್ಮ ಸಂಕೃತದಿಂದ ಉಂಟಾಯಿಂತೆಂದು ನಂಬುತ್ತಿದ್ದರು. ಆದುದರಿಂದ ಈ ಗುಂಪುಗಳಲ್ಲಿ ಸ್ವಪ್ರಯತ್ನ ಮತ್ತು ಆತ್ಮ ವಿಶ್ವಾಸ ಅತ್ಯಂತ ವಿರಳವಾಗಿತ್ತು ಇದೇ ವಿಧವಾಗಿ ಪಾಶ್ಚಾತ್ಯ ಸಮಾಜಗಳಲ್ಲಿಯೂ ಸಹ ಸ್ವಾಮಿಭೃತ್ಯದ ಸಂಬಂಧವನ್ನು ಒಪ್ಪಿದುದರಿಂದ ಕೀಳು ಸ್ಥಾನದಲ್ಲಿ ಹುಟ್ಟಿದ ಜನರು ತಮ್ಮ ಏಳಿಗೆಗೆ ಪ್ರಯತ್ನ ಮಾಡುವುದು ಅತಿ ವಿರಳವಾಗಿತ್ತು.

ಮಾನವ ಸಮಾಜದಲ್ಲಿ ಎರಡು ಮಹಾಕ್ರಾಂತಿಗಳು

ಪಾಶ್ಚಾತ್ಯ ದೇಶಗಳಲ್ಲಿ ಎರಡು ಈಚಿನ ಕ್ರಾಂತಿಗಳ ಮೂಲಕ ಪ್ರಾಚೀನ ಸಮಾಜಿಕ ವ್ಯವಸ್ಥೆಯು ಮಹತ್ತರವಾದ ಬದಲಾವಣೆಗಳನ್ನು ಹೊಂದಿ ನೂತನ ಸಾಮಾಜಿಕ ವ್ಯವಸ್ಥೆಯನ್ನು ಉಂಟು ಮಾಡಿದವು. ಈ ಕ್ರಾಂತಿಗಳಲ್ಲಿ ಮೊದಲನೆಯದು ಭಾವನಾತ್ಮಕ ಕ್ರಾಂತಿ. ಇದು ಸಾಮಾಜಿಕ ಮತ್ತು ರಾಜಕೀಯ ಪರಿವರ್ತನೆಯುನ್ನು 18 ನೆಯ ಶತಮಾನದಲ್ಲಿ ಉಂಟುಮಾಡಿತು. ಆಂಗ್ಲ ದೇಶದಲ್ಲಿಯೂ ಫ್ರಾನ್ಸ್ ದೇಶದಲ್ಲಿಯೂ ಅಮೇರಿಕಾ ದೇಶದಲ್ಲಿಯೂ ವ್ಯಕ್ತಿ ಸ್ವಾತಂತ್ರ ಮತ್ತು ಸಮಾನತ್ವ ಭಾವನೆಗಳು ಬಲಗೊಂಡು ಹಳೆಯ ಕಾಲದ ಸಾಮಾಜಿಕ ಸಂಪ್ರದಾಯಗಳನ್ನು ನಿರ್ಮೂಲ ಮಾಡಿತು ರಾಜ ಪದವಿಯು ದೈವಿಕ ಸೃಷ್ಟಿ ಎಂಬ ಸಿದ್ಧಾಂತವನ್ನು ತ್ಯಜಿಸಿ ಪ್ರಜಾ ಪ್ರಭುತ್ವದ ಸ್ಥಾಪನೆಯು ಉಂಟಾಯಿತು. ಈ ಭಾವನಾತ್ಮಕ ಪರಿವರ್ತನೆಯಿಂದ 1776 ರಲ್ಲಿ ಅಮೇರಿಕಾ ದೇಶದಲ್ಲಿ ಬಿಳಿಯು ದ್ಧ ಉಂಟಾಗಿ ಬ್ರಿಟಿಷ್ ಸಾಮ್ರಾಜ್ಯವನ್ನು ತ್ಯಜಿಸಲಾಯಿತು.

1789 ರಲ್ಲಿ ಫ್ರಾನ್ಸ್ ದೇಶದಲ್ಲಿ ಮಹಾಕ್ರಾಂತಿಯುಂಟಾಗಿ ಫ್ರಾನ್ಸ್ ಚಕ್ರವರ್ತಿಯನ್ನು ಗಲ್ಲಿಗೇರಿಸಿದರು. ಈ ಕ್ರಾಂತಿಯುತ ಘಟನೆಗಳು ಪ್ರಜಾ ಸ್ವಾತಂತ್ರ್ಯವನ್ನು ಪ್ರಜಾ ಪ್ರಭುತ್ವವನ್ನು ಆದೇಶಗಳಲ್ಲಿ ಸ್ಥಾಪಿಸಿದನು.

ಮಾನವ ಚರಿತ್ರೆಯಲ್ಲಿ ಮತ್ತೊಂದು ಮಹಾಕ್ರಾಂತಿಯು ಆರ್ಥಿಕ ಕ್ಷೇತ್ರ ದಲ್ಲಿ ಮುಖ್ಯವಾಗಿ 19 ನೇ ಶತಮಾನದಲ್ಲಿ ಉಂಟಾಯಿತು. ಅದುವರೆಗೂ ಕೈಗಾ ರಿಕೆಗಳು ಗೃಹ ಕೈಗಾರಿಕೆಗಳಾಗಿದ್ದವು. ಆದುದರಿಂದ ಕೈಗಾರಿಕೆಗಳ ತರ ಪೇತು ಮನೆಯಲ್ಲಿಯೇ ತಂದೆಗಳ ಮೂಲಕ ನಡೆಯುತ್ತಿತ್ತು. ದೈಹಿಕ ಶಕ್ತಿ ಯಿಂದ ಕೈಗಾರಿಕೋದ್ಯಮಗಳು ನಡೆಯುತ್ತಿದ್ದವು. ಆದರೆ 19 ನೆಯ ಶತಮಾನದ ಆರಂಭದಲ್ಲಿಯೇ ಈ ಕ್ಷೇತ್ರದಲ್ಲಿ ಮಹಾಕ್ರಾಂತಿಯುಂಟಾಗಿ ಯಂತ್ರಗಳ ಮೂಲಕ ಮತ್ತು ಪ್ರಕೃತಿಯಿಂದ ಉತ್ಪನ್ನವಾದ ಶಕ್ತಿಯ ಮೂಲಕ ಕೈಗಾರಿಕೋದ್ಯಮ ಗಳು ಪರಿವರ್ತನೆಗೊಂಡವು. ಸ್ವಲ್ಪ ಶ್ರಮದಿಂದ ಅಧಿಕ ಉತ್ಪನ್ನವು ಸಾಧ್ಯ ವಾಯಿತು. ಈ ಕಾರಣದಿಂದ ಜನ ಸಾಮಾನ್ಯರ ಬಡತನವೂ ನಿರ್ಮೂಲವಾಗಿ ಅವರ ಬಾಳಿನ ಮಟ್ಟವು ಉತ್ತಮಗೊಂಡಿತು.

ಈ ವಿಧವಾಗಿ 18 ನೆಯ ಶತಮಾನದ ರಾಜಕೀಯ ಮತ್ತು 19 ನೇ ಶತಮಾನದ ಆರ್ಥಿಕ ಕ್ರಾಂತಿಗಳು ಜನಸಾಮಾನ್ಯರ ಸಾಮಾಜಿಕ ಸ್ಥಾನಮಾನ ಗಳನ್ನು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿತು. ಆದರೆ ಇವು ನಿಜವಾಗಿಯೂ ರೂಪುಗೊಳ್ಳಬೇಕಾದರೆ ನೂರು ನೂರೈವತ್ತು ವರ್ಷಗಳು ಆಗಬೇಕಾಗಿತ್ತು. 19 ನೆಯ ಶತಮಾನದ ಅಂತಿಮದಲ್ಲಿಯೂ 20 ನೇ ಶತಮಾನದ ಆದಿಯಲ್ಲಿಯೂ ಪಾಶ್ಚಾತ್ಯ ದೇಶಗಳ ಸಾಮಾನ್ಯ ಜನರ ಜೀವನ ಮಟ್ಟವು ಉತ್ತಮಗೊಂಡಿತು.

ಈ ಕ್ರಾಂತಿಗಳ ಪ್ರಭಾವವು ಭಾರತ ದೇಶದಲ್ಲಿ 19 ನೇ ಶತಮಾನದಲ್ಲಿ ಕಾಣಿಸಿಕೊಂಡವು. ಪ್ರತಿಯೊಬ್ಬ ಮಾನವನಿಗೂ ಹಕ್ಕುಗಳು ಇವೆ ಎಂಬುದನ್ನು ಬಂಗಾಳ ಪ್ರಾಂತ್ಯದ ರಾಂಮೋಹನರಾಯ್ ಮನಗೊಂಡು 19 ನೆಯ ಶತ ಮಾನದ ಆದಿಭಾಗದಲ್ಲಿ ಸ್ಥಾಪಿಸಿ ಜನ ಸಾಮಾನ್ಯರಿಗೆ ವಿದ್ಯಾಭ್ಯಾಸವು ಉಪ ನಿಷತ್ತುಗಳ ಬೋಧನೆಯು ಉಂಟಾಗಲು ಅವಕಾಶಗಳನ್ನು ಕಲ್ಪಿಸಿಕೊಟ್ಟರು. ಹತ್ತೊಂಭತ್ತನೆ ಶತಮಾನದ ಉತ್ತರ ಭಾಗದಲ್ಲಿ ಬೊಂಬಾಯಿ ಪ್ರಾಂತ್ಯದ ಜೆಮ್ ಸೇಟಜಿತಾತಾರವರು ಆರ್ಥಿಕ ಕ್ಷೇತ್ರ ಹತ್ತಿಗಿರಣಿ ವಿದ್ಯುಚ್ಛಕ್ತಿಯ ಉತ್ಪಾದನೆ ಯನ್ನು ಉಕ್ಕು ತಯಾರಿಕೆ ಕಾರ್ಖಾನೆಯನ್ನು ಸ್ಥಾಪಿಸಿದರು. ಆದರೂ ಈ ಇಬ್ಬರು ವ್ಯಕ್ತಿಗಳು ಕೈಗೊಂಡ ಕಾರ್ಯಕ್ರಮಗಳು ದೇಶದ ಅಭಿಪ್ರಾಯಗಳಲ್ಲಾ ಗಲೀ ಆರ್ಥಿಕ ಸ್ಥಿತಿಯಲ್ಲಾಗಲೀ ಅಷ್ಟೊಂದು ಮಾರ್ಪಾಡನ್ನು ಉಂಟುಮಾಡ ಲಿಲ್ಲ. ನಿಜವಾಗಿಯೂ ಕ್ರಾಂತಿಯುತ ಚಳುವಳಿಗಳು ಮಹಾತ್ಮ ಗಾಂಧಿಯವರ

ನೇತೃತ್ವದಲ್ಲಿ 20 ನೆಯ ಶತಮಾನದ ಮಧ್ಯ ದಶಕಗಳಲ್ಲಿ ಸ್ವಾತಂತ್ರ್ಯ ಹೋರಾಟದ ಮೂಲಕ ರೂಪುಗೊಂಡಿತೆಂದು ಹೇಳಬಹುದು. ಸ್ವಾತಂತ್ರ್ಯದ ನಂತರ ನೆಹರೂರವರ ನೇತೃತ್ವದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಯಾಯಿತು. ಆದರೆ ಹತ್ತೊಂಭತ್ತನೆಯ ಶತಮಾನದಲ್ಲಿ ಆರಂಭವಾದ ಸಾಮಾಜಿಕ ಮತ್ತು ಆರ್ಥಿಕ ಚಳುವಳಿಗಳು ಯಾವ ವಿಧವಾಗಿ ಪ್ರಭಾವ ಪೂರಿತವಾಗಲಿಲ್ಲವೋ ಹಾಗೆಯೇ ಗಾಂಧೀಜಿ ಮತ್ತು ನೆಹರೂರವರ ನೇತೃತ್ವದಲ್ಲಿ ಆರಂಭವಾದ ಚಳುವಳಿಗಳೂ ಸಹ ಪರಿಣಾಮಕಾರಿಯಾಗಲಿಲ್ಲ, ಎಂದು ದೃಢವಾಗಿ ಹೇಳಬಹುದು. ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರೂ ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆದರೂ ಆರ್ಥಿಕ ಕ್ಷೇತ್ರದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದರೂ ಜನ ಸಾಮಾನ್ಯರ ಜೀವನದ ಮಟ್ಟದಲ್ಲಿ ವಿದ್ಯಾಭ್ಯಾಸದಲ್ಲಿ ಬದಲಾವಣೆ ಆಗಲಿಲ್ಲ. ಇತರ ಸಂಸ್ಕಾರಗಳ ಹಾಗೆ ಮತದಾನವೂ ಒಂದು ಕರ್ಮ ಪದ್ಧತಿಯಾಗಿ ನಿಂತಿದೆಯೇ ಹೊರತು ಜನ ಜೀವನದಲ್ಲಿ ಉತ್ತಮವಾದ ಬದಲಾವಣೆ ಮಾಡಿಲ್ಲ. ಚುನಾವಣೆಯ ಮೂಲಕ ಜಾತಿ ಮನೋಭಾವವು ದೃಢವಾಗಿ ವೈಷಮ್ಯವು ನಿರಾಸೆ ಹೆಚ್ಚಾಯಿತೇ ಹೊರತು ಮತದಾನ ಜನಸಾಮಾನ್ಯರಲ್ಲಿ ಉನ್ನತ ಆದರ್ಶಗಳನ್ನು ತರಲಿಲ್ಲ.

ದೇಶದ ಈ ಪರಿಸ್ಥಿತಿಯನ್ನು ಕುರಿತು ಯೋಚಿಸಿದರೆ ಯಾರಿಗಾದರೂ ಇಂತಹ ಸನ್ನಿವೇಶಕ್ಕೆ ಕಾರಣವೇನು ಎಂಬ ಕುತೂಹಲವು ಉಂಟಾಗುವುದು ಸಹಜ. ಸುಮಾರು 150 ವರ್ಷಗಳ ಹಿಂದೆ ಆರಂಭವಾದ ಪುನರುಜ್ಜೀವನವು ಯಾವ ಕಾರಣಗಳಿಂದ ಸಮಾಜದಲ್ಲಿ ಮಹತ್ತರವಾದ ಮಾರ್ಪಾಟನ್ನು ಮಾಡಿ ಹಾಗೆಯೇ ಸುಮಾರು 100 ವರ್ಷಗಳಿಂದ ಆಗುತ್ತಿರುವ ಆರ್ಥಿಕ ಬದಲಾವಣೆಯು ಯಾವ ಕಾರಣಗಳಿಂದ ಫಲಕಾರಿಯಾಗಲಿಲ್ಲ? ಸುಮಾರು 50 ವರ್ಷಗಳಿಂದ ಸಮಾಜಿಕ ಚಳುವಳಿಗಳು ಯಾವ ಕಾರಣಗಳಿಂದ ಜನರ ವರ್ತನೆಯನ್ನು ಉತ್ತಮಗೊಳಿಸಲಿಲ್ಲ. ಇವೇ ಮೊದಲಾದ ಸಮಸ್ಯೆಗಳು ತಲೆದೋರಿದವು.

ಸಾಮಾಜಿಕ ಕ್ಷೇತ್ರದಲ್ಲಿ ಒಂದು ಪರಿಸ್ಥಿತಿಗೆ ಒಂದು ನಿರ್ದಿಷ್ಟವಾದ ಕಾರಣವನ್ನು ಕಂಡುಹಿಡಿಯುವುದು ಕಷ್ಟ ಮತ್ತು ಅಸಾಧ್ಯ. ಭೌತಿಕ ಮತ್ತು ರಸಾಯನ ಶಾಸ್ತ್ರಗಳಲ್ಲಿ ಒಂದು ಬದಲಾವಣೆಗೆ ನಿರ್ದಿಷ್ಟವಾದ ಕಾರಣಗಳನ್ನು ಸೂಚಿಸುವ ಹಾಗೆ ಸಾಮಾಜಿಕ ಕ್ಷೇತ್ರದಲ್ಲಿ ಸೂಚಿಸಲಾಗುವುದಿಲ್ಲ. ಇದಕ್ಕೆ ಕಾರಣ ಸಾಮಾಜಿಕ ಸಮಸ್ಯೆಗಳು ಬಹಳ ಜಟಿಲವಾದವು, ಮತ್ತು ಸಾಮಾಜಿಕ ಪರಿಣಾಮಗಳು ಅನೇಕ ಕಾರಣಗಳ ವ್ಯಾಪ್ತಿಗೆ ಒಳಗೊಂಡಿರುವುವು. ಆದರೂ ಈ ವಿಷಮ ಪರೀಕ್ಷೆಗೆ ಕಾರಣ ಕೆಲ ಅಂಶಗಳನ್ನು ಪ್ರತ್ಯೇಕಿಸಲು ಪ್ರಯತ್ನ ಮಾಡಬೇಕಾಗಿದೆ. ಯಾವ ಕಾರಣಗಳಿಂದ ಭಾರತ ದೇಶದಲ್ಲಿ ಸ್ವಾತಂತ್ರ್ಯ

ಸಮಾನತ್ವ, ಸಾಮಾಜಿಕ ನ್ಯಾಯ ಮುಂತಾದ ಆದರ್ಶಗಳು ಸಂವಿಧಾನದಲ್ಲಿ ಒಪ್ಪಿಕೊಂಡರೂ ಜನ ಜೀವನದಲ್ಲಿ ಪ್ರಭಾವಕಾರಿಯಾಗಲಿಲ್ಲ ಎಂಬುದನ್ನು ಕುರಿತು ಯೋಚಿಸಬೇಕಾದುದು ಅಗತ್ಯ.

ಮೇಲೆ ನೋಡಿದ ಹಾಗೆ ಧರ್ಮ ಮತ್ತು ಪ್ರಜಾಪ್ರಭುತ್ವ ಎಂಬ ಎರಡು ತತ್ವಗಳ ಗುರಿಯು ಮಾನವ ಜೀವನವನ್ನು ದೈಹಿಕ ಮತ್ತು ಕೇವಲ ಪಶು ಜೀವನದ ಮಟ್ಟದಿಂದ ಉನ್ನತ ಮಟ್ಟಕ್ಕೆ ಏರಿಸುವುದೇ ಆಗಿದೆ. ಯಾವ ಸಮಾಜದಲ್ಲಿ ಧರ್ಮ ಮತ್ತು ಪ್ರಜಾ ಪ್ರಭುತ್ವ ರೂಪುಗೊಳ್ಳುವುದೋ ಆ ಸಮಾಜದಲ್ಲಿ ಜನಜೀವನ ಮಟ್ಟವು ಉತ್ಕೃಷ್ಟದಲ್ಲಿ ನಡೆಯಬೇಕು.

ಪ್ರಜಾ ಪ್ರಭುತ್ವದ ಮುಖ್ಯ ಲಕ್ಷಣಗಳು

ಈ ವಿಷಯವನ್ನು ಕುರಿತು ಪರ್ಯಾಲೋಚಿಸುವುದಕ್ಕೆ ಮುನ್ನ ಪ್ರಜಾ ಪ್ರಭುತ್ವದ ಮುಖ್ಯ ಲಕ್ಷಣಗಳನ್ನು ಯೋಚಿಸುವುದು ಅಗತ್ಯ.

ಪ್ರಜಾ ಪ್ರಭುತ್ವದ ಅಡಿಗಲ್ಲು ಸಮತಾಭಾವವು ಎಲ್ಲ ಪ್ರಜೆಗಳಲ್ಲಿಯೂ ಸಮತಾಭಾವವು ಉಂಟಾದರೆ ಆಗ ಪ್ರಜಾ ಪ್ರಭುತ್ವದ ತತ್ವವೂ ವಾಸ್ತವವಾಗುವುದು. ಈ ಕಾರಣದಿಂದಲೇ ಎಲ್ಲಾ ವಯಸ್ಕರಿಗೂ ಯಾವ ಭೇದವೂ ಇಲ್ಲದಂತೆ ಮತದಾನದ ಹಕ್ಕನ್ನು ಭಾರತೀಯ ಸಂವಿಧಾನವು ನೀಡಿದೆ. ಆದರೆ ಕೇವಲ ರಾಜಕೀಯ ಸಮತಾಭಾವವು ಈ ಮೂವತ್ತು ವರ್ಷಗಳ ಅನುಭವವು ಸೂಚಿಸುವ ಹಾಗೆ ಪ್ರಭಾವಶಾಲಿಯಲ್ಲ. ಮತದಾನದ ಹಕ್ಕಿನ ಪ್ರಭಾವವು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ರೂಪುಗೊಂಡಿಲ್ಲ.

ಸಮತಾಭಾವವೆಂದರೇನು? ದೈಹಿಕ ಗುಣಗಳಲ್ಲಿಯೂ ಮಾನಸಿಕ ಕ್ಷೇತ್ರದಲ್ಲಿಯೂ ಅತ್ಯಂತ ವ್ಯಕ್ತಿ ವ್ಯತ್ಯಾಸಗಳಿರುವುದು ಸಹಜ. ಈ ವ್ಯತ್ಯಾಸಗಳನ್ನು ಸಮತಾ ಭಾವವು ನಿರ್ಮೂಲ ಮಾಡುವುದಿಲ್ಲ. ಇದೇ ವಿಧವಾಗಿ ಮಕ್ಕಳ ಪೋಷಣೆಯ ಕ್ರಮಗಳಲ್ಲಿಯೂ ಸಹ ಬೇರೆ ಜಾತಿಗಳಲ್ಲಿ ಬೇರೆ ಬೇರೆ ವರ್ಗಗಳಲ್ಲಿ ಬೇರೆ ಬೇರೆ ರೂಪಗಳನ್ನು ತಾಳುವುವು. ಆದುದರಿಂದ ಸಹಜ ಗುಣಗಳಲ್ಲಿಯೂ ಪೋಷಣೆಯಲ್ಲಿಯೂ ವ್ಯತ್ಯಾಸಗಳು ಇದ್ದೇ ಇರುವುವು. ಹಾಗಾದರೆ ಪ್ರಜಾ ಪ್ರಭುತ್ವದ ಸಮತಾ ಭಾವನೆಯ ಲಕ್ಷಣವೇನು ಎಂಬ ಸಂಶಯವು ತಲೆದೋರುವುದು. ಸಮತಾಭಾವವೆಂದರೆ ಪ್ರತಿಯೊಬ್ಬ ಮಾನವನನ್ನು ಸಮಭಾವದಿಂದ ಕಾಣುವುದು. ಇದು ಮುಖ್ಯತತ್ವ. ಅನೇಕ ವ್ಯತ್ಯಾಸಗಳಿದ್ದರೂ ಈ ವ್ಯತ್ಯಾಸಗಳು ಮಾನವ ತತ್ವವನ್ನು ಮಿತಗೊಳಿಸುವುದಿಲ್ಲ. ಪ್ರಾಚೀನ ಭಾರತೀಯ ಋಷಿಗಳು ವೇದಕಾಲದಲ್ಲಿ ಸಾರಿದ ಹಾಗೆ ಪ್ರತಿಯೊಬ್ಬ ಮಾನವನೂ ಬ್ರಹ್ಮಸ್ವರೂಪ

ಪ್ರತಿಯೊಬ್ಬ ಮಾನವನಲ್ಲಿಯೂ ಒಂದೇ ಆತ್ಮ ರೂಪ ತಾಳುವುದು. ಸಮತಾ ಭಾವದ ಮತ್ತೊಂದು ಅಂಶವೆಂದರೆ ಪ್ರತಿಯೊಬ್ಬ ಪ್ರಜೆಗೂ ಸಮಾನ ಅವಕಾಶ ಗಳನ್ನು ಕಲ್ಪಿಸಿ ಕೊಡುವುದು. ಸಂವಿಧಾನದಲ್ಲಿ ಈ ಸಮಾನ ಅವಕಾಶಗಳನ್ನು ಮೂಲಭೂತ ಹಕ್ಕನ್ನಾಗಿ ನಿರೂಪಿಸಲಾಗಿದೆ. ಆದರೆ ಈ ಕಾಲ ಶತಮಾನದ ಅನುಭವವು ಈ ಆದರ್ಶವನ್ನು ವಾಸ್ತವವನ್ನಾಗಿ ಮಾಡಿಲ್ಲ. ಕೇವಲ ಸಂವಿ ಧಾನದ ಮತ್ತು ಕಾನೂನಿನಲ್ಲಿ ಈ ಸಮಾನತ್ವವು ಉಳಿದಿದೆಯೇ ಹೊರತು ಜನ ಜೀವನದ ಲಕ್ಷಣವಾಗಿ ರೂಪ ತಾಳಲಿಲ್ಲ. ಸಮತಾಭಾವದ ಇನ್ನೊಂದು ಅಂಶ ವೆಂದರೆ ಪ್ರತಿಯೊಬ್ಬ ವ್ಯಕ್ತಿಗೂ ವ್ಯಕ್ತಿತ್ವದ ಹಕ್ಕು ಇರುವುದು. ತಾನು ಇತರ ರಂತೆ ಇರಬೇಕಾದ ಅವಶ್ಯಕತೆ ಇಲ್ಲ. ಸ್ವಭಾವ ಸಿದ್ಧವಾದಿ ತನ್ನ ಗುಣಗಳನ್ನು ಬೆಳಸಿಕೊಂಡು ತನ್ನ ವ್ಯಕ್ತಿತ್ವಕ್ಕೆ ರೂಪು ಕೊಡುವುದು. ಪ್ರತಿಯೊಬ್ಬ ಮಾನ ವನ ಜನ್ಮಹಕ್ಕು.

ಮುಖ್ಯವಾಗಿ ಸಮತಾ ಭಾವದ ತಿರಳು ಸಮಾಜದ ರಚನೆಯಲ್ಲಿ ವ್ಯಕ್ತ ವಾಗಬೇಕು. ಸಮತಾಭಾವವು ಒಂದು ಸಮಾಜದಲ್ಲಿ ವಾಸ್ತವಿಕವಾದರೆ ಆಗ ಒಬ್ಬ ವ್ಯಕ್ತಿಯು ತನ್ನ ಸ್ವಭಾವ ಸಾಮರ್ಥ್ಯಗಳಿಗೆ ಅನುಪಾತವಾದ ಸ್ಥಾನವನ್ನು ಪಡೆ ಯಲು ಸಾಧ್ಯ. ಅಂತಹ ಸಮಾಜವು ವಿವೃತ ಸಮಾಜವು (open society) ಆಧುನಿಕ ವರ್ಗೀಕೃತ ಸಮಾಜವು ಇಂತಹ ವಿವೃತ ಸಮಾಜವು, ಆದರೆ ಒಬ್ಬ ವ್ಯಕ್ತಿಯ ಸ್ಥಾನಮಾನಗಳು ಅವನ ಹುಟ್ಟಿನಿಂದಲೇ ನಿರ್ಣಯಿಸಲ್ಪಟ್ಟರೆ ಆಗ ಒಬ್ಬ ವ್ಯಕ್ತಿಯ ಪ್ರಗತಿಗೆ ಇಂತಹ ಸಂವೃತ ಸಮಾಜದಲ್ಲಿ ಅವಕಾಶವೇ ಇಲ್ಲ. ಜಲಗಾರನಾಗಿ ಹುಟ್ಟಿದವನು ಜಲಗಾರನಾಗಿಯೇ ಸಾಯಬೇಕು. ಸರ್ಕಾರಿ ಕಛೇರಿ ಗಳಲ್ಲಿ ಅನಕ್ಷರಸ್ಥನು ಜವಾನನಾಗಿ ಕೆಲಸಕ್ಕೆ ಸೇರಿಕೊಂಡರೆ ಅವನು ಜವಾನನ ಕೆಲಸದಲ್ಲಿಯೇ ನಿವೃತ್ತನಾಗಬೇಕು. ಆದುದರಿಂದ ಹುಟ್ಟಿನಿಂದ ನಿರ್ಧರಿಸಲ್ಪಟ್ಟ ಸಾಮಾಜಿಕ ಸ್ಥಾನಮಾನಗಳನ್ನೊಳಗೊಂಡ ಸಮಾಜವು ವ್ಯಕ್ತಿಯ ವಿಕಾಸಕ್ಕೆ ಅವಕಾಶವನ್ನು ಕೊಡುವುದಿಲ್ಲ. ಆದುದರಿಂದಲೇ ಆಧುನಿಕ ಸಮಾಜಗಳು ವ್ಯಕ್ತಿಯ ವಿಕಾಸಕ್ಕೆ ಪೂರ್ಣವಾದ ಅವಕಾಶವನ್ನು ಏರ್ಪಡಿಸುವುದಕ್ಕೋಸ್ಕರ ಸಮಾನತ್ವ ವನ್ನು ಸಮಾನ ಅವಕಾಶಗಳನ್ನು ವ್ಯಕ್ತಿತ್ವದ ಹಕ್ಕನ್ನು ಆಜನ್ಮಹಕ್ಕುಗಳಾಗಿ ಸಂವಿಧಾನದಲ್ಲಿಯೇ ನಿರೂಪಿಸಿರುವುದು. ಆದುದರಿಂದ ವಿವೃತ ಸಮಾಜವು ಪ್ರಜಾ ಪ್ರಭುತ್ವದ ಮುಖ್ಯ ಲಕ್ಷಣ. ಇಂತಹ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಶಕ್ತಿ, ಸಾಮರ್ಥ್ಯಗಳ ಮತ್ತು ಪ್ರಯತ್ನಗಳ ಆಧಾರದ ಮೇಲೆ ತನ್ನ ಸ್ಥಾನವನ್ನು ಪಡೆಯಬಲ್ಲನು.

ಪ್ರಜಾಪ್ರಭುತ್ವದ ಮತ್ತೊಂದು ಮುಖ್ಯ ಲಕ್ಷಣವೆಂದರೆ ವಿಧಿಶಾಸನ ಅಥವಾ ಶಾಸನಾಧಿಕಾರ (Rule of law) ಪ್ರಜಾಪ್ರಭುತ್ವದಲ್ಲಿ ಅಧಿಕಾರವು

ಶಾಸನೆ ಬದ್ಧವಾದುದು ಅದು ಕೇವಲ ವ್ಯಕ್ತಿಯ ಆಧಾರದ ಮೇಲೆ ಪ್ರಜಾಪ್ರಭುತ್ವದಲ್ಲಿ ಯಾವ ಅಧಿಕಾರಿಯೇ ಆಗಲಿ ಶಾಸನವ ಪ್ರಕಾರ ತನ್ನ ಅಧಿಕಾರವನ್ನು ನಡೆಸ ಬೇಕೆ ಹೊರತು ಇಷ್ಟಾನುಸಾರ ನಡೆಸಲು ಅಸಾಧ್ಯ. ನಮ್ಮ ಇಷ್ಟಗಳು ಮತ್ತು ಪ್ರೇರಣೆಗಳು ಕಾಮಕ್ರೋಧಗಳ ಆಧಾರದ ಮೇಲೆ ಇರುವುವು. ಕಾಮಕ್ರೋಧಗಳ ಆಧಾರದ ಮೇಲೆ ಇರುವ ಅಧಿಕಾರವು ಅನ್ಯಾಯಕ್ಕೆ ಅವಕಾಶವನ್ನು ಕೊಡುವುದು; ಆದುದರಿಂದ ಆಧುನಿಕ ಸಮಾಜಗಳಲ್ಲಿ ಸರ್ಕಾರವು ಸಂವಿಧಾನದ ಆಧಾರದ ಮೇಲೆ ರಚಿಸಲಾಗಿರುವುದು. ಶಾಸನಾಧಿಕಾರದ ಮತ್ತೊಂದು ಅಂಶವೇನೆಂದರೆ ಎಲ್ಲಾ ಪ್ರಜೆಗಳೂ ಒಂದೇ ಶಾಸನಕ್ಕೆ ಬದ್ಧರಾಗಿರುವರು. ಇದರಲ್ಲಿ ಮೇಲುಕೀಳೆಂಬ ಭಾವನೆ, ಹಣವಂತ ಬಡವನೆಂಬ ಭಾವನೆ ಮುಂತಾದವಕ್ಕೆ ಅವಕಾಶವಿಲ್ಲ. ಯಾವ ಪ್ರಜೆಯೇ ಆಗಲಿ 'ತನಗೆ ಹಾನಿಯುಂಟಾದರೆ ನ್ಯಾಯಾಲಯವನ್ನು ಆಶ್ರಯಿಸಬಹುದು. ಕಾನೂನನ್ನು ಉಲ್ಲಂಘಿಸಿದ ವ್ಯಕ್ತಿಯು ಸಮಾಜದಲ್ಲಿ ಎಷ್ಟೇ ಉನ್ನತ ಸ್ಥಾನ ಹೊಂದಿದ್ದರೂ ಶಿಕ್ಷಾರ್ಹನು.

ಪ್ರಜಾಪ್ರಭುತ್ವದ ಮತ್ತೊಂದು ಲಕ್ಷಣನೆಂದರೆ ಪ್ರತಿಯೊಬ್ಬ ಪ್ರಜೆಯು ಜವಾಬ್ದಾರಿಯುತ ವ್ಯಕ್ತಿ ಸರ್ಕಾರದ ನಿರ್ಣಯಗಳು ತನ್ನಿಂದ ಮಾಡಲ್ಪಟ್ಟವು ಎಂಬ ಹೊಣೆಗಾರಿಕೆಯ ಭಾವನೆಯನ್ನು ಪ್ರತಿಯೊಬ್ಬ ಪ್ರಜೆಯೂ, ವ್ಯಕ್ತಿಯೂ ಹೊಂದಿರಬೇಕು. ಕಾರಣ ಪ್ರಜೆಗಳ ಚುನಾವಣೆಯಿಂದ ಸರ್ಕಾರವು ರಚಿಸಲಾಗಿದೆ. ತಕ್ಕ ವ್ಯಕ್ತಿಗಳನ್ನು ಚುನಾಯಿಸದೇ ಹೋದರೆ ಅದು ಪ್ರಜೆಗಳ ತಪ್ಪು. ಇದರಿಂದಲೇ ಪ್ರಜಾಪ್ರಭುತ್ವವು ಸಾರ್ವತ್ರಿಕ ವಿದ್ಯಾಭ್ಯಾಸವನ್ನು ಒಳಗೊಂಡಿರುವುದು. ಪ್ರತಿಯೊಬ್ಬ ಪ್ರಜೆಯೂ ವಿದ್ಯಾಭ್ಯಾಸವನ್ನು ಪಡೆದು ಜವಾಬ್ದಾರಿಯುತ ರೀತಿಯಿಂದ ಮತದಾನವನ್ನು ಮಾಡಬೇಕಾಗಿರುವುದು. ಇಲ್ಲದಿದ್ದರೆ ಚುನಾವಣೆ ಸರಿಯಾದ ರೀತಿಯಲ್ಲಿ ನಡೆಯುಲಾರದು ಸ್ವಾರ್ಥತೆ ಅಥವಾ ಹೆದರಿಕೆ ಮತದಾನವನ್ನು ನಿರ್ಣಯಿಸುವುದೇ ಹೊರತು ವಿಚಾರ ವಿವೇಕಗಳ ಆಧಾರದ ಮೇಲೆ ಇರುವುದಿಲ್ಲ. ಜನಸಾಮಾನ್ಯರಲ್ಲಿ ಅನಕ್ಷರಸ್ಥತೆ ಇಂದಿನ ಭಾರತೀಯ ವಿಷಮ ಪರಿಸ್ಥಿತಿಗೆ ಮುಖ್ಯ ಕಾರಣ. ಹಳ್ಳಿಯ ಜೀವನಕ್ಕೂ ವಿದ್ಯಾಭ್ಯಾಸವು ಅತ್ಯಾವಶ್ಯಕ. ಆದುದರಿಂದ ಭಾರತದ ಸಮಾಜದಲ್ಲಿ ಅನಕ್ಷರ ಸ್ಥಿತಿಯೂ ನಿರ್ಮೂಲವಾಗಿ ಎಳೆಂಟು ವರ್ಷದ ಪ್ರಾಥಮಿಕ ವಿದ್ಯಾಭ್ಯಾಸವು ಸಾಮಾನ್ಯವಾಗದೇ ಹೊದರೆ ಪ್ರಜಾಪ್ರಭುತ್ವವು ಫಲಕಾರಿಯಾಗುವುದಕ್ಕೆ ಅವಕಾಶವಿರುವುದಿಲ್ಲ. ಈ ಕಾರಣದಿಂದಲೇ ಸಂವಿಧಾನದಲ್ಲಿ ಕೇವಲ 10 ವರ್ಷಗಳಲ್ಲಿ ಅಂದರೆ 1960 ರ ಒಳಗೆ 14 ವರ್ಷದ ಪ್ರತಿಯೊಬ್ಬ ವ್ಯಕ್ತಿಯೂ 8 ವರ್ಷದ ಕಡ್ಡಾಯ ವಿದ್ಯಾಭ್ಯಾಸವನ್ನು ಹೊಂದಿರಬೇಕೆಂದು ಸಾರಿತು. ಆದರೆ 3 ದಶಕಗಳಾದರೂ ಕೇವಲ ಶೇ 15-20 ಮಂದಿ ಸಹ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದಿಲ್ಲ.

ಆದುದರಿಂದ ಪ್ರಜಾಪ್ರಭುತ್ವವು ಕೇವಲ ಮತದಾನದ ಪದ್ಧತಿಯ ಆಧಾರದ ಮೇಲೆ ನಿಂತಿರುವ ಸಂಸ್ಥೆಯಲ್ಲ. ಅದು ಸಮಾನತ್ವವನ್ನು ಶಾಸನಾಧಿಕಾರವನ್ನು ಪ್ರತಿಯೊಬ್ಬ ಪ್ರಜೆಯ ಹೊಣೆಗಾರಿಕೆಯನ್ನು ಪ್ರತಿಯೊಬ್ಬ ಪ್ರಜೆಯ ಪ್ರಾಥಮಿಕ ದರ್ಜೆಯ ವಿದ್ಯಾಭ್ಯಾಸವನ್ನು ಒಳಗೊಂಡಿರುವುದು. ಈ ಭಾವನೆಗಳು ಧ್ಯೇಯು ಗಳು ಮತ್ತು ಆದರ್ಶಗಳು ವಾಸ್ತವಿಕ ಅಂಶಗಳಾಗದೇ ಹೋದರೆ ಪ್ರಜಾಪ್ರಭುತ್ವವು ಆಧಾರ ರಹಿತವಾಗುವುದು. ಪ್ರಜಾಪ್ರಭುತ್ವದ ಈಗಿನ ಅಂಶಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಭಾರತೀಯ ಸಮಾಜದಲ್ಲಿ ಇಂದಿನ ಪರಿಸ್ಥಿತಿಯ ವಿಶ್ಲೇಷಣವನ್ನು ಮಾಡ ಬಹುದು. ಇಂದಿನ ಸಮಾಜದಲ್ಲಿ ಧರ್ಮವನ್ನು ಕುರಿತ ಭಾವನೆಗಳು ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯಕಾರಿ ಮತ್ತುಪ್ರತಿಬಂಧಕ ಎಂಬು ದನ್ನು ಪರಿಶೀಲಿಸಬಹುದು.

ಪ್ರತಿಬಂಧಕ ಅಂಶಗಳು

ಮೇಲೆ ನೋಡಿರುವ ಹಾಗೆ ಪ್ರಜಾಪ್ರಭುತ್ವದ ಭಾವನೆಗಳು ರೂಪಗೊಳ್ಳ ಬೇಕಾದರೆ ಸಮಾನತ್ವವು ಅಡಿಗಲ್ಲು. ಯಾವ ಸಮಾಜದಲ್ಲಿ ಸಮತಾ ಭಾವನೆ ಇರುವುದಿಲ್ಲವೋ ಆ ಸಮಾಜದಲ್ಲಿ ಪ್ರಜಾಪ್ರಭುತ್ವವು ಬೆಳೆಯುವುದು ಕಷ್ಟ. ಜಾತಿ ಪದ್ಧತಿಯು ಈ ಸಮತಾ ಭಾವನೆಯು ರೂಪಗೊಳ್ಳುವುದಕ್ಕೆ ಅಡಚಣೆಯನ್ನು ತಂದೊಡ್ಡುವುದು. ಮುಖ್ಯವಾಗಿ ಶೇ 80 ಮಂದಿ ಇರುವ ಹಳ್ಳಿಗಳಲ್ಲಿ ಈ ಜಾತಿ ಪದ್ಧತಿಯು, ಪ್ರಜಾಪ್ರಭುತ್ವದ ಬೆಳವಣಿಗೆಗೆ ದೊಡ್ಡ ಅಡಚಣೆಯನ್ನು ಉಂಟು ಮಾಡುವುದು. ಸಮಾಜದಲ್ಲಿ ಮೇಲು ಕೀಳೆಂಬ ಭಾವನೆಗಳನ್ನು ಬಲಪಡಿಸುವ ಅಂಶಗಳೆಂದರೆ ವಿದ್ಯಾಭ್ಯಾಸ ಐಶ್ವರ್ಯ ಜೀವನ ಮಟ್ಟ ಮತ್ತು ವಿವೇಕದ ಮಟ್ಟ.' ಗ್ರಾಮಾಂತರ ಪ್ರದೇಶಗಳಲ್ಲಿ ಈ ಎರಡು ಅಂಶಗಳಲ್ಲಿಯೂ ಅತ್ಯಂತ ಅಂತರವಿರು ವುದು. ಆದುದರಿಂದ ಸಮತಾ ಈಗಿನ ಪರಿಸ್ಥಿತಿಯಲ್ಲಿ ಗ್ರಾಮ ಪ್ರದೇಶಗಳಲ್ಲಿ ಬೆಳೆಯಲು ಸಾಧ್ಯವಿಲ್ಲ.

ಸಮತಾ ಭಾವನೆ ಗ್ರಾಮಪ್ರದೇಶದಲ್ಲಿ ಬೆಳೆಯುವುದಕ್ಕೆ ಮತ್ತೊಂದು ದೊಡ್ಡ ಅಡಚಣೆಯೆಂದರೆ ಗ್ರಾಮಗಳಲ್ಲಿರುವ ಯಜಮಾನ ಪದ್ಧತಿ. ಭೂ ಮಾಲೀಕ ನಾದ ವ್ಯಕ್ತಿಯು ಗ್ರಾಮದಲ್ಲಿ ಮುಖ್ಯಸ್ಥನು. ಆತನ ಕುಟುಂಬಕ್ಕೆ ಹಳ್ಳಿಯ ಅನೇಕ ಕುಟುಂಬಗಳು ಅಧೀನವಾಗಿರುವುವು. ಆತನ ಗೃಹದಲ್ಲಿ ಮತ್ತು ಜಮೀನಿನ ಮೇಲೆ ನಡೆಯಬೇಕಾದ ಎಲ್ಲಾ ಕೆಲಸಗಳನ್ನು ಪರಂಪರೆಯಾಗಿ ಬಂದ ಕೀಳು ಜಾತಿಯ ಕುಟುಂಬಗಳು ಮಾಡಬೇಕು. ಈಗಲೂ ಅವರ ಕೆಲಸಕ್ಕೆ ಧಾನ್ಯಗಳನ್ನು ಕೊಡುವರೇ ಹೊರತು ಹಣವನ್ನು ಕೊಡುವುದಿಲ್ಲ. ಈ ಸಂಬಂಧದಿಂದ ಸಾಮಾ

ಜಿಕ ಸ್ಥಿರತೆ ಲಭಿಸಿದೆ. ಆದರೆ ಸಾಮಾಜಿಕ ಮುನ್ನಡೆಗೆ ಅಡಚಣೆಯಾಗಿದೆ. ಪ್ರತಿಯೊಂದು ಸಮಾಜದಲ್ಲಿಯೂ ಈ ಎರಡು ಅಂಶಗಳ ಅಂತರ ಸಂಬಂಧವೂ ಬಹಳ ಕ್ಲಿಷ್ಟವಾದುದು. ಸಮಾಜವು ಉಳಿಯಬೇಕಾದರೆ ಸ್ಥಿರತೆ ಮುಖ್ಯ. ಆದರೆ ಸಮಾಜವು ಮುಂದುವರಿಯಬೇಕಾದರೆ ಸಮಾಜದಲ್ಲಿ ಬದಲಾವಣೆಯಾಗಬೇಕು. ಸ್ಥಿರತೆಯು ಬದಲಾವಣೆಗೆ ಅಡ್ಡಿಯನ್ನು ತಂದೊಡ್ಡಿದರೆ ಆಗ ಸಮಾಜವು ಸ್ತಬ್ಧ ವಾಗುವುದು. ಇದೇ ಇಂದಿನ ಭಾರತೀಯ ಸಮಾಜದ ವಿಷಮ ಪರಿಸ್ಥಿತಿಗೆ ಮುಖ್ಯ ಕಾರಣ. ಸಂವಿಧಾನದಲ್ಲಿ ಅತ್ಯುನ್ನತ ಆಧುನಿಕ ಆದರ್ಶಗಳನ್ನು ನಿರೂಪಿಸ ಲಾಗಿದೆ. ಆದರೆ ಸಮಾಜವು ಸಂಪ್ರದಾಯ ಬದ್ಧವಾಗಿದೆ. ಸಂಪ್ರದಾಯದಿಂದ ಬಂದ ಆಚಾರಗಳು ಈ ಹೊಸ ಆದರ್ಶಗಳ ಸ್ವೀಕಾರಕ್ಕೆ ಅಡಚಣೆಯನ್ನು ಉಂಟು ಮಾಡಿದೆ. ಕೀಳು ಜಾತಿಯ ಹುಡುಗರು ಶಾಲೆಗೆ ಹೋಗುವುದೇ ದುರ್ಲಭ. ಶಾಲಾಕಾಲೇಜುಗಳಿಗೆ ಹೋಗಿ ವಿದ್ಯಾರ್ಜನೆಯನ್ನು ಮಾಡಿ ಹಳ್ಳಿಗೆ ಬಂದರೆ ಅನಕ್ಷರಸ್ಥನಾದ ಮೇಲು ಜಾತಿಯವನು ಯಜಮಾನ ಕುಲಕ್ಕೆ ಸೇರಿದವನು. ಈತನನ್ನು ನೀಚಕುಲಕ್ಕೆ ಸೇರಿದವನೆಂಬ ಭಾವನೆಯಿಂದ ತಿರಸ್ಕರಿಸುವನು. ಒಬ್ಬ ವ್ಯಕ್ತಿಯ ಸ್ಥಾನಮಾನಗಳು ಅವನ ಶಕ್ತಿ ಸಾಮರ್ಥ್ಯಗಳ ಆಧಾರದ ಮೇಲೆ ಅಲ್ಲದೆ ಯಜಮಾನ ಆಳು ಎಂಬ ಸಂಬಂಧದ ಆಧಾರದ ಮೇಲೆ ಇರುವುದು. ಆದುದರಿಂದ ಸಮತಾಭಾವನೆ ಗ್ರಾಮಪ್ರದೇಶಗಳಲ್ಲಿ ಬೆಳೆಯುವುದು ಕಷ್ಟ. ಜಾತಿ ವೃತ್ತಿಯನ್ನು ಬಿಟ್ಟರೆ ಅದು ಅಧರ್ಮವೆಂಬ ಭಾವನೆ ಇನ್ನೂ ಹೋಗಿಲ್ಲ. ಈ ಭಾವನೆ ಹೋಗುವವರೆಗೂ ಸಮತಾ ಭಾವನೆಯುಂಟಾಗುವುದು ದುರ್ಲಭ. ಸಂವಿ ಧಾನದಲ್ಲಿ ಏನೇ ಇರಲಿ ಕಾನೂನು ಏನೇ ಇರಲಿ ಸಂಪ್ರದಾಯವೇ ವ್ಯವ ಹಾರವನ್ನು ನಿರ್ಣಯಿಸುವುದು. ಈ ಹಳೆಯ ಸಂಪ್ರದಾಯಗಳು ಹೋಗುವವ ರೆಗೂ ಸಂವಿಧಾನದಲ್ಲಿ ನಿರೂಪಿಸಿರುವ ಆಧಾರದ ಮೇಲಿನ ಸಂಪ್ರದಾಯಗಳು ಬೆಳೆ ಯುವುದು ಕಷ್ಟ.

ಮತ್ತೊಂದು ಅಡಚಣೆಯೆಂದರೆ ಸಂಪ್ರದಾಯ ಆಧಾರದ ಮೇಲೆ ಇರುವ ಅಧಿಕಾರಯುತ ಕುಟುಂಬ ಪದ್ಧತಿ (Anthaitarian family system) ಸಂವಿಧಾನದ ಪ್ರಕಾರ ಪ್ರಜಾ ಪ್ರಭುತ್ವವನ್ನು ಅಂಗೀಕರಿಸಿ ಸಮತಾಭಾವವನ್ನು ಒಪ್ಪಿಕೊಳ್ಳಲಾಗಿದೆ. ಆದರೆ ಕುಟುಂಬದಲ್ಲಿ ಸಂಪ್ರದಾಯದಿಂದ ಬಂದ ಅಧಿಕಾರ ಸಂಬಂಧ ಸಡಿಲಗೊಂಡಿಲ್ಲ. ತಾಯಿತಂದೆಗಳು ತಾವು ಹೇಳಿದ ಹಾಗೆ ಮಕ್ಕಳು ವರ್ತಿಸಬೇಕೆಂದು ನಿರ್ಬಂಧಿಸುವರು. ಆದರೆ ವಿದ್ಯಾರ್ಥಿಯು ಪ್ರಾಥಮಿಕ ಶಾಲೆ ಯಲಿ ಸಮಾಜ ಪಾಠಗಳಲ್ಲಿ ಪ್ರಜಾ ಪ್ರಭುತ್ವದ ನಿಯಮಗಳನ್ನು ಪ್ರಜೆಗಳ ಹಕ್ಕುಗಳನ್ನು ಕುರಿತು ತಿಳಿದುಕೊಂಡು ನಾನು ಈ ಕೆಲಸವನ್ನು ಏಕೆ ಮಾಡ ಬೇಕು ಎಂದು ಪ್ರಶ್ನಿಸಿದರೆ ತಾಯಿ ತಂದೆಗಳಿಗೆ ಕೋಪ ಬರುವುದು. ಶಾಲೆ

ಯಲ್ಲಿ ಸಮಾಜದಲ್ಲಿ ಸಮತಾ ವಾತಾವರಣ ಮತ್ತು ವಿಚಾರಪರ ವಾತಾವರಣ ಆದರೆ ಗೃಹದಲ್ಲಿ ವಿಧೇಯ ವಾತಾವರಣ. ಇದರಿಂದ ಸಮತಾಭಾವವು ಬೆಳೆಯುವುದಕ್ಕೆ ಅಡಚಣೆಯುಂಟಾಗುವುದು.

ಈ ವಿಧವಾಗಿ ಮನೆಯಲ್ಲಿಯೂ ಸಮಾಜದಲ್ಲಿಯೂ ಜಾತಿ ಪದ್ಧತಿ ಮತ್ತು ಅಧಿಕಾರ ಪದ್ಧತಿ ಸಮತಾಭಾವನೆಯ ಬೆಳವಣಿಗೆಗೆ ಅಡಚಣೆಯನ್ನು ತಂದೊಡ್ಡುತ್ತಿರುವುವು.

ಸಹಕಾರಿ ಅಂಶಗಳು

ಭಾರತೀಯ ಸಂಪ್ರದಾಯ ಪ್ರಕಾರ ಸಮಾಜಿಕ ವ್ಯವಸ್ಥೆಯು ಅಧಿಕಾರ ಪದ್ಧತಿಯಿಂದಲೂ ಮೇಲು ಕೀಳೆಂಬ ಭಾವನೆಗಳಿಂದ ಕೂಡಿದ್ದರೂ ಸಮಾನತ್ವವನ್ನು ವ್ಯಕ್ತಿಯ ಗೌರವವನ್ನು ಪೋಷಿಸುವ ಅಂಶಗಳಿಂದಲೂ ಸಹ ಕೂಡಿರುವುವು. ಈ ಅಂಶಗಳನ್ನು ಕುರಿತು ಈಗ ಪರ್ಯಾಲೋಚಿಸಬಹುದು.

ಭಾರತೀಯ ಸಮಾಜದ ಸಂಪ್ರದಾಯದ ಒಂದು ಉತ್ಕೃಷ್ಟ ಅಂಶವೆಂದರೆ ಸಾಮಾಜಿಕ ಚರ್ಚೆಯಿಂದ ಸಮಸ್ಯೆಗಳನ್ನು ಬಗೆ ಹರಿಸುವ ಕ್ರಮ ಹಳ್ಳಿಯಲ್ಲೇ ಆಗಲಿ ಒಂದು ಜಾತಿಯಲ್ಲೇ ಆಗಲಿ ವೈಷಮ್ಯಗಳು ಉಂಟಾದರೆ ಆಗ ಗ್ರಾಮದ ಹಿರಿಯರ ಗಮನಕ್ಕೆ ಈ ಸಮಸ್ಯೆಗಳನ್ನು ತರುವುದು ಸಂಪ್ರದಾಯದ ಒಂದು ಮುಖ್ಯ ಅಂಶ. ಆಗ ಗ್ರಾಮದ ಜನರೆಲ್ಲರೂ ಅಥವಾ ಆ ಜಾತಿಯ ಜನರೆಲ್ಲರೂ ಸೇರಿ ಎರಡು ಕಡೆಯ ವ್ಯಕ್ತಿಗಳ ದೂರುಗಳನ್ನು ಕೇಳಿ ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಕೊನೆಗೆ ಒಂದು ತೀರ್ಮಾನಕ್ಕೆ ಬರುವುದು. ಒಂದು ಸಂಪ್ರದಾಯ ಪದ್ಧತಿ. ಈ ವಿಧವಾಗಿ ಆ ಮಟ್ಟದಲ್ಲೇ ಅಲ್ಲಿ ಉದ್ಭವವಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವುದು ಸಾಮಾಜಿಕ ಮುಖ್ಯಲಕ್ಷಣ. ಪ್ರಜಾ ಪ್ರಭುತ್ವದಲ್ಲಿ ಇದೇ ಪದ್ಧತಿಯನ್ನು ವಿಸ್ತರಿಸಲಾಗುವುದು, ಮತ್ತು ಇವಕ್ಕೆ ನಿಯಮಬದ್ಧವಾಗಿ ಮಾಡುವುದು. ಆದುದರಿಂದ ಭಾರತೀಯ ಸಂಸ್ಕೃತಿಗೆ ಪ್ರಜಾ ಪ್ರಭುತ್ವವು ಒಂದು ಹೊಸ ಪದ್ಧತಿಯಾಗಿ ಕಾಣಿಸಿಕೊಳ್ಳುವುದಿಲ್ಲ.

ವೇದಗಳ ಕಾಲದಲ್ಲಿಯೇ (ಐತರೇಯ ಬ್ರಾಹ್ಮಣ) ರಾಜನನ್ನು ಚುನಾಯಿಸುವ ಪದ್ಧತಿಯಿತ್ತು. ಇಂತಹ ಗಣ ರಾಜ್ಯಗಳು ಪ್ರಾಚೀನ ಭಾರತ ದೇಶದಲ್ಲಿ ಇದ್ದವೆಂಬುವಕ್ಕೆ ಸಾಹಿತ್ಯದಿಂದಲೂ ಚರಿತ್ರೆಯಿಂದಲೂ ಪ್ರಮಾಣ ದೊರೆಯುವುದು. ಗ್ರೀಕ್ ದೇಶದ ಅಲೆಗ್ಸಾಂಡರ್ ಧಾಳಿಯನ್ನು ಗಣರಾಜ್ಯಗಳು ಎದುರಿಸಿದುವೆಂಬುದನ್ನು ಗ್ರೀಕ್ ಚರಿತ್ರೆಕಾರರು ಬರೆದಿರುವರು. ಹಾಗೆಯೇ ಭಾರತ ದೇಶದ ಪ್ರಥಮ ಚಕ್ರವರ್ತಿಯಾದ ಚಂದ್ರಗುಪ್ತಮೌರ್ಯನ ಸಾಮ್ರಾಜ್ಯಗಳು ಆತನು

ಲಿಚ್ಛವೇ ಗಣರಾಜ್ಯದ ಪ್ರಮುಖ ನಾಯಕನ ಮಗಳನ್ನು ಮದುವೆಯಾದುದನ್ನು ನಿರೂಪಿಸಿದೆ. ಶಾಂತಿ ಪರ್ವದಲ್ಲಿ ಆ ಕಾಲದ ಗಣ ರಾಜ್ಯಗಳು ಒಳ ತಿಕ್ಕಾಟ ದಿಂದ ನಾಶವಾದುದುವೆಂದು ಹೇಳಲಾಗಿದೆ. ಭಾರತ ದೇಶದ ಚರಿತ್ರೆಕಾರರ ಪ್ರಕಾರ ಗಣರಾಜ್ಯದ ಸಂಪ್ರದಾಯವು ಗುಪ್ತರ ಕಾಲದವರೆಗೂ ಅಂದರೆ ಕ್ರಿ.ಶ. ಐದು ಆರು ಶತಮಾನಗಳಲ್ಲಿ ಅಳಿಸಿ ಹೋದವು. ಈ ವಿಧವಾಗಿ ಪ್ರಾಚೀನ ಭಾರತದಲ್ಲಿ ಗಣರಾಜ್ಯದ ಸಂಪ್ರದಾಯವಿತ್ತೆಂಬುದು ನಿರ್ವಿವಾದದ ಅಂಶ.

ಋಗ್ವೇದದ ಕಾಲದಿಂದಲೂ ಒಂದು ರಾಜ್ಯದ ಸ್ಥಿರತೆಯು ಪ್ರಜೆಗಳ ವಿಶ್ವಾಸದ ಆಧಾರದ ಮೇಲೆ ಇರವುದೆಂಬುದನ್ನು ಸೂಚಿಸುವುದು. ಅಲ್ಲದೆ ಪಟ್ಟಾಭಿ ಷೇಕದ ಸಮಯದಲ್ಲಿ ರಾಜನು ಧರ್ಮದ ಪ್ರಕಾರ ಮತ್ತು ನೀತಿಯ ಪ್ರಕಾರ ಆಡಳಿತವನ್ನು ನಡೆಸುವೆನೆಂದು ಸ್ವೇಚ್ಛಾನು ಸಾರಿಯಾಗಿ ರಾಜ್ಯಭಾರ ಮಾಡು ವುದಿಲ್ಲವೆಂದು ಪ್ರಮಾಣವನ್ನು ಸ್ವೀಕರಿಸುತ್ತಿದ್ದನು. ಋಗ್ವೇದದಲ್ಲಿ ನಿರೂಪಿಸಿರುವ ಹಾಗೆ ರಾಜನು ಸಭಾ ಮತ್ತು ಸಮಿತಿಗಳ ಸಲಹೆಯನ್ನು ಪಡೆದು ತೀರ್ಮಾ ನಕ್ಕೆ ಬರುತ್ತಿದ್ದನೆಂದು ಸೂಚಿಸಿರುವುದು. ರಾಮಾಯಣದಲ್ಲಿ ದಶರಥನು ಪ್ರಜೆಗಳ ಅನುಮತಿಯನ್ನು ಪಡೆದು ಯುವರಾಜನಾಗಿ ರಾಮನನ್ನು ಮಾಡಲು ನಿರ್ಧಾರಕ್ಕೆ ಬಂದನೆಂದು ವಾಲ್ಮೀಕಿ ಮುನಿಯು ಚಿತ್ರಿಸಿರುವನು. ಆ ಕಾಲದಲ್ಲಿ ಪ್ರಜೆಗಳು ಎಷ್ಟರಮಟ್ಟಿಗೆ ಧರ್ಮವನ್ನು ಆಚರಿಸಬೇಕಾಗಿತ್ತೋ ಅಷ್ಟರ ಮಟ್ಟಿಗೆ ರಾಜನೂ ಸಹ ಆಚರಿಸಬೇಕಾಗಿತ್ತು. ಮಹಾಭಾರತದ ಅನುಶಾಸನ ಪರ್ವದಲ್ಲಿ (61 ನೇ ಅಧ್ಯಾಯ) ಯಾವ ರಾಜನಾದರೂ ಸ್ವೇಚ್ಛೆಯಿಂದ ವರ್ತಿಸಿ ಪ್ರಜೆ ಗಳನ್ನು ಕಾಪಾಡದೆ ಅವರ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದರೆ ಆಗ ಆ ರಾಜ ನನ್ನು ಕೊಲ್ಲುವುದು ಧರ್ಮ ಎಂದು ಹೇಳಿದೆ. ಈ ವಿಧವಾದ ನಿರಂಕುಶ ಪ್ರಭುತ್ವ ವನ್ನು ತಡೆಗಟ್ಟುವುದು. ಪ್ರಜೆಗಳ ಧರ್ಮ ಎಂಬ ಪದ್ಧತಿಯು ಭಾರತೀಯ ಸಂಸ್ಕೃತಿಯಲ್ಲಿ ಇತ್ತು ಎಂಬುದು ವಿಶದವಾಗುವುದು.

ಭಾರತೀಯ ಸಂಸ್ಕೃತಿಯ ಪ್ರಜಾ ಪ್ರಭುತ್ವವನ್ನು ಘೋಷಿಸುವ ಅಂಶ ವೆಂದರೆ ನಾನಾ ಸಂಪ್ರದಾಯಗಳ ಪ್ರಕಾರ ನಾನಾ ಗುಂಪುಗಳು ತಮ್ಮ ಜೀವನ ವನ್ನು ನಡೆಸಿಕೊಳ್ಳಬಹುದು. ಪ್ರಾಚೀನ ಕಾಲದಿಂದಲೂ ಸ್ಮೃತಿಕಾರರು ಈ ಅಂಶವನ್ನು ಒಪ್ಪಿರುವರು. ಪ್ರತಿಯೊಬ್ಬ ರಾಜನೂ ಈ ಆಚಾರಗಳನ್ನು ದೃಷ್ಟಿ ಯಲ್ಲಿಟ್ಟುಕೊಂಡು ಆಡಳಿತವನ್ನು ಮುಂದುವರಿಸಬೇಕಾಗಿತ್ತು. ಈ ಅಂಶವು ಭಾರತೀಯ ಸಂಸ್ಕೃತಿಯ ದುರ್ಬಲತೆಯನ್ನು ಪ್ರಬಲತೆಯನ್ನು ಸೂಚಿಸುವುದು.

ವರ್ಣ ಧರ್ಮದ ಪ್ರಕಾರ ಬೇರೆ ಬೇರೆ ವರ್ಣಗಳಿಗೆ ಸೇರಿದ ಪ್ರಜೆ ಗಳು ಬೇರೆ ಬೇರೆ ಸಂಪ್ರದಾಯಗಳನ್ನು ಆಚರಿಸಬೇಕೆಂಬ ನಿಯಮವಿದ್ದರೂ

ಮತ್ತೊಂದು ನಿಯಮದ ಪ್ರಕಾರ ರಾಜಯೋಗ ಮಾರ್ಗವನ್ನು ಭಕ್ತಿಯೋಗ ಮಾರ್ಗವನ್ನು ಪ್ರತಿಯೊಬ್ಬನೂ ಅನುಸರಿಸುವುದಕ್ಕೆ ಅಧಿಕಾರವಿರುವುದೆಂದು ಪ್ರಾಚೀನ ಕಾಲದಿಂದಲೂ ನಂಬಲಾಗಿದೆ. ಅಂದರೆ ಒಬ್ಬ ವ್ಯಕ್ತಿಯು ಯಾವ ಜಾತಿಯಲ್ಲಿ ಹುಟ್ಟಿದ್ದರೂ ಮೋಕ್ಷ ಸಾಧನೆಗೆ ಅರ್ಹನೆಂಬುದನ್ನು ಪ್ರಾಚೀನ ಕಾಲದಿಂದಲೂ ಒಪ್ಪಿಸಲಾಗಿದೆ.

ಮೇಲಿನ ಅಧ್ಯಾಯಗಳಲ್ಲಿ ನಿರೂಪಿಸಿರುವ ಹಾಗೆ ಒಂದು ಕಡೆ ವರ್ಣ ಧರ್ಮ ಮತ್ತು ಜಾತಿ ಧರ್ಮವಿದ್ದರೂ ಮತ್ತೊಂದು ಕಡೆ ಪ್ರತಿಯೊಬ್ಬ ಮಾನವನ ಹಿತವೂ ತಮ್ಮ ಹಿತವೆಂಬ ಸುವರ್ಣ ನಿಯಮವು ಇದೆ. ಅಲ್ಲದೆ ಸಾಧಾರಣ ಧರ್ಮದ ಪ್ರಕಾರ ಮಾನವತ್ವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಇತರರೊಂದಿಗೆ ವರ್ತಿಸಬೇಕಾಗಿರುವುದು ಒಂದು ಮುಖ್ಯ ಲಕ್ಷಣ. ಮೇಲೆ ನಿರೂಪಿಸಿರುವ ಹಾಗೆ ಭಾರತೀಯ ಸಂಸ್ಕೃತಿಯ 'ಅಹಿಂಸಾ ಪರಮೋ ಧರ್ಮ' ಮತ್ತು 'ಸತ್ಯಮೇವ ಜಯತೇ ನಾನೃತಂ' ಎಂಬ ಆದರ್ಶಗಳು ಮಾನವತ್ವದ ಆಧಾರದ ಮೇಲೆ ನಿಂತಿರುವುದು ಇದೇ ಸುವರ್ಣ ನಿಯಮದ ಆಧಾರ. ಪ್ರತಿಯೊಬ್ಬ ವ್ಯಕ್ತಿಯೂ ಬ್ರಹ್ಮ ಸ್ವರೂಪ ಎಂಬ ಭಾವನೆ ಭಾರತೀಯ ಸಂಸ್ಕೃತಿಯ ಶ್ರೇಷ್ಠ ಆದರ್ಶ.

ಈ ವಿಧವಾಗಿ ಸಾಂಪ್ರದಾಯ ಜನತಿ ಸಾಮಾಜಿಕ ರೂಢಿಗಳು ಎರಡು ಅಂಶಗಳಿಂದ ಕೂಡಿರುವುವು. ಒಂದು ಕಡೆ ಅಧಿಕಾರಯುತ ರೂಢಿಗಳು ಮೇಲು ಕೀಳೆಂಬ ಭಾವನೆಗಳು ಮತ್ತೊಂದು ಕಡೆ ಸಮಾನತ್ವ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಘನತೆ.

ದೇಶಕ್ಕೆ ಸ್ವತಂತ್ರ ಬಂದ ಮೇಲೆ ವಲಸೆ, ರಾಜ್ಯದ ನಿರ್ಮೂಲ ಮತ್ತು ರಾಜ ಮಹಾರಾಜರುಗಳ ನಿರಂಕುಶ ಪ್ರಭುತ್ವದ ನಿರ್ಮೂಲವಾಯಿತು. ಆದುದರಿಂದ 1950 ಸಂವಿಧಾನದ ಪ್ರಕಾರ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಲಾಗಿದೆ. ಎಲ್ಲಾ ಪ್ರಜೆಗಳ ಸಮಾನತ್ವವು ಎಲ್ಲಾ ಪ್ರಜೆಗಳಿಗೆ ಸಮಾನಾವಕಾಶವೂ ಇವೆ ಮೊದಲಾದ ಆದರ್ಶಗಳನ್ನು ಕಾನೂನಿನ ಪ್ರಕಾರ ಒಪ್ಪಲಾಗಿದೆ. ಆದುದರಿಂದ ನೀಚ ಮತ್ತು ಉನ್ನತ ಭಾವನೆಗಳನ್ನು ತ್ಯಜಿಸಿ ಪ್ರಜಾ ಪ್ರಭುತ್ವಕ್ಕೆ ಅನುಗುಣವಾದ ಸಮತಾ ಭಾವವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ.

ಇಂದಿನ ಸಾಮಾಜಿಕ ಪರಿಸ್ಥಿತಿಯ ಶಿಕ್ಕಾಟವು ಇದರಿಂದ ಉದ್ಭವವಾಗಿದೆ. ಸಮತಾ ಭಾವವನ್ನು ಸಂವಿಧಾನದಲ್ಲಿ ಒಪ್ಪಲಾಗಿದೆ. ಆದರೆ ಜಾತಿ ಮೇಲು ಕೀಳು ಎಂಬ ಭಾವನೆಗಳಿಂದ ಉಂಟಾದ ಸಾಮಾಜಿಕ ರೂಢಿಗಳಿಂದ ವ್ಯವಹಾರವನ್ನು ನಿರ್ಧರಿಸುವುವು. ಈ ವಿರುದ್ಧ ಭಾವನೆಗಳಿಂದ ಸಮಾಜದಲ್ಲಿ

ವಿಷಮ ಪರಿಸ್ಥಿತಿ ಉಂಟಾಗದ ಹಾಗೆ ಭಾರತೀಯ ಸಂಸ್ಕೃತಿಯಲ್ಲಿ ಇರುವ ಸಮಾನತ್ವ ಆದರ್ಶಗಳನ್ನು ಪೂರ್ತಿಯಾಗಿ ವ್ಯವಹಾರದಲ್ಲಿ ರೂಢಿಗೆ ತರುವುದೇ ಇಂದಿನ ಮುಖ್ಯ ಕರ್ತವ್ಯ.

ಸಾಧಾರಣವಾಗಿ ಈಗ ನಡೆಯುವುದೇನೆಂದರೆ ಚುನಾವಣಾ ಕಾಲದಲ್ಲಿ ಸಮಾನತ್ವ ವ್ಯವಹಾರ ಚುನಾವಣೆಗಳ ನಡುವೆ ಅಧಿಕಾರಿಯುತ ವರ್ತನೆ ಈ ರೀತಿಯ ಭಿನ್ನವರ್ತನೆಗಳನ್ನು ತ್ಯಜಿಸಿ ಎಲ್ಲಾ ಪ್ರಜೆಗಳು ಮತ್ತು ಎಲ್ಲ ರಾಜಕೀಯ ಪಕ್ಷಗಳ ನಾಯಕರು ಸಮತಾ ಭಾವವನ್ನು ಹೃತ್ಪೂರ್ವಕವಾಗಿ ತಮ್ಮ ಮಾತಿನಲ್ಲಿ ಅಲ್ಲದೆ ಆಚಾರದಲ್ಲೂ, ವರ್ತನೆಯಲ್ಲೂ ತಂದುಕೊಳ್ಳುವುದು ಇಂದಿನ ಅತಿ ಮುಖ್ಯವಾದ ಕರ್ತವ್ಯ.

ಅಧ್ಯಾಯ—10

ಧರ್ಮ, ಸಮಾಜದ ಸ್ಥಿರತೆ ಮತ್ತು ಸಮಾಜದ ಅಭ್ಯುದಯ

ಸಾವಿರಾರು ವರ್ಷಗಳ ಹಿಂದೆಯೇ ಉಪನಿಷತ್ತುಗಳು ವಿವರಿಸಿರುವ ಹಾಗೆ ಮಾನವ ಕೋಟಿಗೂ ಪ್ರಾಣಿ ವರ್ಗಕ್ಕೂ ಇರುವ ಸಾಮಾನ್ಯ ಗುಣ ಲಕ್ಷಣ ವೆಂದರೆ ಮನೋವೃತ್ತಿಗಳು. ಪ್ರಾಣಿಗಳಿಗೂ ಸಹ ಮನುಷ್ಯರಂತೆಯೇ ದೈಹಿಕ ಅವಶ್ಯಕತೆಗಳಿರುವುವು. ಹಸಿವು, ಬಾಯಾರಿಕೆ, ಲೈಂಗಿಕ ಪ್ರವೃತ್ತಿ, ನೋವು, ಹೆದರಿಕೆ, ಕೋಪ, ಅತ್ಯಾಸೆ ಮುಂತಾದ ಅವಶ್ಯಕತೆಗಳಿರುವುವು. ಇವೆಲ್ಲವೂ ಮನೋಮಯ ಕೋಶಕ್ಕೆ ಸಂಬಂಧಪಟ್ಟ ವೃತ್ತಿಗಳು. ಮಾನವ ವರ್ಗಕ್ಕೂ ಮತ್ತು ಪ್ರಾಣಿ ವರ್ಗಕ್ಕೂ ಇರುವ ವ್ಯತ್ಯಾಸವೆಂದರೆ ಜ್ಞಾನ ವಿಚಾರ ಶಕ್ತಿ, ಮತ್ತು ವ್ಯಕ್ತಿತ್ವದ ಅರಿವು. ವಿಜ್ಞಾನಮಯ ಕೋಶದ ಈ ವೃತ್ತಿಗಳು ನಮ್ಮ ಆಕಾಂಕ್ಷೆಗಳ ಮೇಲೆ ಹತೋಟಿಯನ್ನು ಪಡೆಯಲು ಸಹಾಯ ಮಾಡುವುದೊಂದೇ ಅಲ್ಲದೆ ಇತರರ ಹಕ್ಕುಗಳನ್ನೂ ಮತ್ತು ಬಾಧ್ಯತೆಗಳನ್ನು ತಿಳಿದುಕೊಂಡು ಪ್ರವ ರ್ತಿಸಲು ಸಹಾಯ ಮಾಡುವುವು. ಈ ವಿಧವಾಗಿ ವಿಚಾರ ಪೂರ್ವಕ ಜ್ಞಾನವು ಮತ್ತು ನಿಯಮಗಳನ್ನು ಅನುಸರಿಸುವ ಜೀವನವು. ಈ ಎರಡು ಅಂಶಗಳು ಮಾನವನ ಅನನ್ಯ ಗುಣಗಳು. ಅಂದರೆ ಮನುಷ್ಯನು ನಿಜವಾಗಿಯೂ ಮಾನ ವತ್ವವನ್ನು ವ್ಯಕ್ತಪಡಿಸಬೇಕಾದರೆ ಅವನಲ್ಲಿ ವಿಚಾರ ಪೂರ್ವಕ ಜೀವನ ಮತ್ತು ನೀತಿ ನಿಯಮಗಳನ್ನು ಅನುಸರಿಸುವ ಜೀವನ ಇರಬೇಕು. ಈ ಎರಡು ಗುಣ ಗಳು ಅವನಲ್ಲಿ ಕಾಣಿಸದೆ ಹೋದರೆ ಅವನ ವರ್ತನೆಯು ಕೇವಲ ಪಶುವರ್ತನೆ ಯಾಗುವುದು.

ಶೈಶವಾವಸ್ಥೆಯಲ್ಲಿ ಈ ಎರಡು ಲಕ್ಷಣಗಳು ಕಾಣುವುದಿಲ್ಲ. ಪಶುವರ್ತನೆ ಯಂತೆ ಶಿಶು ವರ್ತನೆಯು ಸ್ವಾರ್ಥತೆಯನ್ನು ವ್ಯಕ್ತಪಡಿಸುವುದು. ತನ್ನ ಅಭಿ ಲಾಷೆಗಳನ್ನು ತಕ್ಷಣ ಪೂರೈಸಿಕೊಳ್ಳಲು ಪಶುಗಳ ಹಾಗೆಯೇ ಶಿಶುಗಳೂ ಸಹ ವರ್ತಿಸುವುವು. ತಮಗೆ ಬೇಕಾದುದನ್ನು ಪಡೆದುಕೊಳ್ಳುತ್ತಿರುವಾಗ ಯಾರಾದರೂ ಅಡ್ಡಿ ಮಾಡಿದರೆ ಅವರ ಮೇಲೆ ಅತ್ಯಂತ ಕೋಪ ಮಾಡಿಕೊಂಡು ಹಿಂಸಾವರ್ತನೆ ಯನ್ನು ಅವಲಂಬಿಸುವುದು. ಮಗು ಬೆಳೆಯುತ್ತಾ ಬೆಳೆಯುತ್ತಾ ಸಾಮಾಜೀ ಕರಣದ ಮೂಲಕ ಈ ಪಶುವರ್ತನೆಯನ್ನು ತ್ಯಜಿಸಿ ನಿಜವಾದ ಮಾನವ ವರ್ತನೆ

ಯನ್ನು ಹೊಂದುವುದು. ಕ್ರಮೇಣ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಾಗ ಕಾಲ ದೇಶಗಳ ಅರಿವನ್ನು ಹೊಂದಿ ನಿಯಮಬದ್ಧ ಮಾರ್ಗಗಳನ್ನು ಅನುಸರಿಸುವುದು. ಕ್ರಮೇಣ ಯಾವ ಕೆಲಸ ಮಾಡಿದರೂ ಒಂದು ಕಡೆ ಬುದ್ಧಿ ಪೂರ್ವಕವಾಗಿಯೂ ಮತ್ತೊಂದು ಕಡೆ ನೀತಿ ನಿಯಮಗಳನ್ನು ಅನುಸರಿಸಿ ಬಾಳುವುದನ್ನು ಮಗುವು ಕ್ರಮೇಣವಾಗಿ ಕಲಿಯುವುದು.

ಮಾನವತ್ವದ ಈ ಎರಡು ಅಂಶಗಳನ್ನು ಭಾರತೀಯ ಪ್ರಾಚೀನ ಗ್ರಂಥಗಳಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಸ್ಪಷ್ಟವಾಗಿ ನಿರೂಪಿಸಲಾಗಿದೆ.

ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ ಸ್ವಯಂ ಯೋಗ ಸಂಸಿದ್ಧಃ ಕಾಲೇನಾತ್ಮನಿ ವಿದಂತಿ ॥

ಗೀತೆ. 4—38

ಈ ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರ ವಸ್ತು ಯಾವುದೂ ಇರುವುದಿಲ್ಲ. ಯೋಗದಿಂದ ಸಂಸಿದ್ಧಿಯನ್ನು ಹೊಂದುವನು. ಕಾಲ ಕ್ರಮದಲ್ಲಿ ಆ ಜ್ಞಾನವನ್ನು ತನ್ನಲ್ಲಿ ತಾನೇ ಹೊಂದುವನು.

ಗೀತೆಯು ಈ ವಿಧವಾಗಿ ಜ್ಞಾನವನ್ನೂ ವಿಚಾರ ಶಕ್ತಿಯನ್ನೂ ವಿವರಿಸಿದೆ. ಇದೇ ರೀತಿಯಾಗಿ ಕಠೋಪನಿಷತ್ತು ನೀತಿ ನಿಯಮ ಬದ್ಧ ವರ್ತನೆಯನ್ನು ಕುರಿತು ಈ ವಿಧವಾಗಿ ಹೇಳಿದೆ.

ನಾವಿರತೋ ದುಶ್ಚರಿತಾನ್ನಾಶಾಂತೋ ನಾ ಸಮಾಹಿತಃ ।
ನಾಶಾಂತ ಮನಸೋ ವಾಽಪಿ ಪ್ರಜ್ಞಾನೇನೈನ ಮಾಪ್ನುಯಾತ್ ॥

ಕ. ಉ. 1—24

ದುರಾಚಾರದಿಂದ ನಿವೃತ್ತನಾಗದವನೂ, ಶಾಂತನಲ್ಲದವನೂ ಸಮಾಹಿತನಲ್ಲದವನೂ ಮನಃಶಾಂತಿಯಿಲ್ಲದವನೂ ಪ್ರಜ್ಞಾನದಿಂದ ಇವನನ್ನು (ಆತ್ಮನನ್ನು) ಪಡೆಯಲಾರರು.

ಕಠೋಪನಿಷತ್ತಿನ ಈ ಮಂತ್ರವು ಮಾನವ ವರ್ತನೆಯ ಲಕ್ಷಣಗಳನು ಸಂಕ್ಷೇಪವಾಗಿ ಸೂಚಿಸುವುದು. ಯಾವ ಮನುಷ್ಯನು ದುಃಶ್ಚರಿತನು ಅಂದರೆ ಯಾವ ಮನುಷ್ಯನು ಇತರರ ಹಕ್ಕಗಳನ್ನು ಗಮನಿಸದೆ ಇರುವನೋ ಯಾವ ಮನುಷ್ಯನು ತನ್ನ ಬಾಧ್ಯತೆಗಳನ್ನು ತಿಳಿದುಕೊಳ್ಳದೇ ಇರುವನೋ ಅಂತಹವನು ಆತ್ಮ ಸಾಕ್ಷಾತ್ಕಾರವನ್ನು ಹೊಂದಲಾರನು. ಅಂತಹ ಮನುಷ್ಯನು ಮನಶ್ಶಾಂತಿಯಿಂದಲೂ ಸಮಾಹಿತದಿಂದಲೂ ವರ್ತಿಸಲಾರನು. ಮತ್ತೊಂದು ಅಂಶವೆಂದರೆ ಅಂತಹವನ ವರ್ತನೆಯು ಪ್ರಜ್ಞಾನದಿಂದ ಕೂಡಿರುವುದು. ಅಂದರೆ ಅವನ ವರ್ತನೆಯು ಆತ್ಮ

ಸಂಕಲ್ಪದಿಂದ ಕೂಡಿರುವುದು. ತನ್ನ ವರ್ತನೆಯನ್ನು ತಾನೇ ನಿರ್ಣಯಿಸಿಕೊಳ್ಳುವನು. ಯಾವಮನುಷ್ಯನ ವರ್ತನೆಯು ಅವನ ಇಂದ್ರಿಯಗಳ ಲೋಲತೆಯನ್ನು ಅನುಸರಿಸುವುದೋ ತನ್ನ ಆಸೆ ಆಕಾಂಕ್ಷೆಗಳ ಮೇಲೆ ನಿಂತಿರುವುದೋ ಅಥವಾ ತನ್ನ ಭಾವೋದ್ರೇಕಗಳ ಪ್ರಭಾವದಿಂದ ಕೂಡಿರುವುದೋ ಅಥವಾ ವರ್ತನೆಯು ಕೇವಲ ಸಂಪ್ರದಾಯದ ಬಲದ ಮೇಲೆ ನಿಂತಿರುವುದೋ ಅಂತಹ ವರ್ತನೆಯು ಸ್ವಯಂ ನಿರ್ಣಿತ ವರ್ತನೆಯಲ್ಲ ಆ ವರ್ತನೆಯು ತನ್ನಲ್ಲಿರುವ ಕೀಳು ಅಂಶಗಳ ಮೇಲೂ ಹೊರಗಿನ ಉತ್ತೇಜಕಗಳ ಮೇಲೂ ನಿಂತಿರುವುದೇ ಹೊರತು ಸ್ವಯಂ ಸಂಕಲ್ಪದ ಮೇಲಲ್ಲ.

ಸಂಪ್ರದಾಯ ಮತ್ತು ಸಾಮಾಜಿಕ ಸ್ಥಿರತೆ

ವ್ಯಕ್ತಿಯ ಜೀವನದಲ್ಲಿ ಅಭ್ಯಾಸಗಳು ಎಷ್ಟು ಫಲದಾಯಕವೋ ಹಾಗೆಯೇ ಸಾಮಾಜಿಕ ಜೀವನದಲ್ಲಿ ಸಂಪ್ರದಾಯವು ಅಷ್ಟೇ ಫಲದಾಯಕ. ಒಂದು ಸಮಾಜದಲ್ಲಿರುವ ವ್ಯಕ್ತಿಗಳು ಆ ಸಮಾಜದ ಸಂಪ್ರದಾಯಗಳನ್ನು ಪಾಲಿಸಿದರೆ ಆಗ ಆ ಸಮಾಜದಲ್ಲಿ ಸ್ಥಿರತೆ ಇರುವುದು. ಆದರೆ, ಕೇವಲ ಸಂಪ್ರದಾಯ ಬದ್ಧ ಸಮಾಜವು ಮುಂದುವರೆಯದೆ ನಿಂತು ಬಿಡುವುದು; ಸ್ತಬ್ಧಗೊಳ್ಳುವುದು. ಈ ಲಕ್ಷಣವು ಹಿಂದುಳಿದ ಗಿರಿಜನರ ಮತ್ತು ಕೃಷಿ ಸಮಾಜಗಳಲ್ಲಿ ಎದ್ದು ಕಾಣುವುದು. ಈ ಸಮಾಜಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಂಪ್ರದಾಯ ಬದ್ಧನಾಗಿ ಹಿರಿಯರು ನಿಶ್ಚಯಿಸಿದ ದಾರಿಯನ್ನು ಹಿಡಿಯುವನೇ ಹೊರತು ಹೊಸದಾರಿಗಳನ್ನು ಅವಲಂಬಿಸುವುದಿಲ್ಲ. ಇಂತಹ ಸಮಾಜಗಳು ಬೆಳೆಯಲು ಅಸಾಧ್ಯ. ಸಂಪ್ರದಾಯಗಳನ್ನು ಪಾಲಿಸುವ ಸಮಾಜಗಳ ಮತ್ತೊಂದು ಗುಣವೇನೆಂದರೆ ಪ್ರತಿಯೊಂದು ಸಣ್ಣ ಪುಟ್ಟ ಗುಂಪುಗಳೂ ತಮ್ಮ ಪ್ರತ್ಯೇಕ ಸಂಪ್ರದಾಯಗಳನ್ನು ಭದ್ರವಾಗಿ ಪಾಲಿಸುವುದರಿಂದ ಆ ದೇಶದಲ್ಲಿ ಏಕತಾಮನೋಭಾವವು ಇರುವುದಿಲ್ಲ. ಸಂಪ್ರದಾಯಗಳ ಗುಂಪುಗಳ ಪ್ರತ್ಯೇಕತೆಯನ್ನು ದೃಢಪಡಿಸಿ ಸಾಮಾಜಿಕ ಸಂಸಕ್ತಿ (cohesion) ಯನ್ನು ಬೆಳೆಸಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. ಇದೇ ಭಾರತೀಯ ಸಂಸ್ಕೃತಿಯ ದೌರ್ಬಲ್ಯಕ್ಕೆ ಕಾರಣ. ಭಾರತೀಯ ಸಂಸ್ಕೃತಿಯಲ್ಲಿ ಕುಟುಂಬಗಳು ಮತ್ತು ಜಾತಿಗಳು ದೃಢವಾಗಿರುವುವು. ಆದರೆ ರಾಷ್ಟ್ರೀಯ ಸಮಾಜದ ಐಕ್ಯತೆಯ ಅಭಾವವು ಇರುವುದು. ಈ ದುರ್ಬಲತೆಯೇ ಸಾವಿರಾರು ವರ್ಷಗಳಿಂದ ಹೊರಗಿನವರ ಧಾಳಿಗೆ ಸಹಾಯವನ್ನು ಮಾಡಿ ದೇಶದ ಗುಲಾಮ ಸ್ಥಿತಿಗೆ ಕಾರಣವಾಯಿತು. ದೇಶಕ್ಕೆ ಸ್ವತಂತ್ರ ಬಂದರೂ ಸಹ ಈ ಸಾಮಾಜಿಕ ಲಕ್ಷಣವು ದೇಶವನ್ನು ಬಲಹೀನಗೊಳಿಸಿದೆ. ಅಂದರೆ ಸಂಪ್ರದಾಯಬದ್ಧ ಸಮಾಜವು ರಾಷ್ಟ್ರದ ಐಕ್ಯತೆಯನ್ನು ಬಲಪಡಿಸುವುದಿಲ್ಲ. ಸಂಪ್ರದಾಯ ಬಲದ ಮೇಲೆ ನಿಂತಿರುವ ಸಮಾಜವು ಪ್ರತ್ಯೇಕತಾ

ಮನೋಭಾವ (Particularism) ವನ್ನು ಬಲಪಡಿಸಿ ಸಾರ್ವತ್ರಿಕ ಮನೋಭಾವ (Universalism)ವು ಬೆಳೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಅಂದರೆ ಉಪನಿಷತ್ತುಗಳ ಧ್ಯೇಯವು ಸಾರ್ವತ್ರಿಕವಾದುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಜ್ಞಾನಪೂರ್ವಕ ಜೀವನವನ್ನು ನಡೆಸಬೇಕು ಮತ್ತು ಎಲ್ಲ ಮಾನವರಲ್ಲೂ ಸಮತಾಭಾವವನ್ನು ಹೊಂದಬೇಕು. ಅಂದರೆ ಉಪನಿಷತ್ತುಗಳ ದೃಷ್ಟಿಯಲ್ಲಿ ಸಂಪ್ರದಾಯಕ್ಕಿಂತ ವಿಚಾರಮಯ ಜೀವನ ಮತ್ತು ಮಾನವತ್ವದಿಂದ ಕೂಡಿರುವ ಜೀವನ ಮುಖ್ಯವೇ ಹೊರತು ಕೇವಲ ಸಂಪ್ರದಾಯ ಅಥವಾ ಆಚಾರಬದ್ಧ ಜೀವನವಲ್ಲ. ಆದರೆ ಈ ದೃಷ್ಟಿಯು ಒಂದು ಸಂಶಯವನ್ನು ಸೂಚಿಸುವುದು. ಮನುಷ್ಯನು ಎಲ್ಲ ಆಚಾರಗಳನ್ನು ಬಿಡುವುದು ಸಾಧ್ಯವೇ ? ಇದು ಒಳ್ಳೆಯದೇ ? ಸಾರ್ವತ್ರಿಕ ಮನೋಭಾವವೆಂದರೆ ಸಮಾಜದಲ್ಲಿರುವ ಸಂಪ್ರದಾಯಗಳನ್ನೆಲ್ಲಾ ತ್ಯಜಿಸಬೇಕೆಂಬುದಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತಾನು ಬೆಳೆದಿರುವ ಗುಂಪಿನ ಸಂಪ್ರದಾಯಗಳನ್ನು ಅಂಧಶ್ರದ್ಧೆಯಿಂದ ಪಾಲಿಸಬೇಕಾಗಿಲ್ಲ. ದೇಶ ಕಾಲಗಳ ಲಕ್ಷಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವ ಸಂಪ್ರದಾಯಗಳು ಇವುಗಳಿಗೆ ಅನುಗುಣವಾಗಿರುವುವೋ ಅವುಗಳನ್ನು ಬಲಪಡಿಸಿ ಯಾವುದು ಹಿತಕರವಲ್ಲವೋ ಅದನ್ನು ತ್ಯಜಿಸುವುದು ಶ್ರೇಯಸ್ಕರ. ಮುಖ್ಯವಾಗಿ ಉಪನಿಷತ್ತುಗಳು ಮತ್ತು ಗೀತೆ ಸೂಚಿಸಿರುವ ದಾರಿಯೆಂದರೆ ಬುದ್ಧಿಪೂರ್ವಕ ಜೀವನ. ಕೇವಲ ಪದ್ಧತಿಯನ್ನು ಅನುಸರಿಸುವುದಲ್ಲ. ಸಂಸ್ಕೃತಿಯಲ್ಲಿ ಯಾವ ಸಂಪ್ರದಾಯಗಳು ಸಾರ್ವತ್ರಿಕವಾಗಿ ಇರುವುವೋ ಅವುಗಳನ್ನು ಅನುಸರಿಸಿ ಯಾವ ಸಂಪ್ರದಾಯಗಳು ಪ್ರತ್ಯೇಕತೆಯಿಂದ ಕೂಡಿರುವುವೋ ಮತ್ತು ಯಾವ ಸಂಪ್ರದಾಯಗಳು ಸಮಾಜದ ಹಿತಕ್ಕೆ ವಿರುದ್ಧವಾಗಿರುವುವೋ ಅವುಗಳನ್ನು ತ್ಯಜಿಸಬೇಕಾಗುವುದು.

ಈ ಅಂಶಗಳನ್ನು ವಿಶದೀಕರಿಸುವುದಕ್ಕೆ ಉದಾಹರಣೆಯೊಂದನ್ನು ತೆಗೆದುಕೊಳ್ಳಬಹುದು. ಭಾರತೀಯ ಸಂಸ್ಕೃತಿಯಲ್ಲಿ ಮುಖ್ಯವಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಎರಡು ಭಯಂಕರವಾದ ಸಂಪ್ರದಾಯಗಳು ಕೆಲವು ಗುಂಪುಗಳಲ್ಲಿ ಇದ್ದುವು. ಮೊದಲನೆಯದು ಸಹಗಮನ ಪದ್ಧತಿ. ಎರಡನೆಯದು ಹೆಣ್ಣು ಶಿಶು ಹತ್ಯೆ. ಈ ಎರಡು ಕೃತ್ಯಗಳನ್ನು ಸಂಪ್ರದಾಯಬಲದಿಂದ ನಡೆಸಿಕೊಂಡು ಬರುತ್ತಿದ್ದರು. ಇವುಗಳನ್ನು ತಡೆಗಟ್ಟಬೇಕಾದರೆ ಕಾನೂನುಗಳನ್ನು ತರಬೇಕಾಯಿತು. ಆದರೂ ಈ ಕೃತ್ಯಗಳು ಬಹಳ ಕಾಲ ಉಳಿದುಕೊಂಡಿದ್ದವು.

ಮತ್ತೊಂದು ಉದಾಹರಣೆಯೆಂದರೆ ಅತ್ಯಂತ ಹಿಂಸಾತ್ಮಕವೂ ಹೀನಾಯವಾದದ್ದೂ ಆದ ನರಬಲಿ. ಈಗಲೂ ಸಹ ವೃತ್ತಪತ್ರಿಕೆಗಳಲ್ಲಿ ಆಗಾಗ್ಗೆ ಮಕ್ಕಳನ್ನು ಬಲಿಕೊಡುವ ಸುದ್ದಿಯನ್ನು ಓದುತ್ತಿರುವೆವು. ಅನೇಕ ಸಲ ಮಗುವಿನ ತಂದೆಯೇ ಮಗುವಿನ ಕೈಕಾಲುಗಳನ್ನು ಬಿಗಿಯಾಗಿ ಹಿಡಿದು ಅದನ್ನು ಬಲಿ

ಕೊಟ್ಟಿರುವ ಸುದ್ದಿಯನ್ನು ಪತ್ರಿಕೆಗಳು ಪ್ರಕಟಿಸಿರುವುವು. **ಅಂದರೆ** ಈಗಲೂ ದೇವರನ್ನು ಒಲಿಸಿಕೊಳ್ಳಲು ಪ್ರಾಣಿಗಳನ್ನೂ ಕೆಲವು ಸಂದರ್ಭಗಳಲ್ಲಿ ಮಕ್ಕಳನ್ನೂ ಸಹ ಬಲಿಕೊಡಲು ಸಿದ್ಧರಾಗಿರುವರು. ಇದು ಸಂಪ್ರದಾಯದ ಒಂದು ವೈಶಿಷ್ಟ್ಯವನ್ನು ತೋರಿಸುವುದು. ಹಳೆಯ ಸಂಪ್ರದಾಯದ ಪ್ರಕಾರ ದೇವರನ್ನು ಒಲಿಸಿಕೊಳ್ಳಬೇಕಾದರೆ ಬಲಿಕೊಡಬೇಕು. ಈ ಸಂಪ್ರದಾಯವನ್ನು ಸಾವಿರಾರು ವರ್ಷಗಳ ಹಿಂದೆಯೇ ಗೀತೆಯಲ್ಲಿ ಖಂಡಿಸಲಾಗಿದೆ.

ಗೀತೆಯಲ್ಲಿ ಹೀಗೆ ಹೇಳಿದೆ—

ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।

ಗೀತೆ. 9–15

"ಜ್ಞಾನಯಜ್ಞದಿಂದ ನನ್ನನ್ನು ಪೂಜಿಸುತ್ತಾ ಉಪಾಸನೆ ಮಾಡುತ್ತಾರೆ."

ಅಂದರೆ ಗೀತೆಯು ಸಂಪ್ರದಾಯದ ಯಜ್ಞಕ್ಕೆ ಒಂದು ಹೊಸ ಅರ್ಥವನ್ನು ಕಲ್ಪಿಸಿದೆ. ಪ್ರಾಣಿಗಳನ್ನು ಯಜ್ಞಕ್ಕೆ ಆಹುತಿಯನ್ನಾಗಿ ಮಾಡುವ ಬದಲು ಜ್ಞಾನಯಜ್ಞವನ್ನು ಮಾಡಬೇಕೆಂದು ಸೂಚಿಸಿದೆ. ಇದೇ ಅಧ್ಯಾಯದಲ್ಲಿ ಮತ್ತೊಂದು ಕಡೆ ಹೀಗೆ ಹೇಳಿದೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥

ಗೀತೆ 9—26

'ಯಾವನು ನನಗೆ ಎಲೆಯನ್ನಾಗಲಿ, ಹೂವನ್ನಾಗಲಿ, ಹಣ್ಣನ್ನಾಗಲಿ ನೀರನ್ನಾಗಲಿ ಭಕ್ತಿಯಿಂದ ಕೊಡುವನೋ ಅಂತಹ ಶುದ್ಧ ಚಿತ್ತವುಳ್ಳವನು ಭಕ್ತಿಯಿಂದ ಸಮರ್ಪಿಸಿದ ಅದನ್ನು ನಾನು ತೆಗೆದುಕೊಳ್ಳುತ್ತೇನೆ.'

ಅಂದರೆ ಸಾವಿರಾರು ವರ್ಷಗಳ ಹಿಂದೆಯೇ ಗೀತೆಯು ಹಳೆಯ ಸಂಪ್ರದಾಯವಾದ ನರಬಲಿ ಮತ್ತು ಪ್ರಾಣಿಬಲಿಯನ್ನು ಬಿಟ್ಟು ಹೊಸ ಸಂಪ್ರದಾಯವಾದ ಜ್ಞಾನವನ್ನೂ, ಭಕ್ತಿಯಿಂದ ಸಮರ್ಪಿಸಿದ 'ಪುಷ್ಪಂ, ಫಲಂ, ತೋಯಂ' ಇವುಗಳನ್ನೂ ಸ್ವೀಕರಿಸಬೇಕೆಂದು ಸೂಚಿಸಿದೆ. ಆದರೆ ಈ ಸಾರ್ವತ್ರಿಕ ದೃಷ್ಟಿಯನ್ನು ಒಪ್ಪಿಕೊಳ್ಳದೆ ಸಣ್ಣ ಪುಟ್ಟ ಗುಂಪುಗಳಲ್ಲಿ ಪ್ರಾಚೀನ ಸಂಪ್ರದಾಯವಾದ ಪ್ರಾಣಿಬಲಿ ಮತ್ತು ನರಬಲಿಯು ಇಂದಿಗೂ ಆಚರಣೆಯಲ್ಲಿದೆ. ಈ ವಿಧವಾಗಿ ಹಳೆಯ ಸಂಪ್ರದಾಯವನ್ನು ಬಿಡಬೇಕಾದರೆ ಬಹಳ ಕಷ್ಟ; ಅತ್ಯಂತ ಹೆದರಿಕೆ.

ಹಳೆಯ ಸಂಪ್ರದಾಯವು ಹಾನಿಕರವಾದರೂ, ಹಿಂಸೆಯಿಂದ ಕೂಡಿದ್ದರೂ, ಕಾನೂನಿಗೆ ವಿರುದ್ಧವಾದರೂ ಅದನ್ನು ತ್ಯಜಿಸುವುದಕ್ಕೆ ಹೆದರಿಕೆ. ಅದನ್ನು ತ್ಯಜಿಸಿದರೆ ಎಲ್ಲಿ ಹಾನಿಯುಂಟಾಗುವುದೋ ಎಂಬ ಭೀತಿ. ಹಿರಿಯರು ಮಾಡುತ್ತಿದ್ದುದನ್ನು ಬಿಡುವುದು ಬಹಳ ಕಷ್ಟ.

ಇದೇ ವಿಧವಾಗಿ ಜಾತಿಧರ್ಮವನ್ನು ಅನುಸರಿಸಿ ಕೆಲವು ಗುಂಪುಗಳು ಮೇಲು ಜಾತಿಯವರೆಂದೂ, ಕೆಲವು ಗುಂಪುಗಳು ಕೀಳು ಜಾತಿಯವರು ಅಥವಾ ಅಸ್ಪೃಶ್ಯರೆಂದು ಭಾವಿಸುವುದೂ ಸಾವಿರಾರು ವರ್ಷಗಳಿಂದ ಭಾರತೀಯ ಸಂಸ್ಕೃತಿಯ ಲಕ್ಷಣವಾಗಿದೆ. ಆದರೆ ಮೇಲೆ ನೋಡಿರುವ ಹಾಗೆ ಇದು ಉಪನಿಷತ್ತುಗಳ ಮತ್ತು ಗೀತೆಯ ತತ್ವಗಳಿಗೆ ವಿರುದ್ಧ. ವೇದಾಂತದ ಪ್ರಕಾರ ಪ್ರಪಂಚದಲ್ಲಿರುವ ಸಮಸ್ತ ವಸ್ತುಗಳೂ ಪ್ರಾಣಿಗಳೂ ಮತ್ತು ಮನುಷ್ಯರೂ ಬ್ರಹ್ಮ ಸ್ವರೂಪ. ಆದುದರಿಂದಲೇ ಗೀತೆಯ ಐದನೆಯ ಅಧ್ಯಾಯದ 18 ನೇ ಶ್ಲೋಕವು ಉತ್ತಮ ಮನುಷ್ಯನು ವಿದ್ಯಾವಂತನನ್ನೂ, ಗೋವನ್ನೂ, ಆನೆಯನ್ನೂ ನಾಯಿಯನ್ನೂ, ಬಹಿಷ್ಕರಿಸಲ್ಪಟ್ಟವನನ್ನೂ ಸಮದೃಷ್ಟಿಯಿಂದ ನೋಡುವವನೆಂದು ಹೇಳಿದೆ. ಹಾಗೆಯೇ ಗೀತೆಯ ಆರನೆಯ ಅಧ್ಯಾಯದ 32 ನೇ ಶ್ಲೋಕವು ತನ್ನ ಹಾಗೆಯೇ ಇತರರಿಗೂ ಸುಖದುಃಖಗಳು ಇರುವುವೆಂಬುದನ್ನು ಮನಸ್ಸಿನಲ್ಲಿಟ್ಟು ಕೊಂಡು ಇತರರೂ ನನ್ನ ಹಾಗೆಯೇ ಇರುವರೆಂಬ ಭಾವನೆಯನ್ನು ಇಟ್ಟುಕೊಂಡಿರುವವನು ಶ್ರೇಷ್ಠನು ಎಂದು ಹೇಳಿದೆ. ಈ ವಿಧವಾಗಿ ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಸಮಾನತ್ವವನ್ನು ಸುವರ್ಣನಿಯಮವನ್ನು ಒತ್ತಿ ಹೇಳಲಾಗಿದೆ. ಇದೇ ತತ್ವವನ್ನು ಭಾರತೀಯ ಸಂವಿಧಾನವೂ ಒಪ್ಪಿಕೊಂಡಿರುವುದು. ಸಮಾನತ್ವವು ವ್ಯಕ್ತಿಯ ಆಜನ್ಮಹಕ್ಕು. ಇತರರನ್ನು ಕೀಳು ಮನುಷ್ಯರೆಂದು ನೋಡುವವರು ಕಾನೂನಿನ ಪ್ರಕಾರ ಶಿಕ್ಷೆಗೆ ಒಳಗಾಗುವರು ಈ ವಿಧವಾಗಿ ಭಾರತೀಯ ಸಂಸ್ಕೃತಿಯ ಮತ್ತು ಸಂವಿಧಾನದ ಉತ್ಕೃಷ್ಟ ಸಾರ್ವತ್ರಿಕ ತತ್ವಗಳನ್ನು ಆಚರಣೆಯಲ್ಲಿ ಇಡದೆ ಸಂಪ್ರದಾಯದಿಂದ ಬಂದ ಪ್ರತ್ಯೇಕತಾ ಮನೋಭಾವವನ್ನು ಸಾಮಾಜಿಕವರ್ತನೆಯ ಲಕ್ಷಣವಾಗಿ ಮಾಡಿಕೊಂಡು ಸಮಾಜದಲ್ಲಿ ತಿಕ್ಕಾಟ ಬರುವುದಕ್ಕೆ ಅವಕಾಶವನ್ನು ಕಲ್ಪಿಸುತ್ತಿರುವರು.

ಮೇಲೆ ನೋಡಿರುವ ಹಾಗೆ ಧರ್ಮ ಎನ್ನುವ ಪದವು 'ಧೃ' ಎಂಬ ಧಾತುವಿನಿಂದ ಬಂದಿದೆ. ಆದುದರಿಂದ ಧರ್ಮದ ಸ್ವರೂಪವು ಒಂದು ಪದಾರ್ಥದಲ್ಲೇ ಆಗಲಿ ವ್ಯಕ್ತಿಯಲ್ಲೇ ಆಗಲಿ ಸಮೂಹದಲ್ಲೇ ಆಗಲಿ ಇರುವ ಅನೇಕ ಭಾಗಗಳನ್ನು ಸೇರಿಸಿ ವ್ಯವಸ್ಥಿತ ರೂಪದಿಂದ ಹಿಡಿದುಕೊಂಡಿರುವ ತತ್ವವು. ಆದರೆ ಈ ತತ್ವವನ್ನು ನಮ್ಮ

ಕುಟುಂಬಕ್ಕೂ, ಜಾತಿಗೂ ಅನ್ವಯಿಸುವ ಹಾಗೆ ನೋಡಿಕೊಳ್ಳುವುವೇ ಹೊರತು ಇಡೀ ಭಾರತ ವರ್ಷಕ್ಕೂ ಮತ್ತು ಮಾನವ ಕೋಟಿಗೂ ಅನ್ವಯಿಸುವ ಹಾಗೆ ನಾವು ವರ್ತಿಸುವುದಿಲ್ಲ. ಆದುದರಿಂದ ಪ್ರತ್ಯೇಕತಾ ಮನೋಭಾವವು ಬಲಗೊಂಡು ಸಾರ್ವತ್ರಿಕ ದೃಷ್ಟಿಯು ನಿರ್ಬಲಹೊಂದಿ ದೇಶದ ಒಗ್ಗಟ್ಟಿಗೆ ಹಾನಿಯನ್ನುಂಟು ಮಾಡುವುದು. ಧರ್ಮಪ್ರವರ್ತನೆಯು ಯಾವ ವಿಧವಾಗಿ ಕುಟುಂಬದ ಒಗ್ಗಟ್ಟನ್ನು ಜಾತಿಯ ಒಗ್ಗಟ್ಟನ್ನು, ಹಳ್ಳಿಯ ಒಗ್ಗಟ್ಟನ್ನು ಬಲಪಡಿಸುವುದೋ ಹಾಗೆಯೇ ಆದು ವಿಸ್ತಾರಹೊಂದಿ ದೇಶದ ಮತ್ತು ಮಾನವತ್ವದ ಒಗ್ಗಟ್ಟನ್ನು ಬಲಪಡಿಸ ಬೇಕು. ಅಂದರೆ ಸಮಾಜ ಎಂಬ ಪದಕ್ಕೆ ವಿಸ್ತಾರವಾದ ಅರ್ಥವನ್ನು ನಮ್ಮ ದೃಷ್ಟಿಯಲ್ಲಿ ಇಡಬೇಕು. ಆದರೆ ಧರ್ಮ ಎಂಬ ತತ್ವದ ವಿಸ್ತಾರವನ್ನು ಸಣ್ಣ ಪುಟ್ಟ ಗುಂಪುಗಳಿಗೆ ಅದರಲ್ಲೂ ಜಾತಿಯ ಆಧಾರದ ಮೇಲೆ ನಿಂತಿರುವ ಗುಂಪು ಗಳಿಗೆ ಸೀಮಿತಗೊಳಿಸಿ ಸೌಹಾರ್ದ ಮನೋಭಾವವನ್ನು ಬಲಪಡಿಸುವ ಬದಲು ವೈಷಮ್ಯ ಮನೋಭಾವವನ್ನು ಬಲಪಡಿಸಲಾಗಿದೆ. ಇದು ಭಾರತೀಯ ಸಂಸ್ಕೃತಿಯ ಆರೋಗಕ್ಕೂ ಅಭಿವೃದ್ಧಿಗೂ ವಿರುದ್ಧವಾಗಿದೆ.

ಸಾಧಾರಣವಾಗಿ ಮಾನವಗುಂಪುಗಳನ್ನು ಎರಡು ವರ್ಗಗಳಿಗೆ ಸೇರಿರುವ ಹಾಗೆ ವಿಂಗಡಿಸಬಹುದು. ಮಾನವಗುಂಪು ಜನ್ಮದ ಆಧಾರದ ಮೇಲೆ ನಿಂತಿರಬಹುದು ಅಥವಾ ಧ್ಯೇಯಗಳ ಆಧಾರದ ಮೇಲೆ ನಿಂತಿರಬಹುದು. ಜನ್ಮದ ಆಧಾರದ ಮೇಲೆ ನಿಂತಿರುವ ಗುಂಪುಗಳು ಸ್ವಂತ ಇಷ್ಟದಿಂದಾಗಲೀ, ಸ್ವಪ್ರೇರಣೆಯಿಂದಾಗಲೀ ಇಚ್ಛಾ ಪೂರ್ವಕವಾಗಲಿ ಉಂಟಾಗಿರುವ ಗುಂಪುಗಳಲ್ಲ. ಕುಟುಂಬ, ಜಾತಿ, ಮತ, ಭಾಷೆ ಮುಂತಾದ ಅಂಶಗಳನ್ನು ಒಳಗೊಂಡಿರುವ ಗುಂಪುಗಳು ಇಚ್ಛಾಪೂರ್ವಕ ಗುಂಪು ಗಳಲ್ಲ. ಒಬ್ಬ ವ್ಯಕ್ತಿಯೂ ಆ ಕುಟುಂಬದಲ್ಲೇ ಆಗಲಿ ಆ ಜಾತಿಯಲ್ಲೇ ಆಗಲಿ ಆ ಮತದಲ್ಲೇ ಆಗಲಿ ಹುಟ್ಟಿರುವುದರಿಂದ ಆ ಗುಂಪಿಗೆ ಸೇರಿದವನಾಗುವನು. ಇಂತಹ ಗುಂಪುಗಳು ಸಮಾಜದ ಮುನ್ನಡೆಗೆ ಬಹಳ ಸಹಕಾರಿಯಾದ ಗುಂಪುಗಳು ಆದರೆ ಈ ಗುಂಪುಗಳಿಗೆ ಸೇರಿದವರು ಇತರ ಗುಂಪುಗಳಿಗೆ ಸೇರಿದವನನ್ನು ಕಂಡಾಗ ತಾತ್ಸಾರವನ್ನಾಗಲಿ, ದ್ವೇಷವನ್ನಾಗಲಿ ವ್ಯಕ್ತಪಡಿಸುವರು. ಇಂತಹ ಮನೋ ಭಾವಗಳು ರಾಷ್ಟ್ರೀಯ ಮನೋಭಾವದ ಬೆಳವಣಿಗೆಗೆ ಅಡಚಣೆಯನ್ನು ತಂದೊಡ್ಡು ವುವು. ಮತ್ತೊಂದು ವರ್ಗಕ್ಕೆ ಸೇರಿದ ಮಾನವಗುಂಪುಗಳು ಇಚ್ಛಾಪೂರ್ವಕ (Voluntary)ವಾದುವುಗಳು. ಈ ಗುಂಪುಗಳಿಗೆ ಸೇರಿದ ವ್ಯಕ್ತಿಗಳು ಜನ್ಮತಃ ಅವುಗಳಿಗೆ ಸೇರಿದವರಲ್ಲ. ಸ್ವಪ್ರೇರಣೆಯಿಂದ ಆ ಗುಂಪಿಗೆ ಸೇರಿರುವರು. ಇಲ್ಲಿ ಧ್ಯೇಯ ಆದರ್ಶಗಳು ಮುಖ್ಯ ಕಾರಣಗಳು. ಇಂತಹ ಗುಂಪುಗಳಿಗೆ ಸೇರಲು ಜನ್ಮಸಿದ್ಧವಾದ ಅಡಚಣೆಗಳು ಇರುವುದಿಲ್ಲ. ಯಾರೇ ಆಗಲಿ ಆ ಗುಂಪುಗಳ ಧ್ಯೇಯಗಳನ್ನು ಒಪ್ಪಿಕೊಂಡರೆ ಆ ಗುಂಪುಗಳಲ್ಲಿ ಸದಸ್ಯತ್ವವನ್ನು ಪಡೆಯಬಹುದು.

ಆದುದರಿಂದ ಮೊದಲನೆಯ ವರ್ಗದ ಗುಂಪುಗಳು ಪ್ರತ್ಯೇಕತೆಯಿಂದ ಕೂಡಿರುವುವು. ಆದರೆ ಎರಡನೆಯ ವರ್ಗದ ಗುಂಪುಗಳು ಸಾರ್ವತ್ರಿಕ ಲಕ್ಷಣಗಳನ್ನು ಹೊಂದಿರುವುವು. ಯಾವ ಸಮಾಜವೇ ಆಗಲಿ ಅದು ಮುಂದುವರೆಯಬೇಕಾದರೆ ಈ ಎರಡು ವಿಧವಾದ ಗುಂಪುಗಳೂ ಇರಬೇಕು. ಆದರೆ ಜನ್ಮಸಿದ್ಧ ಗುಂಪುಗಳಿಗಿಂತ ಧ್ಯೇಯಸಿದ್ಧಗುಂಪುಗಳು ಪ್ರಬಲವಾಗಿರಬೇಕು. ಆಗ ಮನೋವೈಶಾಲ್ಯವು ಹೆಚ್ಚಾಗಿ ಮಾನವತ್ವಕ್ಕೆ ಬೆಲೆ ಬರುವುದು. ಸುವರ್ಣನಿಯಮದ ಆಚರಣೆಗೆ ಅವಕಾಶ ಉಂಟಾಗುವುದು. ಈ ಲಕ್ಷಣವು ಕೈಗಾರಿಕಾ ಸಮಾಜದಲ್ಲಿ ಪ್ರಬಲವಾಗಿರುವುದು. ತದ್ವಿರುದ್ಧವಾಗಿ ಕೃಷಿಸಮಾಜದಲ್ಲಿ ಜನ್ಮಸಿದ್ಧ ತತ್ವವೇ ಬಲವಾಗಿದ್ದು ಗುಂಪುಗಳಲ್ಲಿ ದ್ವೇಷವನ್ನು ಹೆಚ್ಚುಮಾಡುವುದು.

ಈ ದೃಷ್ಟಿಯಿಂದ ನೋಡಿದರೆ ವರ್ಣಧರ್ಮ ಮತ್ತು ಜಾತಿಧರ್ಮಗಳು ಜನ್ಮಸಿದ್ಧ ಧರ್ಮಗಳು. ಆದರೆ ಮೇಲೆ ವಿವರಿಸಿರುವ ಹಾಗೆ ಸುವರ್ಣನಿಯಮ, ಸಾಧಾರಣ ಧರ್ಮ ಸ್ವಧರ್ಮ ಇವು ಸಾರ್ವತ್ರಿಕ ಧರ್ಮಗಳು. ಈ ಸಾರ್ವತ್ರಿಕ ಧರ್ಮಗಳನ್ನು ಆಚರಿಸಿದರೆ ಇಡೀ ರಾಷ್ಟ್ರ ಮತ್ತು ಮಾನವಕುಲವು ಒಗ್ಗಟ್ಟಿನಿಂದ ಅಭಿವೃದ್ಧಿಯನ್ನು ಪಡೆಯಲು ಸಾಧ್ಯ.

ಇದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ಅನೇಕ ಕಾರಣಗಳಿಂದ ಇತ್ತೀಚೆಗೆ ಭಾರತ ದೇಶದಲ್ಲೂ ಮತ್ತು ಪ್ರಪಂಚದಲ್ಲೂ ಜನ ಸಂಖ್ಯೆ ಅತಿ ಹೆಚ್ಚಾಗಿ ಬೆಳೆಯುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ 1951 ರಲ್ಲಿ ನಡೆದ ಜನಗಣತಿಯ ಪ್ರಕಾರ ದೇಶದಲ್ಲಿ 36 ಕೋಟಿ ಜನರಿದ್ದರು. ಆದರೆ 1971 ರ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ಸುಮಾರು 55 ಕೋಟಿ ಜನರಿದ್ದರು. ಪ್ರತಿ ವರ್ಷವೂ ಭಾರತದೇಶದಲ್ಲಿ 1·3 ಕೋಟಿ ಜನರು ಹೆಚ್ಚುತ್ತಿರುವರು. ಆದುದರಿಂದ 1981 ರ ಒಳಗೆ 60 ಕೋಟಿಗಿಂತ ಹೆಚ್ಚಾಗಿ ಜನರು ನಮ್ಮ ದೇಶದಲ್ಲಿ ಇರುವರೆಂದು ಊಹಿಸಲಾಗಿದೆ.

ಇದೇ ವಿಧವಾಗಿ ಪ್ರಪಂಚದ ಜನಗಣತಿಯ ಪ್ರಕಾರ 1950 ರಲ್ಲಿ 252 ಕೋಟಿ ಜನರಿದ್ದರು. ಆದರೆ 1964 ರಲ್ಲಿ 322 ಕೋಟಿಗೆ ಈ ಸಂಖ್ಯೆಯು ಏರಿತು. ಈಗ ಸುಮಾರು 370 ಕೋಟಿ ಜನರಿರುವರು. ಈ ಸಂಖ್ಯೆಯು ಕ್ರಿ.ಶ. 2000 ದಲ್ಲಿ 600 ಅಥವಾ 650 ಕೋಟಿಗೆ ಏರುವುದೆಂಬ ಅಂದಾಜು ಇರುವುದು. ಇಷ್ಟು ವಿಪರೀತವಾಗಿ ಭಾರತದೇಶ ಮತ್ತು ಇಡೀ ಪ್ರಪಂಚದ ಜನಸಂಖ್ಯೆಯು ಹೆಚ್ಚುವುದಕ್ಕೆ ಮುಖ್ಯ ಕಾರಣವೆಂದರೆ ವಿಜ್ಞಾನದ ಬೆಳವಣಿಗೆ ಮತ್ತು ವಿಜ್ಞಾನದ ಆಧಾರದ ಮೇಲಿರುವ ತಾಂತ್ರಿಕ ಸೌಲಭ್ಯ. ಈ ಕಾರಣದಿಂದ ಭಾರತ ದೇಶದಲ್ಲೂ ಮತ್ತು ಪ್ರಪಂಚದಲ್ಲೂ ಮರಣ ಸಂಖ್ಯೆಯು ಅತಿ ವೇಗನಲ್ಲಿ ಕಡಿಮೆಯಾಗುತ್ತಿದೆ. ಆದರೆ ಜನನದ ಸಂಖ್ಯೆಯು ಅಷ್ಟೇ ವೇಗದಿಂದ ಕಡಿಮೆಯಾಗು

ತ್ತಿಲ್ಲ. ವೈಜ್ಞಾನಿಕ ಮತ್ತು ತಾಂತ್ರಿಕ ಸೌಲಭ್ಯಗಳನ್ನು ಉಪಯೋಗಿಸಿ ಜನನ ಸಂಖ್ಯೆಯನ್ನು ಕಡಿಮೆಮಾಡುವುದೂ ಸಾಧ್ಯ. ಈ ಜ್ಞಾನವನ್ನು ಉಪಯೋಗಿಸಿ ಪಾಶ್ಚಾತ್ಯ ದೇಶಗಳಲ್ಲೂ ಮತ್ತು ರಷ್ಯಾ ಜಪಾನ್ ಮುಂತಾದ ದೇಶಗಳಲ್ಲೂ ಸಹ ಜನನ ಸಂಖ್ಯೆಯು ಕಡಿಮೆಯಾಗಿದೆ. ಆದರೆ ಇದು ಕೇವಲ ಸಾಮೂಹಿಕ ವಿಷಯವಲ್ಲ. ಪ್ರತಿ ದಂಪತಿಗಳೂ ಮನಃಪೂರ್ವಕವಾಗಿ ನಿರ್ಣಯಿಸಿ ಈ ಸೌಲಭ್ಯಗಳನ್ನು ಉಪಯೋಗಿಸಿದರೆ ಆಗ ಜನ ಸಂಖ್ಯೆಯು ಕಡಿಮೆಯಾಗುವುದು ಸಾಧ್ಯ. ಅನಕ್ಷರಸ್ಥರ ಮತ್ತು ಹಿಂದುಳಿದಿರುವ ಗುಂಪುಗಳಿಗೆ ಸೇರಿದ ದಂಪತಿಗಳು ಈ ಜ್ಞಾನವನ್ನು ಪಡೆದು ತಮ್ಮ ಹೊಣೆಗಾರಿಕೆಯನ್ನು ತಿಳಿದುಕೊಂಡು ಈ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವುದು ಕಷ್ಟಕರ. ಇದೇ ಇಂದಿನ ವಿಷಮ ಪರಿಸ್ಥಿತಿಗೆ ಮುಖ್ಯ ಕಾರಣ.

ತಾಂತ್ರಿಕ ಸೌಲಭ್ಯಗಳನ್ನು ಉಪಯೋಗಿಸುತ್ತಿರುವುದರಿಂದ ಧಾನ್ಯ ಉತ್ಪತ್ತಿಯು ಹೆಚ್ಚಾಗುತ್ತಿರುವುದು. ಆದರೆ ಈ ಉತ್ಪತ್ತಿಯ ಹೆಚ್ಚುವಿಕೆಯು ಜನಸಂಖ್ಯೆಯ ಹೆಚ್ಚುವಿಕೆಗೆ ಸರಿಸಮಾನವಾಗಿಲ್ಲ. ಇದೇ ನಮ್ಮ ದೇಶದ ಹಾಗೂ ಪ್ರಪಂಚದ ಇಂದಿನ ವಿಷಮ ಪರಿಸ್ಥಿತಿಗೆ ಕಾರಣ. ಈ ಪರಿಸ್ಥಿತಿಯನ್ನು ಮನಗೊಂಡು ಯಾವ ದೇಶದಲ್ಲೇ ಆಗಲಿ ಆಹಾರ ಅಭಾವದಿಂದ ಜನರು ಸಾಯಬಾರದೆಂಬ ಮನೋಭಾವವು ಉಂಟಾಗಿ 1974 ನೇ ನವೆಂಬರ್ ತಿಂಗಳಲ್ಲಿ ರೋಂ ನಗರದಲ್ಲಿ ವಿಶ್ವಸಂಸ್ಥೆಯು ಒಂದು ಸಮ್ಮೇಳನವನ್ನು ನಡೆಸಿ ಮಾನವ ಕೋಟಿಯು ಈ ದುಃಸ್ಥಿತಿಯಿಂದ ಪಾರಾಗಬೇಕಾದರೆ ಎಲ್ಲ ದೇಶಗಳೂ ಒಟ್ಟುಗೂಡಿ ಬರುವ ವರ್ಷದೊಳಗೆ ಹೆಚ್ಚುವರಿಯಾದ 60ಕೋಟಿಟನ್ ಧಾನ್ಯವನ್ನು ಸಂಗ್ರಹಿಸಬೇಕೆಂದೂ ಈ ಧಾನ್ಯವನ್ನು ಪ್ರಪಂಚದ ಯಾವ ದೇಶದಲ್ಲೇ ಆಗಲಿ ಕ್ಷಾಮವುಂಟಾದರೆ ಅಲ್ಲಿಗೆ ತಕ್ಷಣ ಸರಬರಾಜು ಮಾಡಲು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ತೀರ್ಮಾನಿಸಿತು. ಇಂತಹ ನಿರ್ಣಯವನ್ನು ಮಾಡಲು ಜಾತಿ ಧರ್ಮ ಅಥವಾ ಮಾನವ ಬುಡಕಟ್ಟಿನ ಧರ್ಮ ಮುಂತಾದ ಸಂಕುಚಿತ ಭಾವನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಅಸಾಧ್ಯವಾಗುವುದು. ಇದೇ ಮಾನವ ಕುಲವು ಒಂದು ಎಂಬ ವಿಶ್ವಸಂಸ್ಥೆಯ ಧ್ಯೇಯವು ಸುವರ್ಣನಿಯಮವನ್ನು ಸಾಧಾರಣ ಧರ್ಮವನ್ನು ಒಳಗೊಂಡಿರುವುದರಿಂದ ಇಂತಹ ನಿರ್ಣಯಕ್ಕೆ ಬರಲು ಸಾಧ್ಯವಾಯಿತು. ತಾನು ತಮ್ಮವರು ಮುಂದಕ್ಕೆ ಬಂದರೆ ಸಾಕು ಎಂಬ ಸಂಕುಚಿತ ಭಾವನೆಯು ದೇಶದ ಮತ್ತು ಪ್ರಪಂಚದ ಇಂದಿನ ಪರಿಸ್ಥಿತಿಗೆ ವಿರೋಧವಾಗುವುದು. ಇಂತಹ ದೃಷ್ಟಿಯನ್ನು ತ್ಯಜಿಸಬೇಕಾದುದು ಇಂದಿನ ಧರ್ಮ. ಈ ಧರ್ಮವನ್ನು ಸಾವಿರಾರು ವರ್ಷಗಳ ಹಿಂದೆಯೇ ವೇದಾಂತ ಮತ್ತು ವೇದಗಳು ಸ್ಪಷ್ಟಪಡಿಸಿದವು. ಈ

ಪ್ರಾಚೀನ ಧರ್ಮವನ್ನು ಆಚಾರದಲ್ಲಿ ತರುವುದೇ ಇಂದಿನ ಭಾರತೀಯರ ಕರ್ತವ್ಯ. ಆಗ ಮಾನವೀಯತೆಯು ಅಭಿವೃದ್ಧಿಯನ್ನು ಹೊಂದುವುದು. ಇತರರಿಗೆ ನೋವುಂಟಾದರೆ ಅದು ನನಗೆ ನೋವಾಗುವುದು ಎಂಬ ದೃಷ್ಟಿ ಬಲಪಡುವುದು.

ಪುರುಷಾರ್ಥ, ವ್ಯಕ್ತಿ ಮತ್ತು ಸಮಾಜ

ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಸಂಸ್ಕೃತಿಯಲ್ಲಿ ಚತುರ್ವಿಧ ಪುರುಷಾರ್ಥಗಳು ಮಾನವನ ಜೀವನವನ್ನು ಸಾರ್ಥಕಗೊಳಿಸುವುವೆಂದು ಕಂಡು ಹಿಡಿಯಲಾಯಿತು. ಪ್ರಾಣಿಗಳ ಹಾಗೆಯೇ ಮಾನವನಲ್ಲೂ ಕಾಮೋದ್ರೇಕಗಳ ತೃಪ್ತಿ ಮತ್ತು ಸಂಗ್ರಹಣಾ ಮುಂತಾದ ಮೂಲಪ್ರವೃತ್ತಿಗಳು ಇರುವುವು. ಆದರೆ ಇಂತಹ ಜೀವನ ವ್ಯಕ್ತಿಯ ಬೆಳವಣಿಗೆಗೂ ಸಮಾಜದ ಅಭ್ಯುದಯಕ್ಕೂ ಹಿತ ಕರವಲ್ಲ. ಆದುದರಿಂದ ಈ ಪ್ರವೃತ್ತಿಗಳ ತೃಪ್ತಿಯು ಧರ್ಮವನ್ನು ಅನುಸರಿಸ ಬೇಕೆಂದು ನಿರ್ಣಯಿಸಲಾಯಿತು. ಅಂದರೆ ಕಾಮುಗಳನ್ನು ತೃಪ್ತಿಗೊಳಿಸುವುದು ಧರ್ಮಸಮ್ಮತವಾಗಿ ಇರಬೇಕೇ ಹೊರತು ಧರ್ಮವಿರುದ್ಧವಾಗಿರಬಾರದು. ಹಾಗೆಯೇ ಅರ್ಥಿಕ ಜೀವನವೂ ಸಹ ಧರ್ಮಸಮ್ಮತವಾಗಿರಬೇಕು. ಇಂತಹ ಜೀವನ ವ್ಯಕ್ತಿಗೆ ತೃಪ್ತಿಯನ್ನುಂಟುಮಾಡುವುದು ಮತ್ತು ಸಮಾಜದ ಹಿತಕ್ಕೆ ವಿರುದ್ಧ ವಾಗಿರುವುದಿಲ್ಲ. ಆದರೆ ಇಂತಹ ಜೀವನವು ಪರಿಪೂರ್ಣವಾದ ಜೀವನವಾಗಿರ ಲಾರದೆಂದೂ, ಮೋಕ್ಷ ಸಾಧನೆಯು ನಾಲ್ಕನೆಯ ಪುರುಷಾರ್ಥವಾಗಬೇಕೆಂದೂ ವಿವರಿಸಲಾಯಿತು. ಮೋಕ್ಷ ಸಾಧನಕ್ಕೆ ಯಾವ ಮಾರ್ಗವನ್ನು ಅನುಸರಿಸಿದರೂ ಚಿತ್ತಶುದ್ಧಿಯು ಅವಶ್ಯಕವೆಂದು ಪರಿಗಣಿಸಲಾಯಿತು. ಮೇಲೆ ವಿವರಿಸಿರುವ ಹಾಗೆ ಚಿತ್ತಶುದ್ಧಿಯೆಂದರೆ ಆತ್ಮಸಂಯಮ. ಜೀವನವು ಪಾತಂಜಲ ಯೋಗಸೂತ್ರದಲ್ಲಿ ಸೂಚಿಸಿರುವ ಹಾಗೆ ಯಮನಿಯಮಗಳ ಆಧಾರದ ಮೇಲೆ ಇರಬೇಕು. ಇದೇ ಅಂಶ ವನ್ನು ವೇದಾಂತದಲ್ಲಿ ಸಾಧನ ಚತುಷ್ಟಯವೆಂದು ವಿವರಿಸಲಾಗಿದೆ. ಒಬ್ಬ ವ್ಯಕ್ತಿಯು ಯಾವುದು ನಿತ್ಯ ಯಾವುದು ಅನಿತ್ಯವೆಂಬುದನ್ನು ಕುರಿತು ವಿವೇಕವನ್ನು ಪಡೆಯ ಬೇಕು. ಎರಡನೆಯದಾಗಿ ಕರ್ಮಫಲದ ಮೇಲೆ ವೈರಾಗ್ಯವನ್ನು ಹೊಂದಿರಬೇಕು. ಮೂರ ನೆಯದಾಗಿ ಷಟ್ಸಂಪತ್ತನ್ನು ಹೊಂದಿರಬೇಕು. ಅಂದರೆ ಜೀವನವು ಶಮ, ದಮ, ಉಪರತಿ, ತಿತಿಕ್ಷ, ಸಮಾಧಾನ ಮತ್ತು ಶ್ರದ್ಧೆಯಿಂದ ಕೂಡಿರಬೇಕು. ಕೊನೆಯ ದಾಗಿ ಮುಮುಕ್ಷುತ್ವವಿರಬೇಕು. ಅಂದರೆ ವಿಮೋಚನೆಯನ್ನು ಪಡೆಯಲು ಅತ್ಯಂತ ಕುತೂಹಲವಿರಬೇಕು. ವ್ಯಕ್ತಿಯ ವಿಕಾಸದ ದೃಷ್ಟಿಯಿಂದಲೂ ಸಮಾಜದ ಅಭ್ಯು ದಯದ ದೃಷ್ಟಿಯಿಂದಲೂ ನೋಡಿದರೆ ಪಾತಂಜಲ ಯಮನಿಯಮಗಳು ಮತ್ತು ವೇದಾಂತದ ಸಾಧನ ಚತುಷ್ಟಯಗಳು ಒಂದೇ ಗುರಿಯನ್ನು ಸೂಚಿಸುವುವು. ಚಿತ್ತಶುದ್ಧಿ ಪಡೆಯಬೇಕಾದರೆ ಆತ್ಮಸಂಯಮ ಅಗತ್ಯ. ಆತ್ಮಸಂಯಮದಿಂದ

ಕೂಡಿರುವ ವ್ಯಕ್ತಿಯ ಜೀವನವು ಎರಡು ಅಂಶಗಳನ್ನು ಒಳಗೊಂಡಿರುವುದು. ಮೊದಲನೆಯದಾಗಿ ಆಕಾಂಕ್ಷೆಗಳ ಮೇಲೆ ಹತೋಟಿ. ಎರಡನೆಯದಾಗಿ ಭಾವೋದ್ರೇಕಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿರುವುದು. ಈ ಎರಡು ಅಂಶಗಳು ವ್ಯಕ್ತಿಯ ವಿಕಾಸಕ್ಕೆ ಸಹಾಯಮಾಡುವುದಲ್ಲದೆ ಸಾಮಾಜಿಕ ಜೀವನವು ಘರ್ಷಣಾರಹಿತವಾಗಿರುವುದು. ಆಕಾಂಕ್ಷೆಗಳು ಮತ್ತು ಭಾವೋದ್ರೇಕಗಳು ಮನೋಮಯ ಕೋಶದ ಅಂಶಗಳು. ಇವುಗಳ ಮೇಲೆ ಹತೋಟಿಯನ್ನು ಪಡೆಯಬೇಕಾದರೆ ಮನುಷ್ಯನ ಜೀವನವು ವಿಚಾರಪೂರಿತವಾಗಿರಬೇಕು ಮತ್ತು ಇತರರ ಹಿತವನ್ನು ದೃಷ್ಟಿಯಲ್ಲಿಡಬೇಕು. ಇಂತಹ ಜೀವನವು ವಿಜ್ಞಾನಮಯ ಕೋಶಕ್ಕೆ ಸೇರಿರುವುದು. ಅಂದರೆ ಚಿತ್ತಶುದ್ಧಿಯನ್ನು ಪಡೆಯಬೇಕಾದರೆ ಒಬ್ಬ ವ್ಯಕ್ತಿಯು ಕೇವಲ ಮನೋಮಯಕೋಶದ ಅಂತಸ್ತಿನಲ್ಲಿ ಬಾಳುವುದನ್ನು ನಿಗ್ರಹಿಸಿ, ಸಹಜವಾಗಿ ವಿಜ್ಞಾನಮಯಕೋಶದ ಅಂತಸ್ತಿನಲ್ಲಿ ಬಾಳುವ ಸ್ಥಿತಿಯನ್ನು ಪಡೆಯಬೇಕು. ಸರ್ವದಾ ವಿವೇಚನೆಯಿಂದಲೂ ಇತರ ಮನುಷ್ಯರಲ್ಲಿ ಕರುಣೆಯಿಂದ ವರ್ತಿಸುವುದನ್ನೂ ಪ್ರಯತ್ನ ಪೂರ್ವಕವಾಗಿ ಅಭ್ಯಾಸಮಾಡಿ ಕಡೆಗೆ ಅಂತಹ ಜೀವನವು ಸಹಜ ಜೀವನವಾಗುವ ಹಾಗೆ ಮಾಡಿಕೊಳ್ಳಬೇಕು. ಆಗ ಚಿತ್ತಶುದ್ಧಿಯು ಆತ್ಮವಿಕಾಸಕ್ಕೂ ಮತ್ತು ಸಮಾಜದ ಅಭಿವೃದ್ಧಿಗೂ ಕಾರಣವಾಗುವುದು. ತನ್ನ ಅವಶ್ಯಕತೆಗಳ ಮೇಲೂ ತನ್ನ ಭಾವೋದ್ರೇಕಗಳ ಮೇಲೂ ಹತೋಟಿಯನ್ನು ಪಡೆದಿರುವ ವ್ಯಕ್ತಿಯು ಇತರ ವ್ಯಕ್ತಿಗಳ ಹಕ್ಕುಗಳನ್ನು ದೃಷ್ಟಿಯಲ್ಲಿಡುವುದೊಂದೇ ಅಲ್ಲದೆ ಇತರರಿಗೆ ತಾನು ಮಾಡಬೇಕಾದುದೇನು ಮತ್ತು ಇಡೀ ಮಾನವ ಕುಲದ ಅಭಿವೃದ್ಧಿಗೆ ತನ್ನ ಕರ್ತವ್ಯವೇನೆಂಬುದನ್ನು ಮನಗಂಡು ವರ್ತಿಸಲು ಸಾಧ್ಯ. ಅಂತಹ ವ್ಯಕ್ತಿಯ ದೃಷ್ಟಿ ಕೇವಲ ತನ್ನ ಹಿತಕ್ಕೂ ತನ್ನ ಕುಟುಂಬದ ಹಿತಕ್ಕೂ ಸೀಮಿತವಾಗಿರದೆ ಇಡೀ ಮಾನವತ್ವದ ಹಿತವನ್ನೇ ಗುರಿಯಾಗಿಟ್ಟುಕೊಳ್ಳುವುದು. ಈ ದೃಷ್ಟಿಯಿಂದ ನೋಡಿದರೆ ಮೋಕ್ಷಸಾಧನೆಯು ಮಾನವತ್ವದ ಅಭಿವೃದ್ಧಿಗೆ ಸಹಕಾರಿಯಾಗುವುದು. ಗೀತೆಯಲ್ಲಿ ಹೇಳಿರುವ ಹಾಗೆ ಇಂತಹ ವ್ಯಕ್ತಿಗಳು ಎಲ್ಲಾ ಕಾಲದಲ್ಲಿಯೂ ಸಮಬುದ್ಧಿಯುಳ್ಳವರೂ, ಸರ್ವ ಪ್ರಾಣಿಗಳ ಹಿತದಲ್ಲಿ ನಿರತರೂ ಆಗಿರುವರು. (12.4) ಇಂತಹ ವ್ಯಕ್ತಿಯು, ಗೀತೆಯಲ್ಲಿ ಹೇಳಿರುವ ಹಾಗೆ, ಯಾರನ್ನೂ ದ್ವೇಷಿಸದೆ, ಎಲ್ಲರಲ್ಲಿಯೂ ಮಿತ್ರಭಾವದಿಂದಲೂ ಕರುಣೆಯಿಂದಲೂ ಇರುವನು. ಇಂತಹವನನ್ನು ಕಂಡರೆ ಇತರರಿಗೆ ಉದ್ವೇಗ ಹುಟ್ಟುವುದಿಲ್ಲ ಮತ್ತು ಇಂತಹವನಿಗೆ ಇತರರಲ್ಲಿ ಉದ್ವೇಗ ಹುಟ್ಟುವುದಿಲ್ಲ. (ಗೀತೆ 12 13 ಮತ್ತು 15) ಆದುದರಿಂದ ಮೋಕ್ಷ ಸಾಧನೆಯಲ್ಲಿ ನಿರತನಾಗಿರುವ ವ್ಯಕ್ತಿಯು ಪ್ರತ್ಯೇಕತಾ ಮನೋಭಾವವನ್ನು ತ್ಯಜಿಸಿ ಸಾರ್ವತ್ರಿಕ ಮನೋಭಾವವನ್ನು ಹೊಂದಿರುವನು.

ಸಾಮಾಜಿಕ ನ್ಯಾಯ (Social Justice)

ಭಾರತ ದೇಶವು 1950 ರಲ್ಲಿ ಸ್ವೀಕರಿಸಿದ ಸಂವಿಧಾನದ ಪ್ರಕಾರ ದೇಶವು ಪ್ರಜಾಪ್ರಭುತ್ವವನ್ನು ಅಂಗೀಕರಿಸುವುದೊಂದೇ ಅಲ್ಲದೆ ತನ್ಮೂಲಕ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯವು ಒಂದು ಮುಖ್ಯ ಅಂಶವೆಂದ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಉಂಟು ಮಾಡುವುದು ಮೂಲಭೂತ ಲಕ್ಷಣವೆಂದು ಘೋಷಿಸಿದೆ

ಈ ಘೋಷಣೆಯು ಭಾರತೀಯ ಸಮಾಜದಲ್ಲಿ ಕ್ರಾಂತಿಕಾರಕ ಘೋಷಣೆಯಾಗಿದೆ. ಈ ಘೋಷಣೆಯಲ್ಲಿ ಅಡಗಿರುವ ತತ್ವಗಳಿಗೆ ವ್ಯಾವಹಾರಿಕ ರೂಪವನ್ನು ಕೊಡುವುದೇ ಭಾರತ ಸರ್ಕಾರದ ಮತ್ತು ಭಾರತೀಯ ಸಮಾಜದ ಮುಖ್ಯ ಕರ್ತವ್ಯ.

ಈ ತತ್ವಗಳನ್ನು ಪ್ರಪಂಚದ ಅನೇಕ ಮತಗಳು ಆದಿಕಾಲದಿಂದಲೂ ಒಪ್ಪಿಕೊಂಡಿದ್ದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಅವು ರೂಪುಗೊಂಡಿಲ್ಲ.

ಮೇಲೆ ನೋಡಿರುವ ಹಾಗೆ ವೇದಗಳ ಕಾಲದಲ್ಲಿ ವ್ಯಕ್ತಿ ಸಮಾನತೆ, ಸ್ವಾತಂತ್ರ್ಯ ಮತ್ತು ಭಾತೃಭಾವನೆ ಸಾಮಾಜಿಕ ಜೀವನದ ಲಕ್ಷಣಗಳಾಗಿತ್ತೆಂಬುದನ್ನು ಅನೇಕ ಮಂತ್ರಗಳು ತಿಳಿಯಪಡಿಸುತ್ತವೆ. ಆದರೆ ಕಾರಣಾಂತರಗಳಿಂದ ಧರ್ಮಸೂತ್ರಗಳಲ್ಲೂ ಧರ್ಮಶಾಸ್ತ್ರಗಳಲ್ಲೂ ಈ ತತ್ವಗಳಿಗೆ ಪ್ರಾಮುಖ್ಯತೆ ಬರಲಿಲ್ಲ. ತದ್ವಿರುದ್ಧವಾಗಿ ವರ್ಣ, ಜಾತಿ, ಲಿಂಗಭೇದಗಳು ಪ್ರಾಮುಖ್ಯತೆಯನ್ನು ಹೊಂದಿ ಭಾರತೀಯ ಸಮಾಜವು ಪ್ರತ್ಯೇಕತಾ ಮನೋಭಾವಗಳಿಂದ ಸುಮಾರು 2500 ವರ್ಷಗಳಿಂದಲೂ ಕೂಡಿರುವುದು.

ಇಂತಹ ಪರಿಸ್ಥಿತಿಯು ಭಾರತೀಯ ಸಂಸ್ಕೃತಿಯ ಅಸಾಮಾನ್ಯವಾದ ಲಕ್ಷಣವಲ್ಲ. ನಮಗೆ ತಿಳಿದಿರುವ ಎಲ್ಲಾ ಸಮಾಜಗಳ ಚರಿತ್ರೆಯು ತತ್ವಕ್ಕೂ, ವಾಸ್ತವಿಕ ಸ್ಥಿತಿಗೂ ವಿಭಿನ್ನತೆಯನ್ನು ಸೂಚಿಸುವುವು. ಆದರ್ಶಗಳು ಉನ್ನತವಾಗಿದ್ದರೂ ಅವು ವ್ಯವಹಾರದಲ್ಲಿ ರೂಪುಗೊಳ್ಳಬೇಕಾದರೆ ಸಮಾಜದಲ್ಲಿ ಅನೇಕ ಬದಲಾವಣೆಗಳು ಅವಶ್ಯಕ. ಇಲ್ಲದಿದ್ದರೆ ಸಮಾಜದಲ್ಲಿ ಅನೇಕ ಅನ್ಯಾಯಗಳು ತೋರುವುವು.

ಪ್ರಜಾ ಪ್ರಭುತ್ವದ ತತ್ವಗಳನ್ನು ಒಳಗೊಂಡ ಗ್ರೀಕ್ ಪಟ್ಟಣಗಳ ಸರ್ಕಾರಗಳಲ್ಲಿ ಗುಲಾಮರನ್ನು ಇಟ್ಟುಕೊಂಡಿರುವುದು ನ್ಯಾಯಬದ್ಧವಾದ ಆಚಾರವಾಗಿತ್ತು. ಪ್ರಜಾಪ್ರಭುತ್ವದ ತತ್ವಗಳನ್ನು ಕುರಿತು 2300 ವರ್ಷಗಳ ಹಿಂದೆಯೇ ತೀವ್ರವಾಗಿ ಪರ್ಯಾಲೋಚಿಸಿದ ಪ್ಲೇಟೋ ಮತ್ತು ಅರಿಸ್ಟಾಟಲ್ ಮುಂತಾದ ಸಮಾಜ ಶಾಸ್ತ್ರಜ್ಞರು ಗುಲಾಮ ಪದ್ಧತಿಯು ಗ್ರೀಕ್ ಸಮಾಜದ ಸಾಮಾನ್ಯ ಲಕ್ಷಣವೆಂದು ಒಪ್ಪಿಕೊಂಡರು. ಪ್ರಜಾಪ್ರಭುತ್ವಕ್ಕೂ ಗುಲಾಮಗಿರಿಗೂ ಇರುವ

ವಿಭಿನ್ನತೆ ಅವರಿಗೆ ಅನ್ಯಾಯವೆಂದು ತೋರಲಿಲ್ಲ. ಆಚರಣೆಯಲ್ಲಿ ಇರುವುದು ನ್ಯಾಯ. ಆಚರಣೆಗೆ ವಿರುದ್ಧವಾಗಿರುವುದು ಅನ್ಯಾಯ. ಇಂತಹ ಮನೋಭಾವಗಳಿಂದ ಮಾನವ ಚರಿತ್ರೆಯಲ್ಲಿ ಅನೇಕ ಸಮಾಜಗಳು ಎಷ್ಟು ಉತ್ಕೃಷ್ಟ ಆದರ್ಶಗಳನ್ನು ಹೊಂದಿದ್ದರೂ ಸಾಮಾಜಿಕ ಅನ್ಯಾಯಗಳನ್ನು ಆಚರಣೆಯಲ್ಲಿ ಇಟ್ಟುಕೊಂಡಿದ್ದವು.

ವ್ಯಕ್ತಿಸ್ವಾತಂತ್ರ್ಯವು, ಸಮಾನತ್ವವು ಮಾನವನ ಆಜನ್ಮಹಕ್ಕುಗಳೆಂದು ಹದಿನೆಂಟನೆಯ ಶತಮಾನದಲ್ಲಿ ಇಂಗ್ಲೇಂಡಿನಲ್ಲೂ ಫ್ರಾನ್ಸಿನಲ್ಲೂ ರಾಜಕೀಯ ತತ್ವಶಾಸ್ತ್ರಜ್ಞರು ವಿಶದೀಕರಿಸಿದರು. ಈ ತತ್ವಗಳನ್ನು ಒಪ್ಪಿಕೊಂಡು 1776 ರಲ್ಲಿ ಅಮೇರಿಕಾದ ಕ್ರಾಂತಿಯಿಂದ ಉಂಟಾದ ಸ್ವಾತಂತ್ರ್ಯ ಘೋಷಣೆಯಲ್ಲಿ ಮಾನವರೆಲ್ಲರೂ ಜನ್ಮತಃ ಸಮಾನರೆಂದು, ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಜೀವನವನ್ನು ತನಗೆ ಸಮರ್ಪಕವಾದ ರೀತಿಯಿಂದ ನಡೆಸಿಕೊಳ್ಳುವುದು ಪರಭಾರೆಮಾಡಲಾಗದ ಹಕ್ಕೆಂದೂ ಹೇಳಲಾಗಿದೆ. ಇಂತಹ ಕ್ರಾಂತಿಕಾರಕ ಮನೋಭಾವಗಳನ್ನು ಫ್ರಾನ್ಸ್ ದೇಶದಲ್ಲಿ 1789 ರಲ್ಲಿ ಆಚರಣೆಗೆ ತರಲಾಯಿತು. ಸ್ವತಂತ್ರತಾ, ಸಮಾನತಾ ಮತ್ತು ಭ್ರಾತೃತ್ವವೆಂಬ ಮೂರು ಆಧುನಿಕ ತತ್ವಗಳನ್ನು 1789 ರಲ್ಲಿ ಫ್ರಾನ್ಸ್ ಸಮಾಜವು ಘೋಷಿಸಿತು. ಸಮಾನತ್ವ ಮತ್ತು ಸಾಮಾಜಿಕನ್ಯಾಯ ಮಾನವನ ಮೂಲಭೂತಹಕ್ಕುಗಳೆಂದು 1917 ರಲ್ಲಿ ರಷ್ಯದ ಕ್ರಾಂತಿಯಲ್ಲಿ ರಕ್ತ ಪ್ರವಾಹದ ಮೂಲಕ ಸ್ಥಾಪಿಸಲಾಯಿತು. ಈ ವಿಧವಾಗಿ ಹದಿನೆಂಟನೆಯ ಶತಮಾನದಿಂದಲೂ ಮಾನವ ಚರಿತ್ರೆಯು ಒಂದು ಹೊಸ ರೂಪವನ್ನು ತಾಳುತ್ತಿರುವುದು. ಈ ತತ್ವಗಳ ಆಧಾರದ ಮೇಲೆಯೇ ಭಾರತೀಯ ಸ್ವಾತಂತ್ರ್ಯದ ಹೋರಾಟವು ನಡೆದು 1947 ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ನಿರ್ಮೂಲ ಭಾರತದೇಶದಲ್ಲಿ ಮಾತ್ರವಲ್ಲದೆ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ವಲಸೆ ರಾಜ್ಯಪದ್ಧತಿಯ ನಿರ್ಮೂಲನಕ್ಕೆ ಕಾರಣವಾಯಿತು.

ಈ ಆಧುನಿಕ ಸಮಾಜದ ಮುಖ್ಯ ಲಕ್ಷಣವೆಂದರೆ ವ್ಯಕ್ತಿಗೌರವ, ವ್ಯಕ್ತಿಸ್ವಾತಂತ್ರ್ಯ, ಸಮಾನತೆ ಮತ್ತು ಸಂಘಟನೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಬೆಳೆಯುವುದಕ್ಕೆ ಅವಕಾಶವಿರಬೇಕು. ವ್ಯಕ್ತಿಯ ಬೆಳವಣಿಗೆಗೆ ಆರ್ಥಿಕ, ರಾಜಕೀಯ, ಸಾಮಾಜಿಕ, ಮಾನಸಿಕ ಮುಂತಾದ ಅಡಚಣೆಗಳು ಇರಬಾರದು. ನಿರ್ಭಯವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಬೆಳೆದು ತನ್ನ ಆಲೋಚನಾ ಶಕ್ತಿಯ ಆಧಾರದ ಮೇಲೆ ತನ್ನ ಜೀವನವನ್ನು ಮುಂದುವರಿಸಿ ಸಾರ್ಥಕಮಾಡಿಕೊಳ್ಳುವ ಅವಕಾಶವಿರಬೇಕು. ಇಂತಹ ಅವಕಾಶಗಳಿದ್ದರೆ ಪ್ರತಿಯೊಬ್ಬ ಮನುಷ್ಯನು ತನ್ನ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಿ ಮುಂದುವರೆಯುವುದು ಸಾಧ್ಯವಾಗುವುದು. ಮನುಷ್ಯನ ಬೆಳವಣಿಗೆಗೆ ಅಜ್ಞಾನ, ಅಸ್ವಾತಂತ್ರ್ಯ, ದಾರಿದ್ರ್ಯ ಇವು

ಗಳೇ ದೊಡ್ಡ ಪ್ರತಿಬಂಧಕಗಳು. ಈ ಅಡಚಣೆಗಳನ್ನು ತೆಗೆದು ಹಾಕಿ ಪ್ರತಿಯೊಬ್ಬ ವ್ಯಕ್ತಿಯೂ ಬೆಳೆಯುವುದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಡುವುದೇ ಆಧುನಿಕ ಸಮಾಜದ ಮುಖ್ಯ ಗುರಿ. ಈ ಗುರಿಯನ್ನು ಸಾಧಿಸಬೇಕಾದರೆ ವ್ಯಕ್ತಿಸ್ವಾತಂತ್ರ್ಯ ಮತ್ತು ಸಮಾನತ್ವ ಮುಖ್ಯ ಅಂಶಗಳು. ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ನಿರ್ಬಂಧಗಳು ವ್ಯಕ್ತಿಸ್ವಾತಂತ್ರ್ಯವನ್ನು ಕುಟಿಲಗೊಳಿಸಬಾರದು. ಪ್ರಭುತ್ವದ ದೃಷ್ಟಿಯಲ್ಲೇ ಆಗಲಿ ಸಮಾಜದ ದೃಷ್ಟಿಯಲ್ಲೇ ಆಗಲಿ ಕೆಲವರು ಹೆಚ್ಚು ಕೆಲವರು ಕಡಿಮೆ ಎಂಬ ಭಾವನೆ ಸಮಾನತ್ವದ ಗುರುತಲ್ಲ. ಆದರೆ ಈ ಆದರ್ಶಗಳಿಗೆ ವಿರುದ್ಧ ವಾಗಿ ಚರಿತ್ರೆಯಲ್ಲಿ ಅನೇಕ ಸಮಾಜಗಳಲ್ಲಿ ಅಸಮಾನತ್ವ ಮತ್ತು ದಾಸ್ಯ ಕಂಡು ಬರುವುದು.

ಮನುಷ್ಯನಲ್ಲಿ ಸ್ವಭಾವಸಿದ್ಧ ತಾರತಮ್ಯಗಳಿರುವುದು ಸಹಜ. ದೈಹಿಕ ಶಕ್ತಿಯಲ್ಲಾಗಲಿ ಬುದ್ಧಿಶಕ್ತಿಯಲ್ಲಾಗಲಿ ಮೈಕಟ್ಟಿನಲ್ಲಾಗಲಿ ಸಮಾನತೆ ಇರುವುದಿಲ್ಲ. ಆದರೆ ಈ ಅಸಮಾನತೆಗಳು ಸಹಜ ಅಸಮಾನತೆಗಳು. ಇವುಗಳನ್ನು ನಿರ್ಮೂಲಮಾಡುವುದು ಅಸಾಧ್ಯ. ಈ ವ್ಯತ್ಯಾಸಗಳನ್ನು ನಿರ್ಮೂಲಮಾಡುವ ಪ್ರಯತ್ನಗಳು ಕೇವಲ ಮೂರ್ಖತನವು. ಆದರೆ ಸಮಾಜದಲ್ಲಿ ಈ ಅಸಮಾನತೆಗಳು ಅಷ್ಟು ಮುಖ್ಯವಲ್ಲ. ಉದಾಹರಣೆಗೆ ಶ್ರೀ ಲಾಲಬಹಾದ್ದೂರ್ ಶಾಸ್ತ್ರಿಯವರು ಅತಿ ಗಿಡ್ಡ ಮನುಷ್ಯ. ಅವರು ಪ್ರಧಾನಿಯಾಗಿದ್ದಾಗ ಅವರ ಚಿತ್ರವನ್ನು ನೋಡಿ ಅನೇಕರು ನಗುತ್ತಿದ್ದರು, ಆದರೆ ನಾಲ್ಕಾರು ತಿಂಗಳೊಳಗೆ ಅವರ ದಕ್ಷತೆ, ಧೈರ್ಯ ಮುಂತಾದ ಗುಣಗಳನ್ನು ಕಂಡು ಅವರ ಚಿತ್ರವನ್ನು ನಂತರ ನೋಡಿದಾಗ ಒಂದು ಹೊಸ ಗೌರವ ಮನುಷ್ಯರ ಮನಸ್ಸಿನಲ್ಲಿ ಮೂಡಿತು. ಕೇವಲ ದೈಹಿಕ ಲಕ್ಷಣಗಳಿಗೆ ಗಮನ ಕೊಡದೆ ಅವರ ಗುಣಗಳಿಗೆ ಗಮನಕೊಡಲಾರಂಭಿಸಿದರು. ಅವರು ತಾಷ್ಕೆಂಟಿನಲ್ಲಿ ನಿಧನ ಹೊಂದಿದ ವಿಷಯವನ್ನು ಕೇಳಿ ಇಡೀ ದೇಶ ಮತ್ತು ಪ್ರಪಂಚವೇ ದುಃಖಕ್ಕೆ ಗುರಿಯಾಯಿತು. ಈ ವಿಧವಾಗಿ ಸ್ವಾಭಾವಿಕ ತಾರತಮ್ಯಗಳನ್ನು ತೆಗೆದುಹಾಕುವುದು ಸಮಾನತ್ವದ ಗುರಿಯಲ್ಲ. ಕೃತಕ ಅಸಮಾನತ್ವಗಳನ್ನು ನಿರ್ಮೂಲ ಮಾಡುವುದೇ ಆಧುನಿಕ ಸಮಾಜದ ಗುರಿ ಮುಖ್ಯವಾಗಿ ಮನುಷ್ಯರಲ್ಲಿ ಕಂಡುಬರುವ ಅಸಮಾನತ್ವಗಳು ರಾಜಕೀಯ, ಆರ್ಥಿಕ ಮತ್ತು ಸಂಪ್ರದಾಯಗಳ ಮೇಲೆ ನಿಂತಿರುವುವು. ಈ ವ್ಯತ್ಯಾಸಗಳು ಕೃತಕ ವ್ಯತ್ಯಾಸಗಳು ಈ ವ್ಯತ್ಯಾಸಗಳಿಂದುಂಟಾದ ತಾರತಮ್ಯಗಳನ್ನು ಕಡಿಮೆ ಮಾಡುವುದೇ ಸಮಾನತ್ವದಗುರಿ. ಈ ವ್ಯತ್ಯಾಸಗಳ ಪ್ರಭಾವವು ಕಡಿಮೆಯಾದರೆ ವ್ಯಕ್ತಿಯ ಸ್ವಾಭಾವಿಕ ಗುಣಗಳು ಹೊರಬೀಳುವುವು.

ಸರ್ಕಾರಗಳು ಏರ್ಪಡಿಸುವ ಅನುಕೂಲಗಳೆಲ್ಲವೂ ಎಲ್ಲ ವ್ಯಕ್ತಿಗಳಿಗೂ ದೊರೆಯಬೇಕು ಇದೇ ಪೌರಜನ ಸಮಾನತ್ವದ ಅರ್ಥ. ಎರಡನೆಯದು ಕಾನೂ

ನಿಗೆ ಸಂಬಂಧಪಟ್ಟ ಸಮಾನತ್ವ. ರಾಜ್ಯದ ಕಾನೂನುಗಳು ಸರ್ವರಿಗೂ ಸಮನಾಗಿ ಅನ್ವಯಿಸಬೇಕು. ಮೂರನೆಯ ಅಂಶವೆಂದರೆ ಸಮಾನ ಅವಕಾಶಗಳು. ಜಾತಿ, ಮತ, ಕುಲ ಮುಂತಾದ ಕೃತಕ ಸನ್ನಿವೇಶಗಳಿಂದ ಒಬ್ಬ ವ್ಯಕ್ತಿಯ ಅವಕಾಶಗಳು ಕುಟಿಲಗೊಳ್ಳಬಾರದು ಅಂದರೆ ಸಮಾಜದ ಅಭಿವೃದ್ಧಿ ಇಡೀ ಸಮಾಜಕ್ಕೆ ಅನ್ವಯಿಸಬೇಕೆ ವಿನಾ ಒಂದೆರಡು ಪಂಗಡಗಳಿಗಲ್ಲ. ಆದುದರಿಂದ ಕೃತಕವಾಗಿರುವ ಆರ್ಥಿಕ ಸಾಮಾಜಿಕ ಮುಂತಾದ ಅಸಮಾನತ್ವಗಳನ್ನು ಪರಿಹರಿಸಿ ವ್ಯಕ್ತಿಗಳ ಏಳಿಗೆಗೆ ಅವಕಾಶಗಳನ್ನು ಉಂಟುಮಾಡುವುದೇ ಸಮಾನತ್ವದ ಗುರಿ. ಒಂದು ಸಮಾಜದಲ್ಲಿ ಶೇ. 90 ಮಂದಿ ಅನಕ್ಷರಸ್ಥ, ಅಕುಶಲ ಕೂಲಿಗಾರರಿದ್ದರೆ ಆ ಸಮಾಜದಲ್ಲಿ ಬಡವರ ಸ್ಥಿತಿಗೂ, ಧನಿಕರ ಮತ್ತು ವಿದ್ಯಾವಂತರ ಸ್ಥಿತಿಗೂ ಅತ್ಯಂತ ಅಂತರವಿರುವುದು ಅಂತಹ ಸಮಾಜದಲ್ಲಿ ಅವಕಾಶಗಳನ್ನು ಕಲ್ಪಿಸಿ ಕೊಟ್ಟರೆ ಅವುಗಳನ್ನು ಉಪಯೋಗಿಸುವ ಶಕ್ತಿಯೂ ಸಹ ದಲಿತ ವರ್ಗದ ಜನರಿಗೆ ಇರುವುದಿಲ್ಲ. ಇದಕ್ಕೆ ಉದಾಹರಣೆಯೊಂದನ್ನು ಕೊಡಬಹುದು. ಪಟ್ಟಣದಲ್ಲಿರುವ ಅನುಕೂಲಸ್ಥರ ಮನೆಗಳಲ್ಲಿ ಬಡವರನ್ನು ಮನೆಯ ಕೆಲಸಕ್ಕೆ ನೇಮಿಸಿಕೊಳ್ಳುವುದು ಇಂದಿಗೂ ಸಾಧ್ಯ. ಈ ಕೂಲಿಗಾರರು ತಮ್ಮ ಯಜಮಾನರ ಕುಟುಂಬಕ್ಕೆ ಸಕಾಲಕ್ಕೆ ಸ್ನಾನಕ್ಕೆ ನೀರು ಕಾಯಿಸಿ, ಪಾತ್ರೆಗಳನ್ನು ತೊಳೆದು, ಅವರು ಸ್ನಾನ ಮಾಡಿದ ಮೇಲೆ ಅವರ ವಸ್ತ್ರಗಳನ್ನು ಶುಭ್ರವಾಗಿ ಒಗೆದು ಮಾರನೆಯ ದಿನದ ಸ್ನಾನಕ್ಕೆ ಸಿದ್ಧತೆಯನ್ನು ಮಾಡುವರು. ಆದರೆ ತಾವು ಮಾತ್ರ ತಿಂಗಳಿಗೆ ಒಂದು ಸಲವಾದರೂ ಸ್ನಾನಮಾಡುವುದಿಲ್ಲ. ಅವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರೂ ಸಹ ಆ ಅವಕಾಶಗಳನ್ನು ಉಪಯೋಗಿಸುವುದಿಲ್ಲ. ಇದಕ್ಕೆ ಕಾರಣವೇನು ? ಅವಕಾಶಗಳನ್ನು ಉಪಯೋಗಿಸಬೇಕಾದರೆ ಅವಕಾಶವಿದ್ದರೆ ಮಾತ್ರ ಸಾಲದು. ಆ ಅವಕಾಶಕ್ಕೂ ತನ್ನ ಜೀವನಕ್ಕೂ ಒಂದು ಸಂಬಂಧ ಅವನ ಮನಸ್ಸಿನಲ್ಲಿ ಉಂಟಾಗಬೇಕು. ಈ ಅವಕಾಶವನ್ನು ನಾನು ಉಪಯೋಗಿಸಿಕೊಳ್ಳಲು ಸಾಧ್ಯ ಎಂಬ ಭರವಸೆ ಅವನಲ್ಲಿ ಉಂಟಾಗಬೇಕು. ಈ ಭರವಸೆ ಬರಬೇಕಾದರೆ ಅವನ ಮನೆತನದಲ್ಲಿ ಅಂತಹ ಸಂಪ್ರದಾಯವಿರಬೇಕು. ಗುಂಪಿನ ಸಂಪ್ರದಾಯ ವ್ಯಕ್ತಿಯ ವರ್ತನೆಗೆ ಕಾರಣವಾಗುವುದು. ಗುಂಪಿನವರ ಸಂಪ್ರದಾಯಕ್ಕೂ ಅವಕಾಶಕ್ಕೂ ವ್ಯತಿರಿಕ್ತವಿದ್ದರೆ ಆಗ ಸಂಪ್ರದಾಯವೇ ಬಲಹೊಂದಿ ವ್ಯಕ್ತಿಯ ಆಸೆ ಆಕಾಂಕ್ಷೆಗಳು ಬಲಹೀನವಾಗುವುವು. ಆದುದರಿಂದಲೇ ವ್ಯಕ್ತಿಯ ವರ್ತನೆಯನ್ನು ಮಾರ್ಪಡಿಸಬೇಕಾದರೆ ಆತನ ಗುಂಪಿನ ಸಂಪ್ರದಾಯವನು ಬದಲಾಯಿಸಬೇಕು.

ಈ ವಿಧವಾಗಿ ಸಾಮಾಜಿಕ ನ್ಯಾಯವು ಕೇವಲ ಕಾನೂನಿಗೆ ಸಂಬಂಧಪಟ್ಟ ನ್ಯಾಯವಲ್ಲ. ಕಾನೂನಿನ ಪ್ರಕಾರ ಅಸ್ಪೃಶ್ಯತೆಯು ಶಿಕ್ಷಾರ್ಹ. ಆದರೆ ಈ

ಆದರ್ಶ ಸಾಮಾಜಿಕ ವರ್ತನೆಯ ಮೇಲೆ ಮುಖ್ಯವಾಗಿ ಹಳ್ಳಿಗಳಲ್ಲಿ ಪ್ರಭಾವ ವನ್ನು ಬೀರಿಲ್ಲ. ಅಂದರೆ ಸಾಮಾಜಿಕ ನ್ಯಾಯವು ಧರ್ಮದ ಎರಡು ಲಕ್ಷಣ ಗಳನ್ನು ಒಳಗೊಂಡಿರುವುದು. ಒಂದು ಕಡೆ ಕಾನೂನು ಮತ್ತೊಂದು ಕಡೆ ನೀತಿ. ಅಂದರೆ ಆ ಸಮಾಜದ ಕಾನೂನುಗಳು ಮತ್ತು ವರ್ತನೆಗಳು ಆ ಸಮಾಜದ ನೀತಿನಿಯಮಗಳನ್ನು ಒಳಗೊಂಡಿರಬೇಕು. ಮುಖ್ಯವಾಗಿ ಆ ಸಮಾಜದಲ್ಲಿ ಇರುವ ಅವಕಾಶಗಳು, ವೃತ್ತಿಸೌಲಭ್ಯಗಳು, ಮಾನಮರ್ಯಾದೆಗಳು ನೀತಿನಿಯಮಗಳಿಗೆ ಅನು ಸಾರವಾಗಿ ಇದ್ದು ಆ ಸಮಾಜದ ಎಲ್ಲ ವ್ಯಕ್ತಿಗಳಿಗೂ ದೊರಕುವಂತೆ ಇರಬೇಕು. ಆಗ ಆ ಸಮಾಜದಲ್ಲಿ ಸಾಮಾಜಿಕ ನ್ಯಾಯ ರೂಪುಗೊಳ್ಳುವುದು.

ಈ ವಿಧವಾಗಿ ಸಮಾಜದ ಸೌಲಭ್ಯಗಳನ್ನು ಸಮಾಜದ ಅವಕಾಶಗಳನ್ನು ಎಲ್ಲರಿಗೂ ದೊರಕುವಂತೆ ಮಾಡುವುದೇ ಸಂವಿಧಾನದ ಮುಖ್ಯ ಗುರಿ. ಆದರೆ ಈ ಗುರಿಗಳು ಸಫಲವಾಗಬೇಕಾದರೆ ಸಂಪ್ರದಾಯದಲ್ಲಿ ಒಪ್ಪಿಕೊಂಡಿರುವ ಮತು ಸಾಮಾಜಿಕ ವರ್ತನೆಗೆ ಕಾರಣವಾಗಿರುವ ಕೃತಕತಾರತಮ್ಯಗಳನ್ನು ನಿರ್ಮೂಲ ಮಾಡುವುದು ಅಗತ್ಯ. ಈ ತಾರತಮ್ಯಗಳನ್ನು ನಿರ್ಮೂಲಮಾಡುವುದು ಕೇವಲ ಕಾನೂನಿನಿಂದ ಸಾಧ್ಯವಿಲ್ಲ. ಈ ಬದಲಾವಣೆಯುಂಟಾಗಬೇಕಾದರೆ ಸಂಪ್ರದಾಯ ಗಳಲ್ಲಿ ಮಾನವತ್ವದ ಬಗ್ಗೆ ಇರುವ ಅಭಿಪ್ರಾಯಗಳಲ್ಲಿ ಬದಲಾವಣೆಯುಂಟಾಗ ಬೇಕು ಮತ್ತು ಈ ಹೊಸ ಧ್ಯೇಯಗಳ ಪ್ರಕಾರ ಅಂದರೆ ಎಲ್ಲ ಪೌರರೂ ಸಮಾನರು, ಎಲ್ಲ ಪೌರರಿಗೂ ಸ್ವಾತಂತ್ರ್ಯವಿರುವುದು; ಎಲ್ಲ ಪೌರರಿಗೂ ಸಮಾನ ಅವಕಾಶಗಳು ಇರಬೇಕು; ಎಲ್ಲ ಪೌರರಿಗೂ ತಮ್ಮ ತಮ್ಮ ಶಕ್ತ್ಯಾನುಸಾರ ಅಭಿವೃದ್ಧಿಯನ್ನು ಪಡೆಯಲು ಅವಕಾಶವಿರಬೇಕು ಎಂಬ ಈ ಧ್ಯೇಯಗಳು ಸಮಾ ಜದ ಪ್ರತಿಯೊಬ್ಬರಲ್ಲೂ ರಕ್ತಗತವಾಗಬೇಕು. ಇದೇ ಸಮಾಜನ್ಯಾಯದ ಗುರಿ.

ಆಧುನಿಕ ದೃಷ್ಟಿಯಿಂದ ಎಲ್ಲ ಜನರಿಗೂ ಕನಿಷ್ಠದರ್ಜೆಯ ಜೀವನ ಮಟ್ಟಕ್ಕೆ ಬೇಕಾದ ಅವಶ್ಯಕತೆಗಳನ್ನು ಸರ್ಕಾರವು ಒದಗಿಸಿಕೊಡಬೇಕು. ಈ ಅವಶ್ಯಕತೆಗಳು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು. ಅಂದರೆ ದೇಶಗಳಲ್ಲಿರುವ ಪ್ರತಿ ಯೊಬ್ಬ ವ್ಯಕ್ತಿಗೂ ಸಾಕಾದಷ್ಟು ಊಟ, ಬಟ್ಟೆ, ವಸತಿ, ವಿದ್ಯಾಭ್ಯಾಸ, ಆರೋಗ್ಯ ಮುಂತಾದುವುಗಳನ್ನು ಒದಗಿಸಿಕೊಡುವುದು ಆಧುನಿಕ ರಾಜ್ಯದ ಕರ್ತವ್ಯ. ಪ್ರಜೆ ಗಳ ಈ ಹಕ್ಕುಗಳು ಮತ್ತು ರಾಜ್ಯದ ಈ ಕರ್ತವ್ಯಗಳು 20 ನೇ ಶತಮಾನದ ಆದರ್ಶಗಳು. ಇವು ಸಮಾಜನ್ಯಾಯದ ಆಧಾರದ ಮೇಲೆ ನಿಂತಿರುವುವು ಮತ್ತು ಸಮಾಜನ್ಯಾಯದ ಆದರ್ಶಗಳಿಗೆ ರೂಪುಕೊಡುವುವು, ಆದುದರಿಂದಲೇ ಭಾರ ತೀಯ ಸಂವಿಧಾನದ 45 ನೇ ವಿಭಾಗದ ಪ್ರಕಾರ ಭಾರತ ದೇಶದ ಪ್ರತಿಯೊಂದು ಮಗುವಿಗೂ 14 ನೇ ವರ್ಷದವರೆವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಬೇಕಾದುದು ರಾಜ್ಯದ ಕರ್ತವ್ಯವೆಂದು ಒಪ್ಪಿಕೊಳ್ಳ

ಲಾಗಿದೆ. ಸಂವಿಧಾನದ 15.3 ನೇ ವಿಭಾಗದ ಪ್ರಕಾರ ಹೆಂಗಸರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಪ್ರತ್ಯೇಕ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದುದು ರಾಜ್ಯದ ಕರ್ತವ್ಯವೆಂದೂ ಈ ಕರ್ತವ್ಯವು ಸ ಮಾ ನ ತ್ವ ಕ್ಕೆ ಚ್ಯುತಿ ತರುವುದಿಲ್ಲವೆಂದೂ ಘೋಷಿಸಿರುವುವು. ಇದೇ ವಿಧವಾಗಿ ಸಂವಿಧಾನದ 15.4 ನೇ ವಿಭಾಗದ ಪ್ರಕಾರ ದಲಿತ ವರ್ಗದವರಿಗೆ ಪ್ರತ್ಯೇಕ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಒದಗಿಸುವುದು ರಾಜ್ಯದ ಕರ್ತವ್ಯವೆಂದೂ, ಇದು ಸಮಾನತ್ವದ ಹಕ್ಕಿಗೆ ವಿರುದ್ಧವಲ್ಲವೆಂದೂ, ಒಪ್ಪಿಕೊಳ್ಳಲಾಗಿದೆ. ಇದೇರೀತಿಯಾಗಿ ಸಂವಿಧಾನದ 16.4ನೇ ವಿಭಾಗವು ದಲಿತ ವರ್ಗದವರಿಗೆ ಸರ್ಕಾರದಲ್ಲಿ ಉದ್ಯೋಗ ಅವಕಾಶಗಳನ್ನು ಮೀಸಲಾಗಿ ಇಡಬೇಕಾದುದು ರಾಜ್ಯದ ಕರ್ತವ್ಯವೆಂದೂ, ಇದು ಸಮತಾಭಾವನೆಗೆ ವಿ ರು ದ್ಧ ವ ಲ್ಲ ವೆಂದೂ ಹೇಳಿದೆ. ಸಂವಿಧಾನದ 43 ನೇ ವಿಭಾಗದ ಪ್ರಕಾರ ರಾಜ್ಯದ ಎಲ್ಲಾ ಕೆಲಸಗಾರರಿಗೂ ಪರ್ಯಾಪ್ತವೇತನ ಅಂದರೆ ಜೀವನಕ್ಕೆ ಸಾಕಾಗುವಷ್ಟು ಸಂಬಳವನ್ನು ಪಡೆಯಲು ಮತ್ತು ಕೆಲಸ ಮಾಡುವುದಕ್ಕೆ ಸರಿಯಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದುದು ರಾಜ್ಯದ ಕರ್ತವ್ಯವೆಂದು ಒಪ್ಪಿಕೊಳ್ಳಲಾಗಿದೆ. ಮೇಲೆ ವಿವರಿಸಿರುವ ಸಂವಿಧಾನದ ವಿಭಾಗಗಳು ಆಧುನಿಕ ಭಾರತೀಯ ರಾಜ್ಯದ ಕರ್ತವ್ಯಗಳನ್ನು ಪ್ರಕಟಿಸುವುವು.

ಮೇಲೆ ನೋಡಿರುವಹಾಗೆ ಆಧುನಿಕ ರಾಜ್ಯಾಂಗಗಳ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಸ್ವತಂತ್ರ ಮತ್ತು ಸಮಾನತ್ವವನ್ನು ಕಾಯುವುದೇ ರಾಜ್ಯದ ಕರ್ತವ್ಯಗಳು. ಆದರೆ ಸಾವಿರಾರು ವರ್ಷಗಳಿಂದ ಮಿಕ್ಕ ಎಲ್ಲಾ ದೇಶಗಳಲ್ಲಿಯೂ ಇರುವ ಹಾಗೆ ಭಾರತದೇಶದಲ್ಲಿಯೂ ಸಹ ಎಲ್ಲ ವರ್ಗಗಳಿಗೆ ಸೇರಿದ ಹೆಂಗಸರಿಗೂ, ದಲಿತ ವರ್ಗಗಳಿಗೆ ಸೇರಿದ ಎಲ್ಲ ಪ್ರಜೆಗಳಿಗೂ ಅನೇಕ ವಿಧವಾದ ದುರ್ಬಲತೆಗಳು ಆಗಿನ ಕಾನೂನಿನ ಪ್ರಕಾರ ನ್ಯಾಯವಾಗಿತ್ತು. ಆದುದರಿಂದಲೇ ಶೇ. 95 ಮಂದಿ ಹೆಂಗಸರಲ್ಲೂ ಶೇ. 90 ಮಂದಿ ದಲಿತವರ್ಗದ ಗಂಡಸರಲ್ಲೂ ಅನಕ್ಷರಸ್ಥತೆ ಇದೆ. ಕಾನೂನಿನ ಪ್ರಕಾರವೂ ಸಂಪ್ರದಾಯದ ಪ್ರಕಾರವೂ 19 ನೇ ಶತಮಾನದವರೆಗೂ ಹೆಂಗಸರಿಗೂ ಶೂದ್ರರಿಗೂ ವಿದ್ಯಾಭ್ಯಾಸದ ಅವಕಾಶಗಳಿರಲಿಲ್ಲ. ಆದುದರಿಂದ ಈ ಗುಂಪಿನ ಜನರು ಹಿಂದುಳಿದ ಪಂಗಡಕ್ಕೆ ಸೇರಿದವರಾದರು. ಆಧುನಿಕ ರಾಜ್ಯಾಂಗದ ಪ್ರಕಾರ ಸಮಾನತ್ವವನ್ನು ಒಪ್ಪಿಕೊಂಡರೆ ಈ ಹಿಂದುಳಿದ ವರ್ಗದ ಜನರಿಗೆ ಪ್ರತ್ಯೇಕ ಸೌಲಭ್ಯಗಳನ್ನು ಕೊಡುವುದು ನ್ಯಾಯವಿರುದ್ಧವಾಗುವುದು. ಆದರೆ ಶೇ 90 ಮಂದಿ ಹಿಂದುಳಿದ ಜನಾಂಗಗಳಿಂದ ಕೂಡಿದ ರಾಜ್ಯದಲ್ಲಿ ಸಮಾನತ್ವವು ಅಪಹಾಸ್ಯಕರವಾಗುವುದು. ಸಮಾನತ್ವದ ದೃಷ್ಟಿಯಿಂದ 10 ವರುಷದ ಬಾಲಕನು 30 ವರುಷದ ಯುವಕನು ಸರಿಸಮಾನವಾಗಿ ಸ್ಪರ್ಧಿಸುವುದು

ನ್ಯಾಯಬದ್ಧವೆಂದು ಒಪ್ಪಿಕೊಂಡ ಹಾಗೆ ಆಗುವುದು. ಆದುದರಿಂದಲೇ ಸಂವಿಧಾನದ 15 ಮತ್ತು 16 ನೇ ವಿಭಾಗಗಳು ಸಮಾನತ್ವವನ್ನು ಘೋಷಿಸಿದರೂ ಜೊತೆಯಲ್ಲಿಯೇ ಅಸಮಾನರಾದ ಹೆಂಗಸರು, ಮಕ್ಕಳು ಮತ್ತು ದಲಿತವರ್ಗದವರಿಗೆ ಪ್ರತ್ಯೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವುದು ಸಮಾಜ ನ್ಯಾಯದ ಪ್ರಕಾರ ರಾಜ್ಯದ ಕರ್ತವ್ಯವೆಂದು ಒಪ್ಪಿಕೊಂಡಿವೆ. ದಲಿತವರ್ಗದವರಿಗೆ ಪ್ರತ್ಯೇಕ ಸೌಲಭ್ಯಗಳನ್ನು ಕಲ್ಪಿಸಿಕೊಡದೇ ಹೋದರೆ ಈ ವರ್ಗದ ಜನರು ಸ್ಪರ್ಧೆಗಳಲ್ಲಿ ಜಯವನ್ನು ಗಳಿಸುವುದು ಕಷ್ಟವಾಗುವುದು.

ಆದರೆ ದಲಿತ ವರ್ಗಕ್ಕೆ ಸೇರಿದ ವ್ಯಕ್ತಿಗಳನ್ನು ಜಾತಿಯ ಮೇಲೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕೋಸ್ಕರ ಪ್ರತ್ಯೇಕಿಸಿದರೆ ಮತ್ತೊಂದು ವಿಧವಾದ ಸಾಮಾಜಿಕ ಅನ್ಯಾಯವು ತಲೆದೋರುವುದು. ಹಿಂದುಳಿದ ಜಾತಿಗಳಿಗೆ ಸೇರಿರುವರೆಂಬ ಆಧಾರದ ಮೇಲೆ ಆ ಗುಂಪುಗಳಿಗೆ ವಿದ್ಯಾವಂತರು, ಹಣವಂತರು ತಮಗೆ ಈ ಸೌಲಭ್ಯಗಳು ಹಕ್ಕೆಂದು ವಾದಿಸಿ ಪಡೆದರೆ ಆಗ ತಮ್ಮ ಗುಂಪುಗಳಿಗೆ ಸೇರಿದ ಹಿಂದುಳಿದವರಿಗೆ ಅವಕಾಶವಿಲ್ಲದಹಾಗೆ ಆಗುವುದು, ಅಂದರೆ ದಲಿತ ವರ್ಗವು ಕೇವಲ ಜಾತಿಗೆ ಸಂಬಂಧಪಟ್ಟ ಗುಣವೆಂಬುದನ್ನು ಒಪ್ಪಿಕೊಂಡರೆ ಈ ಅನ್ಯಾಯಕ್ಕೆ ಕಾರಣವಾಗುವುದು. ಆದುದರಿಂದ ಈ ಸೌಲಭ್ಯಗಳು ಕೇವಲ ಅನಕ್ಷರಸ್ಥ ಪ್ರಜೆಗಳ ಮಕ್ಕಳಿಗೂ ಬಡ ಜನರ ಮಕ್ಕಳಿಗೂ ಒದಗಿಸಿಕೊಡಬೇಕೇ ಹೊರತು ಜಾತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು.

ಈ ಗ್ರಂಥದ ಬೇರೆ ಬೇರೆ ಅಧ್ಯಾಯಗಳಲ್ಲಿ ವಿವರಿಸುವ ಹಾಗೆ ಭಾರತೀಯ ಸಮಾಜದ ಇಂದಿನ ವಿಷಮ ಪರಿಸ್ಥಿತಿಗೆ ಮೂಲಕಾರಣವೆಂದರೆ ಪ್ರಾಚೀನ ಸಾಮಾಜಿಕ ಆದರ್ಶಗಳಿಗೂ ವಾಸ್ತವಿಕ ಸಾಮಾಜಿಕ ವರ್ತನೆಗೂ ಇರುವ ಅಂತರ ಮತ್ತೊಂದುಕಡೆ ಸಂವಿಧಾನದಲ್ಲಿಯೂ, ಕಾನೂನುಗಳಲ್ಲಿಯೂ ಒಪ್ಪಿರುವ ಆಧುನಿಕ ಸಾಮಾಜಿಕ ಧ್ಯೇಯಗಳಿಗೂ ಸಾಂಪ್ರದಾಯಿಕ ವರ್ತನೆಗೂ ಇರುವ ಅಂತರ ಈ ಕಾರಣಗಳಿಂದ ಸರ್ಕಾರವು ಎಷ್ಟೇ ಅವಕಾಶಗಳನ್ನು ಕಲ್ಪಿಸಿಕೊಟ್ಟರೂ ದಲಿತ ವರ್ಗಗಳಿಗೆ ಸೇರಿದ ಕೋಟ್ಯಾಂತರ ಪ್ರಜೆಗಳು ಹಳ್ಳಿಗಳಲ್ಲಿಯೂ ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿಯೂ ಇರುವ ಜನರು ಇವುಗಳನ್ನು ಉಪಯೋಗಿಸಿಕೊಂಡು ತಮ್ಮ ವ್ಯಕ್ತಿತ್ವದ ವಿಕಾಸವನ್ನು, ತಮ್ಮ ಗುಂಪುಗಳ ಅಭ್ಯುದಯವನ್ನು ಸಾಧಿಸಲು ಅಸಾಧ್ಯವಾಗಿದೆ. ಅಂದರೆ ಕೇವಲ ಕಾನೂನಿನ ಬದಲಾವಣೆ ಮತ್ತು ಆರ್ಥಿಕ ಬದಲಾವಣೆ ಸಮಾಜದ ಅಭ್ಯುದಯಕ್ಕೆ ಕಾರಣವಾಗುವುದಿಲ್ಲ. ದೇಶದ ಪ್ರತಿಯೊಂದು ಗುಂಪಿನಲ್ಲಿಯೂ ಸಂಪ್ರದಾಯ ಮತ್ತು ಆದರ್ಶಗಳಲ್ಲಿ ಬದಲಾವಣೆ ಉಂಡಾಗಬೇಕಾದುದು ಅತ್ಯವಶ್ಯಕ. ಇದೇ ಇಂದಿನ ಭಾರತೀಯ ಸಮಾಜದ ಮುಖ್ಯ ಕರ್ತವ್ಯ.

★

ಕರ್ಮ ಮತ್ತು ಪುನರ್ಜನ್ಮ

ಭಾರತೀಯ ಸಿಂಧೂ, ಬೌದ್ಧ ಮತ್ತು ಜೈನ ಸಂಸ್ಕೃತಿಗಳಲ್ಲಿ ಕರ್ಮ ಮತ್ತು ಪುನರ್ಜನ್ಮ ಮತ್ತು ಸಂಸಾರ ಈ ಮೂರು ಭಾವನೆಗಳನ್ನು ಸಿದ್ಧಾಂತಗಳೆಂದು ಪರಿಗಣಿಸಲಾಗಿದೆ. ಪುರಾಣ ಮತ್ತು ಆಧ್ಯಾತ್ಮಿಕ ಗ್ರಂಥಗಳಲ್ಲಿಯೂ ಸಾಮಾನ್ಯ ಜನರ ನಂಬಿಕೆಗಳಲ್ಲಿಯೂ ಈ ಮೂರು ಭಾವನೆಗಳು ತೀವ್ರವಾಗಿ ಬೇರೂರಿದೆ. ಜನಜೀವನದಲ್ಲಿರುವ ವ್ಯತ್ಯಾಸ ಬಲಾಬಲ ಸುಖದುಃಖ ಜಾತಿ ಮತ್ತು ಸಾಮಾಜಿಕ ಸ್ಥಿರವಿನ್ಯಾಸಗಳಿಗೆ ಈ ಭಾವನೆಗಳು ಕಾರಣಭೂತವೆಂದು ಹೇಳಲಾಗಿದೆ. ಎಲ್ಲ ಸಮಾಜಗಳಲ್ಲಿಯೂ ವ್ಯತ್ಯಾಸಗಳಿರುವುದು ಸರ್ವವಿದಿತ. ಈ ವ್ಯತ್ಯಾಸಗಳಿಗೆ ಕಾರಣವೇನು ಎಂದು ಕಂಡುಹಿಡಿಯಲು ಹೊರಟಾಗ ಮನುಷ್ಯನು ವರ್ತನೆಯ ಆಧಾರದ ಮೇಲೆ ಇರುವುದೆಂದು ಸಿದ್ಧಾಂತವು. ಇದೂ ಸಹ ನಿರ್ವಿವಾದ. ಮದುವೆಯ ಊಟದಲ್ಲಿ ಒಳ್ಳೆಯ ಭಕ್ಷ್ಯಗಳು ಸಿಗುವುದೆಂದು ಅವುಗಳನ್ನು ಅತಿ ಹೆಚ್ಚಾಗಿ ತಿಂದರೆ ಆ ರಾತ್ರಿ ದುಃಸ್ವಪ್ನಗಳು ಮತ್ತು ಅಜೀರ್ಣದಿಂದ ಅಸ್ವಸ್ಥತೆಯುಂಟಾಗುವುದು ಸ್ವಾಭಾವಿಕ. ಒಬ್ಬ ವಿದ್ಯಾರ್ಥಿಯು ಪಾಠ ಪ್ರವಚನಗಳನ್ನು ಶ್ರದ್ಧೆಯಿಂದ ಮಾಡಿದರೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುವುದು ಸಾಧ್ಯ. ಕೆಟ್ಟ ನಡತೆಯು ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಅವಮಾನಕ್ಕೆ ಗುರಿಮಾಡುವುದು ಮತ್ತು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಮಾಡುವುದು.

ಈ ಅಂಶಗಳು ಮಾನವ ಜೀವನದಲ್ಲಿರುವ ಎಲ್ಲ ವ್ಯತ್ಯಾಸಗಳನ್ನು ವಿವರಿಸಲಾರವು. ಒಂದು ಮಗುವು ಹಣವಂತರ ಮನೆಯಲ್ಲಿ ಹುಟ್ಟಬಹುದು. ಮತ್ತೊಂದು ಮಗು ಬಡವರ ಮನೆಯಲ್ಲಿ ಹುಟ್ಟಬಹುದು. ಈ ವ್ಯತ್ಯಾಸಕ್ಕೆ ಕಾರಣವೇನು? ಹೀಗೆಯೇ ಒಂದು ಮಗು ವಿದ್ಯಾವಂತರ ಮನೆಯಲ್ಲಿ ಹುಟ್ಟಬಹುದು. ಮತ್ತೊಂದು ಅನಕ್ಷರಸ್ಥರ ಮನೆಯಲ್ಲಿ ಹುಟ್ಟಬಹುದು. ಅಥವಾ ಬೇರೆ ಬೇರೆ ಜಾತಿಗಳಲ್ಲಿ ಮಕ್ಕಳು ಹುಟ್ಟುವರು. ಈ ವ್ಯತ್ಯಾಸಗಳಿಗೆ ಕಾರಣವೇನು ?

ಇದೇ ರೀತಿಯಾಗಿ ಒಬ್ಬ ಮನುಷ್ಯನು ಎಷ್ಟು ವಿದ್ಯಾವಂತನಾಗಿದ್ದರೂ ಎಷ್ಟು ಬುದ್ಧಿವಂತನಾಗಿದ್ದರೂ ಎಷ್ಟು ಶ್ರಮಪಟ್ಟು ಕೆಲಸಮಾಡಿದರೂ ನೀತಿ ನಿಯಮಗಳಿಗೆ ಅನುಸಾರವಾಗಿ ತನ್ನ ಜೀವನವನ್ನು ನಡೆಸುತ್ತಿದ್ದರೂ ಆತನಿಗೆ ಬಡತನ, ರೋಗ, ಮುಂತಾದ ಕಷ್ಟಕಾರ್ಪಣ್ಯಗಳಿರುವುವು. ಆದರೆ ಮತ್ತೊಬ್ಬನು

ಎಷ್ಟು ಬುದ್ಧಿಹೀನನಾಗಿದ್ದರೂ ಎಷ್ಟು ದುಷ್ಟನಾಗಿದ್ದರೂ ಅನಾಚಾರಿಯಾಗಿದ್ದರೂ ಅವನಿಗೆ ಸಂಪತ್ತು ಸಾಮಾಜಿಕ ಸ್ಥಾನಮಾನಗಳು ಮುಂತಾದವು ಲಭಿಸಬಹುದು. ಈ ವ್ಯತ್ಯಾಸಗಳನ್ನು ಅವರ ಜೀವನ ಕ್ರಮದಲ್ಲಿ ಮಾಡುವ ಕೆಲಸ ಕಾರ್ಯಗಳ ಆಧಾರದ ಮೇಲೆ ವಿವರಿಸಲಾಗುವುದಿಲ್ಲ.

ಕೆಲವು ಮಕ್ಕಳಿಗೆ ಅತಿ ಹೆಚ್ಚಾದ ಬುದ್ಧಿಶಕ್ತಿಯಿರುವುದು. ಮತ್ತೆ ಕೆಲ ಕೆಲವರು ದಡ್ಡರಾಗಿರುವರು. ಈ ಬುದ್ಧಿಶಕ್ತಿಯಲ್ಲಿರುವ ತಾರತಮ್ಯಗಳಿಗೆ ಕಾರಣ ವೇನು ?

ಕೆಲವು ಮಕ್ಕಳಿಗೆ ಸಂಗೀತ, ಗಣಿತ ಅಥವಾ ತಾಂತ್ರಿಕ ಶಕ್ತಿ ಮುಂತಾ ದವು ಹುಟ್ಟನಿಂದಲೇ ಯಾರೂ ಹೇಳಿಕೊಡದೆ ಇದ್ದರೂ ಇರುವುವು ಈ ಶಕ್ತಿ ಗಳು ಜನ್ಮಸಿದ್ಧವಾದ ಶಕ್ತಿಗಳು. ಕೇವಲ ತರಪೇತಿನಿಂದಾಗಲೀ ವೈಯಕ್ತಿಕ ಪ್ರಯತ್ನದಿಂದಾಗಲೀ ಉಂಟಾಗುವುದಿಲ್ಲ. ಈ ವ್ಯತ್ಯಾಸಗಳಿಗೆ ಕಾರಣವೇನು ?

ಇಂತಹ ಸಮಸ್ಯೆಗಳನ್ನು ಪರಿಹರಿಸಲು ಕರ್ಮಸಿದ್ಧಾಂತವನ್ನು ಪುನ ರ್ಜನ್ಮ ಸಿದ್ಧಾಂತವನ್ನು ಪ್ರಾಚೀನ ಕಾಲದ ಭಾರತೀಯರು ಉಪಯೋಗಿಸುವರು. ಈ ಸಿದ್ಧಾಂತಗಳ ಪ್ರಕಾರ ಒಬ್ಬ ಮನುಷ್ಯನ ಸ್ಥಿತಿಗತಿಗಳು ಆಕಸ್ಮಿಕದಿಂದ ಉಂಟಾ ಗಲಾರವು ಎಂದು ಊಹಿಸಿದರು. ಇವುಗಳಿಗೆ ಕಾರಣ ಭಗವಂತನಲ್ಲ ಎಂದೂ ಊಹಿಸಿದರು. ಈ ವ್ಯತ್ಯಾಸಗಳಿಗೆ ಭಗವಂತನೇ ಕಾರಣನಾಗಿದ್ದರೆ ಆಗ ಭಗ ವಂತನು ಪಕ್ಷಪಾತಿಯಾಗಿರುವನು. ಇಂತಹ ಊಹೆಯು ಅಸಂಬದ್ಧ. ಆದರೆ ಎಲ್ಲಾ ಜೀವಿಗಳನ್ನು ಸುಖಿಗಳನ್ನಾಗಿಯೂ ಒಳ್ಳೆಯವರನ್ನಾಗಿಯೂ ಯಾವ ಕಾರಣದಿಂದ ಭಗವಂತನು ಸೃಷ್ಟಿಸಲಿಲ್ಲ ? ಸಾಧಾರಣವಾಗಿ ವ್ಯಕ್ತಿಗಳಲ್ಲಿರುವ ವ್ಯತ್ಯಾಸಗಳನ್ನು ಅವರು ಹುಟ್ಟುವ ವಾತಾವರಣದ ವ್ಯತ್ಯಾಸಗಳನ್ನು ಸಮಂಜಸ ವಾಗಿ ವಿವರಿಸಲು ಈ ಕೆಳಗಿನ ಕಾರಣಗಳನ್ನು ಊಹಿಸಬಹುದು.

1) ಸಮಾಜದಲ್ಲಿ ಕಂಡು ಬರುವ ವ್ಯತ್ಯಾಸಗಳಿಗೆ ದೇವರೇ ಕಾರಣ.

2) ಈ ವ್ಯತ್ಯಾಸಗಳಿಗೆ ಆನುವಂಶಿಕ ಪ್ರಕೃತಿಯೇ ಕಾರಣ.

3) ಈ ವ್ಯತ್ಯಾಸಗಳಿಗೆ ಸಾಮಾಜಿಕ ಸ್ಥಿತಿಗತಿಗಳೂ ಸಂಪ್ರದಾಯಗಳೂ ಕಾರಣ.

4) ಈ ವ್ಯತ್ಯಾಸಗಳಿಗೆ ವ್ಯಕ್ತಿಯ ಈಗಿನ ಮತ್ತು ಹಿಂದಿನ ಜನ್ಮದ ಕರ್ಮಗಳೇ ಕಾರಣ.

ಮೇಲೆ ವಿವರಿಸಿರುವ ಹಾಗೆ ಮೊದಲನೆಯ ಕಾರಣವು ಸಮಂಜಸವಲ್ಲ. ದೇವರೇ ಈ ವ್ಯತ್ಯಾಸಗಳಿಗೆ ಕಾರಣವಾದರೆ ಪಕ್ಷಪಾತಿಯಾಗುವನು; ಅನ್ಯಾಯ ಗಳಿಗೆ ಕಾರಣಭೂತನಾಗುವನು.

ಈ ಶತಾಬ್ದದ ಜೀವನಶಾಸ್ತ್ರದ ಪರಿಶೋಧನೆಗಳು ವ್ಯಕ್ತಿಗಳಲ್ಲಿರುವ ವ್ಯತ್ಯಾಸಗಳಿಗೆ ಕಾರಣ ಆನುವಂಶಿಕ ನಿಯಮಗಳೆಂದು ತೋರಿಸಿರುವುವು. ಒಂದೆ ತಾಯಿ ತಂದೆಗಳ ಶರೀರದಲ್ಲಿ ಹುಟ್ಟಿದ ಮಕ್ಕಳು ಕೆಲ ಅಂಶಗಳಲ್ಲಿ ಸಾಮ್ಯ ಮತ್ತೆ ಕೆಲ ಅಂಶಗಳಲ್ಲಿ ವ್ಯತ್ಯಾಸಗಳಿಂದ ಕೂಡಿರುವುದು ಅನುಭವಸಿದ್ಧವಾಗಿದೆ. ಆನುವಂಶಿಕ ನಿಯಮಗಳೇ ಈ ಸಾಮ್ಯಗಳಿಗೂ ವ್ಯತ್ಯಾಸಗಳಿಗೂ ಕಾರಣಭೂತ ವೆಂದು ಪರಿಶೋಧನೆಗಳು ತೋರಿಸಿಕೊಟ್ಟಿವೆ.

ಸಮಾಜ ಶಾಸ್ತ್ರಧ ಮತ್ತು ಮನಃಶಾಸ್ತ್ರದ ಪರಿಶೋಧನೆಗಳ ಪ್ರಕಾರ ಮಾನವ ಕೋಟಿಯಲ್ಲಿರುವ ವರ್ತನಾವ್ಯತ್ಯಾಸಗಳಿಗೆ ಆ ಸಮಾಜದ ಸಂಪ್ರ ದಾಯಗಳೂ ಮತ್ತು ಆ ಸಮಾಜದ ಸ್ಥಿತಿಗತಿಗಳೂ ಕಾರಣಭೂತವೆಂದು ತೋರಿಸಿ ಕೊಟ್ಟಿವೆ. ಉದಾಹರಣೆಗೆ ತಂದೆತಾಯಿಗಳು ವಿದ್ಯಾವಂತರಾದರೆ ಅವರು ಮಕ್ಕ ಳನ್ನು ಅನಕ್ಷರಸ್ಥರಾಗಿರುವುದಕ್ಕೆ ಅವಕಾಶ ಕೊಡುವುದಿಲ್ಲ. ಒಂದು ಗುಂಪಿಗೂ ಮತ್ತೊಂದು ಗುಂಪಿಗೂ ಊಟ ಉಡುಪುಗಳಲ್ಲಿಯೂ ಭಾಷೆಗಳಲ್ಲಿಯೂ ನಡವಳಿಕೆ ಯಲ್ಲಿಯೂ ಇರುವ ವ್ಯತ್ಯಾಸಗಳು ಸಂಪ್ರದಾಯ ಜನ್ಯವೆಂದು ಅನುಭವವೂ ತೋರಿಸಿಕೊಡುವುದು. ಸಾವಿರಾರು ವರ್ಷಗಳಿಂದಲೂ ಅನಕ್ಷರಸ್ಥರಾಗಿದ್ದ ಹರಿಜನ ಗಿರಿಜನ ಮನೆತನಗಳ ಮಕ್ಕಳು ಈಗ ಒಂದೇ ತಲೆಮಾರಿನಲ್ಲಿ ವಿದ್ಯಾವಂತರಾಗಿ ರುವುದನ್ನು ನಾವು ನೋಡುತ್ತಿರುವೆವು. ಮತ್ತೊಂದು ಕಡೆ ಶಾಲೆಗಳನ್ನು ಪಟ್ಟಣ ಗಳ ಕೊಳಚೆ ಪ್ರದೇಶಗಳಲ್ಲಿಯೂ ಹಳ್ಳಿಗಳಲ್ಲಿಯೂ ಸ್ಥಾಪಿಸಿದರೂ ಸಹ ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುವುದಿಲ್ಲ. 1971 ರ ಜನಗಣತಿಯ ಪ್ರಕಾರ ಶೇಕಡ 70 ಭಾರತೀಯರು ಅನಕ್ಷರಸ್ಥರಾಗಿ ಉಳಿದಿರುವರು. ಈ ಅನಕ್ಷರಸ್ಥತೆಗೆ ಕಾರಣ ಕುಟುಂಬದ ಸಂಪ್ರದಾಯ. ತಮ್ಮಲ್ಲಿ ಶಾಲೆಗೆ ಮಕ್ಕಳನ್ನು ಕಳುಹಿಸುವ ಸಂಪ್ರ ದಾಯವಿಲ್ಲದೇ ಇರುವುದರಿಂದ ಮನೆ ಹತ್ತಿರ ಉಚಿತ ವಿದ್ಯಾಭ್ಯಾಸವನ್ನು ಕೊಡುವ ಶಾಲೆಗಳಿದ್ದರೂ ಸಹ ಅಲ್ಲಿಗೆ ತಮ್ಮ ಮಕ್ಕಳನ್ನು ಕಳುಹಿಸಿಕೊಡುವುದಿಲ್ಲ. ಹೀಗೆ ಸಮಾಜದಲ್ಲಿ ಕಾಣಬರುವ ಅನೇಕ ವ್ಯತ್ಯಾಸಗಳು ವಾತಾವರಣದ ದೆಸೆಯಿಂದಲೂ ಸಂಪ್ರದಾಯದ ಉಂಟಾಗಿರುವುದೆಂದು ನಮ್ಮ ಅನುಭವ ಮತ್ತು ಸಾಮಾಜಿಕ ಶಾಸ್ತ್ರದ ಪರಿಶೋಧನೆಗಳು ತೋರಿಸಿಕೊಡುವುವು. ವಾತಾವರಣದ ಅನಾನುಕೂಲದಿಂದಲೂ ಒಳ್ಳೆಯ ಸಂಪ್ರದಾಯದ ಅಭಾವದಿಂದಲೂ ಕೋಟ್ಯಂತರ ಜನರು ಭಾರತದಲ್ಲಿ ಅಸಂಸ್ಕೃತರಾಗಿ ಉಳಿದಿರುವುದು ನಮ್ಮ ಅನುಭವಕ್ಕೆ ಸಿಲುಕಿದ ವಿಷಯ. ಈ ದೋಷಗಳಿಗೆ ಸಾಮಾಜಿಕ ಸ್ಥಿತಿಗತಿಗಳೇ ಕಾರಣವೇ ಹೊರತು ಆ ವ್ಯಕ್ತಿಗಳಲ್ಲ. ಅವರು ಬೆಳೆದ ವಾತಾವರಣದಲ್ಲಿರುವ ನ್ಯೂನತೆಗಳೇ ಈ ದೋಷಗಳನ್ನುಂಟು ಮಾಡುವುದು. ವಾತಾವರಣವನ್ನು ಬದಲಾಯಿಸಿದರೆ ಪ್ರಾಯಶಃ ವರ್ತನೆಯೂ ಬದಲಾಯಿಸುವುದು.

ಮೇಲೆ ವಿವರಿಸಿರುವ ಎರಡನೆ ಮತ್ತು ಮೂರನೆ ಕಾರಣಗಳು ಈಗ ಸುಮಾರು ನೂರು ವರ್ಷಗಳ ಪ್ರಯತ್ನದಿಂದ ದೊರೆತಿರುವುವು. ಮಾನವರಲ್ಲಿರುವ ವ್ಯತ್ಯಾಸಗಳಿಗೆ ಆನುವಂಶಿಕ ಮತ್ತು ಪರಿಸರಗಳಿಂದ ಉಂಟಾದ ವ್ಯತ್ಯಾಸಗಳೇ ಕಾರಣಗಳೆಂಬುದನ್ನು ಆಧುನಿಕ ಶಾಸ್ತ್ರಜ್ಞರು ಒಪ್ಪಿಕೊಂಡಿರುವರು. ಈ ನಂಬಿಕೆಯು ಆಧುನಿಕ ವಿಜ್ಞಾನದ ಪರಶೋಧನೆಗಳ ಫಲಿತಾಂಶಗಳ ಆಧಾರದ ಮೇಲೆ ನಿಂತಿರುವುವು.

ಆದರೆ ಭಾರತ ದೇಶದಲ್ಲಿ ಸಾವಿರಾರು ವರ್ಷಗಳ ಹಿಂದೆ ಈ ವಿಷಯ ವನ್ನು ಕುರಿತು ಪರ್ಯಾಲೋಚಿಸಿದ ಪ್ರಾಜ್ಞರು ಮಾನವರಲ್ಲಿರುವ ಈ ವ್ಯತ್ಯಾಸ ಗಳು ವ್ಯಕ್ತಿಗತವೆಂದು ಇವು ಒಬ್ಬ ಮನುಷ್ಯನು ಮಾಡಿದ ಕರ್ಮದ ಫಲವೆಂದೂ ನಂಬಿದರು. ನಮ್ಮ ಅನುಭವಕ್ಕೆ ವಿಶದವಾಗಿರುವ ಹಾಗೆ ಒಬ್ಬ ವ್ಯಕ್ತಿಯು ಕಷ್ಟಪಟ್ಟು ಕೆಲಸ ಮಾಡಿದರೆ ತಾನು ಮಾಡುವ ಕೆಲಸದಲ್ಲಿ ನಿಪುಣತೆಯನ್ನು ಪಡೆಯಬಹುದು. ಆದರೆ ನಿಪುಣತೆಯನ್ನು ಪಡೆಯಬೇಕಾದರೆ ಕೇವಲ ಶ್ರದ್ಧೆ ಮಾತ್ರ ಸಾಲದು. ಶ್ರದ್ಧೆಯೂ ಬುದ್ಧಿಶಕ್ತಿಯೂ ಮತ್ತು ಅವಕಾಶವೂ ಈ ಮೂರೂ ಸಮ್ಮಿಳಿತವಾಗಿದ್ದರೆ ಆಗ ಕಾರ್ಯಸಿದ್ಧಿ ಉಂಟಾಗುವುದು. ಒಬ್ಬ ವ್ಯಕ್ತಿ ಯಲ್ಲಿ ಶಕ್ತಿಯಿರಬಹುದು, ಅವಕಾಶವೂ ಇರಬಹುದು. ಆದರೆ ಶ್ರದ್ಧೆಯಿಲ್ಲದಿದ್ದರೆ ಅವನು ತನ್ನ ಕೆಲಸದಲ್ಲಿ ಮುಂದುವರೆಯಲಾರ. ಇದೇ ವಿಧವಾಗಿ ಮತ್ತೊಬ್ಬ ನಲ್ಲಿ ಶಕ್ತಿಯೂ ಇರಬಹುದು, ಶ್ರದ್ಧೆಯೂ ಇರಬಹುದು. ಆದರೆ ಅವಕಾಶವು ಇಲ್ಲದಿರಬಹುದು. ಆಗಲೂ ಸಹ ಆ ವ್ಯಕ್ತಿ ತನ್ನ ಕೆಲಸದಲ್ಲಿ ಮುಂದುವರೆಯಲಾರ. ಜೀವನಶಾಸ್ತ್ರದ ಪರಿಶೋಧನೆಗಳ ಪ್ರಕಾರ ಒಬ್ಬ ವ್ಯಕ್ತಿಯ ಶಕ್ತಿಯು ಆನುವಂಶಿಕ ನಿಯಮಗಳಿಂದ ಉಂಟಾಗುವುದು. ಪ್ರಾಚೀನ ಕಾಲದಲ್ಲಿ ಈ ಅರಿವು ಇರಲಿಲ್ಲ, ಆದುದರಿಂದ ಪ್ರಾಚೀನ ಭಾರತದ ತಜ್ಞರು ಈ ವ್ಯತ್ಯಾಸಗಳಿಗೆ ಕಾರಣವು ವ್ಯಕ್ತಿ ಯಲ್ಲಿಯೇ ನೆಲಸಿರಬೇಕೆಂದು ಊಹಿಸಿದರು. ಇದು ಆತನು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಫಲವಿರಬಹುದೆಂದು ಯೋಚಿಸಿದರು. ಈ ಊಹೆಗೆ ತತ್ವಶಾಸ್ತ್ರದ ಆಧಾರವೂ ಸಹ ಇರುವುದು. ಆತ್ಮ ನಿತ್ಯವಾದರೆ ಜೀವಿಯು ಅನೇಕ ಜನ್ಮಗಳನ್ನು ತಾಳಿ ಚಿತ್ತ ಶುದ್ಧಿಯ ಮೂಲಕ ಪರಿಪಕ್ವತೆಯನ್ನು ಹೊಂದಿ ಸಾಯುಜ್ಯ ಮುಕ್ತಿ ಯನ್ನು ಪಡೆಯಬಹುದು. ಈ ದೃಷ್ಟಿಯಿಂದ ನೋಡಿದರೆ ಕರ್ಮ ಮತ್ತು ಪುನ ರ್ಜನ್ಮಗಳ ಪ್ರಭಾವವನ್ನು ಒಪ್ಪಿಕೊಳ್ಳಬೇಕಾಗುವುದು. ಒಬ್ಬ ವ್ಯಕ್ತಿಯ ಇಂದಿನ ಸ್ಥಿತಿಗತಿಗಳಿಗೆ ವ್ಯಕ್ತಿಯೇ ಕಾರಣಭೂತವಾದರೆ ಪುನರ್ಜನ್ಮ ಊಹೆಯನ್ನು ಒಪ್ಪಿಕೊಳ್ಳಬೇಕಾಗುವುದು. ತಾನು ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಆಧಾರದ ಮೇಲೆ ಇಂದು ಅವುಗಳ ಫಲವನ್ನು ಅನುಭವಿಸುತ್ತಿರುವನು. ಈ ನಂಬಿಕೆಯು ಕಾರ್ಯಕಾರಣಸಿದ್ಧಾಂತದ ಆಧಾರದ ಮೇಲೆ ನಿಂತಿರುವುದು.

ವೈದಿಕ ಮಂತ್ರಗಳ ಪ್ರಕಾರ ಯಾರು ಯಜ್ಞ ಯಾಗಾದಿಗಳನ್ನು ಮಾಡುವರೋ ಅವರಿಗೆ ದೇವಲೋಕ ಸಿಗುವುದು. ಅಂದರೆ ಒಳ್ಳೆಯ ಕೆಲಸಗಳಿಗೆ ಒಳ್ಳೆಯ ಫಲ; ಕೆಟ್ಟ ಕೆಲಸಕ್ಕೆ ಕೆಟ್ಟ ಫಲ. ಆದುದರಿಂದ ಈಗ ಒಬ್ಬ ವ್ಯಕ್ತಿಯು ಒಳ್ಳೆಯ ಸ್ಥಿತಿಯಲ್ಲಿದ್ದರೆ ಇದಕ್ಕೆ ಕಾರಣ ಅವನು ಈ ಜನ್ಮದಲ್ಲಿಯೋ ಅಥವಾ ಹಿಂದಿನ ಜನ್ಮಗಳಲ್ಲಿಯೋ ಒಳ್ಳೆಯ ಕೆಲಸವನ್ನು ಮಾಡಿರಬೇಕು. ಆದುದರಿಂದ ಅತನಿಗೆ ಈಗ ಸದ್ಗತಿ ಉಂಟಾಗಿದೆ. ಇದೇ ಆಲೋಚನೆಯನ್ನು ಮುಂದುವರಿಸಿದರೆ ಒಬ್ಬ ವ್ಯಕ್ತಿಯ ಇಂದಿನ ದುರ್ಗತಿಗೆ ಕಾರಣ ಆತನು ಈ ಜನ್ಮದಲ್ಲಿಯೋ ಅಥವಾ ಹಿಂದಿನ ಜನ್ಮಗಳಲ್ಲಿಯೋ ಮಾಡಿದ ದುಷ್ಕೃತ್ಯಗಳೇ ಕಾರಣವಾಗುವುವು. ಇದೇ ಯೋಚನೆಯನ್ನು ಇನ್ನೂ ಸ್ವಲ್ಪ ಮುಂದುವರಿಸಿದರೆ ಮತ್ತೊಂದು ಪರಿಣಾಮವನ್ನು ಊಹಿಸಬಹುದು. ಒಬ್ಬ ವ್ಯಕ್ತಿಯು ಇಂದು ಒಳ್ಳೆಯ ಕಾರ್ಯಗಳನ್ನು ಮಾಡಿದರೆ ಈ ಜನ್ಮದಲ್ಲಿಯೇ ಸದ್ಗತಿಯನ್ನು ಹೊಂದಬಹುದು. ಇಲ್ಲದಿದ್ದರೆ ಮುಂದಿನ ಜನ್ಮದಲ್ಲಿ ಸದ್ಗತಿಯನ್ನು ಹೊಂದಬಹುದು. ಈ ವಿಧವಾಗಿ ಪ್ರಾಚೀನ ಭಾರತೀಯ ತಜ್ಞರು ಕರ್ಮ ಸಿದ್ಧಾಂತ ಮತ್ತು ಪುನರ್ಜನ್ಮ ಸಿದ್ಧಾಂತವನ್ನು ಪ್ರತಿಪಾದಿಸಿದರು.

ಋಗ್ವೇದದ ಮಂತ್ರ ಭಾಗವು ಕರ್ಮ, ಪುನರ್ಜನ್ಮಗಳ ವಿಷಯವನ್ನು ಕುರಿತು ಪ್ರಸ್ತಾಪಿಸುವುದಿಲ್ಲ. ಆ ಕಾಲದ ಋಷಿಗಳು ಯಾರು ಯಜ್ಞಗಳನ್ನು ಮಾಡಿ ದೇವರುಗಳನ್ನು ತೃಪ್ತಿ ಪಡಿಸುವರೋ ಅವರಿಗೆ ಅಮೃತತ್ವವು ಲಭಿಸುವುದೆಂದೂ, ಭೂಲೋಕದಲ್ಲಿ ಅವರು ಸತ್ತ ಮೇಲೆ ದೇವರ ಸಂಗದಲ್ಲಿ ಯಾವಾಗಲೂ ಸಂತುಷ್ಟ ಜೀವಿಗಳಾಗಿರುವರೆಂದೂ ಭಾವಿಸಿದರು. ಈ ಲೋಕದಲ್ಲಿ ಕೆಟ್ಟ ಕೆಲಸಗಳನ್ನು ಮಾಡಿದವರು ಸತ್ತ ಮೇಲೆ ಅಂಧಕಾರದಲ್ಲಿರುವರೆಂದು ಊಹಿಸಿದರು. ಆದುದರಿಂದ ಮಾನವನ ಧ್ಯೇಯವು ದೇವತೆಗಳ ಹಾಗೆ ಅಮೃತತ್ವವನ್ನು ಪಡೆಯುವುದೇ ಆಗಿತ್ತು. ಅಮೃತತ್ವವನ್ನು ಪಡೆಯಬೇಕಾದರೆ ಯಜ್ಞ ಯಾಗಾದಿಗಳನ್ನು ಮಾಡಬೇಕಾಗಿತ್ತು.

ಕರ್ಮ, ಕರ್ಮ ಫಲ, ಪುನರ್ಜನ್ಮ ಮುಂತಾದ ಭಾವನೆಗಳು ವೇದಗಳ ಉತ್ತರಾರ್ಧವಾದ ಉಪನಿಷತ್ತುಗಳಲ್ಲಿ ಗೋಚರವಾಗುತ್ತವೆ. ಕಠೋಪನಿಷತ್ತಿನಲ್ಲಿ "ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವ ಜಾಯತೇ ಪುನಃ" (1-1-6) ಅಂದರೆ ಮನುಷ್ಯನು ಸಸ್ಯದಂತೆ ಪಕ್ವವಾಗುತ್ತಾನೆ, ಸಸ್ಯದಂತೆ ಪುನಃ ಹುಟ್ಟುತ್ತಾನೆ. ಬೃಹದಾರಣ್ಯಕೋಪನಿಷತ್ತಿನಲ್ಲಿ "ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ, ಪಾಪಃ ಪಾಪೇನೇತಿ" ಎಂದು ಹೇಳಲಾಗಿದೆ. (3-2-13) ಅಂದರೆ ಪುಣ್ಯ ಕರ್ಮದಿಂದ ಪುಣ್ಯವಂತನಾಗುತ್ತಾನೆ. ಪಾಪ ಕರ್ಮದಿಂದ ಪಾಪಿಯಾಗುತ್ತಾನೆ. ಆದುದರಿಂದ ಒಬ್ಬ ಮನುಷ್ಯನ ಸ್ಥಿತಿಗತಿಗಳು ಅವನ ಕರ್ಮ

ವನ್ನವಲಂಬಿಸಿರುತ್ತದೆ. ಈ ವಿಷಯವನ್ನು ಕುರಿತು ಛಾಂದೋಗ್ಯೋಪನಿಷತ್ತಿನಲ್ಲಿ ಈ ಮಂತ್ರವಿರುವುದು. "ಪುರುಷೋ ಯಥಾ ಕ್ರತುರಸ್ಮಿಂಲ್ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸತ್ಕ್ರತುಂ ಕುರ್ವೀತ ||" (3-14-1) ಅಂದರೆ ಈ ಲೋಕದಲ್ಲಿ ಪುರುಷನು ಎಂಥ ಕ್ರತು ಉಳ್ಳವನೋ ಇಲ್ಲಿಂದ ಹೋದ ಮೇಲೆ ಹಾಗೆಯೇ ಆಗುತ್ತಾನೆ. ಆದುದರಿಂದ ಅವನು ಕ್ರತುವನ್ನು ಮಾಡಬೇಕು.

ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಆತ್ಮನು ಹೋಗುವುದನ್ನು ಬೃಹದಾರಣ್ಯಕೋಪನಿಷತ್ತಿನ ಮಂತ್ರವು ಹೀಗೆ ವಿವರಿಸಿದೆ. ತೃಣ ಜಲಾಯಕ ವೆಂಬ ಹುಲ್ಲಿನಲ್ಲಿರುವ ಒಂದು ವಿಧವಾದ ಜಿಗುಣೆ. ಒಂದು ಹುಲ್ಲನ್ನು ಹಿಡಿದು ಕೊಂಡು ತನ್ನನ್ನು ಹೇಗೆ ಎಳೆದುಕೊಳ್ಳುತ್ತದೆಯೋ ಹಾಗೆಯೇ ಈ ಆತ್ಮನು ಈ ಶರೀರವನ್ನು ತ್ಯಜಿಸಿ ಅಚೇತನಗೊಳಿಸಿ ಇನ್ನೊಂದು ಆಶ್ರಯವನ್ನು ಪಡೆದುಕೊಂಡು ತನ್ನನ್ನು ಎಳೆದುಕೊಳ್ಳುತ್ತಾನೆ. ಇದೇ ಉಪನಿಷತ್ತಿನಲ್ಲಿ ಮತ್ತೊಂದು ಮಂತ್ರವು ಇನ್ನೊಂದು ಉಪಮಾನವನ್ನು ಕೊಡುವುದು. 'ಯಾವ ವಿಧವಾಗಿ ಚಿನ್ನದ ಕೆಲಸ ಮಾಡುವವನು ಚಿನ್ನಕ್ಕೆ ಒಂದು ಹೊಸದಾದ ರೂಪವನ್ನು ಕೊಡುವನೋ ಹಾಗೆಯೇ ಈ ಆತ್ಮನು ಈ ಶರೀರವನ್ನು ತ್ಯಜಿಸಿ ಮತ್ತೊಂದು ರೂಪವನ್ನು ನಿರ್ಮಿಸಿಕೊಳ್ಳುವನು. (4-4-4) ಮುಂದಿನ ಮಂತ್ರವು ಹೀಗೆ ವಿವರಿಸುವುದು. "ಯಥಾಕಾರೀ ಯಥಾ ಚಾರೀ ತಥಾ ಭವತಿ ಸಾಧುಕಾರೀ ಸಾಧುರ್ಭವತಿ ಪಾಪಕಾರೀ ಪಾಪೋ ಭವತಿ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ | ಅಥೋ ಖಲ್ವಾಹುಃ ಕಾಮ ಮಯ ಏವಾಯಂ ಪುರುಷ ಇತಿ ಸ ಯಥಾ ಕಾಮೋ ಭವತಿ ತತ್ಕ್ರತುರ್ಭವತಿ, ಯತ್ಕ್ರತುರ್ಭವತಿ ತತ್ಕರ್ಮ ಕುರುತೇ ಯತ್ಕರ್ಮ ಕುರುತೇ ತದಭಿಸಂಪದ್ಯತೇ" (4-4-5) ಅಂದರೆ ಇವನು ಹೇಗೆ ಮಾಡುವನೋ, ಹೇಗೆ ಆಚರಿಸುವನೋ ಹಾಗೆ ಆಗುವನು. ಸಾಧುಕಾರಿಯಾದವನು ಸಾಧುವಾಗುತ್ತಾನೆ. ಪಾಪಕಾರಿ ಯಾದವನು ಪಾಪಿಯಾಗುತ್ತಾನೆ. ಪುಣ್ಯ ಕರ್ಮದಿಂದ ಪುಣ್ಯವಂತನಾಗುವನು. ಪಾಪಕರ್ಮದಿಂದ ಪಾಪಿಯಾಗುವನು.

ಈ ಜನ್ಮ-ಮೃತ್ಯು-ಜನ್ಮ ಪರಂಪರೆಯಿಂದ ಮುಕ್ತಿ ಇದೆಯೇ ಎಂದು ನೋಡೋಣ. ಬೃಹದಾರಣ್ಯಕೋಪನಿಷತ್ತಿನ ಪ್ರಕಾರ ಆಸಕ್ತಿಯು ಕರ್ಮಕ್ಕೆ ಮೂಲ. ಅಂದರೆ ಫಲಕಾಮಿಯು ಪುನಃ ಈ ಲೋಕಕ್ಕೆ ಹೊಸ ಕರ್ಮಕ್ಕಾಗಿ ಹಿಂದಿರುಗು ತ್ತಾನೆ. ಈ ಕಾಮಗಳಾವುವೆಂದರೆ ಈ ಉಪನಿಷತ್ತಿನ ಪ್ರಕಾರ ಪುತ್ರೈಷಣ, ವಿತ್ತೈಷಣ ಮತ್ತು ಲೋಕೈಷಣ ಈ ಮೂರು ಮುಖ್ಯವಾದ ಕಾಮಗಳು (3-5) ಅಂದರೆ ಮನು ಷ್ಯನು ಈ ಲೋಕದಲ್ಲಿ ಐಶ್ವರ್ಯವನ್ನೂ ಸಂತತಿಯನ್ನೂ ಕೋರುವನು. ಐಶ್ವರ್ಯದ ಮೂಲಕ ಈ ಲೋಕದಲ್ಲಿ ಸುಖವನ್ನು ಅನುಭವಿಸುವುದೊಂದೇ ಅಲ್ಲದೆ ಪರ ಲೋಕದ ಇಚ್ಛೆಯಿಂದ ಯಜ್ಞಗಳನ್ನು ಮತ್ತು ಇತರ ಕರ್ಮಗಳನ್ನು ಮಾಡುವನು

ಯಾವ ಮನುಷ್ಯನು ಈ ಇಚ್ಛೆಗಳನ್ನು ದಾಟಿ ಆತ್ಮಜ್ಞಾನವನ್ನು ಹೊಂದು ವನೋ ಅವನು ಬ್ರಹ್ಮಸ್ಥಿತಿಯನ್ನು ಹೊಂದುವನು ಮತ್ತೊಂದು ಕಡೆ ಈ ಉಪನಿಷತ್ತಿನ ಮಂತ್ರವು ಹೀಗಿದೆ. " ಇಹ ನು ಕಾಮಯಮಾನಃ ಅಥಾಕಾಮಯ ಮಾನಃ ಯೋಽಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮಂತಿ ಬ್ರಹ್ಮೈವ ಸನ್ ಬ್ರಹ್ಮಾಪ್ನೋತಿ" (4–4–1) ಅಂದರೆ ಫಲಕಾಮಿಯು (ಸಂಚರಿಸುತ್ತಾನೆ). ಈಗ ಅತಿಕಾಮಿಯಾದವನು ಯಾವನು ಅಕಾಮನೋ ನಿಷ್ಕಾಮನೋ ಆಪ್ತಕಾಮನೋ ಆತ್ಮಕಾಮನೋ ಅವನ ಪ್ರಾಣಗಳು ಉತ್ಕ್ರಮಿಸುವುದಿಲ್ಲ. ಬ್ರಹ್ಮ ಆಗಿ ಬ್ರಹ್ಮದಲ್ಲಿ ಲೀನವಾಗುತ್ತಾನೆ. ಆದುದರಿಂದ ಯಾವ ಮನುಷ್ಯನು ಅಕಾಮಿಯೂ ನಿಷ್ಕಾಮಿಯೂ ಆಗುವನೋ ಅವನು. ಈ ಜೀವಮಾನದಲ್ಲಿಯೇ ಬ್ರಹ್ಮಸ್ಥಿತಿಯನ್ನು ಹೊಂದುವುದು ಸಾಧ್ಯವೆಂದು ಈ ಉಪನಿಷತ್ತು ಅಧಿಕಾರವಾಣಿಯಿಂದ ಘೋಷಿಸಿದೆ.

ಉಪನಿಷತ್ತು ಒಬ್ಬ ಮನುಷ್ಯನು ತನ್ನ ಜೀವನದಲ್ಲಿ ಕೆಟ್ಟ ಕೆಲಸಗಳನ್ನು ಮಾಡಿದರೆ ಅವನು ಮುಂದಿನ ಜನ್ಮದಲ್ಲಿ ದ್ವಿಜನಾಗಿಯೋ ಆಗುವನು. ಅಥವಾ ಪಾಪಾಚಾರಣೆಯಿಂದ ಏಕಜನಾಗಿಯೋ ನಾಯಿಜನ್ಮವನ್ನಾಗಲಿಯೋ ಪಡೆಯುವ ನೆಂದು ಹೇಳಿದೆ. ಮಂತ್ರದ ಉದ್ದೇಶವು ಮಾನವನು ಕೆಟ್ಟಕೆಲಸಗಳನ್ನು ಮಾಡದೇ ಇರುವ ಹಾಗೆ ಎಚ್ಚರಿಸುತ್ತದೆ. ಆದರೆ ಈ ಮಂತ್ರವು ವರ್ಣವ್ಯವಸ್ಥೆಯಲ್ಲಿರುವ ವ್ಯತ್ಯಾಸವು ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತಗಳೋ ಅಥವಾ ದುಷ್ಕೃತ್ಯ ಗಳೋ ಎಂಬುವನ್ನು ಸೂಚಿಸಿ ವರ್ಣವ್ಯವಸ್ಥೆಯನ್ನು ಬಲಪಡಿಸುತ್ತದೆ. ಉಪ ನಿಷತ್ತು ಶೂದ್ರವರ್ಣವನ್ನು ಸೂಚಿಸದೇ ಇದ್ದರೂ ದ್ವಿಜರಲ್ಲವವರು ಹಿಂದಿನ ಜನ್ಮದ ದುಷ್ಕೃತ್ಯಗಳಿಂದ ಈಗ ಆ ವರ್ಣದಲ್ಲಿ ಜನ್ಮವನ್ನು ತಾಳಿರುವರೆಂದು ಸ್ಪಷ್ಟ ವಾಗಿ ಸೂಚಿಸುವುದು.

ಈ ಅಂಶವನ್ನೇ ಧರ್ಮಶಾಸ್ತ್ರಗಳು ಮತ್ತು ಇತಿಹಾಸಪುರಾಣಗಳು ಮುಂದು ವರಿಸಿ ಜಾತಿಧರ್ಮ ಮತ್ತು ಪುನರ್ಜನ್ಮಸಿದ್ಧಾಂತಗಳಿಗೂ ನಿಕಟಸಂಬಂಧವನ್ನು ಬಲಪಡಿಸಿವೆ.

ಮಹಾಭಾರತದ ವನಪರ್ವದಲ್ಲಿರುವ ಧರ್ಮವ್ಯಾಧನ ಕಥೆಯು (ಅಧ್ಯಾಯ 20 ಮತ್ತು ಮುಂದುವರೆದುದು) ಜಾತಿ ಕರ್ಮ ಮತ್ತು ಧರ್ಮಗಳಿಗಿರುವ ಸಂಬಂಧವನ್ನು ವಿಪುಲವಾಗಿ ವಿವರಿಸುವುದು.

ಕೌಶಿಕನೆಂಬ ಒಬ್ಬ ಬ್ರಾಹ್ಮಣನು ವೇದಾಧ್ಯಯನ ಸಂಪನ್ನ ತಪಸ್ವಿ, ಒಂದು ದಿನ ಮರದ ಕೆಳಗೆ ಕುಳಿತಿದ್ದಾಗ ಆ ಮರದ ಮೇಲಿದ್ದ ಒಂದು ಹಕ್ಕಿಯು ಅವನ ಮೇಲೆ ಹಿಕ್ಕೆಯನ್ನು ಹಾಕಿತು. ಕೋಪದಿಂದ ಆ ಹಕ್ಕಿಯನ್ನು ನೋಡಲು ಅದು ಕೆಳಕ್ಕೆ ಬಿತ್ತು. ಆ ಮೇಲೆ ವೇದಾಧ್ಯಯನದಿಂದ ತನಗೆ ಉಂಟಾದ ಶಕ್ತಿ ಯನ್ನು ಅರಿತನು. ಒಂದು ಮನೆಯಲ್ಲಿ ಭಿಕ್ಷೆಯನ್ನು ಕೇಳಲು ಹೋದನು.

ಆಗ ಗೃಹಿಣಿಯು ಸ್ವಲ್ಪ ತಡಮಾಡಿಕೊಂಡು ಭಿಕ್ಷೆಯನ್ನು ಕೊಡಲು ಬಂದಾಗ ಆಕೆಯನ್ನು ಕೋಪದಿಂದ ನೋಡಿದನು. ತನ್ನ ಪತಿಯ ಸೇವೆಯಲ್ಲಿ ನಿರತಳಾದ ಆಕೆಗೆ ಈತನಿಗಿಂತ ಹೆಚ್ಚು ಶಕ್ತಿಯಿತ್ತು. ನಿನ್ನ ಕೋಪದಿಂದ ಆ ಹಕ್ಕಿಯನ್ನು ಸಾಯಿಸಿದ ಹಾಗೆ ನನ್ನನ್ನು ಸಾಯಿಸಲಾರೆ. ನಿನಗೆ ಅಪರಾಧವನ್ನು ಕ್ಷಮಿಸುವ ಉದಾರ ಭಾವನೆಯಿಲ್ಲ. ಧರ್ಮದ ನಿಜ ಸ್ವರೂಪವನ್ನು ಅರಿಯಲು ಮಿಥಿಲೆಯಲ್ಲಿರುವ ವ್ಯಾಧನ ಹತ್ತಿರಕ್ಕೆ ಹೋಗು ಎಂದಳು. ಕೌಶಿಕನು ಮಾಂಸವನ್ನು ಮಾರುತ್ತಿದ್ದ ಒಬ್ಬ ವ್ಯಾಧನನ್ನು ನೋಡಿ ಆಶ್ಚರ್ಯಪಟ್ಟನು. ಧರ್ಮವ್ಯಾಧನು "ಕಾಮ ಕ್ರೋಧಗಳನ್ನು ಯಾವ ಮನುಷ್ಯನು ವಶದಲ್ಲಿಡುವನೋ, ಯಾವನಲ್ಲಿ ಇಂದ್ರಿಯ ನಿಗ್ರಹವು ಇರುವುದೋ, ಯಾವನು ಸತ್ಯ ಅಹಿಂಸೆಗಳಿಂದ ಕೂಡಿರುವನೋ ಅವನು ಶಿಷ್ಟನು ಎಂದುಹೇಳಿದನು. ಕೌಶಿಕನು ಇಂಥ ಸಂಸ್ಕಾರವನ್ನು ಹೊಂದಿರುವ ನೀನು ವ್ಯಾಧನ ಕುಲದಲ್ಲಿ ಜನಿಸಿ ಆ ಕಸುಬನ್ನು ಯಾವ ಕಾರಣದಿಂದ ಮಾಡುತ್ತಿರುವೆ ಎಂದು ಕೇಳಿದನು. ಹಿಂದಿನ ಜನ್ಮದ ಕರ್ಮ ಫಲವನ್ನು ಅನುಭವಿಸಲು ಒಬ್ಬ ಮನುಷ್ಯನು ಆ ಕರ್ಮಕ್ಕೆ ತಕ್ಕ ಜಾತಿಯಲ್ಲಿ ಜನಿಸುವನು. ಯಾವ ಜಾತಿಯಲ್ಲಿ ಹುಟ್ಟುವನೋ ಆ ಕುಲಕಸುಬನ್ನು ಶ್ರದ್ಧೆಯಿಂದ ಮಾಡಿ ಯಾರು ತನ್ನ ಮಾತಾಪಿತೃಗಳ ಸೇವೆಯನ್ನು ಭಕ್ತಿಯಿಂದ ಮಾಡುವನೋ ಅವನು ಬ್ರಹ್ಮಜ್ಞಾನಿಯಾಗುವನು ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದನು.

ಈ ವಿಧವಾಗಿ ಜಾತಿಗೂ ಹಿಂದಿನ ಜನ್ಮ ಕರ್ಮಕ್ಕೂ, ಸಂಬಂಧವಿದೆಯೆಂದು ವನಪರ್ವದ ಈ ಕಥೆಯು ಸಾದರಪಡಿಸುವುದು. ಎರಡನೆಯದಾಗಿ ಯಾವ ಜಾತಿಯಲ್ಲಿ ಹುಟ್ಟಿದರೂ ಆ ಜಾತಿಯ ಕಸುಬನ್ನು ಶ್ರದ್ಧೆಯಿಂದ ಮಾಡಿ ತನ್ನ ಕರ್ತವ್ಯಗಳೆಲ್ಲವನ್ನೂ ನಿಷ್ಠೆಯಿಂದ ಪೂರೈಸಿದರೆ ಅವನಿಗೆ ಬ್ರಹ್ಮಜ್ಞಾನವು ಸಿದ್ಧಿಸುವುದು. ಈ ವಿಧವಾಗಿ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತಗಳು ಸಮಾಜದಲ್ಲಿ ವರ್ಣ ಮತ್ತು ಜಾತಿ ವ್ಯವಸ್ಥೆಗಳನ್ನು ಪುಷ್ಟೀಕರಿಸಿವೆ. ಆದರೆ ಇಂತಹ ಅಭಿಪ್ರಾಯವು ಸಾಮಾಜಿಕ ಸ್ಥಿರತೆಯನ್ನು ಕಾಪಾಡಿದರೂ ವ್ಯಕ್ತಿಯ ಸರ್ವತೋಮುಖವಾದ ವಿಕಾಸಕ್ಕೂ ಇಡೀ ಸಮಾಜದ ಅಭ್ಯುದಯಕ್ಕೂ ಅಡಚಣೆಯನ್ನು ತಂದೊಡ್ಡಿದೆ. ಆದುದರಿಂದ ಸಾವಿರಾರು ವರ್ಷಗಳಿಂದ ಭಾರತ ದೇಶದಲ್ಲಿ ಶೇಕಡ 80–90 ಜನರಲ್ಲಿ ಅನಕ್ಷರ ಸ್ಥಿತಿಯೂ ಬಡತನವೂ ಉಂಟಾಗಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಂವಿಧಾನದ ಪ್ರಕಾರ ಜಾತಿ ಮತ ಲಿಂಗ ಭೇದಗಳನ್ನಾಚರಿಸುವುದು ಕಾನೂನಿಗೆ ವಿರುದ್ಧವಾದರೂ ಪ್ರಾಥಮಿಕ ವಿದ್ಯಾಭ್ಯಾಸವು ಸಾರ್ವತ್ರಿಕವಾಗಿರಬೇಕಾದುದು ಅಗತ್ಯವೆಂದು ಸರ್ಕಾರವೂ, ಸಮಾಜವೂ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರೂ, ಬಡತನವಾಗಲೀ ಅನಕ್ಷರತೆಯಾಗಲೀ

ಗಮನಾರ್ಹವಾದ ಬದಲಾವಣೆಯನ್ನು ಹೊಂದಿಲ್ಲ. ಈ ಪರಿಸ್ಥಿತಿಗೆ ಅನೇಕ ಕಾರಣಗಳಿರುವುವು. ಅವುಗಳಲ್ಲಿ ಕರ್ಮಸಿದ್ಧಾಂತ ಮತ್ತು ಪೂರ್ವಜನ್ಮಸಿದ್ಧಾಂತ ಗಳಲ್ಲಿರುವ ನಂಬಿಕೆಗಳು ಕಾರಣವೆಂದು ಸಾಮಾಜಿಕ ದೃಷ್ಟಿಯಿಂದ ಹೇಳಬಹುದು. ಜಾತಿಯ ಕಟ್ಟುಪಾಡುಗಳು ಮುಖ್ಯವಾಗಿ ದೇಶದ ಐದೂವರೆಲಕ್ಷ ಹಳ್ಳಿಗಳಲ್ಲಿಯೂ ಪಟ್ಟಣಗಳ ಕೊಳಚೆಪ್ರದೇಶಗಳಲ್ಲಿಯೂ ವ್ಯಕ್ತಿಗಳ ಮೇಲೆ ನಿರ್ಬಂಧಗಳನ್ನು ಹೊರಿಸಿರುವುದರಿಂದ ಸಂವಿಧಾನದ ಮೂಲಕ ಪಡೆದಿರುವ ವ್ಯಕ್ತಿ ಸ್ವಾತಂತ್ರ್ಯವೂ ಸರ್ವಸಮಾನತೆಯೂ ಫಲಪ್ರದವಾಗಲಿಲ್ಲ.

ಈ ವಿಧವಾಗಿ ಜಾತಿಧರ್ಮಕ್ಕೂ ಪುನರ್ಜನ್ಮಕ್ಕೂ ನಿಕಟ ಸಂಬಂಧ ಕಲ್ಪಿಸಲಾಗಿದೆ. ಒಬ್ಬ ಮನುಷ್ಯನು ಶ್ರದ್ಧೆಯಿಂದ ತನ್ನ ಕುಲಕಸಬನ್ನು ನಿರ್ವಹಿಸಿದರೆ ಆಗ ಆತನು ಮುಕ್ತಿ ಹೊಂದಬಹುದೆಂದು ನಂಬಲಾಗಿದೆ. ತದ್ವಿರುದ್ಧವಾಗಿ ಯಾವನು ತನ್ನ ಕುಲಕಸುಬನ್ನು ತ್ಯಜಿಸಿ ಇತರ ಕಸುಬುಗಳನ್ನು ಅನುಭವಿಸುವನೋ ಆತನು ಪುನರ್ಜನ್ಮಕ್ಕೆ ಒಳಗಾಗುವನೆಂಬ ನಂಬಿಕೆಯಿದೆ. ಹೀಗೆ ಪ್ರತಿಯೊಬ್ಬನೂ ತನ್ನ ಕುಲಕಸುಬನ್ನು ಬಿಡದೆ ಅದರ ನಿರ್ವಹಣೆಯ ಮೂಲಕ ಮುಕ್ತಿಯನ್ನು ಹೊಂದಿ ಪುನರ್ಜನ್ಮದಿಂದ ವಿಮೋಚನೆಯನ್ನು ಪಡೆಯಲು ಸಾಧ್ಯವೆಂದು ನಂಬಲಾಗಿತ್ತು. ಮನುಸ್ಮೃತಿಯ ಪ್ರಕಾರ ರಾಜನ ಕರ್ತವ್ಯವು ಬೇರೆ ಬೇರೆ ವರ್ಣಗಳಿಗೆ ಸೇರಿದ ಜನರು ಆಯಾ ವರ್ಣದ ಕೆಲಸಗಳನ್ನು ಮಾಡುವ ಹಾಗೆ ನೋಡಿಕೊಳ್ಳುವುದೇ ಆಗಿತ್ತು (7–35). ಅಂದರೆ ಒಬ್ಬ ವ್ಯಕ್ತಿಯು ಆತನ ಕುಲಕಸುಬನ್ನು ತ್ಯಜಿಸಿದರೆ ಒಂದು ಕಡೆ ಶಿಕ್ಷೆಗೆ ಗುರಿಯಾಗುವನು, ಮತ್ತೊಂದು ಕಡೆ ಪುನರ್ಜನ್ಮದಿಂದ ಬಂಧಿಸಲ್ಪಡುವನು. ಈ ನಂಬಿಕೆಯು ಭಾರತೀಯ ಸಮಾಜದಲ್ಲಿ ಜಾತಿಯ ವ್ಯವಸ್ಥೆಯನ್ನು ಬಲಪಡಿಸಿರುವುದರಿಂದ ಹೊಸ ಸಂವಿಧಾನ ನಿರ್ಮಿತವಾದರೂ ಹೊಸ ಕಾನೂನುಗಳು ರಚಿಸಲ್ಪಟ್ಟಿದ್ದರೂ ಹಳ್ಳಿ ಪ್ರದೇಶಗಳಲ್ಲಿ ಇಂದಿಗೂ ಕೋಟ್ಯಂತರ ಜನರು ತಮ್ಮ ಕುಲಕಸುಬನ್ನೇ ಅನುಸರಿಸಿಕೊಂಡು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದಂತೆ ಮಾಡಿದೆ. ಈ ಕಾರಣದಿಂದ ದೇಶದ ಅನಕ್ಷರತೆಯು ಬಹಳ ನಿಧಾನವಾಗಿ ಕಡಿಮೆಯಾಗುತ್ತಿರುವುದು. ಈ ದುಸ್ಥಿತಿಗೆ ಮುಖ್ಯ ಕಾರಣವೆಂದರೆ ಧರ್ಮಸಂರಕ್ಷಣೆಯು ಕೇವಲ ತಮ್ಮ ಕುಲಕಸುಬನ್ನು ಅನುಸರಿಸುವುದು ಎಂಬ ನಂಬಿಕೆ. ಕಾರಣಾಂತರಗಳಿಂದ ಕಸುಬಿಗೂ ಧರ್ಮಕ್ಕೂ ಬೇರ್ಪಡಿಸಲಾಗದ ಸಂಬಂಧವನ್ನು ಕಲ್ಪಿಸಲಾಯಿತು ಆಧುನಿಕ ಸಮಾಜದಲ್ಲಿ ಬದಲಾವಣೆಯುಂಟಾದರೂ ಕಸುಬಿಗೂ ಧರ್ಮಕ್ಕೂ ಇರುವ ಸಂಬಂಧವನ್ನು ಮಾರ್ಪಡಿಸಲು ಸಾಧ್ಯವಾಗಲಿಲ್ಲ. ಕಸುಬಿಗೂ ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳಿಗೂ ಒಂದು ಹೊಸ ಸಂಬಂಧವನ್ನು ರಚಿಸಬೇಕಾದುದು ಅಗತ್ಯ. ಈ ಹೊಸ ಸಂಬಂಧವನ್ನು ಪ್ರಜೆಗಳಲ್ಲಿ ಉಂಟುಮಾಡದೆ ಹೋದರೆ ಭಾರ

ತೀಯ ಸಮಾಜವು ಬಡತನದಿಂದಲೂ ಅನಕ್ಷರತೆಯಿಂದಲೂ ಬಹಳಕಾಲ ನರಳ ಬೇಕಾಗುವುದು. ಕುಲಕಸುಬನ್ನು ಬಿಟ್ಟು ಬೇರೆಬೇರೆ ಕಸುಬನ್ನು ತೆಗೆದು ಕೊಂಡರೆ ಇದು ಅಧರ್ಮವಲ್ಲ ಎಂಬ ನಂಬಿಕೆಯು ಭಾರತೀಯರಲ್ಲುಂಟಾಗಬೇಕು. ಅಂದರೆ ಮೋಕ್ಷ ಸಾಧನಕ್ಕೆ ಕುಲಕಸುಬನ್ನು ಅನುಸರಿಸುವುದು ಮುಖ್ಯ ನಿಯಮ ವಲ್ಲವೆಂದೂ ಲೈಕಿಕ ಜೀವನವು ಪ್ರಧಾನವೆಂಬ ಭಾವನೆಯೂ ಜನ ಸಾಮಾನ್ಯರಲ್ಲಿ ಹರಡಬೇಕಾಗಿದೆ.

ಮೇಲೆ ವಿವರಿಸಿರುವ ಹಾಗೆ ಭಾರತೀಯ ಸಂಸ್ಕೃತಿಯಲ್ಲಿ ಮೂರು ಅಂಶಗಳು ಆಧುನಿಕ ಜೀವನಪಥಕ್ಕೆ ಸಹಾಯಕರವಾಗುವುವು ಇವು ಕ್ರಮವಾಗಿ ಸುವರ್ಣನಿಯಮದ ಪ್ರತಿಪಾದನೆ ಸಾಧಾರಣಧರ್ಮಗಳ ಆಚರಣೆ ಮತ್ತು ಸ್ವಧರ್ಮ ಪರಿಪಾಲನೆ.

ಭಾರತೀಯ ಸಮಾಜದಲ್ಲಿರುವ ಎಲ್ಲ ವ್ಯಕ್ತಿಗಳೂ ಬ್ರಹ್ಮಸ್ವರೂಪ. ಇತ ರರಿಗೆ ಹಾನಿಯುಂಟುಮಾಡಿದರೆ ಅದರಿಂದ ನಮಗೆ ಹಾನಿಯುಂಟಾಗುವುದೆಂಬ ದೃಢನಂಬಿಕೆಯಿಂದ ಕೂಡಿರುವುದು ಸುವರ್ಣನಿಯಮವು. ಈ ದೇಶದ ಪ್ರತಿಯೊಬ್ಬ ಪ್ರಜೆಯ ಪ್ರಗತಿಯು ನಮ್ಮ ಪ್ರಗತಿಗೆ ಅನುಕೂಲ ಮಾಡುವುದೆಂಬ ಭಾವನೆ ಮೂಡಬೇಕು. ಅಂದರೆ ಇತರರನ್ನು ಹಾಳುಮಾಡಿ ತನ್ಮೂಲಕ ನಮ್ಮಲ್ಲಿ ಅಭ್ಯು ದಯ ಉಂಟಾಗುವುದೆಂಬ ಮೂಢನಂಬಿಕೆ ಮತ್ತು ಕ್ರೂರನಂಬಿಕೆ ನಿರ್ಮೂಲ ವಾಗಬೇಕು. ಅಂದರೆ ಇತರರಲ್ಲಿ ಸಹಾನುಭೂತಿ ಮತ್ತು ಮಾನವ ಸೇವೆಯೇ ನಮ್ಮ ಅಭ್ಯುದಯಕ್ಕೆ ಕಾರಣಭೂತವೆಂಬ ದೃಢನಂಬಿಕೆಯುಂಟಾಗಬೇಕು. ಈ ತತ್ವವನ್ನೇ ಮಹಾತ್ಮಗಾಂಧೀಜಿಯವರು ಸರ್ವೋದಯವೆಂದು ನಿರೂಪಿಸಿದರು. ಸರ್ವೋದಯ ಭಾವನೆಯ ಅಡಿಗಲ್ಲು ಸುವರ್ಣನಿಯಮ—ಎಲ್ಲರನ್ನೂ ತನ್ನಂತೆ ಕಾಣುವುದು. ಮುಕ್ತಿಗೆ ಎರಡನೆಯ ಮಾರ್ಗವು ಸಾಧಾರಣಧರ್ಮದ ಅನುಷ್ಠಾನ. ಸಾಧಾರಣಧರ್ಮಗಳಾವುವು ಎಂಬುದನ್ನು ಉಪನಿಷತ್ತುಗಳು, ಗೀತಾ ಮನುಸ್ಮೃತಿ ಮುಂತಾದ ಗ್ರಂಥಗಳು ನಿರೂಪಿಸಿವೆ. ಪ್ರಾಚೀನ ಕಾಲದ ಧರ್ಮಸೂತ್ರಗಳೂ ಮತ್ತು ಧರ್ಮಶಾಸ್ತ್ರಗಳೂ ಸಾಧಾರಣಧರ್ಮಗಳನ್ನು ಸೂಕ್ಷ್ಮವಾಗಿ ತಿಳಿಸಿ ವರ್ಣಾ ಶ್ರಮ ಧರ್ಮವನ್ನು ವಿಪುಲವಾಗಿ ವಿವರಿಸಿವೆ. ಸಾವಿರಾರು ವರ್ಷಗಳಿಂದ ಭಾರತ ದೇಶದಲ್ಲಿ ಶೇಕಡ 90 ರಷ್ಟು ಮಂದಿ ದಲಿತ ಪಂಗಡಕ್ಕೆ ಸೇರಿ ಸಮಾಜದಲ್ಲಿ ಕೀಳು ಸ್ಥಾನವನ್ನು ಹೊಂದಿರುವುದು. ಈ ಕಾರಣದಿಂದಲೇ ಆಧುನಿಕ ಸಮಾಜದ ಧ್ಯೇಯವು ಸಾಧಾರಣಧರ್ಮಗಳಾದ ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಕರುಣೆ ದಯೆ ಮುಂತಾದ ಭಾವನೆಗಳಿಗೆ ಪೂರ್ಣಬೆಂಬಲವನ್ನು ಕೊಟ್ಟು ಜಾತಿ ಮತ, ಲಿಂಗ, ಐಶ್ವರ್ಯ, ಬಣ್ಣ, ಜನಾಂಗ ವರ್ಗ, ಅಂತಸ್ತು, ವಂಶ, ಮುಂತಾದ ಸಂಕುಚಿತಭಾವನೆಗಳನ್ನು ನಿರ್ಮೂಲಮಾಡಲು ಪ್ರಯತ್ನಿಸಿರುವುದು. ಅಂದರೆ ಆಧುನಿಕ ಸಾಮಾಜಿಕ ಧ್ಯೇಯವು ಮಾನವೀಯತೆಗೆ ಬೆಲೆ ಕೊಡುವುದೇ

ಹೊರತು ಜಾತಿ ಕುಲ ಗೋತ್ರಗಳಿಗಲ್ಲ. ತನಗಿರುವ ಅವಕಾಶವನ್ನು ಉಪಯೋಗಿಸಿ ಕೊಂಡು ಯಾವ ವ್ಯಕ್ತಿಯು ತನಗಿರುವ ಅವಕಾಶಗಳನ್ನೂ ಶಕ್ತಿಗಳನ್ನೂ ಬೆಳಸಿ ಕೊಂಡು ಸದ್‌ವರ್ತನೆಯಿಂದ ಕೂಡಿದ ಬಾಳನ್ನು ನಡೆಸುವನೋ ಅವನು ಧನ್ಯ ಹಾಗೂ ಪೂಜ್ಯ. ಅವನನ್ನು ಅವನ ಕಾರ್ಯಸಾಧನೆಗಾಗಿ ಗೌರವಿಸಬೇಕೇ ಹೊರತು ಜಾತಿ, ವಂಶಗಳಿಗಲ್ಲ. ಅಂದರೆ ಅವನು ಮಾಡಿದ ಸತ್ಕಾರ್ಯಗಳಿಗೆ ಬೆಲೆ ಕೊಡಬೇಕೇ ಹೊರತು ಅವನ ಪೂರ್ವಜರ ಕೆಲಸಗಳಿಗಲ್ಲ. ಈ ನಿಯಮವನ್ನು ಆಧುನಿಕ ಸಮಾಜವು ಕಾರ್ಯರೂಪಕ್ಕೆ ತಂದಿರುವುದು ಸಂಪ್ರದಾಯದ ಆಧಾರದ ಮೇಲೆ ನಿಂತಿದ್ದ ರಾಜ ಮಹಾರಾಜರುಗಳನ್ನು ಕಾನೂನಿನ ಮೂಲಕ ಸಾಧಾರಣ ಪ್ರಜೆ ಗಳನ್ನಾಗಿ ಮಾಡಿದೆ. ಈ ಆಧುನಿಕ ದೃಷ್ಟಿಯಲ್ಲಿ ಮತ್ತೊಂದು ಅಂಶ ಗಮ ನಾರ್ಹ. ಇದೇ ಸಾಮಾಜಿಕನ್ಯಾಯ(Social Justice). ಬಲಹೀನನಾಗಿರುವ ಮಗನಿಗೆ ತಾಯಿಯು ಪೌಷ್ಟಿಕ ಆಹಾರವನ್ನು ಹೇಗೆ ಕೊಡುವಳೋ ಹಾಗೆ ಸರ್ಕಾರ ಮತ್ತು ಸಮಾಜವು ಕೀಳುಜಾತಿಯವರಿಗೂ ದಲಿತವರ್ಗದವರಿಗೂ ಹೊಸ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಈ ಗುಂಪುಗಳಿಗೆ ಸೇರಿದ ವ್ಯಕ್ತಿ ಗಳಿಗೆ ಸಹಾಯವನ್ನು ಮಾಡುವುದು ಧರ್ಮ. ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ದುಷ್ಕೃತ್ಯಗಳ ಫಲವಾಗಿ ಈಗ ದುಸ್ಥಿತಿಯಲ್ಲಿರುವರೆಂಬ ನಂಬಿಕೆಯು ಧರ್ಮಸಮ್ಮತವಲ್ಲ. ಶಕ್ತಿ ಸಾಮರ್ಥ್ಯಗಳು ಯಾವ ವ್ಯಕ್ತಿಯಲ್ಲಿದ್ದರೂ ಅವು ಗಳಿಗೆ ತಕ್ಕ ಪೋಷಣೆಯನ್ನು ಕೊಡುವುದು ಧರ್ಮ. ಭಾರತೀಯ ಸಂಸ್ಕೃತಿಯ ಮೂರನೆ ನಿಯಮವೆಂದರೆ ಸ್ವಧರ್ಮ. ಈ ಭಾವನೆಯು ಸಾರ್ವತ್ರಿಕಭಾವನೆ. ಪ್ರತಿಯೊಬ್ಬ ವ್ಯಕ್ತಿಯೂ ತಾನು ಕೈಗೊಂಡಿರುವ ಕಾರ್ಯವನ್ನು ಶ್ರದ್ಧೆಯಿಂದ ಮಾಡು ವುದು ಸ್ವಧರ್ಮದ ಲಕ್ಷಣ. ಮೇಲೆ ವಿವರಿಸಿರುವ ಹಾಗೆ ಕಾರಣಾಂತರದಿಂದ ಈ ಭಾವನೆಯನ್ನು ಸಂಕುಚಿತ ರೀತಿಯಿಂದ ಸೀಮಿತಗೊಳಿಸಿ ಸ್ವಧರ್ಮವೆಂದರೆ ತನ್ನ ಪರಂಪರಾನುಗತವಾಗಿ ಬಂದಿರುವ ಕುಲಕಸುಬನ್ನು ಮಾಡುವುದೆಂಬ ಭಾವನೆಯು ಬೇರೂರಿ, ಶೇಕಡ 90 ರಷ್ಟು ಮಂದಿ ಮುಖ್ಯವಾಗಿ ಹಳ್ಳಿಗಳಲ್ಲಿ ಈ ಭಾವನೆಯನ್ನು ನಂಬಿ ತಮ್ಮ ವ್ಯಕ್ತಿವಿಕಾಸಕ್ಕೆ ಎಡೆಕೊಡಲಿಲ್ಲ. ತಮ್ಮಲ್ಲಿರುವ ಬುದ್ಧಿಶಕ್ತಿಯ ಅರಿವೇ ಅವರಲ್ಲಿರಲಿಲ್ಲ. ವಂಶಾನುಗತವಾಗಿ ತಮಗೆ ಬಂದಿರುವ ಸ್ಥಾನಮಾನಗಳೇ ಶಾಶ್ವತವೆಂದು ನಂಬಿದರು. ಇವರಿಂದ ಒಂದು ಕಡೆ ವ್ಯಕ್ತಿವಿಕಾಸಕ್ಕೆ ಅವಕಾಶ ವಿರಲಿಲ್ಲ ಮತ್ತೊಂದು ಕಡೆ ಸಮಾಜದ ಅಭ್ಯುದಯಕ್ಕೆ ಪ್ರತಿಕೂಲವಾಯಿತು. ಆದು ದರಿಂದ ಆಧುನಿಕ ಸಾಮಾಜಿಕ ಧ್ಯೇಯವು ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಶಕ್ತಿಸಾಮರ್ಥ್ಯಗಳಿಗೆ ತಕ್ಕ ತರಪೇತು ಪಡೆದು ತನ್ನ ಕೆಲಸಗಳನ್ನು ಶ್ರದ್ಧೆ ಯಿಂದ ನಿರ್ವಹಿಸಿ ತನ್ನ ಮತ್ತು ಸಮಾಜದ ಅಭ್ಯುದಯಕ್ಕೆ ಶ್ರಮಿಸಬೇಕು. ಇದೇ ಪ್ರಾಚೀನ ಸ್ವಧರ್ಮತತ್ವದ ತಿರುಳು. ತನ್ನ ಈಗಿನ ಹೀನಸ್ಥಿತಿಯು ತಾನು ತನ್ನ ಹಿಂದಿನ ಜನ್ಮಗಳಲ್ಲಿ ಮಾಡಿದ ದುಷ್ಕೃತ್ಯಗಳ ಫಲವೆಂದು ನಂಬಿದರೆ ಆತ

ನಲ್ಲಿ ದೌರ್ಬಲ್ಯವೂ ಆತ್ಮ ವಿಶ್ವಾಸದ ಅಭಾವವೂ ಉಂಟಾಗುವುವು. ಇದರಿಂದ ತನ್ನ ಏಳಿಗೆಗೆ ಆತನು ಶ್ರಮಿಸುವುದಿಲ್ಲ. ಒಂದು ಸಮಾಜದಲ್ಲಿ ಶೇಕಡ 90 ರಷ್ಟು ಮಂದಿ ಇಂತಹ ಮನೋದೌರ್ಬಲ್ಯವನ್ನು ಹೊಂದಿರುವರಾದರೆ ಆ ಸಮಾಜದ ಅಭ್ಯುದಯವು ಹೇಗೆ ತಾನೆ ಉಂಟಾಗುವುದು ! ಈಗ ಸುಮಾರು ಐದಾರು ದಶಕಗಳಿಂದಲೂ ಹಳ್ಳಿಯ ಜನಜೀವನಮಟ್ಟವು ಉತ್ತಮಗೊಳ್ಳಬೇಕೆಂಬು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿತು. ಆದರೆ ಹಳ್ಳಿಯ ಜೀವನ ಮಾತ್ರ ಉತ್ತಮಗೊಳ್ಳಲಿಲ್ಲ. ಈ ದುಸ್ಥಿತಿಗೆ ಪುನರ್ಜನ್ಮಸಿದ್ಧಾಂತದ ನಂಬಿಕೆಯು ಒಂದು ಕಾರಣವೆಂದರೆ ಅತಿಶಯೋಕ್ತಿಯಾಗಲಾರದು. ಅಂದರೆ ಸ್ವಧರ್ಮವು ಕರ್ತವ್ಯಕರ್ಮನಿಷ್ಠ ಭಾವನೆಯನ್ನು ಸೂಚಿಸುವುದು. ಯಾವ ವ್ಯಕ್ತಿಯೇ ಆಗಲಿ ತಾನು ಯಾವ ಕೆಲಸವನ್ನು ಮಾಡುವೆನೆಂದು ಒಪ್ಪಿಕೊಳ್ಳುವನೋ, ಆ ಕೆಲಸವನ್ನು ಶ್ರದ್ಧೆಯಿಂದ ಪ್ರಾಮಾಣಿಕತೆಯಿಂದ ಮಾಡುವನೋ ಅವನು ಸ್ವಧರ್ಮ ವನ್ನು ಪಾಲಿಸುವನು.

ಪುನರ್ಜನ್ಮ ಮತ್ತು ಶ್ರಾದ್ಧ :— ತೀರಿಹೋದ ತಂದೆತಾಯಿಗಳಿಗೆ ಪ್ರತಿ ಅಮಾವಸ್ಯೆ ತರ್ಪಣವನ್ನು ಬಿಡುವುದು ಮತ್ತು ಪ್ರತಿವರ್ಷವೂ ಅವರು ತೀರಿಹೋದ ದಿನದಲ್ಲಿ ಶ್ರಾದ್ಧ ಮಾಡುವುದು ಭಾರತೀಯ ಸಂಸ್ಕೃತಿಯ ಮುಖ್ಯ ಆಚರಣೆ. ಸತ್ತವರ ಆತ್ಮಕ್ಕೆ ತೃಪ್ತಿ ಹಾಗೂ ಶಾಂತಿಯುಂಟಾಗುವ ಹಾಗೆ ಪುತ್ರನು ಶ್ರಾದ್ಧವನ್ನು ಮಾಡಬೇಕು. ಅಂದರೆ ಈ ನಂಬಿಕೆಯ ಪ್ರಕಾರ ಪುತ್ರನು ಯಾವ ವಿಧವಾಗಿ ವೃದ್ಧ ತಂದೆತಾಯಿಗಳನ್ನು ನೋಡಿಕೊಳ್ಳುವುದು ಆತನ ಕರ್ತವ್ಯವೋ ಅದೇ ರೀತಿಯಾಗಿ ಅವರು ಸತ್ತ ಮೇಲೆ ತರ್ಪಣ ಮತ್ತು ಶ್ರಾದ್ಧದ ಮೂಲಕ ಅವರನ್ನು ನೋಡಿಕೊಳ್ಳುವುದು ಆತನ ಕರ್ತವ್ಯ. ಈ ನಂಬಿಕೆಯ ಪ್ರಕಾರ ತಂದೆತಾಯಿಗಳು ಸತ್ತುಹೋದರೂ ಸಹ ಅವರು ಇನ್ನೊಂದು ಲೋಕದಲ್ಲಿ ಉಳಿದಿರುವರು. ಆದುದರಿಂದ ಅವರನ್ನು ನೋಡಿಕೊಳ್ಳುವುದು ಪುತ್ರನ ಕರ್ತವ್ಯ. ಆದರೆ ಪುನರ್ಜನ್ಮ ಸಿದ್ಧಾಂತದ ಪ್ರಕಾರ ಸತ್ತುಹೋದ ತಂದೆಯು ಮತ್ತೊಂದು ಜನ್ಮವನ್ನು ತಾಳಿ ತನ್ನ ಆತ್ಮಶುದ್ಧಿಯನ್ನು ಮಾಡಿಕೊಳ್ಳಲು ಪ್ರಯತ್ನಿಸಬೇಕು. ಶಂಕರಾಚಾರ್ಯರು ಅವರ "ಭಜ ಗೋವಿಂದಂ" ಕೃತಿಯಲ್ಲಿ " ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀಜಠರೇ ಶಯನಂ " ಎಂದು ಹೇಳಿರುವರು. ಅಂದರೆ ಮನುಷ್ಯನು ಸದಾ ಜನನ ಮರಣದ ಸಂಸಾರ ಚಕ್ರದಲ್ಲಿ ತಿರುಗುತ್ತಿರುವನು. ಗೀತೆಯಲ್ಲಿ ಈ ವಿಷಯವನ್ನು ಕುರಿತು ಹೀಗೆ ಹೇಳಿದೆ.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।

ತಥಾ ಶರೀರಾಣಿ ವಿಹಾಯ ಜೀರ್ಣಾ
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥

(II-22)

ಅಂದರೆ ಮನುಷ್ಯನು ಹಳೆಯ ಬಟ್ಟೆಗಳನ್ನು ಬಿಟ್ಟು ಹೇಗೆ ಹೊಸ ಹೊಸ ವಸ್ತ್ರಗಳನ್ನು ತೆಗೆದುಕೊಳ್ಳುತ್ತಾನೋ ಹಾಗೆಯೇ ದೇಹವನ್ನು ಹೊಂದಿರುವ ಆತ್ಮನು ಜೀರ್ಣವಾದ ಶರೀರಗಳನ್ನು ಬಿಟ್ಟು ಹೊಸ ಶರೀರವನ್ನು ಹೊಂದುತ್ತಾನೆ.

ಈ ವಿಧವಾಗಿ ಪುನರ್ಜನ್ಮದ ಸಿದ್ಧಾಂತದ ಪ್ರಕಾರ ಮೃತ್ಯು ಎನ್ನುವುದು ಕೇವಲ ದೇಹಕ್ಕೆ ಸಂಬಂಧಪಟ್ಟದೇ ಹೊರತು ಆತ್ಮಕ್ಕೆ ಸಂಬಂಧ ಪಟ್ಟದ್ದಲ್ಲ. ಈ ದೃಷ್ಟಿಯಿಂದ ನೋಡಿದರೆ ಪುನರ್ಜನ್ಮ ಸಿದ್ಧಾಂತದ ನಂಬಿಕೆಗೂ ಶ್ರಾದ್ಧ ಆಚರಣೆಗೂ ವಿರುದ್ಧ ಸಂಬಂಧವಿರುವುದು. ಒಂದು ಸತ್ಯವಾದರೆ ಮತ್ತೊಂದು ಮಿಥ್ಯ ಎನಿಸುವುದು. ಆದರೆ ಸಾಧಾರಣವಾಗಿ ಸಾವಿರಾರು ವರ್ಷಗಳಿಂದ ಭಾರತೀಯರು ಈ ಎರಡು ವಿರುದ್ಧ ಭಾವನೆಗಳಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿರುವರು. ಆದರೆ ಇವೆರಡೂ ಕೇವಲ ನಂಬಿಕೆಗಳ ಆಧಾರದ ಮೇಲೆ ಇರುವುವೇ ಹೊರತು ಈ ಎರಡು ಭಾವನೆಗಳನ್ನೂ ವೈಜ್ಞಾನಿಕ ದೃಷ್ಟಿಯಿಂದ ಸತ್ಯವೆಂದಾಗಲೀ ಅಸತ್ಯವೆಂದಾಗಲೀ ನಿರ್ಣಯಿಸಲು ಅಸಾಧ್ಯ.

ಗರುಡ ಪುರಾಣವು ಸತ್ತಮೇಲೆ ಜೀವವು ಯಾವ ಕಾರಣಗಳಿಂದ ನರಕಕ್ಕೆ ಹೋಗುವುದು ಎಂಬುದನ್ನು ವಿವರಿಸುವುದು.

ಯೇ ಹಿ ಪಾಪರತಾಸ್ತಾರ್ಕ್ಷ್ಯ ದಯಾಧರ್ಮವಿವರ್ಜಿತಾಃ ।
ದುಷ್ಟಸಂಗಾಶ್ಚ ಸಚ್ಛಾಸ್ತ್ರಸತ್ಸಂಗತಿಪರಾಙ್ಮುಖಾಃ ॥
ಆತ್ಮಸಂಭಾವಿತಾಸ್ತಬ್ಧಾ ಧನಮಾನಮದಾನ್ವಿತಾಃ ।
ಆಸುರಂಭಾವಮಾಪನ್ನಾದೈವೀ ಸಂಪದ್ವಿವರ್ಜಿತಾಃ ॥
ಅನೇಕಚಿತ್ತವಿಭ್ರಾಂತಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥
ಯೇ ನರಾ ಜ್ಞಾನಶೀಲಾಶ್ಚ ತೇ ಯಾಂತಿ ಪರಮಾಂ ಗತಿಮ್ ।
ಪಾಪಶೀಲಾ ನರಾ ಯಾಂತಿ ದುಃಖೇನ ಯಮಯಾತನಾಮ್ ॥

ಅಂದರೆ ಯಾರು ಪಾಪಕಾರ್ಯಗಳಲ್ಲಿ ಇಚ್ಛೆಯುಳ್ಳವರೋ, ಯಾರು ದಯೆ ಮತ್ತು ಧರ್ಮವನ್ನು ತ್ಯಜಿಸಿರುವರೋ ಯಾರು ದುಷ್ಟರ ಸಹವಾಸದಲ್ಲಿರುವರೋ ಯಾರು ಒಳ್ಳೆಯ ಶಾಸ್ತ್ರಗಳಿಂದಲೂ ಒಳ್ಳೆಯವರ ಸಹವಾಸದಿಂದಲೂ ವಿಮುಖರಾಗಿರುವರೋ, ಯಾರು ದುರಹಂಕಾರಿಗಳೋ ಕಠಿಣ ಹೃದಯರೋ, ಯಾರು ಧನ ಮಾನಗಳ ಗರ್ವದಿಂದ ಕೂಡಿರುವರೋ, ಯಾರು ಆಸುರೀ ಭಾವವನ್ನು ಹೊಂದಿರು

ವರೋ, ಯಾರು ದೈವೀಸಂಪತ್ತನ್ನು ದೂರ ಮಾಡಿರುವರೋ ಯಾರ ಮನಸ್ಸು ಮೋಹದ ಬಲೆಯಲ್ಲಿ ಸಿಕ್ಕಿ ಅನೇಕ ರೀತಿಯಲ್ಲಿ ಭ್ರಾಂತಿಗೊಂಡಿರುವುದೋ, ಯಾರು ಕಾಮಭೋಗದಲ್ಲಿ ಆಸಕ್ತರಾಗಿರುವರೊ ಅವರೆಲ್ಲರೂ ಕಲ್ಮಷ ಪೂರಿತವಾದ ನರಕ ದಲ್ಲಿ ಬೀಳುತ್ತಾರೆ. ಯಾವ ಮನುಷ್ಯರು ಜ್ಞಾನಿಗಳಾಗಿರುತ್ತಾರೋ ಅವರು ಉತ್ತಮ ಗತಿಯನ್ನು ಪಡೆಯುತ್ತಾರೆ. ಪಾಪಶೀಲರಾದವರು ದುಃಖದಿಂದ ಯಮ ಯಾತನೆಯನ್ನು ಅನುಭವಿಸುತ್ತಾರೆ. [1-14-17]

ಈ ವಿಧವಾಗಿ ಗರುಡಪುರಾಣದ ಪ್ರಕಾರ ಯಾರು ಸಾಧಾರಣ ಧರ್ಮ ಗಳನ್ನು ನಿರಾಕರಿಸುವರೋ ಅಂದರೆ ಸಾರ್ವತ್ರಿಕ ಮಾನವ ನಿಯಮಗಳನ್ನು ತ್ಯಜಿಸುವರೋ ಅವರು ಪಾಪಕರ್ಮಗಳನ್ನು ಮಾಡಿದುದರಿಂದ ಜೀವಿಸುವಾಗಲೂ ತೀರಿ ಹೋದ ಮೇಲೆಯೂ ನರಕ ಯಾತನೆಯನ್ನು ಅನುಭವಿಸುವರು. ಆದರೆ ಯಾರು ಸಾರ್ವತ್ರಿಕ ಸಾಧಾರಣ ಧರ್ಮಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವರೋ ಅವರು ಸುಖವನ್ನೂ ಉತ್ತಮ ಗತಿಯನ್ನೂ ಪಡೆಯುವರು. ಆದುದರಿಂದ ಮನು ಷ್ಯನು ಯಾವಾಗಲೂ ಇತರರನ್ನು ದಯೆ-ಕರುಣೆಯಿಂದ ನೋಡಬೇಕು. ಯಾರು ತಮ್ಮ ಧನವನ್ನೂ ಸಾಮಾಜಿಕ ಸ್ಥಾನವನ್ನೂ ಮನಸ್ಸಿನಲ್ಲಿಟ್ಟುಕೊಂಡು ಗರ್ವ ದಿಂದಲೂ ಅಹಂಭಾವದಿಂದಲೂ ಇತರರನ್ನು ತಿರಸ್ಕರಿಸುವರೋ ಅವರು ದುಃಖಕ್ಕೆ ಗುರಿಯಾಗುವರು.

ಏವಂ ವೈ ಕ್ಲಿಶ್ಯಮಾನಾಸ್ತೇ ನರಾ ನಾರ್ಯಃ ಸಹಸ್ರಶಃ ।
ಪಚ್ಯಂತೇ ನರಕೇ ಘೋರೇ ಯಾವದಾಭೂತಸಂಪ್ಲವಮ್ ॥
ತಸ್ಯಾಕ್ಷಯಂ ಫಲಂ ಭುಂಕ್ತ್ವಾ ತತ್ರೈವೋತ್ಪದ್ಯತೇ ಪುನಃ ।
ಯಮಾಜ್ಞಯಾ ಮಹೀಂ ಪ್ರಾಪ್ಯ ಭವಂತಿ ಸ್ಥಾವರಾದಯಃ ।

ಅಂದರೆ ಈ ರೀತಿ ನಿಶ್ಚಯವಾಗಿಯೂ ಪೀಡಿಸಲ್ಪಟ್ಟು ಸಾವಿರಾರು ನರನಾರಿಯರು ಪ್ರಳಯಕಾಲದವರೆಗೆ ಘೋರವಾದ ನರಕಗಳಲ್ಲಿ ಬೇಯಿಸಲ್ಪಡು ತ್ತಾರೆ. ಅದರ ಅಕ್ಷಯ ಫಲವನ್ನು ಅಲ್ಲಿಯೇ ಅನುಭವಿಸಿ ಪುನಃ ಹುಟ್ಟುತ್ತಾರೆ. ಯಮನ ಆಜ್ಞೆಯ ಪ್ರಕಾರ ಭೂಮಿಗೆ ಬಂದು ಸ್ಥಾವರ ಇತ್ಯಾದಿಗಳಾಗುತ್ತಾರೆ. [55. 56]

ಈ ವಿಧವಾಗಿ ಗರುಡ ಪುರಾಣವು ಕರ್ಮ ಸಿದ್ಧಾಂತ. ಪಾಪ ಪುಣ್ಯ ಸಿದ್ಧಾಂತ, ಸ್ವರ್ಗ ನರಕ ಸಿದ್ಧಾಂತ, ಪುನರ್ಜನ್ಮ ಸಿದ್ಧಾಂತ ಮತ್ತು ಪುರುಷಾರ್ಥ ಸಿದ್ಧಾಂತಗಳನ್ನು ಒಂದುಗೂಡಿಸಿದೆ. ಆದುದರಿಂದ ಸಾಮಾನ್ಯ ಜನರಿಗೆ ಈ ನಾಲ್ಕು ಸಿದ್ಧಾಂತಗಳಲ್ಲಿ ಯಾವುದು ಮುಖ್ಯ, ಯಾವುದು ಮುಖ್ಯವಲ್ಲ ಎಂಬು ದನ್ನು ಗ್ರಹಿಸಲು ಕಷ್ಟಸಾಧ್ಯವಾಗುವುದು. ಒಬ್ಬ ಮನುಷ್ಯನು ತನ್ನ ದುಷ್ಕೃತ್ಯ ಗಳಿಗೆ ಘೋರವಾದ ನರಕದಲ್ಲಿ ಪ್ರಳಯಕಾಲದವರೆಗೆ ಬೇಯಿಸಲ್ಪಟ್ಟು ಈ ಲೋಕ

ದಲ್ಲಿ ಪುನಃ ಹುಟ್ಟಿದರೆ ಆತನು ಮತ್ತೊಮ್ಮೆ ಕರ್ಮಫಲವನ್ನನುಭವಿಸಲು ಹೇಗೆ ಸಾಧ್ಯವಾದೀತು? ಆದರೂ ಗರುಡ ಪುರಾಣವು ಹೀಗೆ ಸಾರುತ್ತದೆ.

ಗಲತ್ಕುಷ್ಠಾಶ್ಚ ಜನ್ಮಾಂಧಾ ಮಹಾರೋಗಸಮಾಕುಲಾಃ ।
ಭವಂತ್ಯೇವಂ ನರಾ ನಾರ್ಯಃ ಪಾಪಚಿಹ್ನೋಪಲಕ್ಷಿತಾಃ ॥

ಅಂದರೆ ಈ ರೀತಿ ತೀವ್ರವಾದ ಕುಷ್ಠ ರೋಗಗಳು, ಹುಟ್ಟು ಕುರುಡುತನ ಮುಂತಾದ ರೋಗಗಳಿಂದೊಡಗೂಡಿ ಪಾಪ ಚಿಹ್ನೆಗಳನ್ನು ಸೂಚಿಸುವ ನರ ನಾರಿಯರಾಗುತ್ತಾರೆ.(1–6) ಆದುದರಿಂದ ನರಕದಲ್ಲಿ ತಮ್ಮ ದುಷ್ಕೃತ್ಯಗಳಿಂದುಂಟಾದ ಅಕ್ಷಯಫಲವನ್ನು ಅಲ್ಲಿಯೇ ಅನುಭವಿಸಿದರೂ ಇನ್ನೊಂದು ಜನ್ಮದಲ್ಲಿ ಮಹಾ ರೋಗಗಳಿಂದ ನರಳುವರು ಎಂದು ಹೇಳಿದಹಾಗಾಯಿತು.

ಆದರೆ ಈಗ ಚೆನ್ನಾಗಿ ಗೊತ್ತಿರುವ ಹಾಗೆ ಮಹಾ ವ್ಯಕ್ತಿಗಳೂ ಜೀವನ್ಮುಕ್ತರೂ ಆದ ಶ್ರೀರಾಮಕೃಷ್ಣಪರಮಹಂಸರು. ಶ್ರೀ ರಮಣ ಮಹರ್ಷಿಗಳು ಶ್ರೀ ಅರವಿಂದರು ಮುಂತಾದವರು ಅರ್ಬುದ ರೋಗ (ಕ್ಯಾನ್ಸರ್) ದಿಂದ ಅವರ ಅಂತ್ಯಕಾಲದಲ್ಲಿ ನರಳಿದರು. ಈ ವಿಷಯವನ್ನು ಎರಡು ದೃಷ್ಟಿಯಿಂದ ಕಾಣಬಹುದು. ಪುನರ್ಜನ್ಮದ ಸಿದ್ಧಾಂತದ ಪ್ರಕಾರ ಇವರು ಜೀವನ್ಮುಕ್ತರಾದರೂ ಪ್ರಾರಬ್ಧ ಕರ್ಮವನ್ನನುಭವಿಸಲೇ ಬೇಕಾಯಿತು. ಆದರೆ ವಿವೇಚನಾದೃಷ್ಟಿಯಿಂದ ನೋಡಿದರೆ ದೈಹಿಕ ರೋಗಗಳಿಗೂ ಜೀವನ್ಮುಕ್ತ ಸ್ಥಿತಿಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳಬಹುದು.

ದಾನಗಳನ್ನು ಕುರಿತು ಗರುಡ ಪುರಾಣವು ಹೀಗೆ ಹೇಳುವುದು :—

ಪಾತ್ರೇ ಪ್ರದಾಯ ಶಯನಂ ವಾಂಛಿತಮ್ ಫಲಮಾಪ್ನುಯಾತ್ ।
ಪಿತಾ ಚ ದಾತಾ ತನಯಃ ಪರತ್ರೇಹ ಚ ಮೋದತೇ ॥
ಪುರಂದರಗೃಹೇ ದಿವ್ಯೇ ಸೂರ್ಯಪುತ್ರಾಲಯೇಽಪಿ ಚ ।
ಉಪತಿಷ್ಠೇನ್ನ ಸಂದೇಹಃ ಶಯ್ಯಾದಾನಪ್ರಭಾವತಃ ॥
ವಿಮಾನವರಮಾರೂಢಃ ಸೇವ್ಯಮಾನೋಽಪ್ಸರೋಗಣೈಃ ।
ಆಭೂತಸಂಪ್ಲವಂ ಯಾವತ್ತಿಷ್ಠತ್ಯಾತಂಕವರ್ಜಿತಃ ॥
ಸರ್ವತೀರ್ಥೇಷು ಯತ್ಪುಣ್ಯಂಸರ್ವಪರ್ವದಿನೇಷು ಚ ।
ತೇಭ್ಯಶ್ಚಾಪ್ಯಧಿಕಂ ಪುಣ್ಯಂ ಶಯ್ಯಾದಾನೋದ್ಭವಂ ಭವೇತ್ ॥

ಅಂದರೆ ಸತ್ಪಾತ್ರನಲ್ಲಿ ಶಯ್ಯಾದಾನವನ್ನು ಮಾಡಿ ಅಪೇಕ್ಷಿಸಿದ ಫಲಗಳನ್ನು ಪಡೆದು ತಂದೆ ಮತ್ತು ದಾನಿಯಾದ ಮಗನು ಇಹಪರಗಳಲ್ಲಿ ಸಂತೋಷಪಡುತ್ತಾರೆ. ಶಯ್ಯಾದಾನದ ಪ್ರಭಾವದಿಂದ ದಿವ್ಯವಾದ ಇಂದ್ರನ ಗೃಹದಲ್ಲಿ ಮತ್ತು ಸೂರ್ಯ ಪುತ್ರನಾದ ಯಮರಾಜನ ನಿವಾಸದಲ್ಲಿ ನಿಸ್ಸಂದೇಹವಾಗಿ ವಾಸಿಸುತ್ತಾನೆ. ಅವನು ಶ್ರೇಷ್ಠವಾದ ವಿಮಾನವನ್ನು ಹತ್ತಿ ಅಪ್ಸರೆಯರಿಂದ ಸೇವಿಸ

ಲ್ಪಡುತ್ತಾ ಪ್ರಳಯಕಾಲದ ವರೆಗೆ ತೊಂದರೆಗಳಿಲ್ಲದೆ ಇರುತ್ತಾನೆ. ಎಲ್ಲ ತೀರ್ಥ ಗಳಲ್ಲಿಯೂ ಮತ್ತು ಎಲ್ಲ ಪರ್ವದಿನಗಳಲ್ಲಿಯೂ ಯಾವ ಪುಣ್ಯ ಬರುತ್ತದೋ ಅದ ಕ್ಕಿಂತ ಹೆಚ್ಚಾದ ಪುಣ್ಯವು ಶಯ್ಯಾದಾನದಿಂದ ಉಂಟಾಗುತ್ತದೆ. (13-78-81)

ಆದರೆ ಮತ್ತೊಂದು ಕಡೆಯಲ್ಲಿ ಗಯೆಯಲ್ಲಿ ಶ್ರಾದ್ಧವನ್ನು ಮಾಡಿದರೆ ಪಿತೃ ಗಳಿಗೂ ಅದನ್ನು ಮಾಡಿದ ಪುತ್ರನಿಗೂ ಮುಕ್ತಿಲಭಿಸುವುದೆಂದು ಹೇಳಲಾಗಿದೆ.

ಗಯಾಶ್ರಾದ್ಧಾತ್ಪ್ರಮುಚ್ಯಂತೇ ಪಿತರೋ ಭವಸಾಗರಾತ್ ।
ಗದಾಧರಾನುಗ್ರಹೇಣ ತೇ ಯಾಂತಿ ಪರಮಾಂ ಗತಿಮ್ ॥
ಏವಮಾಮುಷ್ಮಿಕೀಂ ತಾರ್ಕ್ಷ್ಯ ಯಃ ಕರೋತಿ ಕ್ರಿಯಾಂ ಸುತಃ ।
ಸ ಸ್ಯಾತ್ಸುಖೀಭವೇನ್ಮುಕ್ತಃ ಕೌಶಿಕಸ್ಯಾತ್ಮಜಾ ಯಥಾ ॥

ಎಂದರೆ ಗಯಾಶ್ರಾದ್ಧದಿಂದ ಪಿತೃಗಳು ಭವಸಾಗರದಿಂದ ಮುಕ್ತರಾಗು ತ್ತಾರೆ, ಗದಾಧರನ ಅನುಗ್ರಹದಿಂದ ಅವರು ಪರಮಗತಿಯನ್ನು ಹೊಂದುತ್ತಾರೆ. (13-110) ಈ ರೀತಿ ಯಾವ ಪುತ್ರನು ಪರಲೋಕಕ್ಕೆ ಸಂಬಂಧಿಸಿದ ಕ್ರಿಯೆ ಗಳನ್ನು ಮಾಡುತ್ತಾನೋ ಅವನು ಸುಖವನ್ನು ಹೊಂದಿ ಮುಕ್ತನಾಗುತ್ತಾನೆ. (13-116) ಆದರೂ ಹದಿನಾರನೆಯ ಅಧ್ಯಾಯದಲ್ಲಿ ಮುಕ್ತಿಯನ್ನು ಪಡೆ ಯಲು ಜ್ಞಾನದಿಂದ ಮಾತ್ರ ಸಾಧ್ಯವೆಂದೂ ಕರ್ಮದಿಂದಾಗಲೀ ಕೇವಲ ಶ್ರುತಿ ಸ್ಮೃತಿಗಳ ತಿಳುವಳಿಕೆಯಿಂದಾಗಲೀ ಅಸಾಧ್ಯವೆಂದೂ ಹೇಳಲಾಗಿದೆ.

ನ ವೇದಾಧ್ಯಯನಾನ್ಮುಕ್ತಿರ್ನ ಶಾಸ್ತ್ರಪಠನಾದಪಿ ।
ಜ್ಞಾನಾದೇವ ಹಿ ಕೈವಲ್ಯಂ ನಾನ್ಯಥಾ ವಿನತಾತ್ಮಜ ॥
ನಾಶ್ರಮಃ ಕಾರಣಂ ಮುಕ್ತೇರ್ದರ್ಶನಾನಿ ನ ಕಾರಣಮ್ ।
ತಥೈವ ಸರ್ವಕರ್ಮಾಣಿ, ಜ್ಞಾನಮೇವ ಹಿ ಕಾರಣಮ್ ॥

ಎಂದರೆ ವೇದಾಧ್ಯಯನದಿಂದಲೂ ಶಾಸ್ತ್ರಗಳನ್ನು ಓದುವುದರಿಂದಲೂ ಮುಕ್ತಿಯು ದೊರಕುವುದಿಲ್ಲ. ಜ್ಞಾನದಿಂದಲೇ ಕೈವಲ್ಯ; ಅನ್ಯಥಾ ಇಲ್ಲ. (ನಾಲ್ಕು) ಆಶ್ರಮಗಳು ಮುಕ್ತಿಗೆ ಕಾರಣವಲ್ಲ. (ಆರು) ದರ್ಶನಗಳೂ ಕಾರಣವಲ್ಲ. ಹಾಗೆಯೇ ಎಲ್ಲ ಕರ್ಮಗಳಿಗೂ ಕೇವಲ ಜ್ಞಾನವೊಂದೇ ಕಾರಣವು (6-87,88) ಈ ವಿಧವಾಗಿ ಈ ಎರಡು ಶ್ಲೋಕಗಳಲ್ಲಿ ಗರುಡ ಪುರಾಣವು ಜ್ಞಾನವೊಂದೇ ಮೋಕ್ಷಸಾಧನೆಗೆ ಮಾರ್ಗ ಎಂದು ಒತ್ತಿ ಹೇಳುವುದು. ಕೇವಲ ವೇದಾಧ್ಯಯನ ದಿಂದಲೂ ದರ್ಶನಗಳ ಅಧ್ಯಯನದಿಂದಲೂ ವೈದಿಕ ಕರ್ಮಗಳ ಆಚರಣೆಯಿಂದಲೂ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲವೆಂದು ವಿಶದೀಕರಿಸಿದೆ.

ಆದರೆ ಕೊನೆಯಲ್ಲಿ ಹೀಗೆ ಹೇಳಿದೆ.

ಇತಿ ತೇ ಕಥಿತಂ ತಾರ್ಕ್ಷ್ಯ ! ಮೋಕ್ಷಧರ್ಮಂ ಸಮನ್ವಿತಮ್ ।
ಜ್ಞಾನವೈರಾಗ್ಯಸಹಿತಂ ಶ್ರುತ್ವಾ ಮೋಕ್ಷಮವಾಪ್ನುಯಾತ್ ॥

ಎಂದರೆ ಗರುಡ ಪುರಾಣದಲ್ಲಿ ವಿವರಿಸಿರುವ ಸನಾತನವಾದ ಮೋಕ್ಷ ಧರ್ಮವನ್ನು ಜ್ಞಾನ ವೈರಾಗ್ಯಗಳ ಸಮೇತವಾಗಿ ಕೇಳಿದವನು ಮೋಕ್ಷವನ್ನು ಪಡೆಯುತ್ತಾನೆ.

ಈ ವಿಧವಾಗಿ ಯಾರು ಗರುಡ ಪುರಾಣವನ್ನು ಜ್ಞಾನ ವೈರಾಗ್ಯಗಳಿಂದ ಕೇಳುವರೋ ಅವರು ಮೋಕ್ಷವನ್ನು ಪಡೆಯುವರೆಂದು ಹೇಳಿದೆ.

ಮೇಲೆ ಹೇಳಿದ ಹಾಗೆ ಗರುಡ ಪುರಾಣವು ಆ ಕಾಲದಲ್ಲಿ ಸಂಪ್ರದಾಯವಾಗಿದ್ದ ಯಜ್ಞ ಯಾಗಾದಿ ದಾನಗಳನ್ನು, ಪಾಪ ಪುಣ್ಯ ಮತ್ತು ಸ್ವರ್ಗ ನರಕ ನಂಬಿಕೆಗಳನ್ನು, ಹೊಸದಾಗಿ ಉಂಟಾದ ಪುರುಷಾರ್ಥಗಳ ವಿವೇಚನೆಯನ್ನು— ಈ ಎಲ್ಲ ವಿಷಯಗಳನ್ನು ಕುರಿತು ಹೇಳಿದೆ. ಇದು ಭಾರತೀಯ ಸಂಸ್ಕೃತಿಯ ಒಂದು ವೈಶಿಷ್ಟ್ಯ. ಹೊಸ ಸಿದ್ಧಾಂತಗಳು ಹೊರಟರೆ ಹಳೆಯ ನಂಬಿಕೆಗಳನ್ನು ಬಿಡುವುದಿಲ್ಲ ಹಳೆಯದಕ್ಕೂ ಹೊಸದಕ್ಕೂ ಸಮನ್ವಯವಿಲ್ಲದಿದ್ದರೂ ಎರಡರಲ್ಲೂ ನಂಬಿಕೆಯನ್ನಿಡುವುದೇ ಆಗಿದೆ.

ಉಪನಿಷತ್ಕಾಲದಲ್ಲಿ ಮೋಕ್ಷವೇ ಮಾನವನ ಅಂತಿಮ ಗುರಿಯೆಂದೂ ಇದನ್ನು ಪಡೆಯಲು ಜ್ಞಾನ ವೈರಾಗ್ಯಗಳೇ ಸಾಧನೆಯೆಂದೂ ಜ್ಞಾನ ವೈರಾಗ್ಯಗಳು ಯಾರಲ್ಲಿರುವುವೋ ಅವರು ಕೇವಲ ಇಂದ್ರಿಯಜನ್ಯ ಸುಖಾನುಭವವನ್ನು, ಅಹಂಕಾರ ಮಮಕಾರಗಳನ್ನು ಯಾವ ಪ್ರಯತ್ನವೂ ಇಲ್ಲದೇ ಅನೈಚ್ಛಿಕವಾಗಿ ತ್ಯಜಿಸಿ ಸತ್ಪ್ರವರ್ತನೆಯಿಂದ ಕೂಡಿದವರಾಗಿರುವರು ಎಂದು ಸಾರಿದೆ. ಇದೇ ಅಭಿಪ್ರಾಯವನ್ನು ಗೀತೆಯು ನಾನಾಕಡೆ ಪ್ರಕಟಿಸಿದೆ.

ಗೀತೆಯ ನಾಲ್ಕನೆ ಅಧ್ಯಾಯವನ್ನು ಜ್ಞಾನಯೋಗವೆಂದು ಕರೆಯಲಾಗಿದೆ. ಈ ಅಧ್ಯಾಯದಲ್ಲಿ 33 ನೆಯ ಶ್ಲೋಕವು ಜ್ಞಾನವೇ ಮುಕ್ತಿಗೆ ಸಾಧನವೆಂದು ಸಾರಿತು.

ಶ್ರೇಯಾನ್ ದ್ರವ್ಯಮಯಾದ್ಯಜ್ಞಾಜ್ಜ್ಞಾನಯಜ್ಞಃ ಪರಂತಪ |
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ||

ಎಂದರೆ ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಶ್ರೇಯಸ್ಕರವಾದುದು. ಎಲ್ಲಾ ಕರ್ಮವೂ ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿಯನ್ನು ಹೊಂದುತ್ತದೆ. (4–33)

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ |
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ||
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ |
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ||
ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ |

ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ।
ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥

ಅಂದರೆ ಚೆನ್ನಾಗಿ ಪ್ರಜ್ವಲಿಸುತ್ತಿರುವ ಅಗ್ನಿಯು ಕಟ್ಟಿಗೆಗಳನ್ನು ಹೇಗೆ ಸುಟ್ಟು ಬೂದಿ ಮಾಡುತ್ತದೆಯೋ ಹಾಗೆಯೇ ಜ್ಞಾನವೆಂಬ ಅಗ್ನಿಯು ಕರ್ಮಗಳನ್ನೆಲ್ಲ ಭಸ್ಮಮಾಡಿಬಿಡುವುದು.

ಈ ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರವಸ್ತು ಯಾವುದೂ ಇರುವುದಿಲ್ಲ. ಯೋಗದಿಂದ ಸಂಸಿದ್ಧಿಯನ್ನು ಹೊಂದಿದವನು ಕಾಲಕ್ರಮದಲ್ಲಿ ಆ ಜ್ಞಾನವನ್ನು ತನ್ನಲ್ಲಿ ತಾನೇ ಹೊಂದುವನು.

ಶ್ರದ್ಧೆಯುಳ್ಳವನೂ ತತ್ಪರನೂ ಜಿತೇಂದ್ರಿಯನೂ (ಆದ ಮುಮುಕ್ಷುವು) ಜ್ಞಾನವನ್ನು ಹೊಂದುತ್ತಾನೆ. ಜ್ಞಾನವನ್ನು ಪಡೆದು ಶೀಘ್ರದಲ್ಲಿಯೇ ಪರಮ ಶಾಂತಿಯನ್ನು ಪಡೆಯುತ್ತಾನೆ.

ಜ್ಞಾನವಿಲ್ಲದವನೂ ಶ್ರದ್ಧೆಯಿಲ್ಲದವನೂ ಸಂಶಯಾತ್ಮನೂ (ಈ ಮೂವರೂ) ನಾಶ ಹೊಂದುವರು. ಸಂಶಯಾತ್ಮನಿಗೆ ಈ ಲೋಕವಿಲ್ಲ, ಪರಲೋಕವೂ ಇಲ್ಲ, ಸುಖವೂ ಇಲ್ಲ. (4. 37,—40)

ಮನುಸ್ಮೃತಿಯಲ್ಲಿ ಶ್ರಾದ್ಧಗಳಲ್ಲಿ ಯಾವ ಯಾವ ಭಕ್ಷ್ಯಗಳನ್ನು ಪಿತೃಗಳಿಗೆ ಅರ್ಪಿಸಿದರೆ ಎಷ್ಟು ಕಾಲ ಅವರು ತೃಪ್ತಿಯಿಂದಿರುವರೆಂಬುದನ್ನು ವಿವರಿಸಲಾಗಿದೆ.

ತಿಲೈರ್ವ್ರೀಹಿ ಯವೈರ್ಮಾಷೈರದ್ಭಿರ್ಮೂಲಫಲೇನ ವಾ ।
ದತ್ತೇನ ಮಾಸಂ ತೃಪ್ಯಂತಿ ವಿಧಿವತ್ಪಿತರೋ ನೃಣಾಂ ॥
ದ್ವೌಮಾಸೌ ಮತ್ಸ್ಯಮಾಂಸೇನ ತ್ರೀನ್ ಮಾಸಾನ್ ಹಾರಿಣೇನ ತು
ಔರಭ್ರೇಣಾಥ ಚತುರಃ ಶಾಕುನೇನಾಥ ಪಂಚ ವೈ ॥
ಷಣ್ಮಾಸಾಂಶ್ಛಾಗ ಮಾಂಸೇನ ಪಾರ್ಷತೇನ ಚ ಸಪ್ತವೈ ।
ಅಷ್ಟಾವೇಣಸ್ಯ ಮಾಂಸೇನ ರೌರವೇಣ ನವೈವ ತು ॥
ದಶಮಾಸಾಂಸ್ತು ತೃಪ್ಯಂತಿ ವರಾಹ ಮಹಿಷಾಮಿಷೈಃ ।
ಶಶಕೂರ್ಮಯೋಸ್ತು ಮಾಂಸೇನ ಮಾಸಾನೇಕಾದಶೈವ ತು ॥
ಸಂವತ್ಸರಂ ತು ಗವ್ಯೇನ ಪಯಸಾ ಪಾಯಸೇನ ಚ ।
ವಾರ್ಧ್ರೀಣಸಸ್ಯ ಮಾಂಸೇನ ತೃಪ್ತಿರ್ದ್ವಾದಶವಾರ್ಷಿಕೀ ॥

ಎಂದರೆ ಎಳ್ಳು, ಭತ್ತ, ಯವ, ಉದ್ದು, ನೀರು, ಗೆಣಸು, ಹಣ್ಣುಗಳನ್ನು ಪಿತೃಗಳಿಗೆ ದಾನ ಮಾಡಿದರೆ ಮಾಸಪರ್ಯಂತ ಕಾಲದವರೆಗೆ ಅವರಿಗೆ ತೃಪ್ತಿಯಾಗುವುದು.

ಭಕ್ಷ್ಯಗಳಿಂದ ಮತ್ಸ್ಯಮಾಂಸದಿಂದ ಎರಡು ಮಾಸ, ಹರಿಣ ಮಾಂಸ ದಿಂದ ಮೂರು ಮಾಸ, ಮೇಷಮಾಂಸದಿಂದ ನಾಲ್ಕು ಮಾಸ, ಪಕ್ಷಿಮಾಂಸ ದಿಂದ ಐದು ಮಾಸ ಪರ್ಯಂತ ಪಿತೃತೃಪ್ತಿಯು.

ಆಡು, ಪೃಷತ್, ಏಣ, ರುರು (ಮೃಗಭೇದ) ಮಾಂಸದಿಂದ ಕ್ರಮ ವಾಗಿ ಅಧಿಕ ತೃಪ್ತಿಯು.

ವ ರಾ ಹ, ಮಹಿಷ, ಶಶ, ಕೂರ್ಮಗಳಿಂದ ಅನುಕ್ರಮವಾಗಿ ಬಹು ತೃಪ್ತಿಯು.

ಗೋವಿನ ಹಾಲು, ಅದರ ಪಾಯಸಗಳಿಂದ ಸಂವತ್ಸರ ಪರ್ಯಂತ ತೃಪ್ತಿಯು. ವಾಧ್ರೀಣಸ ಮಾಂಸವು ಬಹು ಫಲದಾಯಕವು. III 26 7,2 71)

ಇಷ್ಟೆಲ್ಲ ವಿವರಗಳನ್ನು ಕೊಟ್ಟು ಕಡೆಗೆ ಮನಸ್ಮೃತಿಯಲ್ಲಿ ಹೀಗೆ ಹೇಳ ಲಾಗಿದೆ.

ಯದ್ಯದ್ದದಾತಿ ವಿಧಿವತ್ಸಮ್ಯಕ್ ಶ್ರದ್ಧಾಸಮನ್ವಿತಃ ।
ತತ್ತತ್ಪಿತೄಣಾಂ ಭವತಿ ಪರತ್ರಾನಂತಮಕ್ಷಯಂ ॥

ಅಂದರೆ ಶಾಸ್ತ್ರ ನಿಷಿದ್ಧವಲ್ಲದ, ತನಗೆ ದೊರೆತ ಏನನ್ನಾದರೂ ಶ್ರದ್ಧೆ ಯಿಂದ ಪಿತೃಗಳಿಗೆ ಸಮರ್ಪಿಸಿದರೆ ಅದು ಅವರಿಗೆ ಅನಂತ ಅಕ್ಷಯ ತೃಪ್ತಿಯ ಮೂಲಕ ತನಗೂ ಬಹುಫಲದಾಯಕವಾಗುವುದು. ಆದ್ದರಿಂದ ಶ್ರಾದ್ಧ ಪದವು ಪ್ರಚಾರಕ್ಕೆ ಬಂದಿದೆ. (III 2–75)

ಈ ವಿಧವಾಗಿ ಶ್ರಾದ್ಧಕರ್ಮಕ್ಕೆ ಎರಡು ಪರಿಣಾಮಗಳು:—ಮೊದಲನೆ ಯದು ಪಿತೃಗಳ ತೃಪ್ತಿ, ಎರಡನೆಯದು ಕರ್ತೃವಿಗೆ ಉಂಟಾಗುವ ಫಲ. ಈ ವಿಷಯವನ್ನು ಕುರಿತು ಮತ್ತೊಂದು ಶ್ಲೋಕವು ಹೀಗೆ ಹೇಳಿದೆ.

ಯಸ್ತು ಕುರ್ವನ್ ದಿನರ್ಕ್ಷೇಷು ಸರ್ವಾನ್ಯಾಮಾನ್ಸಮಶ್ನುತೇ ।
ಅಯುಕ್ಷುತು ಪಿತೄನ್ ಸರ್ವಾನ್ಪ್ರಜಾಂ ಪ್ರಾಪ್ನೋತಿ
ಪುಷ್ಕಲಾಂ ॥

ಎಂದರೆ ತಿಥಿ ನಕ್ಷತ್ರಗಳಲ್ಲಿ ಎರಡನೆಯ ನಾಲ್ಕನೆಯ ಮುಂತಾದ ಬಿದಿಗೆ, ಚೌತಿ, ತಿಥಿಗಳಲ್ಲಿ, ಭರಣಿ ರೋಹಿಣಿ ನಕ್ಷತ್ರಗಳಲ್ಲಿ ಶ್ರಾದ್ಧಮಾಡಿದರೆ ಸರ್ವಫಲವು. (III–2–77)

ಹೀಗೆ ಮೇಲೆ ಹೇಳಿದಂತೆ ಸಮದಿನಗಳಲ್ಲಿ ಶ್ರಾದ್ಧವನ್ನು ಮಾಡಿದರೆ ಆಗ ಕರ್ತೃವಿಗೆ ಸರ್ವಫಲಗಳು ಲಭಿಸುವುವು. ಬೆಸದಿನಗಳಲ್ಲಿ ಮಾಡಿದರೆ ಒಳ್ಳೆಯ ಮಕ್ಕಳನ್ನು ಪಡೆಯುವನು.

ಕರ್ಮಸಿದ್ಧಾಂತನನ್ನು ಕುರಿತು ಮನುಸ್ಮೃತಿಯಲ್ಲಿ ಕೆಳಗಿನ ವಿವರಗಳನ್ನು ಕೊಡಲಾಗಿದೆ.

ಈ ಆತ್ಮನ ಸರ್ವ ವ್ಯಾಪಾರಗಳಿಗೂ ಪ್ರವರ್ತಕ (ಸಾಧನ) ವಾದುದು ಮನಸ್ಸು. ಹತ್ತು ವಿಧವಾದ ಕರ್ಮಗಳನ್ನು ದೇಹ, ವಾಕ್ ಮನಸ್ಸುಗಳ ಆಶ್ರಯದಲ್ಲಿ ಉತ್ತಮ, ಮಧ್ಯಮ, ಅಧಮವರ್ಗವಾಗಿ ಮನಸ್ಸೆ ಉಂಟುಮಾಡುವುದು.

ಪರರ ಸ್ವತ್ತಿನಲ್ಲಿ ಆಶೆ, ಪರರಿಗೆ ಕೇಡು ಬಗೆಯುವುದು, ವಿರುದ್ಧನಿಶ್ಚಯ– ಈ ಮೂರು ದುಷ್ಫಲದಾಯಕವಾದ ಮಾನಸಿಕ ಕರ್ಮಗಳು. ಪರುಷವಚನ, ಸುಳ್ಳು, ತರಲೆ, ಅಸಂಬದ್ಧಮಾತು ಈ ನಾಲ್ಕು ಕೆಟ್ಟ ವಚನಕರ್ಮಗಳು.

ಇತರರು ಕೊಡದೆ ಇರುವುದನ್ನು ತೆಗೆದುಕೊಳ್ಳುವುದು, ಹಿಂಸೆ, ಪರಸ್ತ್ರೀ ಸಹವಾಸ ಇವು ಮೂರು ಶರೀರಜನ್ಯ ಕುಕರ್ಮಗಳು.

ಮಾನಸಕರ್ಮದಿಂದ ಮನಸ್ಸಿಗೆ, ವಚನದಿಂದ ಮಾತಿಗೆ, ದೈಹಿಕಕರ್ಮದಿಂದ ದೇಹಕ್ಕೆ ಪ್ರತಿಫಲವು ಉಂಟಾಗುವುದು. (12–4–8)

ಈ ವಿಧವಾಗಿ ಮನುಸ್ಮೃತಿಯಲ್ಲಿ ಹತ್ತುವಿಧವಾದ ದುಷ್ಕೃತ್ಯಗಳನ್ನು ವಿವರಿಸಲಾಗಿದೆ. ಮೇಲೆ ನೋಡಿದ ಹಾಗೆ ಮನುಸ್ಮೃತಿಯಲ್ಲಿ ಅಹಿಂಸಾ ಸತ್ಯ ಮುಂತಾದ ಹತ್ತು ಮುಖ್ಯ ಧರ್ಮಗಳು ಪ್ರತಿಯೊಬ್ಬ ಮಾನವನೂ ಆಚರಿಸಬೇಕಾದವುಗಳೆಂದು ಹೇಳಲಾಗಿದೆ. (6–91–92 ಮತ್ತು 10––63) ಅಂದರೆ ಮನುಸ್ಮೃತಿಯಲ್ಲಿ ಹತ್ತು ವಿಧವಾದ ಸಾಧಾರಣ ಧರ್ಮಗಳನ್ನೂ, ಹತ್ತುವಿಧವಾದ ದುಷ್ಕೃತ್ಯಗಳನ್ನೂ ವಿವರಿಸಿದೆ.

ಈ ದುಷ್ಕೃತ್ಯಗಳಿಗೂ ಪುನರ್ಜನ್ಮ ಸಿದ್ಧಾಂತಕ್ಕೂ ಇರುವ ಸಂಬಂಧವನ್ನು ಮನಸ್ಮೃತಿಯು ಹೀಗೆ ಸೂಚಿಸುವುದು.

ಶರೀರಜೈಃ ಕರ್ಮ ದೋಷೈರ್ಯಾತಿ ಸ್ಥಾವರತಾಂ ನರಃ ।
ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯ ಜಾತಿತಾಂ ॥

ಅಂದರೆ ಶಾರೀರಿಕ ಅಪರಾಧದಿಂದ ಕಲ್ಲುಮರ ಎಂಬ ಸ್ಥಾವರ ರೂಪ. ವಾಚಿಕ ಅಪರಾಧದಿಂದ ಮೃಗಪಕ್ಷಿಗಳ ಜನ್ಮ , ಮಾನಸಿಕಕುಕರ್ಮದಿಂದ ಅಂತ್ಯಜ ಜನ್ಮವು ಬರುವುದು.

(12–9)

ಮತ್ತೊಂದುಕಡೆ (12.5281) ಯಾವ ಯಾವ ದುಷ್ಕೃತ್ಯಗಳಿಗೆ ಯಾವ ಯಾವ ಜನ್ಮವು ಮುಂದೆ ಉಂಟಾಗುವುದೆಂಬುದನ್ನು ವಿವರಿಸಿರುವುದು.

ಗರುಡ ಪುರಾಣದಲ್ಲಿ ಹೇಳಿರುವ ಹಾಗೆ ಮನುಸ್ಮೃತಿಯಲ್ಲಿಯೂ ಸಹ ಪಾಪ ಪುಣ್ಯಗಳಿಗೂ ಸ್ವರ್ಗನರಕಗಳಿಗೂ ಸಂಬಂಧವನ್ನು ಸೂಚಿಸಿರುವುದು.

ಯದ್ಯಾಚರತಿಧರ್ಮಂ ಸ ಪ್ರಾಯಶೋಽಧರ್ಮಮಲ್ಪಶಃ ।
ತೈರೇವ ಚಾವೃತೋ ಭೂತೈಃ ಸ್ವರ್ಗೇ ಸುಖಮುಪಾಶ್ನುತೇ ॥
ಯದಿ ತಂ ಪ್ರಾಯಶೋಽಧರ್ಮಂ ಸೇವತೇ ಧರ್ಮಮಲ್ಪಶಃ ।
ತೈರ್ಭೂತೈಃ ಪರಿತ್ಯಕ್ತೋ ಯಾಮೀಃ ಪ್ರಾಪ್ನೋತಿ ಯಾತನಾಃ ॥

ಅಂದರೆ ಕಡಮೆ ಅಧರ್ಮವನ್ನೂ ಹೆಚ್ಚು ಧರ್ಮವನ್ನೂ ಗಳಿಸಿದರೆ ದಿವ್ಯ ದೇಹಧಾರಿಯಾಗಿ ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಅಧರ್ಮವನ್ನು ಹೆಚ್ಚಾಗಿಯೂ, ಧರ್ಮವನ್ನು ಕಡಮೆಯಾಗಿಯೂ ಗಳಿಸಿದ್ದರೆ ಯಮಯಾತನೆಗಳಿಗೆ ಗುರಿಯಾಗುವನು. (12.20-21) ಇಷ್ಟೆಲ್ಲವೂ ಪಾಪ ಪುಣ್ಯ, ಸ್ವರ್ಗ ನರಕ ಮತ್ತು ದುಷ್ಕರ್ಮ ಪುನರ್ಜನ್ಮಗಳನ್ನು ವಿವರಿಸಿದ ಮೇಲೆ ಆತ್ಮಜ್ಞಾನವು ಯಾವ ವಿಧವಾಗಿ ಮುಕ್ತಿಗೆ ಕಾರಣವೆಂಬುದನ್ನು ಕೊನೆಯಲ್ಲಿ ಸೂಚಿಸಲಾಗಿದೆ

ಸರ್ವಮಾತ್ಮನಿ ಸಂಪಶ್ಯೇತ್ಯ ಚ್ಚಾಸಜ್ಜ ಸಮಾಹಿತಃ |
ಸರ್ವಂ ಹ್ಯಾತ್ಯನಿ ಸಂಪಶ್ಯನ್ನಾಧರ್ಮೇ ಕುರುತೇ ಮನಃ ॥

ಸಂಭವಿಸಿದ ಒಳ್ಳೆಯದು, ಕೆಟ್ಟದ್ದನ್ನು ತನಗೆ ಸಂಬಂಧಿಸಿದಂತೆ ಪರಾಮರ್ಶಿಸಬೇಕು. ಆಗ ಉಂಟಾಗುವ ಮಾನಸಿಕ ಪ್ರತಿಕ್ರಿಯೆಯು ತನಗೂ ಇತರರಿಗೂ ಮಾನ್ಯವಾಗತಕ್ಕದ್ದು. ಅದು ರಾಗದ್ವೇಷ ಪಕ್ಷಪಾತಗಳಿಗೆ ಗುರಿಯಾಗುವುದಿಲ್ಲ. ಸರ್ವವೂ ಆತ್ಮವೆಂದು ಮನನ ಮಾಡಿದವನಿಗೆ ರಾಗದ್ವೇಷಮಯವಾಗಿ ಅಧರ್ಮದಲ್ಲಿ ಆ ಭಾರತಿಯು ಸಮುದಿಸಲಾರದು. (12-118)

ಸರ್ವೇಷಾಮಪಿ ಚೈತೇಷಾಂ ಶುಭಾನಾಮಿಹಕರ್ಮಣಾಂ |
ಕಿಂಚಿತ್ ಶ್ರೇಯಸ್ಕರತರಂ ಕರ್ಮೋಕ್ತಂ ಪುರುಷಂಪ್ರತಿ ॥
ಸರ್ವೇಷಾಮಪಿ ಚೈತೇಷಾಮಾತ್ಮಜ್ಞಾನಂ ಪರಂಸ್ಮೃತಂ |
ತದ್ಧ್ಯಗ್ರಂ ಸರ್ವವಿದ್ಯಾನಾಂ ಪ್ರಾಪ್ಯತೇಹ್ಯಮೃತಂ ತತಃ ॥

(12. 84-85)

ಅಂದರೆ ಎಲ್ಲ ಒಳ್ಳೆಯ ಕಾರ್ಯಗಳಲ್ಲಿ ಮನುಷ್ಯನ ಶ್ರೇಯಸ್ಸಿಗೆ ಉತ್ತಮವಾದ ಒಂದು ಕರ್ಮವಿದೆ.

ಅದು ಆತ್ಮ ಜ್ಞಾನವು. ಆತ್ಮಜ್ಞಾನವೇ ಉತ್ತಮ ಶಾಸ್ತ್ರವು. ಅದರಿಂದ ಅಮೃತತ್ವವನ್ನು ಪಡೆಯಲಾಗುವುದು. (12.84.85)

ಈ ವಿಧವಾಗಿ ಮನುಸ್ಮೃತಿಯು ಮಾನವನ ಎಲ್ಲ ಕರ್ತವ್ಯಗಳಲ್ಲಿ ಮುಖ್ಯವಾದ ಕರ್ತವ್ಯವು ಆತ್ಮಜ್ಞಾನವನ್ನು ಪಡೆಯುವುದೇ ಆಗಿದೆಯೆಂದೂ ಆತ್ಮಜ್ಞಾನದ ಮೂಲಕ ಮುಕ್ತಿಯನ್ನು ಪಡೆಯುವುದು ಸಾಧ್ಯವೆಂದೂ ಪಾಪಪುಣ್ಯ, ನರಕ, ಸ್ವರ್ಗ, ಪುನರ್ಜನ್ಮ ಮುಂತಾದ ಭಾವನೆಗಳು ಮುಖ್ಯವಲ್ಲವೆಂದೂ ಮನುಸ್ಮೃತಿಯು ಕಟ್ಟ ಕಡೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಅಧಿಕಾರ ವಾಣಿಯಿಂದ ವಿವರಿಸಿರುವುದು. ಅಂದರೆ ಪುನರ್ಜನ್ಮ ಸಿದ್ಧಾಂತಕ್ಕಿಂತಲೂ ಧರ್ಮದಿಂದ ಕೂಡಿದ ಜೀವನವು, ಜೀವನ್ಮುಕ್ತಿಗಾಗಿ ಶ್ರಮಿಸುವುದು ಮಾನವನ ಶ್ರೇಷ್ಠ ಮತ್ತು ಏಕಮೇವ ಕರ್ತವ್ಯವೆಂದು ಹೇಳಿದಹಾಗಾಯಿತು.

ಈ ಕಾರಣದಿಂದಲೇ ಯಾವುದಾದರೂ ಕೆಲಸವು ನಿಷ್ಪ್ರಯೋಜಕವಾದರೆ (ಇದರಿಂದ ಪುಣ್ಯವೂ, ಪುರುಷಾರ್ಥವೂ ಇಲ್ಲ) ಎಂದು ಹೇಳಲಾಗುವುದು. ಹಳೆಯ ಸಂಪ್ರದಾಯದ ಪ್ರಕಾರ ಪುಣ್ಯವನ್ನು ಪಡೆಯುವುದೇ ಮಾನವನ ಮುಖ್ಯ ಕರ್ತವ್ಯವಾಗಿತ್ತು. ಆದರೆ ಉಪನಿಷತ್ಕಾಲದಲ್ಲಿ ಒಂದು ಹೊಸ ದೃಷ್ಟಿ ಉಂಟಾಯಿತು. ಇದನ್ನು ಮೇಲೆ ವಿವರಿಸಿರುವ ಹಾಗೆ ಬೃಹದಾರಣ್ಯಕೋಪನಿಷತ್ತಿನ ಮಧುಕಾಂಡದಲ್ಲಿ ಯಾಜ್ಞವಲ್ಕ್ಯ ಋಷಿಯು ತನ್ನ ಪತ್ನಿಯಾದ ಮೈತ್ರೇಯಿಗೆ ಹೀಗೆ ವಿವರಿಸಿರುವರು. " ಎಲೈ ಮೈತ್ರೇಯಿ ಆತ್ಮನನ್ನು ನೋಡಬೇಕು, ಶ್ರವಣ ಮಾಡಬೇಕು, ಮನನ ಮಾಡಬೇಕು; ನಿದಿಧ್ಯಾಸನಮಾಡಬೇಕು, ಎಲೈ ಮೈತ್ರೇಯಿ ಆತ್ಮಸಂದರ್ಶನದಿಂದ, ಶ್ರವಣದಿಂದ, ಮನನದಿಂದ, ನಿದಿಧ್ಯಾಸನದಿಂದ ಇವೆಲ್ಲವೂ ತಿಳಿಯಲ್ಪಡುತ್ತವೆ. ಯಾವನು ಲೋಕಗಳನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ಲೋಕಗಳು ನಿರಾಕರಿಸುವುವು. ಯಾವನು ದೇವತೆಗಳನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ದೇವತೆಗಳು ನಿರಾಕರಿಸುವರು. ಯಾವನು ಪ್ರಾಣಿಗಳನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ಪ್ರಾಣಿಗಳು ನಿರಾಕರಿಸುವುವು. ಯಾವನು ಎಲ್ಲವನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ಎಲ್ಲವೂ ನಿರಾಕರಿಸುವುವು. (2-4) ಈ ವಿಧವಾಗಿ ಉಪನಿಷತ್ತುಗಳು " ಆತ್ಮೈವ ಸರ್ವಂ " ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವುವು.

ಉಪನಿಷತ್ತುಗಳ ಪ್ರಕಾರ ಶ್ರವಣ, ಮನನ, ನಿದಿಧ್ಯಾಸನದಿಂದ ಆತ್ಮದರ್ಶನವಾಗುವುದು. ಹಾಗೆ ದರ್ಶನವಾದರೆ ಆಗ ಸರ್ವವೂ ಆತ್ಮಸ್ವರೂಪವೆಂಬ ಅನುಭವವು ಉಂಟಾಗುವುದು. ಈ ಅನುಭವ ಉಂಟಾದರೆ ತಾನು ಬೇರೆ ಇತರರು ಬೇರೆ ತಾನು ಉತ್ತಮ, ಇತರರು ಕೀಳು, ಮುಂತಾದ ಸ್ವಪರ ಭಿನ್ನಾಭಿಪ್ರಾಯಗಳು, ಮೇಲು ಕೀಳು ಎಂಬ ಸಾಮಾಜಿಕ ಸ್ಥಿರ ವಿನ್ಯಾಸಗಳೂ ಅಳಿಸಿ ಹೋಗುವುವು. ಆಗ ಆ ವ್ಯಕ್ತಿಯಲ್ಲಿ ಸರ್ವಾತ್ಮಭಾವವು ದೃಢೀಕರಿಸಿ ಇತರರು ತನ್ನವರು ಎಂಬ ಭಾವನೆ ಉಂಟಾಗಿ ಅಹಿಂಸಾ ಮತ್ತು ಅದ್ವೇಷ್ಟೃವರ್ತನೆಯು ಸಹಜವಾಗುವುದು. ಇದೇ ಮೇಲೆ ವಿವರಿಸಿರುವ ವರ್ತನೆಯ ಸುವರ್ಣನಿಯಮಕ್ಕೆ ಅಡಿಪಾಯ.

ಈ ಸತ್ಯವನ್ನು ಪೂರ್ಣವಾಗಿ ಗ್ರಹಿಸಿ ಇತರ ಮನುಷ್ಯರನ್ನು ಇತರ ಜೀವಿಗಳನ್ನೂ ಸರ್ವಾತ್ಮಭಾವದಿಂದ ಯಾವ ವ್ಯಕ್ತಿಯು ವರ್ತಿಸುವನೋ ಅವನು ಜೀವನ್ಮುಕ್ತನು. ಇದನ್ನು ಪಡೆಯಲು ಪ್ರತಿಯೊಬ್ಬ ಮಾನವನಿಗೂ ಸಾಧ್ಯವೆಂದು ಮತ್ತು ಈ ಸತ್ಯವನ್ನ ಈ ಜನ್ಮದಲ್ಲಿಯೇ ಅರಿಯಲು ಮತ್ತು ಅನುಷ್ಠಾನಕ್ಕೆ ತರಲು ಸಾಧ್ಯವೆಂಬೂ ಉಪನಿಷತ್ತುಗಳು ಸಾರುವುವು. ಈ ದೃಷ್ಟಿ

ಯಿಂದ ನೋಡಿದರೆ ಪುನರ್ಜನ್ಮ ಸಿದ್ಧಾಂತವು ಭಾರತೀಯ ಸಂಸ್ಕೃತಿಯಲ್ಲಿ ಅತಿ ಮುಖ್ಯವಾದ ಅಂಶವಲ್ಲವೆಂದು ಸ್ಪಷ್ಟವಾಗುವುದು.

ಸಾಮಾಜಿಕ ಅಸಮಾನತೆಗಳು :—

ಪ್ರತಿಯೊಂದು ಸಮಾಜದಲ್ಲಿಯೂ ಅಸಮಾನತೆಯು ಅನೇಕ ಕಾರಣಗಳಿಂದ ಉಂಟಾಗುವುದು. ಮನುಷ್ಯರಲ್ಲಿ ಬುದ್ಧಿಶಕ್ತಿಯ ವ್ಯತ್ಯಾಸಗಳೂ ಸಿರಿಸಂಪತ್ತುಗಳ ವ್ಯತ್ಯಾಸಗಳೂ ಮುಂತಾದವುಗಳು ಇರುವುವು. ಭಾರತೀಯ ಸಾಮಾಜಿಕ ದೃಷ್ಟಿಯ ವೈಶಿಷ್ಟ್ಯವೆಂದರೆ ಈ ವ್ಯತ್ಯಾಸಗಳು ಆಯಾ ಮನೆತನಕ್ಕೂ ಆಯಾ ಗುಂಪಿಗೂ ಶಾಶ್ವತವಾದುದೆಂಬ ನಂಬಿಕೆ. ಇದಕ್ಕೆ ಕಾರಣ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮಸಿದ್ಧಾಂತ. ಒಂದು ಮನೆತನಕ್ಕೂ ಇನ್ನೊಂದು ಮನೆತನಕ್ಕೂ ಇರುವ ವ್ಯತ್ಯಾಸಗಳಿಗೆ ಕಾರಣವನ್ನು ಆ ಮನೆತನಗಳಲ್ಲಿ ಸೇರಿರುವ ವ್ಯಕ್ತಿಗಳು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಫಲವೆಂದು ಭಾವಿಸುವರು. ಈಗ ಒಬ್ಬ ವ್ಯಕ್ತಿಯು ಅನುಕೂಲದಿಂದ ಬಾಳಿದರೆ ಅದಕ್ಕೆ ಆತನು ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತವೇ ಕಾರಣವೆಂದು ನಂಬಿಕೆಯಿರುವುದು. ಈ ನಂಬಿಕೆಯಲ್ಲಿ ಎರಡು ಅಂಶಗಳನ್ನು ಪ್ರತ್ಯೇಕಿಸಬಹುದು.

ಮೊದಲನೆಯ ಅಂಶವೆಂದರೆ ತನ್ನ ಇಂದಿನ ಸ್ಥಿತಿಗೆ ತಾನೇ ಕಾರಣ. ಎರಡನೆಯದು ಸಮಾಜದಲ್ಲಿ ನಾವು ಕಾಣುವ ವ್ಯತ್ಯಾಸಗಳು ಶಾಶ್ವತ. ಇವುಗಳನ್ನು ಬದಲಾಯಿಸುವುದು ಅಸಾಧ್ಯ.

ತನ್ನ ಸ್ಥಿತಿಗೆ ತಾನೇ ಕಾರಣ ಎಂಬ ನಂಬಿಕೆಯು ಬಹಳ ಉನ್ನತ ನಂಬಿಕೆ. ತನ್ನ ಸ್ಥಿತಿಗೆ ತಾನೇ ಕಾರಣವಾದರೆ ಇತರರನ್ನು ದೂಷಿಸುವ ಹಾಗಿಲ್ಲ. ಅಂದರೆ ಸಾಮಾಜಿಕ ರಚನೆ ತನ್ನ ದುಸ್ಥಿತಿಗೆ ತಾನೇ ಕಾರಣವಲ್ಲ ಎಂಬುದಾಗಿ ಹೇಳಿದ ಹಾಗಾಯಿತು. ಆದುದರಿಂದ ತನ್ನ ಕಷ್ಟಗಳನ್ನು ಸ್ಥೈರಣೆಯಿಂದ ತಾನು ಅನುಭವಿಸಬೇಕು. ಈ ದೃಷ್ಟಿಯು ತನ್ನ ಸ್ಥಿತಿಗೆ ವಿಧಿಯೇ ಕಾರಣವೆಂಬ ಭಾವನೆ ಮೂಡುವಂತೆ ಮಾಡುವುದು. ಆದುದರಿಂದ ನಿರಾಶೆಯು ಉತ್ಪನ್ನವಾಗುವುದು. ತಾನು ಏನೇ ಮಾಡಲಿ ಎಷ್ಟೇ ಮಾಡಲಿ ತನ್ನ ದುಸ್ಥಿತಿಯಿಂದ ಪಾರಾಗಲು ಅಸಾಧ್ಯವೆಂಬ ದೃಢನಂಬಿಕೆ ಉಂಟಾಗುವುದು. ಈ ದೃಷ್ಟಿಯು ತನ್ನ ಕಷ್ಟಗಳನ್ನು ಸಹಿಸುವ ಮನಸ್ಥೈರ್ಯವನ್ನು ಕೊಡುವುದು. ಆದರೆ ಆ ಸ್ಥಿತಿಯಿಂದ ಸ್ವಪ್ರಯತ್ನದಿಂದ ಪಾರಾಗಲು ಸಾಧ್ಯವೆಂಬ ಭರವಸೆಯನ್ನು ಕೊಡುವುದಿಲ್ಲ. ಏಕೆಂದರೆ ತಾನು ಈಗ ಅನುಭವಿಸುತ್ತಿರುವ ದುಸ್ಥಿತಿಗೆ ತನ್ನ ಹಿಂದಿನ ಜನ್ಮದಲ್ಲಿ ಮಾಡಿದ ದುಷ್ಕೃತ್ಯಗಳೇ ಕಾರಣವೆಂಬ ನಂಬಿಕೆಯುಂಟಾದರೆ ಆ ಮನುಷ್ಯನಲ್ಲಿ ಅಸಹಾಯಕತೆ, ದುರ್ಬಲತೆ ಮುಂತಾದುವು ಉಂಟಾಗುವುವು.

ಮುಖ್ಯವಾಗಿ ಜಾತಿಗೂ ಪುನರ್ಜನ್ಮಸಿದ್ಧಾಂತಕ್ಕೂ ಸಂಬಂಧವನ್ನು ಕಲ್ಪಿಸಿಕೊಂಡಿರುವುದರಿಂದ ಸಮಾಜದಲ್ಲಿರುವ ಅಸಮಾನತೆಗಳು ಶಾಶ್ವತವೆಂಬ ನಂಬಿಕೆಯುಂಟಾಗುವುದು. ತನ್ನ ಹುಟ್ಟನ್ನು ಬದಲಾಯಿಸುವ ಹಾಗಿಲ್ಲ. ಇದು ಸತ್ಯ. ಆದರೆ ತನ್ನ ಸ್ಥಿತಿಯನ್ನು ಬದಲಾಯಿಸುವುದು ತನ್ನ ಕೈಯಲ್ಲಿದೆ. ಈ ನಂಬಿಕೆಯೂ ಅದರಿಂದುಂಟಾಗುವ ಪ್ರಯತ್ನವೂ ವ್ಯಕ್ತಿವಿಕಾಸಕ್ಕೂ, ಸಾಮಾಜಿಕ ಅಭ್ಯುದಯಕ್ಕೂ ಮೂಲಕಾರಣವಾಗುವುದು. ತಾನು ಯಾವ ಮನೆತನದಲ್ಲಿ ಜನಿಸಿದರೂ ಸ್ವಪ್ರಯತ್ನದಿಂದ ತಾನು ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆಯಬಹುದೆಂಬ ದೃಢನಂಬಿಕೆಯು ಮನುಷ್ಯನಲ್ಲಿರಬೇಕು.

ಭಾರತದೇಶದ ಸಂವಿಧಾನವು ಭಾರತೀಯರ ಸಮಾನತ್ವವನ್ನು ಮೂಲಭೂತ ಹಕ್ಕೆಂಬುದಾಗಿ ಒಪ್ಪಿಕೊಂಡಿದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯನಿಗೆ ಸ್ತ್ರೀಯಾಗಲಿ, ಪುರುಷನಾಗಲಿ, ಯಾವ ಜಾತಿಯಲ್ಲಿ ಜನಿಸಿದರೂ ಸಹ, ಯಾವ ಮತಧರ್ಮವನ್ನವಲಂಬಿಸಿದರೂ ಸಹ ಸಮಾನಹಕ್ಕು ಅವಕಾಶಗಳು ಮತ್ತು ಸ್ಥಾನಮಾನಗಳಿರುವುವೆಂದು ಘೋಷಿಸಲಾಗಿದೆ. ಆದರೆ ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ತಾನು ಇತತರಿಗೆ ಸಮಾನವೆಂಬ ಮನೋಭಾವವು ದೃಢವಾಗಿರಬೇಕು. ಈ ನಂಬಿಕೆಯನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಉಂಟುಮಾಡುವುದೇ ಇಂದಿನ ಭಾರತೀಯ ಸಮಾಜದ ಮುಖ್ಯ ಕರ್ತವ್ಯ. ಇದನ್ನು ಸಾಧಿಸಲು ಇಂದಿನ ಸಮಾಜದಲ್ಲಿರುವ ಅನಕ್ಷರತೆಯು, ಗ್ರಾಮಪ್ರದೇಶಗಳಲ್ಲಿ ಅತಿ ಹೆಚ್ಚಾಗಿರುವ ಜನಸಂಖ್ಯೆಯು, ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನಗಳಲ್ಲಿಯೂ ಅನೇಕ ತೊಡಕುಗಳನ್ನು ಉಂಟುಮಾಡುವುವು. ಈ ವಿಷಮಸ್ಥಿತಿಯಿಂದ ಪಾರಾಗಲು ಸರ್ವಪ್ರಯತ್ನಗಳನ್ನು ಮಾಡಬೇಕಾದುದು ತುರ್ತಿನ ಹಾಗೂ ಅವಶ್ಯಕವಾದ ಕರ್ತವ್ಯ. ಈ ನಂಬಿಕೆಯು ಉಂಟಾಗದಿದ್ದರೆ ಆ ವ್ಯಕ್ತಿಯಲ್ಲಿ ಏಳಿಗೆಯ ಪ್ರಯತ್ನವಿರುವುದಿಲ್ಲ.

ಪ್ರತಿಯೊಂದು ಕುಟುಂಬದಲ್ಲಿ ಈ ಪ್ರಗತಿಶೀಲ ಮನೋಭಾವವು ಇಲ್ಲದಿದ್ದರೆ. ದೇಶದ ಪ್ರಗತಿಯು ಕೇವಲ ಪಂಚವಾರ್ಷಿಕ ಯೋಜನೆಗಳಿಂದ ಸಾಧ್ಯವಾಗುವುದಿಲ್ಲ. ದೇಶದ ಪ್ರಗತಿಗೆ ರಾಷ್ಟ್ರೀಯ ಯೋಜನೆಯು ಬೇಕು. ಇನ್ನೂ ಮುಖ್ಯವಾಗಿ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಉತ್ಕಾಂಕ್ಷೆಯೂ ಮತ್ತು ಪ್ರಯತ್ನವೂ ಬೇಕು. ಪುನರ್ಜನ್ಮ ಸಿದ್ಧಾಂತದ ಮೂಲಕ ತತ್ವ ಏನೇ ಆಗಿರಲಿ. ಕಾರ್ಯತಃ ಈ ನಂಬಿಕೆಯು ದೇಶದ ಅಭ್ಯುದಯಕ್ಕೆ ಮಹತ್ತರವಾದ ಅಡಚಣೆಯನ್ನು ತಂದೊಡ್ಡಿರುವುದೆಂಬುದು ಭಾರತ ದೇಶದ ಈ ಮೂರು ದಶಕಗಳ ಅನುಭವವು ಸತ್ಯವೆಂದು ತೋರಿಸುವುದು. ರಾಷ್ಟ್ರೀಯ ಯೋಜನೆಗಳ ಫಲಗಳು ಸಾಮಾನ್ಯ ಭಾರತೀಯರ ಅಂದರೆ ಸುಮಾರು 40-45 ಕೋಟಿ ಜನಗಳು ಜೀವನಮಟ್ಟ

ದಲ್ಲಿ ಯಾವ ವಿಧವಾದ ಪರಿವರ್ತನೆಯನ್ನು ಮಾಡಿಲ್ಲವೆಂದು ಅಂಕಿ ಅಂಶಗಳು ನಿರ್ವಿವಾದವೆಂಬುದಾಗಿ ತೋರಿಸುವುವು.

ಹಾಗಾದರೆ ಕರ್ಮಸಿದ್ಧಾಂತದ ಸತ್ಯಾಂಶವೇನು ಎಂಬುವ ಸಂಶಯವು ಉಂಟಾಗುವುದು. ಮೇಲೆ ವಿವರಿಸಿರುವ ಹಾಗೆ ಪ್ರಾಚೀನ ಭಾರತೀಯರು ಕರ್ಮ ಸಿದ್ಧಾಂತದ ಮೂಲಕ ಪ್ರಕೃತಿಯಲ್ಲಿ ಇರುವ ಕಾರ್ಯ ಕಾರಣ ಸಂಬಂಧವನ್ನೂ ನೈತಿಕ ವಿಷಯಗಳಿಗೂ ಸಹ ಅನ್ವಯಿಸುವುದೆಂಬುದಾಗಿ ಒಂದು ಮಹತ್ತರ ಸತ್ಯ ವನ್ನು ಪ್ರಕಟಿಸಿದರು. ತಾನು ಮಾಡಿದುದಕ್ಕೆ ಉಂಟಾದ ಫಲವನ್ನು ತಾನು ಅನುಭವಿಸಬೇಕು. ಇದರಿಂದ ಪಾರಾಗಲು ಯಾರಿಗೂ ಸಾಧ್ಯವಿಲ್ಲ. ಇದು ಕರ್ಮ ಸಿದ್ಧಾಂತದ ತಿರುಳು. (ಆದರೆ ಒಬ್ಬ ವ್ಯಕ್ತಿಯು ಕೀಳುಜಾತಿಯಲ್ಲಿ, ಅಸಂಸ್ಕೃತ ಮನೆತನದಲ್ಲಿ, ತೀವ್ರ ಬಡತನದಲ್ಲಿ, ರೋಗ ರುಜಿನಗಳಿಂದ ಅಥವಾ ಅಂಗವಿಕಲತೆ ಗಳಿಂದ ಕೂಡಿರುವುದು ಯಾವ ಕಾರಣಗಳಿಂದ ? ಈ ಸ್ಥಿತಿಗಳಿರುವುದರಿಂದ ಸಮಾ ಜದ ಅಭ್ಯುದಯವು ಅಸಾಧ್ಯವಾಗುವುದು. ಪ್ರಾಚೀನ ಭಾರತೀಯರು ಮೇಲೆ ವಿವರಿಸಿರುವ ಕಾರ್ಯಕಾರಣ ಸಂಬಂಧದ ಆಧಾರದ ಮೇಲೆ ಆ ವ್ಯಕ್ತಿಯೇ ಕಾರಣ ವೆಂದು ತೀರ್ಮಾನಿಸಿದರು. ಆದರೆ ಈ ಕಾರಣಗಳು ಆತನು ಯಾವ ಪರಿಸ್ಥಿತಿ ಗಳಲ್ಲಿ ಹುಟ್ಟಿದನೊ ಆ ಪರಿಸ್ಥಿತಿಗಳಿಗೆ ಸಹ ಆತನೇ ಕಾರಣವಿರಬೇಕೆಂಬುದಾಗಿ ಊಹಿಸಿದರು.) ಭಾರತೀಯ ತತ್ವಶಾಸ್ತ್ರದ ಪ್ರಕಾರ ಆತ್ಮವು ನಿತ್ಯ. ಆದುದರಿಂದ ಜೀವಿಯು ಅನೇಕ ಜನ್ಮಗಳನ್ನು ತಾಳುವನೆಂದೂ ಈ ಜನ್ಮಗಳ ಮೂಲಕ ಪಕ್ವತೆ ಯನ್ನು ಪಡೆದು ತಾನು ಅಸತ್ಯ ಜೀವಿಯುಲ್ಲವೆಂದೂ, ನಿಜವಾಗಿಯೂ ತಾನು ನಿತ್ಯ ವಾದ ಆತ್ಮವೆಂದೂ ತಿಳಿದುಕೊಂಡು ಜನ್ಮ ಮೃತ್ಯುಗಳಿಂದ ಪಾರಾಗುವನೆಂದು ಊಹಿಸಿದರು. ಈ ಊಹೆಯ ಆಧಾರದ ಮೇಲೆ ಒಬ್ಬ ವ್ಯಕ್ತಿಯು ಹುಟ್ಟಿದ ಪರಿ ಸ್ಥಿತಿಗಳಿಗೆ ಕಾರಣ ಆತನು ನನ್ನ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳೇ ಎಂಬುವ ನಿರ್ಣಯಕ್ಕೆ ಬಂದರು. ಆದರೆ ಮೇಲೆ ವಿವರಿಸಿರುವ ಹಾಗೆ ಈ ಊಹೆಯ ಪ್ರಾಮಾಣಿಕತೆಯನ್ನೂ ನಿರ್ಧರಿಸಲು ಅಸಾಧ್ಯ. ಹುಟ್ಟುವುದು ಒಂದು ದೈಹಿಕ ಕ್ರಿಯೆ. ಆ ವ್ಯಕ್ತಿಯ ಪರಿಸ್ಥಿತಿಗಳು ಆತನು ಯಾವ ಕುಟುಂಬದಲ್ಲಿ ಹುಟ್ಟುವನೋ ಅದನ್ನು ಅನ್ವಯಿಸುವುದು. ವ್ಯವಸಾಯದ ಆಧಾರದ ಮೇಲೆ ನಿಂತಿರುವ ಸಮಾಜ ಗಳಲ್ಲಿ ಸರ್ವರೀತಿಯಲ್ಲೂ ಅತ್ಯಂತ ವ್ಯತ್ಯಾಸಗಳಿರುವುದು ಸಹಜ. ಈ ವ್ಯತ್ಯಾಸ ಗಳು ಆ ವ್ಯಕ್ತಿ ಹುಟ್ಟಿದ ಮನೆತನದ ಪರಿಸ್ಥಿತಿಗೆ ಕಾರಣಭೂತ. ಆದುದರಿಂದಲೇ ಕೈಗಾರಿಕೆಗಳ ಆಧಾರದ ಮೇಲೆ ನಿಂತಿರುವ ಆಧುನಿಕ ಸಮಾಜಗಳು ಈ ಅಂತರ ಗಳನ್ನು ಕಡಿಮೆಮಾಡಲು ಕಾರ್ಯಕ್ರಮಗಳನ್ನೂ ಕೈಗೊಳ್ಳುವುವು. ಸಮಾಜಕಲ್ಯಾಣದ ಯೋಜನೆಗಳು ಆಧುನಿಕ ಸಮಾಜಗಳ ಮುಖ್ಯ ಕೆಲಸವಾಗಿ ನಿಂತಿದೆ ಈ ದೃಷ್ಟಿ ಯಿಂದ ನೋಡಿದರೆ ಒಬ್ಬ ವ್ಯಕ್ತಿಯ ಪರಿಸ್ಥಿತಿಯೂ ಸಾಮಾಜಿಕ ಮತ್ತು ದೈಹಿಕ ಕಾರಣಗಳ ಆಧಾರದ ಮೇಲಿರುವುದೆಂದು ವಿಶದವಾಗುವುದು. ಆಧುನಿಕ ಸಮಾಜ

ದಲ್ಲಿ ಕೈಗಾರಿಕಾ ಉದ್ಯಮಗಳು ಮತ್ತು ಸಾಮಾಜಿಕವ್ಯವಸ್ಥೆಯೂ ಸರಿಯಾಗಿ ದ್ದರೆ ಯಾವ ಕುಟುಂಬವೇ ಆಗಲಿ ದುಸ್ಥಿತಿಯಲ್ಲಿ ನರಳಬೇಕಾಗಿಲ್ಲ. ಒಬ್ಬ ವ್ಯಕ್ತಿಯು ದುಸ್ಥಿತಿಗೆ ಗುರಿಯಾದರೆ ಅದು ಆತನು ತನಗಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳದೆ ಸ್ವಪ್ರೇರಣೆಯಲ್ಲಿ ಕುಂದುಕೊರತೆಗಳ ಮೂಲಕ ತನ್ನ ವಿಕಾಸ ದಲ್ಲಿ ಅಶ್ರದ್ಧೆಯನ್ನು ತೋರಿಸಿ ಕಷ್ಟಕ್ಕೆ ಗುರಿಯಾಗುವನು. ಈ ದೃಷ್ಟಿಯಿಂದ ನೋಡಿದರೆ ಕರ್ಮಸಿದ್ಧಾಂತವು ಸತ್ಯಾಂಶದಿಂದ ಕೂಡಿರುವುದು. ತನ್ನ ಕಷ್ಟಗಳಿಗೆ ವ್ಯಕ್ತಿಯು ತಾನೇ ಕಾರಣವೆಂದು ನಂಬಿ ತನ್ನ ಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಿಸಲು ಸಾಧ್ಯ. ಆದರೆ ತಾನು ಯಾವ ಮನೆತನದಲ್ಲಿ ಹುಟ್ಟಿದನೋ ಅದಕ್ಕೆ ಮಾತ್ರ ತಾನು ಕಾರಣವಲ್ಲ ಎಂಬುವ ನಂಬಿಕೆಯೂ ಸತ್ಯಾಂಶದಿಂದ ಕೂಡಿರುವುದು. ಆದರೆ ಈ ದೃಷ್ಟಿಯು ಒಬ್ಬ ವ್ಯಕ್ತಿಯ ಸ್ಥಿತಿಗತಿಗಳನ್ನು ಸಂಪೂರ್ಣ ವಾಗಿ ಸ್ಪಷ್ಟೀಕರಿಸುವುದೆಂದು ಹೇಳಲಾಗುವುದಿಲ್ಲ. ಜೀವಮಾನದಲ್ಲಿ ಅನೇಕ ಘಟನೆಗಳು ನಿರ್ದಿಷ್ಟವಲ್ಲ. ಇದನ್ನು ಅದೃಷ್ಟವೆಂದು ಕರೆಯಬಹುದೇ ವಿನಹ ಕಾರಣವನ್ನು ಹುಡುಕುವುದು ನಿರರ್ಥಕ. ಒಬ್ಬ ವ್ಯಕ್ತಿಯು ಕಷ್ಟಕ್ಕೆ ಗುರಿಯಾದರೆ ಅದಕ್ಕೆ ಮೂರು ಕಾರಣಗಳು ಇರುವುವೆಂಬುದಾಗಿ ಹೇಳಬಹುದು. ಮೊದಲನೆಯ ದಾಗಿ ಆತನು ಜೀವಿತದಲ್ಲಿ ಮಾಡಿದ ದುಷ್ಕೃತ್ಯಗಳು ಅಂದರೆ ಧ್ಯೇಯಗಳನ್ನು ಮರೆತು ತನ್ನ ಆಸೆಆಕಾಂಕ್ಷೆಗಳನ್ನು ಯಾವ ವಿಧದಲ್ಲೇ ಅದರೂ ಇತರರಿಗೆ ಎಷ್ಟು ಹಾನಿಯುಂಟಾದರೂ ತನಗೆ ಇದರಿಂದ ಮುಂದೆ ಎಷ್ಟು ನಷ್ಟವಾದರೂ ತನ್ನ ಆಸೆಗಳನ್ನು ಪೂರೈಸಿಕೊಳ್ಳುವುದು.

ಎರಡನೆಯದಾಗಿ ಸಾಮಾಜಿಕ ಮತ್ತು ಪ್ರಾಕೃತಿಕ ದುರ್ಘಟನೆಗಳಿಂದ ಉಂಟಾಗುವ ಕಾರಣಗಳು. ತಾನು ತನ್ನ ಧ್ಯೇಯಗಳನ್ನು ಸಫಲಗೊಳಿಸಲು ಪ್ರಯತ್ನಮಾಡುವಾಗ ಸಾಮಾಜಿಕ ಕಟ್ಟುನಿಟ್ಟುಗಳು ಮತ್ತು ಕಾನೂನಿನ ನಿರ್ಬಂಧ ಗಳು ಆತನಿಗೆ ಕಷ್ಟವನ್ನುಂಟುಮಾಡುವುವು. ಹಾಗೆಯೇ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಪ್ರಾಕೃತಿಕ ಘಟನೆಗಳು ಕಾರಣವಾಗಬಹುದು. ಈ ಎರಡು ಕಾರಣಗಳು ನಿರ್ಧರಿಸಲಾಗುವ ಕಾರಣಗಳು. ಆದರೆ ಇವುಗಳಲ್ಲಿ ಪ್ರಥಮಕಾರಣವು ಅಂದರೆ ವ್ಯಕ್ತಿಯ ವರ್ತನೆಯ ಕಾರಣವು ನಿಂದಾರ್ಹ. ಸಾಮಾಜಿಕ ಮತ್ತು ಪ್ರಾಕೃತಿಕ ಘಟನೆಗಳಿಂದ ಉಂಟಾದ ಕಾರಣಗಳಿಗೆ ಆ ವ್ಯಕ್ತಿಯನ್ನು ನಿಂದಿಸು ವುದು ಸಮಂಜಸವಲ್ಲ. ಮೂರನೆಯದಾಗಿ ವ್ಯಕ್ತಿಯು ಎಷ್ಟೇ ನೀತಿ ನಿಯಮ ಗಳಿಂದ ಬಾಳಿದರೂ, ಸಾಮಾಜಿಕ ಸ್ಥಿತಿಗತಿಗಳು ಅನುಕೂಲವಾಗಿದ್ದರೂ ಪ್ರಕೃತಿಯ ಘಟನೆಗಳು ಸಫಲವನ್ನು ಹೊಂದದೆ ಇರಬಹುದು. ಆತನಿಗೆ ಅನಿರೀಕ್ಷಿತವಾದ ದೈಹಿಕ, ಮಾನಸಿಕ, ಆರ್ಥಿಕ ಮುಂತಾದ ಕಷ್ಟಗಳುಂಟಾಗಬಹುದು. ಈ ಅನಿ ರೀಕ್ಷಿತ ಕಾರಣಗಳಿಗೆ " ಅದೃಷ್ಟ " ಅಂದರೆ ನಿರ್ಣಯಿಸಲಾಗದ ಆಕಸ್ಮಿತ ಕಾರಣ ಗಳಿರಬಹುದು. ಈ ಅದೃಷ್ಟ ಅಥವಾ ಆಕಸ್ಮಿಕ ಪರಿಸ್ಥಿತಿಯಿಂದ ಉಂಟಾಗುವ

ಪರಿಣಾಮ ಆ ವ್ಯಕ್ತಿಗೆ ಅನುಕೂಲವಾಗಿರಬಹುದು. ಅನುಕೂಲವಾಗಿದ್ದರೆ ಸಂತೋಷ, ಹೆಮ್ಮೆ, ಪ್ರತಿಕೂಲವಾಗಿದ್ದರೆ ಅದನ್ನು ದುರದೃಷ್ಟವೆಂದು ನೋಡುವರು. ಆದರೆ ಈ ಮೂರನೆಯ ಗುಂಪಿಗೆ ಕಾರಣಗಳು ಅನಿರೀಕ್ಷಿತವಾದ ಕಾರಣಗಳು. ಆದುದರಿಂದ ಇವುಗಳ ಮೇಲೆ ಹತೋಟಿಯನ್ನು ಹೊಂದಲು ಅಸಾಧ್ಯ. ಕೆಲವರು ಈ ಪರಿಸ್ಥಿತಿಯನ್ನು ಒಪ್ಪಿಕೊಂಡು ಇದರಿಂದುಂಟಾದ ಸುಖ ಅಥವಾ ದುಃಖವನ್ನು ಅನುಭವಿಸುವರು. ಆದರೆ ಕರ್ಮಸಿದ್ಧಾಂತದಲ್ಲೂ ಪುನರ್ಜನ್ಮಸಿದ್ಧಾಂತದಲ್ಲೂ ನಂಬಿಕೆಯನ್ನಿಟ್ಟಿರುವವರು ಈ ಅನಿರೀಕ್ಷಿತ ಘಟನೆಗಳಿಗೂ ಸಹ ನಿರ್ದಿಷ್ಟ ಕಾರಣಗಳಿವೆಯೆಂದು, ಈ ಕಾರಣಗಳು ಹಿಂದಿನ ಜನ್ಮದ ಸುಕೃತ, ದುಷ್ಕೃತಗಳ ಪರಿಣಾಮವೆಂದು ಭಾವಿಸುವರು. ಮತ್ತೊಂದು ಗುಂಪಿಗೆ ಸೇರಿದವರು ಈ ಘಟನೆಗೆ ಕಾರಣ ಗ್ರಹಚಾರವೆಂದೂ ಗ್ರಹಗಳಿಂದುಂಟಾದುದೆಂದೂ ಜ್ಯೋತಿಷ್ಯಶಾಸ್ತ್ರದಲ್ಲಿ ನಂಬಿಕೆಯಿಟ್ಟು ಈ ಅನಿರೀಕ್ಷಿತ ಕಾರಣಗಳಿಂದ ದುಃಖವುಂಟಾದರೆ ಆ ಗ್ರಹಗಳಿಗೆ ಶಾಂತಿಮಾಡಲು ಪ್ರಯತ್ನಿಸುವರು.

ವಿಚಾರಪರರು ಕರ್ಮಸಿದ್ಧಾಂತವು ಮಾನವನ ಪ್ರಯತ್ನದಲ್ಲಿ ಇರುವ ಗುಣದೋಷಗಳಿಂದಲೂ ಸಾಮಾಜಿಕ ಮತ್ತು ಪ್ರಾಕೃತಿಕ ಘಟನೆಗಳಿಂದುಂಟಾದ ಕಾರಣಗಳಿಂದಲೂ ಅನಿರೀಕ್ಷಿತ ಘಟನೆಗಳ ಸಂಯೋಗದಿಂದುಂಟಾಗುವ ಪರಿಣಾಮಗಳಿಗೆ ಸೀಮಿತಗೊಳಿಸುವರು. ಆದರೆ ಕೇವಲ ಇಂತಹ ವಿಚಾರದೃಷ್ಟಿಯಲ್ಲಿ ನಂಬಿಕೆಯಿಡದವರು ಕರ್ಮಸಿದ್ಧಾಂತವನ್ನು ವಿಸ್ತರಿಸಿ ಅದು ಹಿಂದಿನ ಜನ್ಮಕ್ಕೂ ಮುಂದಿನ ಜನ್ಮಕ್ಕೂ ಸಹ ಅನ್ವಯಿಸುವುದೆಂದೂ ನಂಬುವರು. ಇಂತಹ ಬೇರೆ ಜನ್ಮಗಳಲ್ಲಿರುವ ನಂಬಿಕೆಯನ್ನು ರುಜುವಾತುಮಾಡಲು ಅಥವಾ ಅಪ್ರಮಾಣವೆಂದು ನಿರ್ಧರಿಸಲು ಅಸಾಧ್ಯ.

ಆದುದರಿಂದ ಕರ್ಮಸಿದ್ಧಾಂತವನ್ನು ವ್ಯಕ್ತಿಮಾಡುವ ಅಥವಾ ಪ್ರಾಕೃತಿಕ ಘಟನೆಗಳಿಗೆ ಸೀಮಿತಗೊಳಿಸಬೇಕು. ಆಗ ಕಾರ್ಯಕಾರಣ ಸಂಬಂಧವನ್ನು ರುಜುವಾತುಪಡಿಸಲು ಸಾಧ್ಯ.

ಈ ವಿಧವಾಗಿ ಸಾಮಾಜಿಕ ದೃಷ್ಟಿಯಿಂದಲೂ ವಿಚಾರ ದೃಷ್ಟಿಯಿಂದಲೂ ಒಂದು ಸಿದ್ಧಾಂತವನ್ನು ರುಜುವಾತುಪಡಿಸುವ ದೃಷ್ಟಿಯಿಂದಲೂ ಪುನರ್ಜನ್ಮಸಿದ್ಧಾಂತವು ಕೇವಲ ನಂಬಿಕೆಯ ಆಧಾರದ ಮೇಲೆ ಇರುವುದೆಂದು ಈ ನಂಬಿಕೆಯ ಪ್ರಾಮಾಣಿಕತೆಯನ್ನು ಪ್ರತಿಪಾದಿಸುವುದು ಅಸಾಧ್ಯವೆಂದು ಅರಿಯಬೇಕು.

ಆದರೆ ಮೇಲೆ ನೋಡಿದ ಹಾಗೆ ಕರ್ಮಸಿದ್ಧಾಂತವೂ ಭಾರತೀಯ ಸಂಸ್ಕೃತಿಯ ಒಂದು ವೈಶಿಷ್ಟ್ಯ. ಈ ಮೂಲಕ ಕಾರ್ಯಕಾರಣ ಸಂಬಂಧವನ್ನು ಪ್ರಾಕೃತಿಕ ಘಟನೆಗಳಿಗೆ ಮಾತ್ರ ಅನ್ವಯಿಸದೆ ನೈತಿಕ ವಿಷಯಗಳಿಗೂ, ನಡವಳಿಕೆಯ ವಿಷಯಗಳಿಗೂ ಅನ್ವಯಿಸುವುದೆಂದು ವಿಸ್ತರಿಸಿದರು. ಆದರೆ ಆ ಕಾಲದಲ್ಲಿ ಕರ್ಮಸಿದ್ಧಾಂತಕ್ಕೂ ಪುನರ್ಜನ್ಮ ಸಿದ್ಧಾಂತಕ್ಕೂ ನಿಕಟ ಸಂಬಂಧವಿರುವು

ದೆಂದು ನಂಬಿದರು. ಇದರಿಂದಾಗಿ ಸಾಮಾಜಿಕ ವ್ಯವಸ್ಥೆಯು ಸ್ಥಿರವೆಂದು ನಿತ್ಯ ವೆಂದು ಇದನ್ನು ಬದಲಾಯಿಸಲು ಅಸಾಧ್ಯವೆಂದು ಕೀಳುಜಾತಿಯ ಮನೆತನದಲ್ಲಿ ಹುಟ್ಟಿದ ವ್ಯಕ್ತಿಯು ಅದೇ ಮಟ್ಟದಲ್ಲಿರಬೇಕೆಂದು ತನ್ನ ಕುಲಕಸುಬನ್ನು ತ್ಯಜಿಸಿ ತನ್ನ ಶಕ್ತಿಸಾಮರ್ಥ್ಯದಿಂದ ಸಮಾಜದಲ್ಲಿ ಉನ್ನತಸ್ಥಾನವನ್ನು ಪಡೆಯಲು ಪ್ರಯತ್ನಿಸುವ ವ್ಯಕ್ತಿಯು ಧರ್ಮವಿರುದ್ಧ ನಡತೆಯನ್ನು ಪ್ರದರ್ಶಿಸುವನೆಂದೂ ಅವನು ಶಿಕ್ಷಾರ್ಹನೆಂದೂ ಭಾವಿಸುತ್ತಿದ್ದರು. ಇದರಿಂದಾಗಿ ಕೋಟ್ಯಂತರ ಬುದ್ಧಿವಂತರು ಮತ್ತು ಸಮರ್ಥರು ಸಾವಿರಾರುವರ್ಷದಿಂದ ತಮ್ಮ ಶಕ್ತಿಸಾಮರ್ಥ್ಯಗಳನ್ನು ಉಪಯೋಗಿಸಲು ಅವಕಾಶವಿಲ್ಲದೆ ಅನಕ್ಷರಸ್ಥರಾಗಿ ಅಕುಶಲ ಕೆಲಸಗಳನ್ನು ಮಾಡುತ್ತಾ ತಮ್ಮ ವ್ಯಕ್ತಿತ್ವದ ವಿಕಾಸಕ್ಕೆ ಸಾಧ್ಯವಿಲ್ಲದೆ ತಮ್ಮ ಜೀವನವನ್ನು ಕಳೆದರು ಮತ್ತು ಇಂದು ಕಳೆಯುತ್ತಿರುವರು. ಕೋಟ್ಯಂತರ ಜನ ಹೀಗೇ ಬಾಳಿದರೆ ದೇಶದ ಅಭ್ಯುದಯಕ್ಕೆ ಅವಕಾಶವೆಲ್ಲಿ ?

ಆದುದರಿಂದ ಪುನರ್ಜನ್ಮ ಸಿದ್ಧಾಂತವನ್ನು ರುಜುವಾತುಪಡಿಸಲು ಅಸಾಧ್ಯವೆಂದು ಆ ಸಿದ್ಧಾಂತದಲ್ಲಿ ನಂಬಿಕೆಯನ್ನು ತಡೆಹಿಡಿಯುವುದು ಸೂಕ್ತ.

ಕರ್ಮಸಿದ್ಧಾಂತದ ವಿಷಯದಲ್ಲಿ ಅದನ್ನು ಹಿಂದಿನ ಜನ್ಮಕ್ಕೂ ಮುಂದಿನ ಜನ್ಮಕ್ಕೂ ವಿಸ್ತರಿಸದೇ ಈಗ ನಾವು ಏನು ಮಾಡುವೆವೋ ಅದರ ಪರಿಣಾಮವನ್ನನುಭವಿಸಲೇಬೇಕು ಎಂಬುದು ನಿರ್ವಿವಾದ. ದುಷ್ಕೃತ್ಯಗಳನ್ನು ಯಾರಿಗೂ ತಿಳಿಯದಂತೆಮಾಡಿ ಮನೆಯವರಿಂದಲೂ, ಸ್ನೇಹಿತರಿಂದಲೂ, ನೆರೆಹೊರೆಯವರಿಂದಲೂ ನಿಂದೆಯನ್ನು ಪಡೆಯದಿದ್ದರೂ, ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡು ತಪ್ಪಿಸಿಕೊಂಡರೂ ತನ್ನ ಮನಸ್ಸಿನಲ್ಲಿ ತಾನು ಮಾಡಿದ ಅಪರಾಧಕ್ಕೆ ನೋವನ್ನು ಸಹಿಸಬೇಕಾಗುವುದು. ಈ ನೋವೇ ಆ ಅಪರಾಧಕ್ಕೆ ಶಿಕ್ಷೆಯಾಗುವುದು. ಈ ವಿಧವಾದ ತನ್ನ ದುಷ್ಕೃತ್ಯಕ್ಕೆ ಪಶ್ಚಾತ್ತಾಪವನ್ನು ಹೊಂದಿದರೆ ಮುಂದೆ ದುಷ್ಕೃತ್ಯವನ್ನು ತ್ಯಜಿಸುವನು. ತ್ಯಜಿಸದೆ ಹೋದರೆ ಯಾರು ಯಾವಾಗ ತನ್ನ ತಪ್ಪನ್ನು ಕಂಡುಹಿಡಿಯುವರೋ ಎಂಬ ಭೀತಿಗೆ ಒಳಗಾಗುವನು. ಈ ಭೀತಿಯಿಂದ ಕೂಡಿದ ವರ್ತನೆಯು ಅವನ ದುಷ್ಕೃತ್ಯವನ್ನು ಪತ್ತೆಮಾಡಲು ಅನುಕೂಲವಾಗುವುದು. ಆದುದರಿಂದ ಕರ್ಮಸಿದ್ಧಾಂತದ ಪ್ರಭಾವವನ್ನು ಈ ಜೀವಿತಕ್ಕೆ ಅನ್ವಯಿಸುವ ಹಾಗೆ ಸೀಮಿತಗೊಳಿಸಬೇಕು. ಹೀಗೆ ಮಾಡಿದರೆ ಒಬ್ಬ ವ್ಯಕ್ತಿಯು ಯಾವ ಮನೆತನದಲ್ಲಿ ಹುಟ್ಟಿದರೂ ತನ್ನ ಶಕ್ತಿಸಾಮರ್ಥ್ಯಗಳಲ್ಲಿ ವಿಶ್ವಾಸವನ್ನು ಪಡೆದು ತನ್ನ ಸ್ಥಿತಿಗತಿಗಳನ್ನು ಸ್ವಪ್ರಯತ್ನದಿಂದ ಉತ್ತಮಗೊಳಿಸಿಕೊಳ್ಳುವುದಕ್ಕೆ ಅವಕಾಶ ಉಂಟಾಗುವುದು. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಹೀಗೆ ಪ್ರಯತ್ನಪೂರ್ವಕ ಜೀವನವನ್ನು ನಡೆಸಿದರೆ ಆಗ ವ್ಯಕ್ತಿಯು ಅಭ್ಯುದಯವನ್ನು ಹೊಂದಲು ಸಾಧ್ಯವಾಗುವುದು. ಅಲ್ಲದೆ ದೇಶದ ಪ್ರಗತಿಯುಂಟಾಗುವುದು.

★

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ಗ್ರಂಥಾಲಯ

ಪರಿಗ್ರಹಣ ಸಂಖ್ಯೆ 002455

ವರ್ಗೀಕರಣ ಸಂಖ್ಯೆ 209 KUP

605 (3)	2017	
14.07.00	27.11.04	
30/6/	27/10/04	
622 (8)	2452	
21.07.00	23.09.05	
7/8/	21/9/05	
622 (8)	75770	
31.08.00	20 FEB 2012	
17/8/	3/1/	
320		
13.09.20		
30/10/		
320		
20.09.20		
6/9/		
2017		
1-10-2004		

ಪುಸ್ತಕವನ್ನು ಕೊನೆಯಲ್ಲಿ ನಮೂದಿಸಲಾಗಿರುವ ದಿನದಂದು ಅಥವಾ ಅದಕ್ಕೆ ಮುನ್ನ ಹಿಂದಿರುಗಿಸಬೇಕು. ತಡವಾದ ಪ್ರತಿದಿನಕ್ಕೆ ನಿಯಮಾನುಸಾರ ದಂಡ ಶುಲ್ಕ ವಿಧಿಸಲಾಗುವುದು.